ಬುಧವಾರ, ಡಿಸೆಂಬರ್ 15, 2021 | ₹ 6.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ
ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ
ಪೌಷ್ಟಿಕ ಆಹಾರ ಸೇವಿಸಿ

ಮುಲಾಜಿಲ್ಲದೆ ಪ್ರತಿಮೆ ತೆರವುಗೊಳಿಸಿ: ಹೈಕೋರ್ಟ್

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಸಾರ್ವಜನಿಕ ಪ್ರದೇಶಗಳಲ್ಲಿ ಪ್ರತಿಷ್ಠಾಪಿಸಿದ ಪ್ರತಿಮೆಗಳನ್ನು ಮುಲಾಜಿಲ್ಲದೆ ತೆರವುಗೊಳಿಸಬೇಕು' ಎಂದು ರಾಜ್ಯ ಸರ್ಕಾರಕ್ಕೆ, ಹೈಕೋರ್ಟ್ ಮೌಖಿಕವಾಗಿ ಖಡಕ್ ಸೂಚನೆ ನೀಡಿದೆ.

'ಸಾರ್ವಜನಿಕ ಪ್ರದೇಶದಲ್ಲಿ ಪ್ರತಿಮೆ ಸ್ಥಾಪನೆ ಮಾಡುವುದಕ್ಕೆ ನಿರ್ಬಂಧವಿದೆ. ಅದು ದೇವರ ಮೂರ್ತಿಯಾಗಲಿ ಅಥವಾ ಮಹಾನ್ ವ್ಯಕ್ತಿಯ ಪ್ರತಿಮೆಯೇ ಆಗಲಿ ಸಾರ್ವಜನಿಕ ಸ್ಥಳದಲ್ಲಿ ಪ್ರತಿಷ್ಠಾಪನೆ ಮಾಡುವಂತಿಲ್ಲ. ಬೇಕಾದರೆ ಸ್ವಂತ ಜಾಗದಲ್ಲಿ ಪ್ರತಿಮೆ ಸ್ಥಾಪನೆ ಮಾಡಲಿ ಹಾಗೂ ಆರಾಧಿಸಲಿ. ಅದಕ್ಕೆ ನ್ಯಾಯಾಲಯದ ಆಕ್ಷೇಪವಿಲ್ಲ' ಎಂದು ಕಟು ಮಾತಿನಲ್ಲಿ ತಿಳಿಸಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಿದಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಸ್ ನಿಲ್ದಾಣದಲ್ಲಿ ವಾಲ್ಮೀಕಿ ಪ್ರತಿಮೆ ಸ್ಥಾಪನೆ ಮಾಡಿರುವುದನ್ನು ಪ್ರಶ್ನಿಸಿ ಕುವೆಂಪು ಒಕ್ಕಲಿಗರ ಸಂಘ ಮತ್ತು ಬಿದಲೂರು ಗ್ರಾಮಸ್ಥರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ವಾಲ್ಮೀಕಿ ನಾಯಕರ ಸಂಘವು ಬಿದಲೂರು ಗ್ರಾಮ ಪಂಚಾಯಿತಿ ಅನುಮತಿ ಪಡೆಯದೇ ಅನಧಿಕೃತವಾಗಿ ಬಸ್ ನಿಲ್ದಾಣದಲ್ಲಿ ವಾಲ್ಮೀಕಿ ಪ್ರತಿಮೆ ಸ್ಥಾಪಿಸಿದೆ. ಇದು ಸಾರ್ವಜನಿಕ ಪ್ರದೇಶದಲ್ಲಿದ್ದು, ಪ್ರತಿಮೆಯನ್ನು ತೆರವುಗೊಳಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ಈ ಪ್ರಕರಣದಲ್ಲಿ ಪ್ರತಿಮೆ ತೆರವುಗೊಳಿಸದೆ ಸರ್ಕಾರ ಏಕೆ ಸುಮ್ಮನಿದೆ. ಸಾರ್ವಜನಿಕ ಸ್ಥಳದಲ್ಲಿನ ಪ್ರತಿಮೆಯಿಂದ ಜನ, ವಾಹನ ಸಂಚಾರಕ್ಕೆ ಸಮಸ್ಯೆಯಾಗುತ್ತದೆ. ಇಂತಹ ಪ್ರಕರಣಗಳಿಗೆ ಅಂತ್ಯ ಕಾಣಿಸಬೇಕು' ಎಂದು ಹೇಳಿತು.

SDM AYURVEDA PHARMACY

ಸದೃಢ ಆರೋಗ್ಯಕ್ಕಾಗಿ
ಅಷ್ಟವರ್ಗಯುಕ್ತ
ಚ್ಯವನಪ್ರಾಶ ಲೇಹ

- ರೋಗ ನಿರೋಧಕ ಶಕ್ತಿ ಹೆಚ್ಚಿಸಲು
- ವೃದ್ಧಾಪ್ಯದ ಆರೋಗ್ಯ ಸಮಸ್ಯೆ
- ಮಕ್ಕಳ ಬೆಳವಣಿಗೆ

ಹಸಿ ನೆಲ್ಲಿಕಾಯಿಯಿಂದಲೇ ತಯಾರಿಸಿದೆ.

ಸಂಧಿಲಿನ್ ಹಚ್ಚಿ ನೋವಿಗೆ ವಿದಾಯ ಹೇಳಿ!

SANDHILIN सन्धिलिन ಸಂಧಿಲಿನ್

- ವಿವಿಧ ತರಹದ ನೋವಿಗೆ ಶೀಘ್ರ ಪರಿಣಾಮಕಾರಿ.
- ಕಳೆದ 14 ವರ್ಷಗಳಿಂದ ಲಕ್ಷಾಂತರ ಜನರ ಪ್ರಥಮ ಆಯ್ಕೆ.
- 'ಸಂಧಿಲಿನ್' ಲಿನಿಮೆಂಟನ್ನು ಆಯುರ್ವೇದದ ಋಷಿಮುನಿ ಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ಶೀಘ್ರ ಪರಿಣಾಮಕಾರಿ

ತಯಾರಕರು
SDM
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಉಡುಪಿ-574 118, ಕರ್ನಾಟಕ. Customer Care: +91 89709 77513
Email: sdmaph@sdmayurvedacollegeudupi.in ISO 9001:2015 & GMP CERTIFIED
'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ.

www.licindia.in

LIC ಪಾಲಿಸಿದಾರರ ಅವಗಾಹನೆಗೆ :

ಸದಾ ಸಿದ್ಧರಾಗಿರುವುದು ಜೀವನದ ಅತ್ಯುತ್ತಮ ಕೆಲಸ.

ಭಾರತ ಸರಕಾರವು ಲೈಫ್ ಇನ್ಶುರನ್ಸ್ ಕಾರ್ಪೊರೇಶನ್ ಆ್ಯಕ್ಟ್, 1956ನ್ನು ಪರಿಷ್ಕರಿಸಿ ಕಾರ್ಪೊರೇಶನ್‌ಗೆ ತನ್ನ ಪ್ರಸ್ತಾವಿತ ಪಬ್ಲಿಕ್ ಇಶ್ಯೂದಲ್ಲಿ ಪಾಲಿಸಿದಾರರಿಗೆ ಪ್ರೊಪೋರ್ಟಿಯ ಆಧಾರದಲ್ಲಿ ಶೇರ್‌ಗಳನ್ನು ರಿಸರ್ವ್ ಮಾಡಿರಿಸಲು ಅನುಮತಿ ನೀಡಿದೆ.*

ಈ ಪ್ರಕ್ರಿಯೆಯಲ್ಲಿ ಭಾಗವಹಿಸಲು, ಪಾಲಿಸಿದಾರರು ಕೆಳಗಿನ ಎರಡು ಹೆಜ್ಜೆಗಳನ್ನು ಕೈಗೊಳ್ಳಬೇಕಾಗುತ್ತದೆ.

1 LICಯಲ್ಲಿ ನಿಮ್ಮ ವೈಯಕ್ತಿಕ ದಾಖಲೆಗಳನ್ನು ನವೀಕರಿಸಬೇಕು

- www.licindia.inನಲ್ಲಿ ಸಂದರ್ಶಿಸಿರಿ ಮತ್ತು ಆನ್‌ಲೈನ್‌ನಲ್ಲಿ ನಿಮ್ಮ ಪರಮನೆಂಟ್ ಅಕೌಂಟ್ ನಂಬರ್ (PAN) ನೋಂದಾಯಿಸಲು ಐಕಾನ್‌ನ ಮೇಲೆ ಕ್ಲಿಕ್ ಮಾಡಿರಿ.
- ನಿಮ್ಮ ಜನನ ತಾರೀಖು, ಲಿಂಗ, ಈಮೇಲ್ ಐಡಿ, PAN, ಪೂರ್ತಿ ಹೆಸರು, ಮೊಬೈಲ್ ನಂಬರ್ ಮತ್ತು LIC ಪಾಲಿಸಿ ನಂಬರ್ ದಾಖಲು ಮಾಡಿರಿ.
- ನಿಮ್ಮ ಎಲ್ಲಾ LIC ಪಾಲಿಸಿಗಳಿಗಾಗಿ PAN ನವೀಕರಣಕ್ಕಾಗಿ ನಿರ್ದೇಶನಗಳನ್ನು ಪಾಲಿಸಿರಿ.

ಏನಾದರೂ ಸಹಾಯ ಬೇಕಾದಲ್ಲಿ ನಿಮ್ಮ LIC ಏಜೆಂಟರನ್ನು ಸಂಪರ್ಕಿಸಿರಿ.

2 ಒಂದು DEMAT ಅಕೌಂಟ್ ತೆರೆಯಿರಿ (ಈಗಾಗಲೇ ನಿಮ್ಮಲ್ಲಿ ಇಲ್ಲದಿದ್ದರೆ)

- DEMAT ಅಕೌಂಟ್ ತೆರೆಯಲು ರಿಜಿಸ್ಟರ್ಡ್ ಡಿಪಾಜಿಟರಿ ಪಾರ್ಟಿಸಿಪೆಂಟ್‌ಗಳಿಗಾಗಿ (DP) ಈ ಕೆಳಗಿನ ಯಾವುದಾದರೂ ವೆಬ್‌ಸೈಟನ್ನು ಸಂದರ್ಶಿಸಿರಿ :
  NSDL:
  https://sebi.gov.in/sebiweb/other/OtherAction.do?doRecognisedFpi=yes&intmId=19
  CDSL:
  https://sebi.gov.in/sebiweb/other/OtherAction.do?doRecognisedFpi=yes&intmId=18
- DEMAT ಅಕೌಂಟ್ ತೆರೆಯಲು DPಗೆ ನೀವು ಈ ಕೆಳಗಿನವುಗಳನ್ನು ಒದಗಿಸಬೇಕಾಗುತ್ತದೆ :
  - ಇತ್ತೀಚಿನ ಫೋಟೊಗ್ರಾಫ್
  - PAN ಕಾರ್ಡ್
  - ವಿಳಾಸದ ಪುರಾವೆ
  - ಕ್ಯಾನ್ಸಲ್ಡ್ ಚೆಕ್
- ಇನ್ನೂ ಹೆಚ್ಚಿನ ಮಾಹಿತಿಯನ್ನು DP ನೀಡ ಬೇಕಾಗಬಹುದು.

ಏನಾದರೂ ಸಹಾಯ ಬೇಕಾದಲ್ಲಿ ನಿಮ್ಮ ಬ್ಯಾಂಕರ್ ಅಥವಾ ಬ್ರೋಕರನ್ನು ಸಂಪರ್ಕಿಸಿರಿ.

ಈ ಕೆಳಗಿನವುಗಳನ್ನು ದಯವಿಟ್ಟು ಗಮನಿಸಿರಿ

ಈ ನೋಟೀಸು ಅಥವಾ ನಮ್ಮ ಶೇರ್‌ಹೋಲ್ಡರ್‌ಗಳೊಂದಿಗೆ ನಾವು ಹಂಚಿಕೊಂಡಿರುವ ಯಾವುದೇ ಮಾಹಿತಿಯು ಕಾರ್ಪೊರೇಶನ್‌ನ ಇಕ್ವಿಟಿ ಶೇರ್‌ಗಳ ಆಫರ್ ಎಂದು ತಿಳಿಯಬಾರದು. | ಡಿಪಾಜಿಟರಿ ಪಾರ್ಟಿಸಿಪೆಂಟರನ್ನು ಸ್ವತಃ ಪಾಲಿಸಿದಾರಕರೇ ಸಂಪರ್ಕಿಸಬೇಕು ಮತ್ತು DEMAT ಅಕೌಂಟ್ ಮತ್ತು ಅದರ ಕಾರ್ಯ ನಿರ್ವಹಣೆ ಅವರದ್ದೇ ಜವಾಬ್ದಾರಿಯಾಗಿರುತ್ತದೆ. ಸಂಬಂಧಪಟ್ಟ ಎಲ್ಲಾ ವೆಚ್ಚಗಳನ್ನು ಪಾಲಿಸಿದಾರಕರೇ ವಹಿಸಿಕೊಳ್ಳಬೇಕಾಗುತ್ತದೆ. | ಯಾವುದೇ ಪ್ರಸ್ತಾವಿತ ನೀಡಿಕೆಯಲ್ಲಿ ಶೇರ್‌ಗಳ ರಿಜರ್ವೇಶನ್ ಆಗಿದ್ದರೂ ಕೂಡ, ಅರ್ಜಿ ಮಾಡಿದ ಯಾವುದೇ ಅಥವಾ ಎಲ್ಲಾ ಇಕ್ವಿಟಿ ಶೇರ್‌ಗಳನ್ನು ಪಾಲಿಸಿದಾರಕರಿಗೆ ಅಲಾಟ್ ಮಾಡಲಾಗುವುದೆಂಬ ಯಾವುದೇ ಆಶ್ವಾಸನೆ ನೀಡಲಾಗುತ್ತಿಲ್ಲ. | ತಮ್ಮ ಇಕ್ವಿಟಿ ಶೇರ್‌ಗಳ ಕಾರ್ಯದಕ್ಷತೆಯ ಯಾವ ಗ್ಯಾರಂಟಿಯನ್ನೂ ಕಾರ್ಪೊರೇಶನ್ ನೀಡುತ್ತಿಲ್ಲ ಮತ್ತು ತಮ್ಮ ಇಕ್ವಿಟಿಗಳಲ್ಲಿ ಮಾಡಲಾಗುವ ಪಬ್ಲಿಕ್ ಆಫರಿಂಗ್‌ನಲ್ಲಿನ ವಿನಿಯೋಜನೆಗಳಿಗೆ ಸಂಬಂಧಿಸಿದ ಅಪಾಯ ಸಾಧ್ಯತೆಗಳ ಬಗ್ಗೆ ವಿನಿಯೋಜಕರು ಜಾಗೃತರಾಗಿರಬೇಕು. ಪಾಲಿಸಿದಾರಕರಿಗಾಗಿ ಶೇರ್‌ಗಳ ಪ್ರಸ್ತಾವಿತ ರಿಜರ್ವೇಶನ್ ಬಗ್ಗೆ ಅತಿ ಮುಖ್ಯ ಮಾಹಿತಿಗಾಗಿ ಸಂದರ್ಶಿಸಿರಿ https://licindia.in/ipo
*ಪ್ರಸ್ತಾವಿತ IPO ವಿವರಗಳನ್ನು ಅದು ಒಮ್ಮೆ ಅಂತಿಮ ರೂಪ ಪಡೆದಾಗ ತಿಳಿಸಲಾಗುತ್ತದೆ.

ನಮ್ಮನ್ನು ಫಾಲೋ ಮಾಡಿರಿ : LIC India Forever | IRDAI Regn No.: 512

LIC
ಲೈಫ್ ಇನ್ಶುರನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ
LIFE INSURANCE CORPORATION OF INDIA
ಪ್ರತಿ ಕ್ಷಣವೂ ನಿಮ್ಮೊಂದಿಗೆ

LIC/RKS/2021-22/39/KAN

ಗರಿಷ್ಠ ಮಟ್ಟಕ್ಕೆ ಸಗಟು ಹಣದುಬ್ಬರ

ನವದೆಹಲಿ (ಪಿಟಿಐ): ಸಗಟು ಬೆಲೆ ಆಧಾರಿತ ಹಣದುಬ್ಬರ ದರವು ನವೆಂಬರ್ ತಿಂಗಳಿನಲ್ಲಿ ಶೇಕಡ 14.23ಕ್ಕೆ ತಲುಪಿದೆ. ಇದು 12 ವರ್ಷಗಳ ಗರಿಷ್ಠ ಮಟ್ಟ. ಖನಿಜ ತೈಲಗಳು, ಕಚ್ಚಾ ಪೆಟ್ರೋಲಿಯಂ, ನೈಸರ್ಗಿಕ ಅನಿಲದ ಬೆಲೆ ಹೆಚ್ಚಳವು ಇದಕ್ಕೆ ಮುಖ್ಯ ಕಾರಣ.

ಸಗಟು ಹಣದುಬ್ಬರ ಪ್ರಮಾಣವು ಏಪ್ರಿಲ್‌ನಿಂದಲೂ ಎರಡು ಅಂಕಿಗಳ ಮಟ್ಟದಲ್ಲಿಯೇ ಉಳಿದಿದೆ. ಸಗಟು ಹಣದುಬ್ಬರವು ಅಕ್ಟೋಬರ್‌ನಲ್ಲಿ ಶೇ 12.54ರಷ್ಟು, ಹಿಂದಿನ ವರ್ಷದ ನವೆಂಬರ್‌ನಲ್ಲಿ ಶೇ 2.29ರಷ್ಟು ಇತ್ತು.

‘ರಾಸಾಯನಿಕಗಳು ಮತ್ತು ರಾಸಾಯನಿಕ ಉತ್ಪನ್ನಗಳು, ಆಹಾರ ವಸ್ತುಗಳ ಬೆಲೆ ಏರಿಕೆ ಕೂಡ ನವೆಂಬರ್‌ನಲ್ಲಿ ಹಣದುಬ್ಬರ ಮಟ್ಟ ಹೆಚ್ಚಾಗಲು ಕಾರಣ’ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಇಂಧನ ಮತ್ತು ವಿದ್ಯುತ್ ವಿಭಾಗದಲ್ಲಿನ ಹಣದುಬ್ಬರವು ನವೆಂಬರ್‌ನಲ್ಲಿ ಶೇ 39.81ಕ್ಕೆ ತಲುಪಿದೆ. ಇದು ಅಕ್ಟೋಬರ್‌ನಲ್ಲಿ ಶೇ 37.18ರಷ್ಟು ಇತ್ತು. ಆಹಾರ ವಸ್ತುಗಳ ಹಣದುಬ್ಬರವು ಅಕ್ಟೋಬರ್‌ನಲ್ಲಿ ಶೇ 3.06ರಷ್ಟು ಇದ್ದಿದ್ದು ನವೆಂಬರ್‌ನಲ್ಲಿ ಶೇ 6.7ಕ್ಕೆ ಏರಿಕೆ ಆಗಿದೆ.

ಹಣದುಬ್ಬರ ಹೆಚ್ಚಳ ಆಗಲು ಮುಖ್ಯ ಕಾರಣ ಇಂಧನ ಮತ್ತು ವಿದ್ಯುತ್ ವಿಭಾಗದಲ್ಲಿ ಆದ ಬೆಲೆ ಏರಿಕೆ. ಇವು ಹಿಂದಿನ ವರ್ಷದ ನವೆಂಬರ್ ಮಟ್ಟಕ್ಕೆ ಹೋಲಿಸಿದರೆ ಶೇಕಡ 40ರಷ್ಟು ಏರಿಕೆ ಆಗಿವೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕೂಡ ಇಂಧನ ಬೆಲೆ ಜಾಸ್ತಿ ಇದೆ. ಇದರ ಪರಿಣಾಮವಾಗಿ ಅಮೆರಿಕದಲ್ಲಿ ಕೂಡ ಹಣದುಬ್ಬರ ಹೆಚ್ಚಳ ಕಂಡಿದೆ ಎಂದು ಅವರು ಹೇಳಿದ್ದಾರೆ.

ಸಗಟು ಹಣದುಬ್ಬರ ಹೆಚ್ಚಳವು ಆಘಾತಕಾರಿ ಮಟ್ಟದಲ್ಲಿದೆ ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಯ್ಯರ್ ಹೇಳಿದ್ದಾರೆ. ತರಕಾರಿ ಬೆಲೆಯಲ್ಲಿ ಆದ ತೀವ್ರ ಏರಿಕೆ, ಮೊಟ್ಟೆ, ಮಾಂಸ ಮತ್ತು ಮೀನಿನ ಬೆಲೆ ಏರಿಕೆ, ಸಾಂಬಾರ ಪದಾರ್ಥಗಳ ಬೆಲೆ ಹೆಚ್ಚಳವು ಆಹಾರ ವಸ್ತುಗಳ ಬೆಲೆ ಏರಿಕೆಗೆ ಕಾರಣ. ಆಹಾರ ವಸ್ತುಗಳ ಬೆಲೆ ಏರಿಕೆಯು 13 ತಿಂಗಳ ಗರಿಷ್ಠ ಮಟ್ಟದಲ್ಲಿದೆ ಎಂದು ಅವರು ಹೇಳಿದ್ದಾರೆ.

ಸಗಟು ಹಣದುಬ್ಬರ: ಯಾವ ತಿಂಗಳಲ್ಲಿ ಎಷ್ಟು



ಪ್ರಮುಖ ವಸ್ತುಗಳ ಸಗಟು ಹಣದುಬ್ಬರ ಏರಿಕೆ ಎಷ್ಟು?

	ನವೆಂಬರ್	
	2020	2021
ಗೋಧಿ	-10.09%	10.14%
ಹಣ್ಣುಗಳು	-1.36%	15.5%
ಮೊಟ್ಟೆ, ಮಾಂಸ, ಮೀನು	0.20%	9.66%
ಎಣ್ಣೆ ಬೀಜಗಳು	8.29%	24.88%

ಲಖಿಂಪುರ ಖೇರಿ ಪ್ರಕರಣ: ನ್ಯಾಯಾಲಯಕ್ಕೆ ಎಸ್‌ಐಟಿ ಹೇಳಿಕೆ

ಹತ್ಯೆ ಉದ್ದೇಶದ ಪೂರ್ವಯೋಜಿತ ಷಡ್ಯಂತ್ರ

ಲಖಿಂಪುರ ಖೇರಿ (ಪಿಟಿಐ): ನಾಲ್ವರು ರೈತರು ಸೇರಿ ಎಂಟು ಮಂದಿಯ ಹತ್ಯೆಯಾದ ಲಖಿಂಪುರ-ಖೇರಿ ಪ್ರಕರಣವು ‘ಹತ್ಯೆ ಉದ್ದೇಶದ ಪೂರ್ವಯೋಜಿತ ಷಡ್ಯಂತ್ರ’ ಎಂದು ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಹೇಳಿದೆ. ‘ನಿರ್ಲಕ್ಷ್ಯದಿಂದ ಕೊಲೆ ಯತ್ನ’ ಎಂಬಂತಹ ಕಡಿಮೆ ಗಂಭೀರವಾದ ಆರೋಪಗಳನ್ನು ಬದಲಿಸಿ ಭಾರತೀಯ ದಂಡ ಸಂಹಿತೆಯ 307ನೇ ಸೆಕ್ಷನ್ (ಕೊಲೆ ಯತ್ನ) ಅಡಿ ಆರೋಪ ದಾಖಲಿಸಬೇಕು ಎಂದು ಮುಖ್ಯ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಅವರನ್ನು ಎಸ್‌ಐಟಿ ಮಂಗಳವಾರ ಕೋರಿದೆ.

ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್‌ಗಳಾದ 279 (ಅತಿ ವೇಗದಲ್ಲಿ ವಾಹನ ಚಾಲನೆ), 338 (ನಿರ್ಲಕ್ಷ್ಯದಿಂದ ಗಂಭೀರವಾಗಿ ಗಾಯಗೊಳಿಸುವುದು), 304 ಎ (ವೇಗ ಮತ್ತು ನಿರ್ಲಕ್ಷ್ಯದಿಂದ ಸಾವಿಗೆ ಕಾರಣವಾಗುವುದು) ಮುಂತಾದವುಗಳನ್ನು ಕೈಬಿಡಬೇಕು ಎಂದು ಎಸ್‌ಐಟಿ ಮನವಿ ಮಾಡಿದೆ.

ಐಪಿಸಿ ಸೆಕ್ಷನ್‌ಗಳಾದ 302 (ಕೊಲೆ), 147 (ಗಲಭೆ), 148 (ಅಪಾಯಕಾರಿ ಆಯುಧ ಹಿಡಿದು ಹಲ್ಲೆ), 120 ಬಿ (ಅಪರಾಧ ಒಳಸಂಚು) ಮುಂತಾದವುಗಳ ಅಡಿಯಲ್ಲಿ ದಾಖಲಿಸಲಾದ ಆರೋಪಗಳನ್ನು ಉಳಿಸಿಕೊಳ್ಳಬೇಕು ಎಂದೂ ಎಸ್‌ಐಟಿ ಹೇಳಿದೆ. ಸೆಕ್ಷನ್ 34 (ಹಲವರು ಒಟ್ಟು ಸೇರಿ ಒಂದೇ ಉದ್ದೇಶದಿಂದ ಕೃತ್ಯ ಎಸಗುವುದು), ಶಸ್ತ್ರಾಸ್ತ್ರ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿಯೂ ಆರೋಪ ದಾಖಲಿಸಬೇಕು ಎಂದು ವಿನಂತಿಸಲಾಗಿದೆ.

ಅಕ್ಟೋಬರ್ 3ರಂದು ಲಖಿಂಪುರ ಖೇರಿ ಪ್ರಕರಣ ನಡೆದಿತ್ತು. ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಅಜಯ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ಅವರು ಪ್ರಕರಣದ ಪ್ರಮುಖ ಆರೋಪಿ.

‘ಎಸ್‌ಐಟಿಯ ಮುಖ್ಯ ತನಿಖಾಧಿಕಾರಿ ವಿದ್ಯಾರಾಮ್ ದಿವಾಕರ್ ಅವರು ಮುಖ್ಯ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಚಿಂತಾರಾಮ್ ಅವರಿಗೆ ಮನವಿ ಸಲ್ಲಿಸಿದ್ದಾರೆ. ಐವರ ಹತ್ಯೆ ಮತ್ತು ಹಲವರು ಗಾಯಗೊಳ್ಳಲು ಕಾರಣವಾದ ಘಟನೆಗೆ ನಿರ್ಲಕ್ಷ್ಯ ಕಾರಣ ಅಲ್ಲ. ಅದು ಹತ್ಯೆ ಉದ್ದೇಶದ ಪೂರ್ವಯೋಜಿತ ಷಡ್ಯಂತ್ರ ಎಂದು ಮನವಿಯಲ್ಲಿ ಹೇಳಲಾಗಿದೆ’ ಎಂದು ಹಿರಿಯ ಪೊಲೀಸ್ ಅಧಿಕಾರಿ (ಎಸ್‌ಪಿಒ) ಎಸ್.ಪಿ. ಯಾದವ್ ತಿಳಿಸಿದ್ದಾರೆ.

ಆರೋಪಗಳನ್ನು ಪರಿಷ್ಕರಿಸುವ ಸಂದರ್ಭದಲ್ಲಿ ಆರೋಪಿಗಳು ನ್ಯಾಯಾಲಯದಲ್ಲಿ ಹಾಜರಿರಬೇಕು ಎಂದು ಕೋರ್ಟ್ ಸೂಚಿಸಿದೆ.

ಉತ್ತರ ಪ್ರದೇಶ ಸರ್ಕಾರವು ಪ್ರಕರಣದ ತನಿಖೆಗೆ ಒಂಬತ್ತು ಸದಸ್ಯರ ಎಸ್‌ಐಟಿಯನ್ನು ರಚಿಸಿತ್ತು. ಆದರೆ, ಸುಪ್ರೀಂ ಕೋರ್ಟ್ ಈ ಎಸ್‌ಐಟಿಯನ್ನು ಪುನರ್‌ರಚನೆ ಮಾಡಿತ್ತು. ಪಂಜಾಬ್-ಹರಿಯಾಣ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ರಾಕೇಶ್ ಕುಮಾರ್ ಜೈನ್ ಅವರನ್ನು ತನಿಖೆಯ ಉಸ್ತುವಾರಿಗೆ ಸುಪ್ರೀಂ ಕೋರ್ಟ್ ನೇಮಕ ಮಾಡಿದೆ.

ಪ್ರಕರಣದಲ್ಲಿ ಎರಡು ಎಫ್‌ಐಆರ್ ದಾಖಲಾಗಿದೆ. ಎಫ್‌ಐಆರ್ ಸಂಖ್ಯೆ 2019ರಲ್ಲಿ 13 ಆರೋಪಿಗಳನ್ನು ಎಸ್‌ಐಟಿ ಗುರುತಿಸಿದೆ. ಎರಡನೇ ಎಫ್‌ಐಆರ್ ಸಂಖ್ಯೆ 220ರಲ್ಲಿ ನಾಲ್ವರನ್ನು ಗುರುತಿಸಲಾಗಿದೆ. ಎಲ್ಲ ಆರೋಪಿಗಳನ್ನೂ ಬಂಧಿಸಲಾಗಿದೆ.

ಅಜಯ್ ಮಿಶ್ರಾ ವಜಾಕ್ಕೆ ರಾಹುಲ್ ಆಗ್ರಹ

ನವದೆಹಲಿ (ಪಿಟಿಐ): ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಅಜಯ್ ಮಿಶ್ರಾ ಅವರನ್ನು ಲಖಿಂಪುರ ಖೇರಿ ಪ್ರಕರಣಕ್ಕೆ ಸಂಬಂಧಿಸಿ ಸಚಿವ ಸ್ಥಾನದಿಂದ ವಜಾ ಮಾಡಬೇಕು ಎಂದು ರಾಹುಲ್ ಗಾಂಧಿ ಆಗ್ರಹಿಸಿದ್ದಾರೆ.



‘2–3 ದೊಡ್ಡ ಉದ್ಯಮಿಗಳು ರೈತರ ವಿರುದ್ಧ ಇದ್ದಾರೆ. ಅವರ ಮುಂದಾಳುವಾಗಿ ನರೇಂದ್ರ ಮೋದಿ ಅವರು ಇದ್ದಾರೆ ಎಂಬುದು ಎಲ್ಲರಿಗೂ ಗೊತ್ತಿರುವ ಸತ್ಯ. ರೈತರ ಮೇಲೆ ಅವರು ವಾಹನ ಹರಿಸಿದಾಗ, ಅವರ ಹಿಂದೆ ಇದ್ದ ಶಕ್ತಿ ಯಾವುದು? ಇಂತಹ ಸ್ವಾತಂತ್ರ್ಯವನ್ನು ಅವರಿಗೆ ಕೊಟ್ಟವರು ಯಾರು? ಅವರು ಜೈಲಿನಿಂದ ಹೊರಗೆ ಉಳಿಯುವಂತೆ ಮಾಡಿದ ಶಕ್ತಿ ಯಾವುದು’ ಎಂದು ರಾಹುಲ್ ಪ್ರಶ್ನಿಸಿದ್ದಾರೆ.

‘ಸಚಿವರೊಬ್ಬರು ರೈತರನ್ನು ಕೊಲ್ಲಲು ಯತ್ನಿಸಿದ್ದರು. ಅವರು ತಮ್ಮ ತಂಡದಲ್ಲಿಯೇ ಇದ್ದಾರೆ ಎಂಬುದು ಪ್ರಧಾನಿಗೆ ತಿಳಿದಿದೆ. ಈ ವಿಚಾರವನ್ನು ನಾವು ಎತ್ತಿದ್ದೇವೆ. ನಮಗೆ ಚರ್ಚೆಗೆ ಅವಕಾಶ ಕೊಡಲಿಲ್ಲ. ಚರ್ಚೆಗೆ ಯತ್ನಿಸಿದಾಗ ನಮ್ಮ ಧ್ವನಿ ಅಡಗಿಸಲಾಗಿದೆ’ ಎಂದು ರಾಹುಲ್ ಹೇಳಿದ್ದಾರೆ.

> **ಮೋದಿ ಅವರೇ, ಮತ್ತೊಮ್ಮೆ ಕ್ಷಮೆ ಕೇಳುವ ಕಾಲ ಬಂದಿದೆ. ಆದರೆ, ಮೊದಲಿಗೆ ಆರೋಪಿಯ ತಂದೆಯನ್ನು ಸಚಿವ ಸ್ಥಾನದಿಂದ ವಜಾ ಮಾಡಿ. ಸತ್ಯ ನಿಮ್ಮೆದುರೇ ಇದೆ**
>
> **ರಾಹುಲ್ ಗಾಂಧಿ,** ಕಾಂಗ್ರೆಸ್ ಸಂಸದ

ವರ್ಷದಲ್ಲೇ ಸಾರ್ವಜನಿಕ ಸಾಲ ಶೇ 31.38ರಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): 2020–21ರ ಒಂದೇ ಆರ್ಥಿಕ ವರ್ಷದಲ್ಲಿ ರಾಜ್ಯ ಸರ್ಕಾರದ ಸಾರ್ವಜನಿಕ ಸಾಲದ ಪ್ರಮಾಣದಲ್ಲಿ ಶೇಕಡ 31.38ರಷ್ಟು ಹೆಚ್ಚಳವಾಗಿದೆ. ಈ ಅವಧಿಯಲ್ಲಿ ರಾಜ್ಯದ ಒಟ್ಟು ಸಾಲದ ಪ್ರಮಾಣ ರಾಜ್ಯದ ನಿವ್ವಳ ಆಂತರಿಕ ಉತ್ಪನ್ನದ (ಜಿಎಸ್‌ಡಿಪಿ) ಶೇ 23.06ರಷ್ಟನ್ನು ತಲುಪಿದೆ ಎಂಬುದನ್ನು ಮಹಾಲೇಖಪಾಲರ (ಸಿಎಜಿ) ವರದಿಯಲ್ಲಿ ಉಲ್ಲೇಖಿಸಲಾಗಿದೆ.

2020–21ನೇ ಸಾಲಿನ ಧನ ವಿನಿಯೋಗ ಲೆಕ್ಕ ಮತ್ತು ಹಣಕಾಸು ಲೆಕ್ಕಗಳಿಗೆ ಸಂಬಂಧಿಸಿದ ಸಿಎಜಿಯ ಲೆಕ್ಕ ಪರಿಶೋಧನಾ ವರದಿಗಳನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಂಗಳವಾರ ಮಂಡಿಸಲಾಯಿತು. ಕೋವಿಡ್ ಸಂಕಷ್ಟ ಮತ್ತು ಲಾಕ್‌ಡೌನ್ ಅವಧಿಯಲ್ಲಿ ಹೆಚ್ಚುವರಿ ಸಾಲ ಪಡೆದಿರುವುದು ಸರ್ಕಾರದ ಮೇಲಿನ ಸಾಲದ ಹೊರೆಯನ್ನು ಗಣನೀಯವಾಗಿ ಹೆಚ್ಚಿಸಿದೆ ಎಂಬುದನ್ನು ವರದಿ ತೆರೆದಿಟ್ಟಿದೆ.

2020ರ ಮಾರ್ಚ್ ಅಂತ್ಯದಲ್ಲಿ ರಾಜ್ಯ ಸರ್ಕಾರದ ಸಾರ್ವಜನಿಕ ಸಾಲದ ಮೊತ್ತ ₹ 2.34 ಲಕ್ಷ ಕೋಟಿ ಇತ್ತು. 2021ರ ಮಾರ್ಚ್ ಅಂತ್ಯಕ್ಕೆ ಈಷ ಮೊತ್ತ ₹ 3.07 ಲಕ್ಷ ಕೋಟಿಗೆ ಏರಿಕೆಯಾಗಿದೆ. ಇದೇ ಅವಧಿಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯವು ಪಡೆದಿರುವ ಸಾಲ ಮತ್ತು ಮುಂಗಡಗಳ ಮೊತ್ತವು ₹ 13,908 ಕೋಟಿಯಿಂದ ₹ 26,617 ಕೋಟಿಗೆ ಹೆಚ್ಚಳವಾಗಿದೆ.

ಕೋವಿಡ್ ಅವಧಿಯಲ್ಲಿ ಆರ್ಥಿಕ ಹೊರೆಯನ್ನು ನಿಭಾಯಿಸಲು ಜಿಎಸ್‌ಡಿಪಿಯ ಶೇ 5ರಷ್ಟು ಸಾಲ ಪಡೆಯುವ ತೀರ್ಮಾನವನ್ನು ಸರ್ಕಾರ ಮಾಡಿತ್ತು. ಇದರಿಂದಾಗಿ ₹ 80,000 ಕೋಟಿಯಷ್ಟು ಹೆಚ್ಚುವರಿ ಸಾಲ ಪಡೆಯಲಾಗಿತ್ತು. ಇದರ ಜತೆಯಲ್ಲೇ ಕೋವಿಡ್ ಅವಧಿಯಲ್ಲಿ ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರವನ್ನು ಸಾಲದ ರೂಪದಲ್ಲಿ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿತ್ತು. ಇದು ರಾಜ್ಯ ಸರ್ಕಾರದ ಸಾಲದ ಪ್ರಮಾಣದಲ್ಲಿ ₹ 18,000 ಕೋಟಿಯಷ್ಟು ಹೆಚ್ಚಳಕ್ಕೆ ಕಾರಣವಾಗಿತ್ತು.

ಕೋವಿಡ್ ಬಿಕ್ಕಟ್ಟು, ಲಾಕ್‌ಡೌನ್‌ನಲ್ಲಿ ತೆರಿಗೆ ಸಂಗ್ರಹ ಕುಸಿತ, ಜಿಎಸ್‌ಟಿ ಪರಿಹಾರ ಇಳಿಕೆಯ ಕಾರಣಗಳಿಂದಾಗಿ 2020–21ನೇ ಆರ್ಥಿಕ ವರ್ಷದಲ್ಲಿ ರಾಜ್ಯ ಸರ್ಕಾರವು ಹಿಂದಿನ ವರ್ಷಗಳಿಗಿಂತ ಹೆಚ್ಚು ಸಾಲ ಪಡೆದಿದೆ.

ವರಮಾನ ಕುಸಿತ: 2020–21ರಲ್ಲಿ ರಾಜ್ಯ ಸರ್ಕಾರದ ವರಮಾನ ಸಂಗ್ರಹದಲ್ಲಿ ಗಣನೀಯ ಕುಸಿತವಾಗಿದೆ. 2019–20ರಲ್ಲಿ ರಾಜ್ಯ ಸರ್ಕಾರಕ್ಕೆ ಜಿಎಸ್‌ಟಿ ಪಾಲಿನಿಂದ ₹ 42,147 ಕೋಟಿ ಲಭಿಸಿತ್ತು. ಆದರೆ, 2020–21ರಲ್ಲಿ ಈ ಮೊತ್ತ ₹ 37,711 ಕೋಟಿಗೆ ಕುಸಿದಿದೆ. ಅಬಕಾರಿ, ನೋಂದಣಿ ಮತ್ತು ಮುದ್ರಾಂಕ ಸೇರಿದಂತೆ ರಾಜ್ಯದ ಸ್ವಂತ ತೆರಿಗೆಗಳ ಸಂಗ್ರಹದಲ್ಲೂ ಕುಸಿತ ಕಂಡುಬಂದಿದೆ ಎಂದು ಸಿಎಜಿ ವರದಿ ಹೇಳಿದೆ.

‘2020–21ರಲ್ಲಿ ರಾಜ್ಯ ಸರ್ಕಾರವು ಬಜೆಟ್‌ನಲ್ಲಿ ಘೋಷಿಸಿದ್ದ ₹ 18,421 ಕೋಟಿ ಸಾಲವೂ ಸೇರಿದಂತೆ ಒಟ್ಟು ₹ 96,506 ಕೋಟಿ ಸಾಲ ಪಡೆದಿದೆ. ಇದರಿಂದಾಗಿ ರಾಜ್ಯ ಸರ್ಕಾರದ ಒಟ್ಟು ಸಾಲದ ಮೊತ್ತವು ಜಿಎಸ್‌ಡಿಪಿಯ ಶೇ 23.06ರಷ್ಟಾಗಿದೆ’ ಎಂದು ಸಿಎಜಿ ತಿಳಿಸಿದೆ.

ಹಬ್ಬದ ಮುಂಗಡ ₹ 25 ಸಾವಿರಕ್ಕೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಕಾಯಂ ನೌಕರರಿಗೆ ಪ್ರತಿ ಆರ್ಥಿಕ ವರ್ಷದಲ್ಲಿ ಒಂದು ಬಾರಿ ಬಡ್ಡಿ ರಹಿತವಾಗಿ ನೀಡುವ ಹಬ್ಬದ ಮುಂಗಡವನ್ನು ₹ 25,000ಕ್ಕೆ ಹೆಚ್ಚಿಸಿ ಹಣಕಾಸು ಇಲಾಖೆ ಮಂಗಳವಾರ ಆದೇಶ ಹೊರಡಿಸಿದೆ.

ಅಖಿಲ ಭಾರತ ಸೇವೆಯ ಅಧಿಕಾರಿಗಳೂ ಸೇರಿದಂತೆ ರಾಜ್ಯ ಸರ್ಕಾರದ ಎಲ್ಲ ಕಾಯಂ ನೌಕರರಿಗೂ ಈ ಸೌಲಭ್ಯವಿದೆ. ಈವರೆಗೂ ವರ್ಷಕ್ಕೆ ಒಂದು ಬಾರಿ ₹ 10,000 ಹಬ್ಬದ ಮುಂಗಡ ನೀಡಲಾಗುತ್ತಿತ್ತು. ಈ ಮಿತಿಯನ್ನು ₹ 25,000ಕ್ಕೆ ಹೆಚ್ಚಿಸುವಂತೆ ರಾಜ್ಯ ಸರ್ಕಾರಿ ನೌಕರರ ಸಂಘ ಮನವಿ ಸಲ್ಲಿಸಿತ್ತು. ಅದನ್ನು ಪುರಸ್ಕರಿಸಿರುವ ಆರ್ಥಿಕ ಇಲಾಖೆ, ಹಬ್ಬದ ಮುಂಗಡದ ಮಿತಿಯನ್ನು ಹೆಚ್ಚಿಸಿದೆ.

‘ರಾಜ್ಯ ಸರ್ಕಾರದಲ್ಲಿ ಒಟ್ಟು 5.25 ಲಕ್ಷ ಕಾಯಂ ನೌಕರರಿದ್ದಾರೆ. ಮಿತಿಯನ್ನು ಹೆಚ್ಚಿಸಿರುವ ಆದೇಶದಿಂದ ‘ಸಿ’ ಮತ್ತು ‘ಡಿ’ ದರ್ಜೆ ನೌಕರರಿಗೆ ಹೆಚ್ಚು ಅನುಕೂಲವಾಗಲಿದೆ’ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ತಿಳಿಸಿದ್ದಾರೆ.

ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಶಿಫಾರಸು

ಹೇಮಾವತಿ ಅಕ್ರಮ: ತನಿಖೆಗೆ ವಿಶೇಷ ತಂಡ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಹೇಮಾವತಿ/ಯಗಚಿ/ವಾಟೆಹೊಳೆ ಜಲಾಶಯ ಯೋಜನೆಗಳ ಭೂ ಪರಿಹಾರ ಅಕ್ರಮದ ತನಿಖೆಗೆ ವಿಶೇಷ ತನಿಖಾ ತಂಡ ರಚಿಸಬೇಕು ಎಂದು ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಶಿಫಾರಸು ಮಾಡಿದೆ.

ಈ ಯೋಜನೆಗಳ ಭೂಸಂತ್ರಸ್ತರಿಗೆ ಮೀಸಲಿಟ್ಟ ಸರ್ಕಾರಿ ಜಮೀನುಗಳನ್ನು ನಕಲಿ ದಾಖಲೆಗಳನ್ನು ಸೃಷ್ಟಿಸಿ, ಭೂ ಸಂತ್ರಸ್ತರಲ್ಲದವರಿಗೆ ಭೂ ಮಂಜೂರಾತಿ ಮಾಡಿರುವ ಕುರಿತ ಮಧ್ಯಂತರ ವರದಿಯನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾಯಿತು. 2005ರ ನಂತರ ಆಗಿರುವ ಅಕ್ರಮ ಭೂ ಪರಭಾರೆಗಳನ್ನು ರದ್ದುಪಡಿಸಿ ಸಮಿತಿಗೆ ಸಮಗ್ರ ವರದಿ ಸಲ್ಲಿಸಬೇಕು ಎಂದೂ ಶಿಫಾರಸು ಮಾಡಿದೆ.

ಅಕ್ರಮವಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಕರ್ತವ್ಯಲೋಪ ಎಸಗಿದ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಿ ಶಿಸ್ತುಕ್ರಮ ಕೈಗೊಂಡು ಸಮಿತಿ ವರದಿ ಸಲ್ಲಿಸಬೇಕು. ನೈಜ ಸಂತ್ರಸ್ತರಿಗೆ ಸಲ್ಲಬೇಕಾದ ಶಾಸನಬದ್ಧ ಹಿಸ್ಸೆಯನ್ನು ಲಭ್ಯವಾಗುವಂತೆ ಮಾಡಲು ಮತ್ತು ಅಧಿಕೃತ ಭೂ ಸಂತ್ರಸ್ತರಿಗೆ ಭೂಮಿ ಮಂಜೂರಾಗಿದ್ದರೆ, ಭೂಮಿಯನ್ನು ಅವರ ಬಳಿ ಉಳಿಯುವಂತೆ ಮಾಡಲು ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದೂ ಸಮಿತಿ ಸೂಚಿಸಿದೆ.

ಈ ಜಲಾಶಯಗಳ ಮುಳುಗಡೆ ರೈತರಿಗೆ ಭೂಮಿ ಮಂಜೂರು ಮಾಡುವ ಸಂಬಂಧ 15 ವರ್ಷಗಳ ಭೂ ಮಂಜೂರಾತಿ ಪರಭಾರೆ ನಿಷೇಧ ಷರತ್ತನ್ನು ಮರು ಸೇರಿಸಿ, ಸಂತ್ರಸ್ತ ಕುಟುಂಬದವರ ಬಳಿಯೇ ನಿರ್ದಿಷ್ಟ ಅವಧಿಗೆ ಜಮೀನು ಉಳಿಯುವಂತೆ ಮಾಡಿ, ಆಗಿರುವ ಅಕ್ರಮ ಭೂ ಖಾತಾ ಬದಲಾವಣೆಯನ್ನು ತಪ್ಪಿಸಬೇಕು.

ಅಕ್ರಮದ ಕುರಿತು ‘ಪ್ರಜಾವಾಣಿ’ಯಲ್ಲಿ ಪ್ರಕಟವಾಗಿದ್ದ ವರದಿ

ಈ ಎಲ್ಲ ಶಿಫಾರಸುಗಳನ್ನು ಆರು ತಿಂಗಳಲ್ಲಿ ಇಲಾಖೆ ಅನುಷ್ಠಾನ ಮಾಡಬೇಕು ಎಂದು ಸಮಿತಿ ನಿರ್ದೇಶನ ನೀಡಿದೆ.

ಸರ್ಕಾರವು 1971ರಲ್ಲಿ ಪ್ರಾರಂಭಿಕ ಅಧಿಸೂಚನೆಯಲ್ಲಿ ನಿಗದಿಪಡಿಸಿದ ಭೂ ಪರಿಹಾರದ ಪ್ರಮಾಣಕ್ಕಿಂತ ಬಹಳ ಹೆಚ್ಚು ಪ್ರಮಾಣದಲ್ಲಿ ಪರಿಹಾರ ನೀಡಲಾಗಿದೆ ಎಂದು ಸಮಿತಿ ಅಸಮಾಧಾನ ವ್ಯಕ್ತಪಡಿಸಿದೆ.

ಯೋಜನೆಯ ಭೂ ಪರಿಹಾರ ಅಕ್ರಮದ ಬಗ್ಗೆ ಎಸ್.ಆರ್.ಬೊಮ್ಮಾಯಿ ನೇತೃತ್ವದ ಸಮಿತಿ 1982ರಲ್ಲೇ ವರದಿ ನೀಡಿದೆ. ಆದರೆ, 40 ವರ್ಷಗಳು ಕಳೆದ ಬಳಿಕವೂ ಭೂ ಸಂತ್ರಸ್ತರಿಗೆ ಭೂ ಮಂಜೂರಾತಿ ಪ್ರಕ್ರಿಯೆ ನಡೆಯುತ್ತಿದೆ. ಬೊಮ್ಮಾಯಿ ಸಮಿತಿಯ ಶಿಫಾರಸುಗಳ ಬಗ್ಗೆ ಕಂದಾಯ ಇಲಾಖೆ ಇಲ್ಲಿಯವರೆಗೆ ಕಠಿಣ ಕ್ರಮ ಕೈಗೊಂಡಿಲ್ಲ ಎಂದೂ ಸಮಿತಿ ಅಸಮಾಧಾನ ವ್ಯಕ್ತಪಡಿಸಿದೆ.

ಜಲಾಶಯ ಮುಳುಗಡೆ ವಿಸ್ತೀರ್ಣವನ್ನು ಭೂ ಮಂಜೂರಾತಿಗೆ ಹೋಲಿಸಿದಾಗ, ಭೂ ಪರಿಹಾರದ ಅಕ್ರಮ ಮಂಜೂರಾತಿ ಅತ್ಯಂತ ಹೇರಳವಾಗಿದ್ದು, ಇದರ ಆಳ ಮತ್ತು ಅಗಲ ಅಳತೆಗೆ ನಿಲುಕದ್ದು ಎಂದು ಸಮಿತಿ ಅಭಿಪ್ರಾಯ ವ್ಯಕ್ತಪಡಿಸಿದೆ.

1,654 ಎಕರೆ ಸರ್ಕಾರಿ ಭೂಮಿಯನ್ನು ಅಕ್ರಮವಾಗಿ ಮಂಜೂರು ಮಾಡಿದ್ದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗಿದೆ ಎಂದು ಹಾಸನ ಜಿಲ್ಲಾಧಿಕಾರಿ ರಚಿಸಿದ್ದ ತನಿಖಾ ತಂಡ ವರದಿ ನೀಡಿದೆ. ಆದರೂ, ಕಂದಾಯ ಇಲಾಖೆ ಯಾವುದೇ ಪರಿಣಾಮಕಾರಿ ಕ್ರಮ ಕೈಗೊಂಡಿಲ್ಲ ಎಂದು ಸಮಿತಿ ತಿಳಿಸಿದೆ.

ಈ ಯೋಜನೆಗಳಿಗೆ ಭೂ ಮಂಜೂರಾತಿಗಾಗಿ 95 ಸಾವಿರ ಎಕರೆ ಕಾಯ್ದಿರಿಸಲಾಗಿತ್ತು. 2015–16ರ ನಂತರ 979 ಪ್ರಕರಣಗಳಲ್ಲಿ ಭೂ ಮಂಜೂರಾತಿ ಆಗಿದೆ. ಅವುಗಳ ಪೈಕಿ 569 ಪ್ರಕರಣಗಳು ವಿಶೇಷ ಭೂಸ್ವಾಧೀನಾಧಿಕಾರಿಗಳ ಆದೇಶದ ಅನ್ವಯ ಭೂ ಮಂಜೂರಾತಿ ಆಗಿವೆ. ಉಳಿದ 410 ಪ್ರಕರಣಗಳು ವಿಶೇಷ ಭೂಸ್ವಾಧೀನಾಧಿಕಾರಿಯವರ ಕಚೇರಿಯಿಂದ ಮಂಜೂರಾಗದೇ ಅಧಿಕಾರಿಗಳ ಸಹಿಯನ್ನು ನಕಲಿ ಮಾಡಿ ಮತ್ತು ಸೃಷ್ಟಿಸಲಾದ ದಾಖಲೆಗಳಿಂದ ಮಂಜೂರಾಗಿತ್ತು ಎಂದೂ ಸಮಿತಿ ಉಲ್ಲೇಖಿಸಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರು ವರದಿ ಮಾಡಿರುವ 2,370 ಅನರ್ಹ ಭೂ ಮಂಜೂರಾತಿ ಪ್ರಕರಣಗಳ ಕುರಿತಂತೆ ಇಲಾಖೆ ಇಲ್ಲಿಯವರೆಗೂ ಸಮರ್ಪಕ ಕ್ರಮ ಕೈಗೊಂಡಿಲ್ಲ. ವಿಶೇಷ ಭೂಸ್ವಾಧೀನಾಧಿಕಾರಿ ಕ್ಯಾಪ್ಟನ್ ಶ್ರೀನಿವಾಸ ಗೌಡ ಅವಧಿಯಲ್ಲಿ 648 ಪ್ರಕರಣಗಳಲ್ಲಿ ಸೃಷ್ಟಿಸಿದ್ದ ಜಮೀನು ಮಂಜೂರಾತಿ ಪ್ರಕರಣಗಳ ತನಿಖೆ ಮಾಡಲು ಸೂಚಿಸಲಾಗಿತ್ತು. ಇದರ ಬಗ್ಗೆಯೂ ಇಲ್ಲಿಯವರೆಗೂ ವರದಿ ಸಲ್ಲಿಸಿಲ್ಲ ಎಂದು ಸಮಿತಿ ಅಸಮಾಧಾನ ವ್ಯಕ್ತಪಡಿಸಿದೆ.

• www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಮುಂದಿನ ವರ್ಷದಲ್ಲಿ ಉನ್ನತ ಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣದಲ್ಲಿ ಆಗ್ಮೆಂಟೆಡ್ ರಿಯಾಲಿಟಿ ಹಾಗೂ ವರ್ಚುವಲ್ ರಿಯಾಲಿಟಿ ಉದ್ಯಮ ಸುಮಾರು ₹ 14 ಸಾವಿರ ಕೋಟಿ ಆಗಲಿದೆ ಎಂದು ಊಹಿಸಲಾಗಿದೆ...

'ನಾನು ಹೇಳಿದ್ದು ಸುಳ್ಳಾದ್ರೆ ಸ್ಥಾನ ತ್ಯಾಗ' 5

ಆಳ-ಅಗಲ
ಸುಂದರಿಯರ ಸೇವಾಭಾವ

ವಾರಾಣಸಿ: ಪ್ರಧಾನಿಯಿಂದ ಮಧ್ಯರಾತ್ರಿ ನಗರ ಪ್ರದಕ್ಷಿಣೆ 11

ಸೆನ್ಸೆಕ್ಸ್	ನಿಫ್ಟಿ	₹/$
58,117	17,324	75.88

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ
A Government of India Undertaking
Together We Can
ಗೃಹ ಸಾಲದ ಬಡ್ಡಿದರವನ್ನು ಕಡಿತಗೊಳಸಲಾಗಿದೆ
ಯಾವುದೇ ಮೊತ್ತಕ್ಕೆ
6.65% ಪ್ರ.ವ.
ಸೀಮಿತ ಅವಧಿಯ ಕೊಡುಗೆ
ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ಮತ್ತು ತಕ್ಷಣ ಅನುಮೋದನೆ ಪಡೆಯಿರಿ • ಸಂಸ್ಕರಣೆ ಮತ್ತು ದಸ್ತಾವೇಜು ಶುಲ್ಕಗಳಿಲ್ಲ
ಕೆನರಾ ಕರೆ ಮಾಡಿ 1800 425 0018

ಒಳ ಪುಟಗಳು

ಹಣದುಬ್ಬರ, ಓಮೈಕ್ರಾನ್ ಆತಂಕ: ಸೂಚ್ಯಂಕ ಇಳಿಕೆ 11

ಆರಿದ ತೇಜಸ್ವಿಯ 'ಶಕ್ತಿ' ದೀಪ 6

ಚಿನಕುರಳಿ

ಪ್ರಕಾಶ್ ಶೆಟ್ಟಿ

ದಳಕ್ಕೆ ಎರಡೇ ಸ್ಥಾನ: ಮೇಲ್ಮನೆಗೆ ಬಂದ ಗೌಡರ ಕುಟುಂಬದ ಕುಡಿ

ಕೈ–ಕಮಲ ಸಮಬಲ

• ವೈ.ಗ. ಜಗದೀಶ್

ರಾಜಕೀಯ ಪಡಸಾಲೆಯೊಳಗೆ ಕುತೂಹಲಕ್ಕೆ ಕಾರಣವಾಗಿದ್ದ ಮೇಲ್ಮನೆ ಚುನಾವಣೆ ಫಲಿತಾಂಶ ಹೊರಬಿದ್ದಿದೆ. ಆಡಳಿತಾರೂಢ ಬಿಜೆಪಿ ಏದುಸಿರು ಬಿಡುತ್ತಲೇ ಹಿಂದಿಗಿಂತ ಐದು ಸ್ಥಾನಗಳನ್ನು ಹೆಚ್ಚುವರಿಯಾಗಿ ದಕ್ಕಿಸಿಕೊಂಡಿದ್ದರೆ, ಕಾಂಗ್ರೆಸ್ ಮೂರು ಸ್ಥಾನ ಕಳೆದುಕೊಂಡರೂ ಎದುರಾಳಿಗಳಿಗೆ ತೀವ್ರ ಪೈಪೋಟಿ ಒಡ್ಡಿ 11ರಲ್ಲಿ ಗೆದ್ದಿದೆ. ಬಿಜೆಪಿ-ಜೆಡಿಎಸ್ ಅಭ್ಯರ್ಥಿಗಳಿಗೆ ಗೆಲುವಿನ ಕಷ್ಟವೇನೆಂದು ತೋರಿಸಿದ ಕಾಂಗ್ರೆಸ್ ವಿರೋಧ ಪಕ್ಷವಾಗಿಯೂ ಬಲಿಷ್ಠವಾಗಿದ್ದೇವೆ ಎಂಬುದನ್ನು ಸಾಬೀತುಪಡಿಸಿದೆ.

ಆರೇ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಜೆಡಿಎಸ್‌ಗೆ ತನ್ನ ಭದ್ರಕೋಟೆಯಲ್ಲೇ ಬುಡ ಅಲ್ಲಾಡತೊಡಗಿರುವುದರ ಅನುಭವವನ್ನು ಈ ಚುನಾವಣೆ ತೋರಿಸಿದೆ. ಈ ಹಿಂದೆ ಗಳಿಸಿದ್ದ ನಾಲ್ಕರಲ್ಲಿ ಎರಡನ್ನು ಕಳೆದುಕೊಂಡು ಎರಡನ್ನು ಮಾತ್ರ ಉಳಿಸಿಕೊಳ್ಳಲು ಆ ಪಕ್ಷ ಶಕ್ತವಾಗಿದೆ.

ಈ ಚುನಾವಣೆಯಲ್ಲಿ 11 ಸ್ಥಾನಗಳನ್ನು ಗೆಲ್ಲುವ ಮೂಲಕ ಪರಿಷತ್ತಿನಲ್ಲಿ ತನ್ನ ಬಲವನ್ನು 37ಕ್ಕೆ ಹೆಚ್ಚಿಸಿಕೊಂಡ ಬಿಜೆಪಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ.

ಜನವರಿ 5ಕ್ಕೆ ಅವಧಿ ಪೂರ್ಣಗೊಳ್ಳಲಿರುವ ವಿಧಾನಪರಿಷತ್ತಿನ 25 ಸದಸ್ಯರ (ಐದು ದ್ವಿಸದಸ್ಯ ಕ್ಷೇತ್ರಗಳೂ ಸೇರಿ) ಆಯ್ಕೆಗಾಗಿ ಡಿ.10ರಂದು ಮತದಾನ ನಡೆದಿತ್ತು. ಸ್ಥಳೀಯ ಸಂಸ್ಥೆಗಳ ಸದಸ್ಯರು ವಿಧಾನಪರಿಷತ್ತಿಗೆ ತಮ್ಮ ಪ್ರತಿನಿಧಿಗಳು ಆಯ್ಕೆ ಮಾಡುವ ಚುನಾವಣೆ ಇದಾಗಿತ್ತು.

ಬಿಜೆಪಿ ಹಾಗೂ ಕಾಂಗ್ರೆಸ್ 20 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದ್ದರೆ, ಜೆಡಿಎಸ್ ಆರು ಕ್ಷೇತ್ರಗಳಲ್ಲಿ ಮಾತ್ರ ಸ್ಪರ್ಧಿಸಿತ್ತು. ದ್ವಿಸದಸ್ಯ ಕ್ಷೇತ್ರಗಳ ಪೈಕಿ ನಾಲ್ಕು ಕಡೆ ಬಿಜೆಪಿ–ಕಾಂಗ್ರೆಸ್ ತಲಾ ಒಂದು ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿ ಪಾಲನ್ನು ಹಂಚಿಕೊಳ್ಳುವ ಲೆಕ್ಕಾಚಾರ ಹಾಕಿದ್ದವು. ಮೈಸೂರು–ಚಾಮರಾಜನಗರ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಇದ್ದುದರಿಂದ ತ್ರಿಕೋನ ಸ್ಪರ್ಧೆ ಎದುರಾಗಿತ್ತು. ಆದರೆ, ಬೆಳಗಾವಿಯಲ್ಲಿ ಬಿಜೆಪಿ ಶಾಸಕರಾದ ರಮೇಶ ಜಾರಕಿಹೊಳಿ, ಬಾಲಚಂದ್ರ ಜಾರಕಿಹೊಳಿ ಅವರು ತಮ್ಮ ಸೋದರ ಲಖನ್ ಜಾರಕಿಹೊಳಿ ಅವರನ್ನು ಪಕ್ಷೇತರರಾಗಿ ಕಣಕ್ಕೆ ಇಳಿಸಿ, ಬಿಜೆಪಿಗೆ ಪೈಪೋಟಿ ಒಡ್ಡಿದರು.

6ನೇ ಪುಟ ನೋಡಿ

ಪಕ್ಷಗಳ ಬಲಾಬಲ

ಆವರಣದಲ್ಲಿ ಇರುವುದು ಚುನಾವಣೆ ಪೂರ್ವ ಬಲಾಬಲ



ವಿಧಾನ ಪರಿಷತ್‌ನ ಬಲಾಬಲ

ಪಕ್ಷ	ಚುನಾವಣೆ ಪೂರ್ವ	ಚುನಾವಣೆ ಬಳಿಕ
ಬಿಜೆಪಿ	32	37
ಕಾಂಗ್ರೆಸ್	29	26
ಜೆಡಿಎಸ್	12	10
ಪಕ್ಷೇತರ	01	01
ಸಭಾಪತಿ	01	01

ಫಲಿತಾಂಶ ಸಮಾಧಾನ ತಂದಿದೆ. ಜನರ ಭಾವನೆ ಗೊತ್ತಾಗಿದೆ. ಇದು ಪರೋಕ್ಷವಾಗಿ ಮುಂದಿನ ವಿಧಾನಸಭೆ ಚುನಾವಣೆಯ ದಿಕ್ಸೂಚಿಯಾಗಿದೆ
ಡಿ.ಕೆ. ಶಿವಕುಮಾರ್
ಕೆಪಿಸಿಸಿ ಅಧ್ಯಕ್ಷ

ಸುದ್ದಿ ವಿಶ್ಲೇಷಣೆ

13–14 ಕ್ಷೇತ್ರಗಳಲ್ಲಿ ಗೆಲ್ಲುವ ನಿರೀಕ್ಷೆಯಲ್ಲಿದ್ದೆವು. ಸ್ವಲ್ಪದರಲ್ಲಿ ಹೆಚ್ಚು ಕಡಿಮೆಯಾಗಿದೆ. ಐದು ಸ್ಥಾನ ಹೆಚ್ಚಿಸಿಕೊಂಡಿರುವುದು ತೃಪ್ತಿ ತಂದಿದೆ
ಬಸವರಾಜ ಬೊಮ್ಮಾಯಿ
ಮುಖ್ಯಮಂತ್ರಿ

ರಾಜ್ಯದಲ್ಲಿ ಕಾಂಗ್ರೆಸ್ ಪರ ಅಲೆ ನಿರ್ಮಾಣವಾಗಿದೆ ಎನ್ನುವುದಕ್ಕೆ ಚುನಾವಣೆಯ ಫಲಿತಾಂಶವೇ ಸಾಕ್ಷಿ
ಸಿದ್ದರಾಮಯ್ಯ
ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ

ಹಣ ಬಲ ಮತ್ತು ಜನ ಬಲದ ನಡುವಿನ ಹೋರಾಟದಲ್ಲಿ ಜನ ಬಲಕ್ಕೆ ಸೋಲಾಗಿರುವುದು ಬೇಸರ ತಂದಿದೆ
ಎಚ್.ಡಿ. ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಇನ್ನಷ್ಟು ಸುದ್ದಿಗಳು 3, 4

ಕುಟುಂಬದ 'ಆಸ್ತಿ'ಯಾದ ಮೇಲ್ಮನೆ

ಬೆಂಗಳೂರು: ಒಂದು ಕಾಲದಲ್ಲಿ ರಾಜಕೀಯ ಮುತ್ಸದ್ದಿಗಳು, ವಿವಿಧ ಕ್ಷೇತ್ರದ ಪ್ರಾಜ್ಞರು, ಪ್ರಾತಿನಿಧ್ಯವನ್ನೇ ಕಾಣದ ತಳಸಮುದಾಯದವರಿಗೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ವೇದಿಕೆ ಕಲ್ಪಿಸಿದ್ದ ಮೇಲ್ಮನೆ ಈಗ ಕುಟುಂಬದವರ ಆಸ್ತಿಯಾಗುವತ್ತ ಹೆಜ್ಜೆ ಇಟ್ಟಿದೆ. 4

ಕ್ರೈಸ್ತರ ಮೇಲೆ ದಾಳಿ: 11 ತಿಂಗಳಲ್ಲಿ 39 ಪ್ರಕರಣ

ಬೆಂಗಳೂರು: ಈ ವರ್ಷದ ಜನವರಿಯಿಂದ ನವೆಂಬರ್‌ವರೆಗೆ ಚರ್ಚ್‌ಗಳು, ಪಾದ್ರಿಗಳು ಹಾಗೂ ಕ್ರೈಸ್ತ ಸಮುದಾಯದವರ ಮೇಲಿನ ದಾಳಿ ಹಾಗೂ ಹಿಂಸಾಚಾರಕ್ಕೆ ಸಂಬಂಧಿಸಿದ 39 ಪ್ರಕರಣಗಳು ರಾಜ್ಯದಲ್ಲಿ ನಡೆದಿವೆ ಎಂದು ಪಿಯುಸಿಎಲ್ ಸಂಘಟನೆ ಹೇಳಿದೆ. 6

'6 ತಿಂಗಳಲ್ಲಿ ಮಕ್ಕಳಿಗೆ ಲಸಿಕೆ ಬಿಡುಗಡೆ'

ನವದೆಹಲಿ (ಪಿಟಿಐ): 'ಮಕ್ಕಳಿಗೆ ನೀಡಲಾಗುವ ಕೋವಿಡ್ ಲಸಿಕೆಯನ್ನು ಆರು ತಿಂಗಳಲ್ಲಿ ಬಿಡುಗಡೆ ಮಾಡಲಾಗುವುದು' ಎಂದು ಸೀರಂ ಇನ್‌ಸ್ಟಿಟ್ಯೂಟ್‌ನ ಸಿಇಒ ಆದಾರ್ ಪೂನಾವಾಲಾ ಮಂಗಳವಾರ ತಿಳಿಸಿದರು. 10

'ನಿರ್ವಾಹಕನಿಗೆ ಆಸ್ತಿ ಮಾರಾಟದ ಹಕ್ಕಿದೆ'

ನವದೆಹಲಿ: ಹಿಂದೂ ಅವಿಭಕ್ತ ಕುಟುಂಬದ ನಿರ್ವಹಣೆಯ ಹೊಣೆ ಹೊತ್ತಿರುವ ವ್ಯಕ್ತಿಯು ಕುಟುಂಬದ ಆಸ್ತಿ ಮಾರಾಟ ಮಾಡಲು ಕುಟುಂಬದ ಇತರರು ತಡೆ ಒಡ್ಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ. 11

*T&C Apply. All prices are inclusive of taxes. Refer the App/Website for more details on gold offer. Offers valid only for today and till stocks last. Images used are for representative purposes only and may differ from the actual products. FreshToHome is only a brand name or trade mark and does not represent its true nature.



ಪ್ರತಿದಿನ, Google Pay ಸೇಫ್ಟೀ ಎಲರ್ಟ್‌ನೊಂದಿಗೆ 1 ಲಕ್ಷ* ಬಳಕೆದಾರರನ್ನು ರಕ್ಷಿಸುತ್ತದೆ.

ಇತರ ಎಲ್ಲರಿಗೆ ಹೋಲಿಸಿದರೆ ಇಡೀ ಜಗತ್ತಿನಲ್ಲಿ ನಾವು, ತಾನಾಗಿ ಸುರಕ್ಷಿತವಾಗಿರುವ, ಖಾಸಗಿತನಕ್ಕಾಗಿ ವಿನ್ಯಾಸಗೊಳಿಸಲಾದ ಮತ್ತು ನಿಮ್ಮ ಸಂಪೂರ್ಣ ನಿಯಂತ್ರಣದಲ್ಲಿರುವ ಪ್ರೊಡಕ್ಟ್‌ಗಳೊಂದಿಗೆ ಆನ್‌ಲೈನ್ ನಲ್ಲಿ ಅತೀ ಹೆಚ್ಚು ಜನರನ್ನು ಸುರಕ್ಷಿತವಾಗಿರಿಸುತ್ತೇವೆ.

Safer with Google

ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ: g.co/safety

*Google Pay ಇಂಟರ್ನಲ್ ಡೇಟಾ - ಇಂಡಿಯಾ

10 ಮಂದಿಗೆ 'ಸಂಸ್ಕೃತಿ ಸಿರಿ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ. ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಪ್ರತಿಷ್ಠಾನ ನೀಡುವ 'ಸಂಸ್ಕೃತಿ ಸಿರಿ' ಪ್ರಶಸ್ತಿಗೆ ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷೆ ಬಿ. ಮಂಜಮ್ಮ ಜೋಗತಿ, ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ ಸೇರಿದಂತೆ ಹತ್ತು ಮಂದಿ ಆಯ್ಕೆಯಾಗಿದ್ದಾರೆ.

ಜಾನಪದ ಗಾಯಕ ಬಾನಂದೂರು ಕೆಂಪಯ್ಯ, ಸುಗಮ ಸಂಗೀತ ಗಾಯಕ ವೈ.ಕೆ. ಮುದ್ದುಕೃಷ್ಣ, ಲೇಖಕಿ ಲೀಲಾ ಸಂಪಿಗೆ, ಸುಗಮ ಸಂಗೀತ ಕಲಾವಿದೆ ರೋಹಿಣಿ ಮೋಹನ್, ಛಾಯಾಗ್ರಾಹಕ ಸಿರಿಗಂಧ ಶ್ರೀನಿವಾಸಮೂರ್ತಿ, ರಂಗಸಂಘಟಕ ಕೆ. ರೇವಣ್ಣ, ಜಾನಪದ ಗಾಯಕ ಅಪ್ಪಗೆರೆ ತಿಮ್ಮರಾಜು ಹಾಗೂ ನಿರೂಪಕಿ ವತ್ಸಲಾ ಮೋಹನ್ ಅವರೂ ಈ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ₹ 25 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.

'ಇದೇ ಭಾನುವಾರ (ಡಿ.19) ಬೆಳಿಗ್ಗೆ 10 ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಪುನೀತ್ ರಾಜ್‌ಕುಮಾರ್ ಸ್ಮರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಸೃಷ್ಟಿ ನಿರಂತರ ತಂಡದಿಂದ ಗೀತನಮನ ನಡೆಯಲಿದೆ. ನಾರಾಯಣ ನೇತ್ರಾಲಯದ ಅಧ್ಯಕ್ಷ ಡಾ. ಭುಜಂಗ ಶೆಟ್ಟಿ ಸಮಾರಂಭ ಉದ್ಘಾಟಿಸಲಿದ್ದಾರೆ. ಬಹುಭಾಷಾ ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ' ಎಂದು ಪ್ರತಿಷ್ಠಾನದ ಅಧ್ಯಕ್ಷ ವೇಮಗಲ್ ನಾರಾಯಣಸ್ವಾಮಿ ಹಾಗೂ ಪ್ರಧಾನ ಕಾರ್ಯದರ್ಶಿ ಆನಂದ ಮಾದಲಗೆರೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಮಂಜಮ್ಮ ಜೋಗತಿ

ಶ್ರೀನಿವಾಸ ಜಿ. ಕಪ್ಪಣ್ಣ


ವೈ.ಕೆ. ಮುದ್ದುಕೃಷ್ಣ

ಸಿರಿಗಂಧ ಶ್ರೀನಿವಾಸಮೂರ್ತಿ

ಅಪ್ಪಗೆರೆ ತಿಮ್ಮರಾಜು

ರೋಹಿಣಿ ಮೋಹನ್

ಬಾನಂದೂರು ಕೆಂಪಯ್ಯ

ಲೀಲಾ ಸಂಪಿಗೆ

ವತ್ಸಲಾ ಮೋಹನ್

ಕೆ. ರೇವಣ್ಣ

ಕೊಡವರ 3–ಎ ಮೀಸಲು ಸೌಲಭ್ಯ: ಅಡ್ಡಿ ನಿವಾರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊಡವ' ಜನಾಂಗವನ್ನು 'ಕೊಡವ' ಎಂದು ಗುರುತಿಸದೆ 'ಕೊಡಗ' ಎಂಬ ತಪ್ಪು ಪದ ಬಳಸಿದ್ದ ಕಾರಣ ಕಾನೂನು ರೀತ್ಯಾ ದೊರಕಬೇಕಿದ್ದ ಮೀಸಲಾತಿಯ ಕೆಟಗರಿ 3-ಎ ಸೌಲಭ್ಯಗಳನ್ನು ಪಡೆಯಲು ಕೊಡವ ಸಮುದಾಯ ನಡೆಸುತ್ತಿದ್ದ ಕಾನೂನು ಸಮರಕ್ಕೆ ಹೈಕೋರ್ಟ್ ತೆರೆ ಎಳೆದಿದೆ.

ಈ ಸಂಬಂಧ 'ಕೊಡವ ನ್ಯಾಷನಲ್ ಕೌನ್ಸಿಲ್' ಪ್ರತಿನಿಧಿ ಎನ್.ಯು.ನಾಚಪ್ಪ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದ್ದು, ಕೊಡವ ಪದಕ್ಕೆ ಎರಡು ದಶಕಗಳಿಂದ ಇದ್ದ ಅಡ್ಡಿಯನ್ನು ನಿವಾರಣೆ ಮಾಡಿದೆ.

'ಅರ್ಜಿದಾರರ ಮನವಿಗೆ ಸಂಬಂಧಿಸಿದಂತೆ 2005ರಲ್ಲಿ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಸಿದ್ದಗಂಗಯ್ಯನವರ ಮಧ್ಯಂತರ ವರದಿ ಹಾಗೂ 2010ರಲ್ಲಿ ಡಾ.ಸಿ.ಎಸ್.ದ್ವಾರಕಾನಾಥ್ ಅವರ ವಿಶೇಷ ವರದಿ ಅನುಸಾರ ಹಿಂದುಳಿದ ಜಾತಿಗೆ ಸಂಬಂಧಿಸಿದಂತೆ ನೀಡಲಾದ ಶಿಫಾರಸಿನ ಅನ್ವಯ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಮತ್ತು ತೆಗೆದುಕೊಂಡ ಕ್ರಮದ ಬಗ್ಗೆ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ವರದಿ ಮಾಡಬೇಕು. ಒಂದು ವೇಳೆ ತೀರ್ಪಿನ ಜಾರಿಗೆ ವಿಳಂಬ ಮಾಡಿದಲ್ಲಿ ಸಂಬಂಧಿಸಿದ ಅಧಿಕಾರಿ ವರ್ಗ ಭಾರಿ ಜುಲ್ಮಾನೆ ತೆರಲು ಸಿದ್ಧವಿರಬೇಕಾಗುತ್ತದೆ' ಎಂದು ನ್ಯಾಯಪೀಠ ಖಡಕ್ ಎಚ್ಚರಿಕೆ ನೀಡಿದೆ.

'ಆಯೋಗದ ಶಿಫಾರಸು ಸಕ್ಷಮ ಪ್ರಾಧಿಕಾರದಲ್ಲಿ ಅನುಮೋದನೆ ಆಗದೆ ಇರುವುದರಿಂದ ಶಿಫಾರಸು ಜಾರಿಗೆ ಮುಂದಾಗಿಲ್ಲ ಎಂಬ ಸರ್ಕಾರದ ಸಮರ್ಥನೆ ಅಧಿಕಾರಿಗಳ ಅಸೀಮ ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿದೆ. ಕೊಡವರು ಕನ್ನಡ ನಾಡಿನ ಪ್ರಾಚೀನ ಹಾಗೂ ವಿಶಿಷ್ಟ ಸಂಸ್ಕೃತಿಯುಳ್ಳ ಸಮುದಾಯದ ಪ್ರತೀಕ. ದೇಶ ಸೇವೆ ಮತ್ತು ನಾಡಿನ ಸಂಸ್ಕೃತಿಗೆ ಇವರ ಕೊಡುಗೆ ಅಪಾರ. ಇದನ್ನು ಗುರುತಿಸುವಲ್ಲಿ ಜಡ್ಡುಗಟ್ಟಿದ ಅಧಿಕಾರ ವರ್ಗ ಎಡವಿದೆ' ಎಂದು ನ್ಯಾಯಪೀಠವು ತನ್ನ ತೀರ್ಪಿನಲ್ಲಿ ಉಲ್ಲೇಖಿಸಿದೆ. ಅರ್ಜಿದಾರರ ಪರ ವಕೀಲ ಬಿ.ಎ.ಬೆಳ್ಳಿಯಪ್ಪ ವಾದ ಮಂಡಿಸಿದ್ದರು.

DIFC COURTS محاكم

CLAIM FORM - COURT OF FIRST INSTANCE

Issued Date : 04/04/2021
Claim No. : CFI-043-2021

Ground Level, Building 4, The Gate District, Dubai International Financial Centre, PO Box 211724, Dubai UAE, Tel ++971 4 427 3333 Fax +971 4 427 3330, www.difccourts.ae

Claimant(s)
Name : Punjab National Bank (DIFC)
Is Resident of UAE : No
Emirates ID : 784-1970-7518432-1
Address Line 1 : 802, The Gate Building (West Wing)
Address Line 2 : Dubai International Financial Centre, Dubai
Location : Dubai
Postal Code/ P O Box : 506844
Email : nikhat@kochhardubai.com
Defendant (s)
Name : UAE Exchange Centre LLC
Is Resident of UAE : Yes
Address Line 1 : Level 2, Al Sayegh Centre Sheikh Hamdan Street,
Address Line 2 : Tel: +9712 6105635 Fax: +9712 6340713
Location : Abu Dhabi
Postal Code / P O Box : 170
Email : pradeep.kumar@uaeexchange.com
Name : **Mr Bavaguthu Raghuram Shetty**
Is Resident of UAE : Yes
Address Line 1 : Flat No. 23, Al Sayegh Building Hamdan St, P O Box 170, Abu Dhabi, UAE
Address Line 2 : Tel : +9712 6105555/635, Fax: +9712 6340713
Location : Abu Dhabi
Postal Code/P O Box : 170
Email : chairmanoffice@brsholding.com
Name : Mr Binay Raghuram Shetty
Is Resident of UAE : Yes
Address Line 1 : Flat No. 31, Al Sayegh Building Hamdan St, P O Box 170, Abu Dhabi, UAE
Address Line 2 : Tel : +9712 6105555/635, Fax: +9712 6340713
Location : Abu Dhabi
Postal Code/P O Box : 170
Email : binay.s@brsventures.com
Claim Type
Type of Claim : P7
Claim Value
Currency : USD
Amount : 37,199,361.09
Court Fee (US $) : 110,799.04
Payment Schedule of Court Fee
Payable now (35%) US $: 38,779.66
Payable at CMC stage (35%) US $: 38,779.66
Payable at PTR stage (30%) US $: 33,239.71

Particulars of Claim – (will follow)
Brief Details of Claim : The First Defendant, the Second Defendant and the Third Defendant are referred to as the Defendants. 1. The Claimant granted short term credit facilities to the extent of US $ 35,000,000 (United States Dollar Thirty Five Million only) ("Facilities") subject to terms and condiions of the facility agreement originally dated 15 June 2010 (as supplemented by a first supplemented agreement dated 8 September 2010 and a second supplemented agreement dated 5 April 2012) duly signed by the Claimant and the Second Defendant ("Facility Agreement"). 2. The First Defendant in pursuance of the terms of the Facility Agreement secured repayments of all sums due or that would become due pursuant to the Finance Documents that included the following : Payment cheque from a deposit account for the entire loan amount of US$ 35 Million from UAE Exchange (Signed by Mr B. R. Shetty), Personal Guarantee of Mr Bavaguthu Raghuram Shetty, Binay Raghuram Shetty ("Security Documents") to guarantee and/or secure all or any part of the unpaid sum under the Facility Agreement, including all interests, charges, fees, costs. All such amounts, obligations and liabilities aforesaid being together referred to as the "Secured Liabilities". 3. On 5th April 2012, Peronal Guarantees were executed by the Second, and the Third Defendant, pursuant to the Personal Guarantees, the Second and the Third.
Defendant undertook and agreed to be bound to the First Defendant in the same manner as the First Defendant with respect to the facilities and in particular to pay, in the event of non-payment or non-satisfaction of any and all monies or other liabilities owed by the First Defendant, and upon the Claimant's first demand, and for such amounts as would be demanded from time to time by the Claimant, in addition to interest and other expenses. 4. The First Defendant has failed to maintain repayments pursuant to Clause 5 of the Facility Agreement, constituting an Event of Default pursuant to Clause 12.1 (a) of the Facility Agreement. 5. On 16 April 2020, the Claimant's Attorney sent legal notice to the First Defendant and the Third Defendant and on 28 May 2020 to the Second Defendant, wherein it has notified that an event of default had occurred in relation to the facility extended, that upon the occurrence of an event of default, the Defendants were obliged to pay the Claimant without demur, all the amounts due from the First Defendant on demand. 6. That the account of the First Defendant was classified as Non Performing Account on 1 June 2020. 7. On 19 January 2021, a Recall and Demand Notice was sent to the Defendants at the Registered Address. 8. On 26 January 2021 the Invocation of Guarantee notice was sent to the guarantors - the Second and the Third Defendant. 9. The Claimant therefore claims from the Defendants as on 28 Feb 2021 repayment of the outstanding sum due in relation to the Facility of US$ 37,199,361.09 (United States Dollars Thirty seven Million one hundred ninety nine thousand three hundred sixtyone and nine cents) ("Outstanding Amount")/ "Debt") is declared as outstanding, and payable immediately with interest and penal interest as under of which are set out below: (a) USD 34,991,232. 36 (United States Dollars thirty-four million nine hundred ninety-one thousand two hundred thirty two and thirty six cents) as the amount outstanding on 1 June 2020 and (b) USD 1,672,980.96 (United States Dollars one million six hundred seventytwo thousand nine hundred eighty and ninety five cents only) as interest claimed under Clause 6 of the Facility Agreement and c. US D 535,147.78 (United States Dollars Five hundred thirtyfive thousand one hundred fortyseven and seventy eight cents) as Penal interest claimed @2% under Clause 7.4 of the Facility Agreement. 10. Each of the Defendants have failed to respond to the notice of default, recall and demand notices and invocation of guarantee notices, and each of the Defendants failed to meet the demand for payment of Outstanding Amount of the Claimant and the First Defendant continues to be in breach of the Facility Agreement and as a result the issue stands unresolved (the "Dispute"). 11. Further particulars will be set out in the Particulars of Claim which will follow in accordance with Rule 7.31 of the Rules of the DIFC Courts if an Acknowledgement of Service is filed by the Defendants, which indicates that they intend to defend this claim.

Jurisdiction
Default Jurisdiction
Law
Law governing the Dispute : Article 19 of the Facility Agreement dated 15th June 2010 states – This Agreement shall be governed by, and be construed in accordance with, the laws of the Dubai International Financial Centre, Article 10. Clause 10.1 of the Personal Guarantee states – This Guarantee shall be governed by the laws of the Dubai International Financial Centre.
Law giving Rise to the Jurisdiction of the DIFC Courts: 19.1 and 19.2 of the Facility Agreement states the Jurisdiction of DIFC Courts – The Borrower agrees, for the benefit of the Lender, that any legal action or proceedings arising out of or in connection with this, Agreement against it or any of its assets may be brought in the Courts of the Dubai Internation Financial Centre. 'The submission to the jurisdiction mentioned in sub-clause 19.1 shall not (and shall not be construed so as to) limit the right of the Lender to take proceedings against the Borrower in whatsoever jurisdictions shall to it deem fit nor shall the taking of proceedings in any one or more jurisdictions preclude the taking of proceedings in any other jurisdiction, whether concurrently or not'. Clause 10.1 of the Personal Guarantee states the courts of Dubai International Financial Centre shall have non-exclusive Jurisdiction to settle any dispute which may arise from or in connection with it. Accordingly, since the Claimant is a DIFC entity, the DIFC Courts have jurisdiction under Article 5(A) (2) of the Judicial Authority Law (the "JAL"). Further and in the alternative, the DIFC Courts have jurisdiction pursuant to Article 5 (A) (1) (a), 5 (A) (1) (b) and/or 5 (A)(1) (c) of the JAL.
Remedy Sought:
(1) A declaration that the Debt and any costs incurred by the Claimant in recovering the Debt are payable forthwith jointly and severally by the First Defendant, and/or the Second Defendant and/or the Third Defendant. (2). An order for repayment of the Debt and any costs incurred by the Claimant in recovering the Debt by the First Defendant under/or the Second Defendant and/or the Third Defendant jointly or severally of the Debt plus any costs incurred by the Claimant in recovering the Debt. (3). In the alternative, damages for breach of contract as aforesaid, to be assessed. (4). Interest as aforesaid. (5). Costs.
Service Location
Outside Dubai
Statement of Truth
Our Client believes that the facts stated in this claim form are true.
Full name : Nikhat Sardar Khan
Signature : Nikhat Sardar Khan
Legal Representative
Firm/Name : Kochhar & Co, Legal Consultants.
Court Registration No. 927A
Address : P O Box 113287, Citadel Tower, 14th Floor, Suite 1410, Business Bay,
Email : nikhat@kochhardubai.com, anjulis@kochhardubai.com
Telephone No. : +971(04) 2776075
Your reference : PNB UAE Exchange-CF
Once your claim form has been submitted successfully you will receive a confirmation and an invoice to be settled before your claim can be accepted and progressed. If your submission is unsuccessful you will receive a message explaining the error and how to rectify it.
If you have any problems filling out the form or need further assistance, please contact us on +97144273333 or by email on registry@difccourts.ae
The DIFC Courts are open between 10 a.m and 4 p.m, Sunday to Thursday. Please address all correspondence with the Court to the Registry (registry@difccourts.ae) and quote the case number if you don't have a case number yet.

ಹೈಕೋರ್ಟ್: 53 ವಕೀಲರಿಗೆ 'ಹಿರಿಯ ವಕೀಲ' ಪದವಿ

ಬೆಂಗಳೂರು: ಹೆಚ್ಚುವರಿ ಅಡ್ವೊಕೇಟ್ ಜನರಲ್ ಎಂ. ಅರುಣ್ ಶ್ಯಾಮ್, ಮಾಜಿ ಹೆಚ್ಚುವರಿ ಅಡ್ವೊಕೇಟ್ ಜನರಲ್ ಎ.ಜಿ. ಶಿವಣ್ಣ, ಕೆ.ದಿವಾಕರ ಹಾಗೂ ಎಸ್. ಆರ್. ಅನುರಾಧಾ ಸೇರಿದಂತೆ ಒಟ್ಟು 53 ಹೈಕೋರ್ಟ್ ವಕೀಲರಿಗೆ 'ಹಿರಿಯ ವಕೀಲ' (ಡೆಸಿಗ್ನೇಟೆಡ್ ಸೀನಿಯರ್ ಕೌನ್ಸೆಲ್) ಪದವಿ ನೀಡಿ ಹೈಕೋರ್ಟ್ ಆದೇಶ ಹೊರಡಿಸಿದೆ.

ಈ ಕುರಿತಂತೆ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಟಿ.ಜಿ. ಶಿವಶಂಕರೇಗೌಡ ಮಂಗಳವಾರ ಅಧಿಸೂಚನೆ ಹೊರಡಿಸಿದ್ದು, ವಕೀಲರ ಕಾಯ್ದೆ - 1961ರ ಕಲಂ 16 (2) ಹಾಗೂ ಕರ್ನಾಟಕ ಹೈಕೋರ್ಟ್ (ಹಿರಿಯ ವಕೀಲರ ನೇಮಕ) ಅಧಿನಿಯಮ-2018ರ ನಿಯಮ 6(9) ರ ಅನುಸಾರ 53 ವಕೀಲರಿಗೆ ಅವರ ಸೇವಾ ಅನುಭವ ಆಧರಿಸಿ 'ಹಿರಿಯ ವಕೀಲ' ಪದವಿ ನೀಡಲಾಗಿದೆ ಎಂದು ತಿಳಿಸಿದೆ.

ಹಿರಿಯ ವಕೀಲರ ಪಟ್ಟಿ: ಜಿ.ಪಾಪಿರೆಡ್ಡಿ, ಎಸ್.ಪಿ.ಕುಲಕರ್ಣಿ, ಪುತ್ತಿಗೆ ಆರ್. ರಮೇಶ್, ಭಟ್ ಗಣೇಶ್ ಕೃಷ್ಣ, ಎಚ್. ಕಾಂತರಾಜ್, ಎಂ.ಆರ್.ಸಿ. ರವಿ, ಎ.ಜಿ. ಶಿವಣ್ಣ, ಬಿ. ಕೆ. ಸಂಪತ್ ಕುಮಾರ್, ಎಚ್.ಎಸ್. ಚಂದ್ರಮೌಳಿ, ಸತೀಶ್‌ಎಂ.ದೊಡ್ಡಮನಿ, ಬಸವರಾಜ ವೀರಸಂಗಪ್ಪ ಸಬರದ, ಬಿ. ಸಿ. ತಿರುವೆಂಗಡಮ್, ವಿಘ್ನೇಶ್ವರ ಎಸ್. ಶಾಸ್ತ್ರಿ, ಎಸ್.ಎಸ್. ಯಡ್ರಾಮಿ, ಎಂ. ಆರ್. ರಾಜಗೋಪಾಲ್, ವಿ.ಸುಧೀಶ್ ಪೈ, ಪಿ. ವಿಲಾಸ್ ಕುಮಾರ್, ಕೆ. ಸುಮನ್, ಎಂ.ಎಸ್. ಭಾಗವತ್, ಜಿ. ಎಲ್.ವಿಶ್ವನಾಥ್, ಬಿ.ಎಲ್.ಆಚಾರ್ಯ, ಪ್ರಮೋದ್ ಎನ್. ಕಠಾವಿ, ಸಿ.ಆರ್. ಗೋಪಾಲಸ್ವಾಮಿ, ಆರ್.ಎಸ್. ರವಿ, ಎಸ್. ಬಸವರಾಜ್, ಜಿ.ವಿ. ಚಂದ್ರಶೇಖರ್, ಗಣಪತಿ ನಾರಾಯಣ ಹೆಗಡೆ, ಎನ್.ರವೀಂದ್ರನಾಥಕಾಮತ್, ಧನಂಜಯ ವಿದ್ಯಾಪತಿ ಜೋಶಿ, ಬಿ. ವಿ. ಶಂಕರ ನಾರಾಯಣ ರಾವ್, ಎಸ್. ಆರ್. ಅನುರಾಧಾ, ಎಚ್.ಎನ್. ಶಶಿಧರ, ರಾಜೇಶ್ ಚಂದರ್ ಕುಮಾರ್ ರೋಹ್ರಾ, ಪದ್ಮಪ್ರಸಾದ್ ಹೆಗ್ಡೆ, ಐ. ತಾರಾನಾಥ್ ಪೂಜಾರಿ, ನಳಿನಾ ಮಾಯೇಗೌಡ, ಕೆ.ದಿವಾಕರ, ಡಿ.ಆರ್. ರವಿಶಂಕರ್, ಹರೀಶ್ ಬೈರಸಂದ್ರ ನರಸಪ್ಪ, ಎಸ್. ಶ್ರೀರಂಗ, ಕೆ.ಎಸ್. ರವಿಶಂಕರ್, ಟಿ.ಸೂರ್ಯನಾರಾಯಣ, ಪ್ರಮೋದ್ ನಾಯರ್, ಸಿ.ಕೆ. ನಂದಕುಮಾರ್, ಅಮಿತ್ ಕುಮಾರ್ ದೇಶಪಾಂಡೆ, ಮೂರ್ತಿ ದಯಾನಂದ ನಾಯಕ್, ಎಂ.ಅರುಣ್ ಶ್ಯಾಮ್, ರೂಬೆನ್‌ಜಾಕೊಬ್, ವಿ.ರಘುರಾಮನ್, ಕೆ.ಕೆ.ಚೈತನ್ಯ, ವಿಕ್ರಂ ಎ. ಹುಯಿಲಗೋಳ, ಕಿರಣ್ ಎಸ್.ಜವಳಿ ಹಾಗೂ ಸುರೇಶ್ ಎಸ್.ಲೋಕ್ರೆ.

ಬೆಂಗಳೂರು ಸಾಹಿತ್ಯ ಉತ್ಸವ 18ರಿಂದ

ಬೆಂಗಳೂರು: ಬೆಂಗಳೂರು ಸಾಹಿತ್ಯ ಉತ್ಸವದ 10ನೇ ಆವೃತ್ತಿ ಇದೇ 18 ಮತ್ತು 19ರಂದು ದೊಮ್ಮಲೂರಿನ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ನಡೆಯಲಿದೆ. 'ಕನ್ನಡ ಜಗತ್ತಿನ ಹಲವು ಭಾಷೆಗಳು' ಈ ಬಾರಿಯ ಉತ್ಸವದ ವಿಶೇಷ.

ಎರಡು ದಿನಗಳ ಉತ್ಸವದಲ್ಲಿ ಅನೇಕ ವಿಚಾರ ಸಂಕಿರಣಗಳು ಮತ್ತು ಸಂವಾದಗಳು ನಡೆಯಲಿವೆ. 170ಕ್ಕೂ ಲೇಖಕರು ಗೋಷ್ಠಿಗಳಲ್ಲಿ ಭಾಗವಹಿಸಲಿದ್ದಾರೆ. ಏಕಕಾಲದಲ್ಲಿ ನಾಲ್ಕು ವೇದಿಕೆಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಪ್ರಸ್ತುತ ವಿದ್ಯಮಾನಗಳು, ಸಾಹಿತ್ಯ, ಸಂಸ್ಕೃತಿ, ಇತಿಹಾಸ ಸೇರಿದಂತೆ ವೈವಿಧ್ಯಮಯ ವಿಷಯಗಳ ಕುರಿತು ತಜ್ಞರು ಚರ್ಚಿಸಲಿದ್ದಾರೆ.

ಈಗಾಗಲೇ ಉತ್ಸವಕ್ಕೆ ನೋಂದಣಿ ಆರಂಭವಾಗಿದೆ. ಎಲ್ಲ ಗೋಷ್ಠಿಗಳು ಬಿಐಸಿಯಲ್ಲೇ ನಡೆಯಲಿದ್ದು, ನೇರ ಪ್ರಸಾರ ಇರುವುದಿಲ್ಲ. ನಂತರದ ದಿನಗಳಲ್ಲಿ ಉತ್ಸವದ ಗೋಷ್ಠಿಗಳ ವಿಡಿಯೊಗಳು ಯೂಟ್ಯೂಬ್‌ನಲ್ಲೂ ವೀಕ್ಷಣೆಗೆ ಲಭ್ಯ.

ಸಾಹಿತ್ಯಾಸಕ್ತರು ಕೋವಿಡ್–19 ಮಾರ್ಗಸೂಚಿಗಳನ್ನು ಪಾಲಿಸಬೇಕು ಎಂದು ಸಂಘಟಕರು ಕೋರಿದ್ದಾರೆ. ಮಾಹಿತಿಗೆ: www.bangaloreliteraturefestival.org

ನಗರದಲ್ಲಿ ಇಂದು

ಬೆಂಗಳೂರು ಸುಸ್ಥಿರ ಸಮಾವೇಶ: ಅತಿಥಿ–ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಆಯೋಜನೆ–ಒ.ಪಿ.ಜಿಂದಾಲ್ ಗ್ಲೋಬಲ್ ಯೂನಿವರ್ಸಿಟಿ (ಜೆಜಿಯು), ಸ್ಥಳ–ತಾಜ್, ವಿಜಯನಗರ ಹಾಲ್, ಎಂ.ಜಿ.ರಸ್ತೆ, ಬೆಳಿಗ್ಗೆ 10.45

ಮತಾಂತರ ನಿಷೇಧ ಕಾಯ್ದೆ ವಿರುದ್ಧ ಚಿಂತಕರ ಪ್ರತಿಭಟನಾ ಸಭೆ: ಅತಿಥಿಗಳು–ಎಸ್.ಜಿ.ಸಿದ್ಧರಾಮಯ್ಯ, ಕೆ.ಮರುಳಸಿದ್ದಪ್ಪ, ಬಂಜಗೆರೆ ಜಯಪ್ರಕಾಶ್, ಲಕ್ಷ್ಮೀನಾರಾಯಣ ನಾಗವಾರ, ಜಾಣಗೆರೆ ವೆಂಕಟರಾಮಯ್ಯ, ಎಲ್.ಎನ್.ಮುಕುಂದರಾಜ್, ಸೈಮನ್ ಬಾರ್ತಲೋಮಿಯ, ಬಿ.ಟಿ.ಲಲಿತಾ ನಾಯಕ್, ವಸುಂಧರಾ ಭೂಪತಿ, ರೀಟಾ ರೀನಿ, ಆಯೋಜನೆ–ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘ, ಸ್ಥಳ–ಜೈಭೀಮ್ ಸಭಾಂಗಣ, ಪೂರ್ಣಿಮಾ ಚಿತ್ರಮಂದಿರ ಮುಂಭಾಗ, ಬೆಳಿಗ್ಗೆ 11.45

ಡಿಸೈನೂರು–ವಿನ್ಯಾಸ ಉತ್ಸವ: ಆಯೋಜನೆ–ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಇಂಟೀರಿಯರ್ ಡಿಸೈನರ್ಸ್ (ಐಐಐಡಿ), ಸ್ಥಳ–ರಂಗೋಲಿ ಕೇಂದ್ರ, ಎಂ.ಜಿ.ರಸ್ತೆ, (ಡಿ.22ರವರೆಗೆ ಕಾರ್ಯಕ್ರಮ ಇರಲಿದೆ)

ರಿಸೀವ್ ಸ್ಟೇಷನ್ ಫಾರ್ ಪ್ಯಾಸಿವ್ ಕೋಹರೆಂಟ್ ಲೊಕೇಷನ್ ರೇಡಾರ್ (ಪಿಸಿಎಲ್‌ಆರ್) ಉದ್ಘಾಟನೆ:ಎಸ್.ವಿ.ರಾಜೀವ್ ಗೌಡ, ಅತಿಥಿ–ವಿಜ್ಞಾನಿ ಪಿ.ರಾಧಾಕೃಷ್ಣ, ಆಯೋಜನೆ–ಈಸ್ಟ್ ಪಾಯಿಂಟ್ ಸಮೂಹ ಸಂಸ್ಥೆಗಳು, ಸ್ಥಳ–ಈಸ್ಟ್ ಪಾಯಿಂಟ್ ಕ್ಯಾಂಪಸ್, ಜ್ಞಾನಪ್ರಭಾ, ವಿರ್ಗೋನಗರ, ಮಧ್ಯಾಹ್ನ 3

ಕೇಕ್ ಪ್ರದರ್ಶನ:ಸ್ಥಳ–ಸೇಂಟ್ ಜೋಸೆಫ್ ಶಾಲೆ ಮೈದಾನ, ಕಂಠೀರವ ಕ್ರೀಡಾಂಗಣದ ಹತ್ತಿರ, ಸಂಜೆ 4

ಮಾರ್ಗಶೀರ್ಷೋತ್ಸವ ಹಾಗೂ ಜಗದ್ಗುರು ಭಾರತೀತೀರ್ಥ ಸಭಾ ಭವನ ಉದ್ಘಾಟನೆ–ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಅತಿಥಿಗಳು–ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಆಯುರ್ವೇದ ತಜ್ಞ ಗಿರಿಧರ ಕಜೆ, ಆಯೋಜನೆ ಮತ್ತು ಸ್ಥಳ–ಸುರಭಾರತೀ ಸಂಸ್ಕೃತ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ವಾಟರ್ ಟ್ಯಾಂಕ್ ಹತ್ತಿರ, ಎಚ್‌ಆರ್‌ಬಿಆರ್ ಬಡಾವಣೆ, ಸಂಜೆ 4.30


ಪ್ರಮೋದಾದೇವಿ

ಕೃಷ್ಣಪ್ರಸಾದ ಬದಿ ಅವರ 'ಉತ್ತುಂಗ' ಪುಸ್ತಕ ಬಿಡುಗಡೆ:ಅತಿಥಿಗಳು–ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಕಾರ್ಯಕಾರಿಣಿ ಸದಸ್ಯ ಸುರೇಶ್ ಭಯ್ಯಾಜಿ ಜೋಶಿ, ದಕ್ಷಿಣ ಮಧ್ಯ ಕ್ಷೇತ್ರೀಯ ಸಂಚಾಲಕ ವಿ.ನಾಗರಾಜ್, ಆಯೋಜನೆ–ಸಾಹಿತ್ಯ ಸಂಗಮ, ಸ್ಥಳ–ಯುವಪಥ, ಸಭಾಂಗಣ, ಜಯನಗರ 4ನೇ ಬ್ಲಾಕ್, ಸಂಜೆ 6.30

ಶ್ರದ್ಧಾಂಜಲಿ

ಜಿ. ಕೃಷ್ಣರೆಡ್ಡಿ
ಮುನ್ನೇಕೊಳಾಲ ಗ್ರಾಮ.
ಇವರು ದಿನಾಂಕ 14.12.2021ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.
ಇವರ ಅಂತ್ಯಕ್ರಿಯೆಯನ್ನು ದಿನಾಂಕ 15.12.2021 ಮಧ್ಯಾಹ್ನ 3:00 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಿಸಲಾಗುವುದು.
ಇಂತಿ ದುಃಖತಪ್ತರು
ಕುಟುಂಬ ವರ್ಗದವರು ಮತ್ತು ಬಂಧು –ಮಿತ್ರರು.

DIFC COURTS محاكم

CLAIM FORM - COURT OF FIRST INSTANCE

Issued Date : 28/09/2020
Claim No. : CFI-079-2020

Ground Level, Building 4, The Gate District, Dubai International Financial Centre, PO Box 211724, Dubai UAE, Tel ++971 4 427 3333 Fax +971 4 427 3330, www.difccourts.ae

Claimant(s)
Name : Punjab National Bank, DIFC Branch
Is Resident of UAE : Yes
Emirates ID : 784-1970-7518432-1
Address Line 1 : 802, The Gate Building (West Wing),
Address Line 2 : Dubai International Financial Centre
Location : Dubai
Postal code / PO Box : 506844
Email : nikhat@kochhardubai.com
Defendant(s)
Name : [redacted]
Is Resident of UAE : Yes
Address Line 1 :
Address Line 2 :
Location :
Postal code / PO Box :
Email :
Name : [redacted]
Is Resident of UAE : Yes
Address Line 1 :
Location :
Postal code / PO Box :
Email :
Name : [redacted]
Is Resident of UAE : Yes
Location :
Postal code / PO Box : [redacted]
[redacted]
Name : [redacted]
Is Resident of UAE : Yes
Location :
Postal code / PO Box :
Email :
Name : [redacted]
Is Resident of UAE : Yes
Address Line 2 :
Location :
Postal code / PO Box : [redacted]
[redacted]
Name : **Mr. B.R. Shetty**
Is Resident of UAE : Yes
Address Line 1 : 202, II Floor, Sama Towers, Electra Street
Location : Abu Dhabi
Postal code / PO Box : 6222
Email : chairmanoffice@brsholding.com
Name : [redacted]
Is Resident of UAE : No
Address Line 1 :
Location :
Email : [redacted]
Claim Type
Type of Claim : P7
Claim Value
Currency : USD
Amount : 30,104,225.06
Court Fee (US$) : 100,156.34
Payment Schedule of Court Fee
Payable now (35%) US$: 35,054.72
Payable at CMC Stage (35%)US$: 35,054.72
Payable at PTR Stage (30%)US$: 30,046.90

Particulars of Claim - (Included)
Details :
MANJULA, WIFE/O, JC-670579A, SUB/ CSD, ANBU M, Vill- Udayanagar, Doorvaninagar, Bangalore, Karnataka, have changed name from MANJULA to A MANJULA, 14/12/2021, Notary K.V. Mani, Bangalore

Lost

ಕಳೆದಿದೆ

ನಾನು ಶ್ರೀಮತಿ ಹೆಲನ್ ಎಸ್. ದಿವಂಗತ ಶ್ರೀನಿವಾಸರವರ ಪತ್ನಿ, ನಂ. 37, 15ನೇ ‘A’ ಮುಖ್ಯರಸ್ತೆ, ಬಾಬಾಸಾಹೇಬ್ ಕಾಲೋನಿ, ಇಂದಿರಾನಗರ, ಹೆಚ್.ಎ.ಎಲ್ 2ನೇ ಹಂತ, ಬೆಂಗಳೂರು 560 008 ಇಲ್ಲಿ ವಾಸವಾಗಿದ್ದು ಬಾಬಾಸಾಹೇಬ್ ಕಾಲೋನಿ ಹೆಚ್. ಎ. ಎಲ್ 2ನೇ ಹಂತ ದೂಕನಹಳ್ಳಿ, ಸ್ಲಂ ಬಡಾವಣೆಯಲ್ಲಿರುವ 6.00 X 9.00 ಮೀಟರ್ ಅಳತೆಯ ಸಂಖ್ಯೆ 37ರ ನಿವೇಶನವನ್ನು ನನ್ನ ಪತಿಯವರಾದ ಶ್ರೀನಿವಾಸರವರ ಹೆಸರಿಗೆ ಹಂಚಿಕೆಯಾಗಿದ್ದು ನನ್ನ ಪತಿಯವರು ಈ ನಿವೇಶನವನ್ನು ನೊಂದಣಿ ಮಾಡಿಕೊಂಡಿದ್ದು ಸ್ವಾಧೀನ ಪತ್ರವನ್ನು ಸಹ ಪಡೆದಿರುತ್ತಾರೆ. ತದನಂತರ ನನ್ನ ಪತಿಯವರು ದಿನಾಂಕ 08-12-2011 ರಂದು ಮರಣಹೊಂದಿರುತ್ತಾರೆ. ಆದರೆ ಈ ನಿವೇಶನದ ಮೂಲ ಹಂಚಿಕೆ ಪತ್ರ, ಮೂಲ ಹಣ ಸಂದಾಯಿಸಿದ ಚಲನ್, ಮೂಲ ಸ್ವಾಧೀನ ಪತ್ರ ಹಾಗೂ ಇದರ ಎಲ್ಲಾ ಮೂಲ ದಾಖಲಾತಿಗಳು ಮನೆ ಸುಣ್ಣ ಬಣ್ಣ ಮಾಡಿಸುವ ಸಮಯದಲ್ಲಿ ಕಳೆದು ಹೋಗಿರುತ್ತದೆ.
ಯಾರಿಗಾದರೂ ಸಿಕ್ಕಿದ್ದಲ್ಲಿ ಸಂಪರ್ಕಿಸಿ:
ಸಂಜಯ್ ಶ್ರೀನಿವಾಸ
9980369402

CONNECT ಕ್ಲಾಸಿಫೈಡ್ಸ್

ವಿಶೇಷವಾಗಿ ಆಯ್ಕೆ ಮಾಡಲಾಗಿರುವ ರುದ್ರಾಕ್ಷಗಳ ಪ್ರದರ್ಶನ ಮತ್ತು ಮಾರಾಟ

Rudrajyoothi Healing Gallery® Empower Your Self

rudraksh mahostavam
ನಿಮಗೆ ಸೂಕ್ತವಾದ ರುದ್ರಾಕ್ಷ ಸಂಯೋಜನೆಯನ್ನು ತಿಳಿದುಕೊಳ್ಳಿರಿ
ಜನ್ಮದಿನಾಂಕ ಆಧಾರದ ಮೇರೆಗೆ ಉಚಿತ ಸಮಾಲೋಚನೆ

ಅದ್ಭುತ ಮಣಿ – ಮನುಕುಲಕ್ಕೆ ಒಂದು ನೈಸರ್ಗಿಕ ಸಂಜೀವಿನಿ

rudraksh
ಪ್ರದರ್ಶನ ಮತ್ತು ಮಾರಾಟ



ಶಿವಶಕ್ತಿ ಮಾಲೆಯ ಪ್ರಯೋಜನಗಳು

ಈ ಮಾಲೆಯಲ್ಲಿ ಎಲ್ಲಾ ಬಲಿಷ್ಠ ಶಕ್ತಿಗಳು ಅಡಗಿವೆ ತಮ್ಮು ಇದನ್ನು ಧರಿಸುವವರು ಎಲ್ಲ ವಿಧದ ರುದ್ರಾಕ್ಷಗಳ ಲಾಭ ಪಡೆಯುತ್ತಾರೆ. ಇದರ ಉಪಯುಕ್ತತೆಗಳು ಕೆಳಗಿನಂತಿವೆ:

ನಿಮ್ಮ ಜೀವನದೊಳಗೆ ಪ್ರೀತಿಯ ಆಕರ್ಷಣೆ. ಸುರಕ್ಷೆ ಮತ್ತು ಸಮತೋಲನತೆ. ಸಂಪತ್ತು, ಸುದೀರ್ಘ ಜೀವನ, ಅದೃಷ್ಟ ಮತ್ತು ಸುರಕ್ಷೆ. ಇದರಲ್ಲಿ ಬಲ, ಜಯ, ದೀರ್ಘಾಯುಷ್ಯ, ಪ್ರೀತಿ, ನಿಷ್ಠೆ, ಘನತೆ, ಚಾಣಾಕ್ಷತೆ ಮತ್ತು ಸ್ವಾತಂತ್ರ್ಯದ ಬಲಿಷ್ಠ ಶಕ್ತಿಗಳಿವೆ. ಇದನ್ನು ಧರಿಸುವವರಿಗೆ ಕೌಟುಂಬಿಕ ಒಗ್ಗಟ್ಟು ಮತ್ತು ಸದೃಢ ಬೆಂಬಲ ಹಾಗೂ ಕಾರ್ಯಕ್ಷೇತ್ರದಲ್ಲಿ ಜನರ ಗೌರವ ಕೂಡ ಲಭಿಸುತ್ತದೆ.

ಪ್ರದರ್ಶನದ ವೈಶಿಷ್ಟಗಳು

1. ಜನ್ಮದಿನಾಂಕ ಆಧಾರದ ಮೇರೆಗೆ ಉಚಿತ ಸಮಾಲೋಚನೆ
2. ಉತ್ಕೃಷ್ಟ ಗುಣಮಟ್ಟ ಮತ್ತು ಅಸಲಿ ರುದ್ರಾಕ್ಷಗಳು ಕೈಗೆಟುಕುವ ಬೆಲೆಯಲ್ಲಿ ಉಪಲಬ್ಧ (ಅಪರೂಪದ ಸರ್ವ ಸಿದ್ಧ ಮಾಲಾ (1 ರಿಂದ 14 ಮುಖಿ) ಮತ್ತು ಇಂದ್ರ ಮಾಲಾ 1 ರಿಂದ 12 ಮುಖಿ) ಸೇರಿದಂತೆ ಎಲ್ಲಾ ಅಪರೂಪದ ರುದ್ರಾಕ್ಷಗಳು ಕೂಡ ಲಭ್ಯ.
3. ಮರ್ಕ್ಯೂರಿ ಉತ್ಪನ್ನಗಳ ಶ್ರೇಣಿ (ಶಿವಲಿಂಗ, ಲಾಕೆಟ್ಸ್, ಬ್ರೇಸ್‌ಲೆಟ್ಸ್), ಸ್ಫಟಿಕ ಯಂತ್ರ ಮತ್ತು ಮಾಲಾ ಹಾಗೂ ವಿಶಿಷ್ಠ ಜೈವಿಕ ಆಭರಣಗಳು.
4. ರುದ್ರಾಕ್ಷ ಮಾಲಾ ತಯಾರಿಕೆಯ ಅಭಿಷೇಕ ಉಚಿತ (ನಿಮ್ಮ ಮಾಲೆಯನ್ನು ಶಕ್ತಿಯುತಗೊಳಿಸುತ್ತದೆ)

ವಿಳಾಸ : ಹೋಟೆಲ್ ಆಶ್ರಯ ಇಂಟರ್‌ನ್ಯಾಷನಲ್, ಕಮೀಷನರ್ ಆಫೀಸ್ ಎದುರು. ಇನ್‌ಫೆಂಟ್ರಿ ರಸ್ತೆ, ಬೆಂಗಳೂರು

15ನೇ ರಿಂದ 20ನೇ ಡಿಸೆಂಬರ್. 2021 ವೇಳೆ : 11:00 ರಿಂದ ರಾತ್ರಿ 8

Contact : 9867402789 ; www.rudrajyoothi.com

NO MASK NO ENTRY | SANITIZATION AT THE DOOR | FULL SAFETY | SPECIAL ATTENTION & PRIORITY TO OLD AGE PEOPLE | PARKING FACILITY AVAILABLE | ALL MAJOR DEBIT & CREDIT CARDS ACCEPTED

DH DECCAN HERALD ಪ್ರಜಾವಾಣಿ

BOOK YOUR REAL ESTATE
Classified Advertisement In Deccan Herald & Prajavani

SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ಟೆಂಡರ್ ತಪ್ಪಿಸಲು 4ಜಿ ವಿನಾಯಿತಿ ಕಳ್ಳಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಕಾಮಗಾರಿಗಳಿಗೆ ಗುತ್ತಿಗೆದಾರರ ಆಯ್ಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ರೂಪಿಸಲಾದ 'ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆ'ಯ ಸೆಕ್ಷನ್ 4(ಜಿ)ಯಲ್ಲಿ ನೀಡಿರುವ ಅವಕಾಶಗಳನ್ನೇ ದುರ್ಬಳಕೆ ಮಾಡಿಕೊಂಡು ಟೆಂಡರ್ ಕರೆಯದೆಯೇ ಕಾಮಗಾರಿಗಳನ್ನು ನಡೆಸುವ ಪರಿಪಾಠ ಬಿಬಿಎಂಪಿಯಲ್ಲಿ ಇತ್ತೀಚೆಗೆ ಹೆಚ್ಚುತ್ತಿದೆ.

'ತುರ್ತು ಸಂದರ್ಭ ಎದುರಾದಾಗ ಟೆಂಡರ್ ಪ್ರಕ್ರಿಯೆಯಿಂದ ವಿನಾಯಿತಿ ಪಡೆಯಬಹುದಾದ ಅವಕಾಶ ಇದೆ. ಆದರೆ, ನಿರ್ದಿಷ್ಟ ಗುತ್ತಿಗೆದಾರರಿಗೆ ಕಾಮಗಾರಿಯ ಟೆಂಡರ್ ಸಿಗುವಂತೆ ನೋಡಿಕೊಳ್ಳಬೇಕು ಎಂಬ ಕಾರಣಕ್ಕೆ ರಾಜಕಾರಣಿಗಳು ಅಧಿಕಾರಿಗಳ ಮೇಲೆ ಒತ್ತಡ ಹೇರಲಾಗುತ್ತಿದೆ. ಕಾಯ್ದೆಯ ಆಶಯವನ್ನೇ ಗಾಳಿಗೆ ತೂರಿ ಅಧಿಕಾರಿಗಳು ಅನಗತ್ಯವಾಗಿ ಟೆಂಡರ್ ಪ್ರಕ್ರಿಯೆಯಿಂದ ವಿನಾಯಿತಿ ನೀಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿರುವ ಅನೇಕ ಪ್ರಕರಣಗಳು ಬಿಬಿಎಂಪಿಯಲ್ಲಿ ನಡೆದಿವೆ. ಇದು ಅಪಾಯಕಾರಿ ಬೆಳವಣಿಗೆ' ಎಂಬುದು ತಜ್ಞರ ಅಭಿಪ್ರಾಯ.

110 ಹಳ್ಳಿ ಯೋಜನೆಯಡಿ ರಸ್ತೆಗಳ ಪುನರುಜ್ಜೀವನ, ಪ್ರಕೃತಿ ವಿಕೋಪ ನಿಧಿಯಲ್ಲಿ ರಸ್ತೆ, ರಾಜಕಾಲುವೆ ದುರಸ್ತಿ ಕಾಮಗಾರಿಗಳಿಗೆ 4ಜಿ ವಿನಾಯಿತಿ ಕೋರಿ ಸರ್ಕಾರಕ್ಕೆ ಬಿಬಿಎಂಪಿ ಪ್ರಸ್ತಾವನೆ ಸಲ್ಲಿಸಿದೆ. ಇನ್ನೊಂದೆಡೆ ಈಗಾಗಲೇ ಮಂಜೂರಾತಿ ಪಡೆದ ಕಾಮಗಾರಿಗಳ ಪ್ಯಾಕೇಜ್‌ಗೆ ನೂರಾರು ಕೋಟಿ ಮೊತ್ತದ ಕಾಮಗಾರಿಯನ್ನು ಹೆಚ್ಚುವರಿಯಾಗಿ ಸೇರ್ಪಡೆ ಮಾಡುವ ಮೂಲಕವೂ ಟೆಂಡರ್ ಪ್ರಕ್ರಿಯೆ ನಡೆಯದಂತೆ ನೋಡಿಕೊಳ್ಳುತ್ತಿದೆ. ಈ '4ಜಿ ಹಗರಣ'ದ ಬಗ್ಗೆ ತಜ್ಞರು ಮತ್ತು ಸಾರ್ವಜನಿಕರು 'ಪ್ರಜಾವಾಣಿ' ಜತೆ ಅಭಿಪ್ರಾಯ ಹಂಚಿಕೊಂಡಿದ್ದಾರೆ.

'ಪರ್ಸೆಂಟೇಜ್ ಬಾಚುವುದಷ್ಟೇ ಗುರಿ'

ತುರ್ತು ಸಂದರ್ಭದಲ್ಲಿ ಮಾತ್ರ ಬಳಕೆ ಮಾಡಿಕೊಳ್ಳಬಹುದಾದ 4ಜಿ ವಿನಾಯಿತಿ ಅವಕಾಶವನ್ನು ಬಿಬಿಎಂಪಿ ಅಧಿಕಾರಿಗಳು ಈಗ ಎಲ್ಲಾ ಕಾಮಗಾರಿಗಳಿಗೂ ಬಳಸುತ್ತಿದ್ದಾರೆ. ಬಿಬಿಎಂಪಿ ಚುನಾವಣೆ ಘೋಷಣೆ ಆಗುವಷ್ಟರಲ್ಲಿ ಕಾಮಗಾರಿ ಆರಂಭಿಸಿ ಅದರಿಂದ ಬರುವ ಪರ್ಸೆಂಟೇಜ್ ಬಾಚಿಕೊಳ್ಳುವುದಷ್ಟೇ ಅಧಿಕಾರಿಗಳು ಮತ್ತು ರಾಜಕಾರಣಿಗಳ ಗುರಿ. ಬೆಂಗಳೂರಿನ ಜನ ಅನುಭವಿಸುತ್ತಿರುವ ತೊಂದರೆಗಳಿಗೆ ಪರಿಹಾರ ಕಂಡುಕೊಳ್ಳುವ ಆಲೋಚನೆ ಯಾರಿಗೂ ಇಲ್ಲ.

ಕೆ.ಎಸ್.ಲಾವಣ್ಯ, ಖಾಸಗಿ ಉದ್ಯೋಗಿ

ರಾಜಧಾನಿ ಒಡಲದನಿ

'ಕೋವಿಡ್ ಸಂದರ್ಭ ದುರ್ಬಳಕೆ'

ಭ್ರಷ್ಟಾಚಾರ ಮಾಡಲು ಕಾನೂನಿನ ಅಡಿಯಲ್ಲಿ ಇರುವ ಅವಕಾಶಗಳನ್ನು ಅಧಿಕಾರಿಗಳು ಹುಡುಕುತ್ತಾರೆ. ಮುಂದಿನ ಚುನಾವಣೆ ವೇಳೆಗೆ ಎಷ್ಟು ಹಣ ಮಾಡಿಕೊಳ್ಳಬಹುದು ಎಂಬುದಷ್ಟೇ ರಾಜಕಾರಣಿಗಳ ಚಿಂತೆ. ಬಿಬಿಎಂಪಿ ದಿವಾಳಿಯಾಗಿದೆ. ಅಲ್ಲಿನ ಹಗರಣಗಳಿಗೆ ಭ್ರಷ್ಟಾಚಾರ ಎಂಬ ಪದವೇ ಹಗುರವಾಗುತ್ತದೆ. ಐದಾರು ವರ್ಷಗಳ ಹಿಂದೆ ಆರಂಭಿಸಿದ ಕಾಮಗಾರಿಗಳು ಇನ್ನೂ ಪೂರ್ಣಗೊಂಡಿಲ್ಲ. ಇವುಗಳ ಬಗ್ಗೆ ಬಿಬಿಎಂಪಿ ಅಧಿಕಾರಿಗಳಿಗಾಗಲಿ, ಜನಪ್ರತಿನಿಧಿಗಳಿಗಾಗಲಿ ಕಾಳಜಿಯೇ ಇಲ್ಲ. ಟೆಂಡರ್ ಇಲ್ಲದೆ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಬಗ್ಗೆಯಷ್ಟೇ ಆಸಕ್ತಿ. 4ಜಿ ವಿನಾಯಿತಿ ಕೋರಿ ಪ್ರಸ್ತಾವನೆ ಸಲ್ಲಿಸುವುದೇ ನಾಚಿಕೆಗೇಡಿನ ವಿಷಯ. ವಿರೋಧ ಪಕ್ಷಗಳೂ ಈ ವಿಷಯದಲ್ಲಿ ಮೌನ ವಹಿಸಿವೆ. ಬೆಂಗಳೂರಿನ ಉಸ್ತುವಾರಿ ನೋಡಿಕೊಳ್ಳುತ್ತಿರುವ ಮುಖ್ಯಮಂತ್ರಿ ಅವರ ಮೂಗಿನಡಿಯಲ್ಲೇ ಈ ರೀತಿ ಅಕ್ರಮಗಳು ನಡೆಯುತ್ತಿರುವುದು ಸೌಜನ್ಯವಲ್ಲ. ಕೋವಿಡ್ ಬಳಿಕ ಹೋರಾಟಗಾರರು ರಸ್ತೆಗಿಳಿಯಲು ಹಿಂದೇಟು ಹಾಕುತ್ತಿದ್ದಾರೆ. ಆಡಳಿತ ನಡೆಸುವವರು ಪರಿಸ್ಥಿತಿಯ ಲಾಭ ಪಡೆದುಕೊಳ್ಳುತ್ತಿದ್ದಾರೆ. ಜನ ಕೋವಿಡ್ ಭಯ ಬಿಟ್ಟು ಹೋರಾಟಕ್ಕೆ ಇಳಿಯಬೇಕಾಗಿದೆ.

ಡಿ.ಎಸ್. ರಾಜಶೇಖರ್, ಬೆಂಗಳೂರು ಪ್ರಜಾ ವೇದಿಕೆ

'ಹಿಂಬಾಲಕರಿಗೆ ಗುತ್ತಿಗೆ'

ತುರ್ತು ಸಂದರ್ಭದಲ್ಲಿ ಬಳಕೆ ಮಾಡಿಕೊಳ್ಳಬೇಕಾದ ಕೆಟಿಪಿಪಿ ಕಾಯ್ದೆಯ 4ಜಿ ಸೆಕ್ಷನ್ ಅನ್ನು ಎಲ್ಲಾ ಕಾಮಗಾರಿಗಳಿಗೂ ದುರ್ಬಳಕೆ ಮಾಡಿಕೊಳ್ಳಲು ಅವಕಾಶ ನೀಡುವುದು ಒಳ್ಳೆಯ ಸಂಪ್ರದಾಯ ಅಲ್ಲ. ರಾಜಕಾರಣಿಗಳು ತಮ್ಮ ಹಿಂಬಾಲಕರಿಗೆ ಗುತ್ತಿಗೆ ಕೊಡಿಸಲು 4ಜಿ ವಿನಾಯಿತಿಯನ್ನು ದಾರಿಯಾಗಿ ಮಾಡಿಕೊಳ್ಳುತ್ತಿದ್ದಾರೆ. ಅಧಿಕಾರಿಗಳು, ರಾಜಕಾರಣಿಗಳು ಒಟ್ಟಾಗಿ ಸರ್ಕಾರದ ಹಣ ಲೂಟಿ ಮಾಡುತ್ತಿದ್ದಾರೆ. ಕೆಟಿಪಿಪಿ ಕಾಯ್ದೆಯ ಮೂಲ ಆಶಯವನ್ನೇ ಬುಡಮೇಲು ಮಾಡುತ್ತಿದ್ದಾರೆ.

ಅನಿಲ್, ಉದ್ಯಮಿ

'ಹಣ ಲೂಟಿಯ 4ಜಿ ಹಗರಣ'

4ಜಿ ವಿನಾಯಿತಿ ಪಡೆಯುವ ಹಗರಣದ ಬಗ್ಗೆ 20 ವರ್ಷಗಳಿಂದ ವಿಶ್ಲೇಷಣೆ ಮಾಡಿದ್ದೇವೆ. ಬಿಬಿಎಂಪಿಯ ಶೇ 50ರಷ್ಟು ಕಾಮಗಾರಿಗಳನ್ನು ಟೆಂಡರ್ ಇಲ್ಲದೆಯೇ ನಿರ್ವಹಿಸಲಾಗುತ್ತಿದೆ. ಸಾರ್ವಜನಿಕರ ಹಣವನ್ನು ಲೂಟಿ ಮಾಡುವುದಷ್ಟೇ ಇದರ ಹಿಂದಿನ ಉದ್ದೇಶ. ತುರ್ತು ಸಂದರ್ಭ ಮತ್ತು ನಿರ್ದಿಷ್ಟ ವಿಷಯದ ಬಗ್ಗೆ ಪರಿಣತಿ ಹೊಂದಿರುವ ಒಂದೇ ಸಂಸ್ಥೆ ಇದ್ದರೆ ಮಾತ್ರ ಕೆಟಿಪಿಪಿ ಕಾಯ್ದೆಯ 4ಜಿ ಸೆಕ್ಷನ್ ಅಡಿ ವಿನಾಯಿತಿ ಪಡೆದುಕೊಳ್ಳಲು ಅವಕಾಶ ಇದೆ. ರಸ್ತೆ, ಚರಂಡಿ, ಗುಂಡಿ ಮುಚ್ಚುವ ಕಾಮಗಾರಿ, ಬೀದಿ ದೀಪ ಅಳವಡಿಕೆಗೂ ಈ ವಿನಾಯಿತಿ ಪಡೆದುಕೊಳ್ಳಲಾಗುತ್ತಿದೆ. ಬಿಬಿಎಂಪಿ ಚುನಾವಣೆ ಸಮೀಪಿಸುತ್ತಿರುವುದರಿಂದ ಬಿಬಿಎಂಪಿ ಅಧಿಕಾರಿಗಳಿಗೆ ಇಡೀ ಬೆಂಗಳೂರೇ ತುರ್ತು ನಿಗಾ ಘಟಕದಂತೆ ಕಾಣಿಸುತ್ತಿದೆ. ಸಾರ್ವಜನಿಕರ ತೆರಿಗೆ ಹಣವನ್ನು ಲೂಟಿ ಮಾಡಿ ರಾಜಕಾರಣಿಗಳ ಜೇಬು ತುಂಬಿಸುತ್ತಿದ್ದಾರೆ. ಈ 4ಜಿ ಹಗರಣದ ವಿರುದ್ಧ ನಿರಂತರವಾಗಿ ಹೋರಾಟ ನಡೆಸುತ್ತಿದ್ದೇವೆ.

ಶ್ರೀಕಾಂತ್ ನರಸಿಂಹನ್, ಬೆಂಗಳೂರು ನವ ನಿರ್ಮಾಣ ಪಕ್ಷದ (ಬಿಎನ್‌ಪಿ) ಪ್ರಧಾನ ಕಾರ್ಯದರ್ಶಿ

ಓಮೈಕ್ರಾನ್ ಜಯಿಸಿದ ಸಾಫ್ಟ್‌ವೇರ್ ಎಂಜಿನಿಯರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ವೈರಾಣುವಿನ ರೂಪಾಂತರಿ ಓಮೈಕ್ರಾನ್ ಸೋಂಕಿತರಾಗಿದ್ದ ಇಲ್ಲಿನ 34 ವರ್ಷದ ಸಾಫ್ಟ್‌ವೇರ್ ಎಂಜಿನಿಯರ್ ಸಂಪೂರ್ಣ ಗುಣಮುಖರಾಗಿದ್ದಾರೆ. ಅವರು ಮಂಗಳವಾರ ಆಸ್ಪತ್ರೆಯಿಂದ ಮನೆಗೆ ಮರಳಿದ್ದಾರೆ. ರಾಜ್ಯದಲ್ಲಿ ಹೊಸ ತಳಿಯ ವೈರಾಣುವಿನಿಂದ ಚೇತರಿಸಿಕೊಂಡ ಮೊದಲಿಗರು ಇವರು.

ದಕ್ಷಿಣ ಆಫ್ರಿಕಾಕ್ಕೆ ತೆರಳಿ ಅಲ್ಲಿಂದ ಡಿ.1ರಂದು ಮರಳಿದ್ದ ಅವರಿಗೆ, ಡಿ.2ರಂದು ಕೊರೊನಾ ಸೋಂಕು ದೃಢಪಟ್ಟಿತ್ತು. ಅವರ ಮಾದರಿಯನ್ನು ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆಗೆ (ಜೀನೋಮ್ ಸೀಕ್ವೆನ್ಸಿಂಗ್) ಕಳುಹಿಸಲಾಗಿತ್ತು. ಆ ಪರೀಕ್ಷಾ ವರದಿಯಲ್ಲಿ ಹೊಸ ತಳಿಯ ಸೋಂಕು ಇದೇ 12ರಂದು ದೃಢಪಟ್ಟಿತ್ತು. ಅವರು ಇಲ್ಲಿನ ಬೌರಿಂಗ್ ಆಸ್ಪತ್ರೆಯಲ್ಲಿ ಪ್ರತ್ಯೇಕ ವಾಸಕ್ಕೆ ಒಳಗಾಗಿದ್ದರು. ಅವರನ್ನು ಮನೆಗೆ ಕಳುಹಿಸುವ ಮೊದಲು ಎರಡು ಬಾರಿ ಆರ್‌ಟಿ–ಪಿಸಿಆರ್ ಪರೀಕ್ಷೆ ನಡೆಸಲಾಗಿದ್ದು, ಪೂರ್ಣ ಪ್ರಮಾಣದಲ್ಲಿ ಗುಣಮುಖರಾಗಿರುವುದು ದೃಢಪಟ್ಟಿದೆ.

'ಗುಣಮುಖರಾದ 34 ವರ್ಷದ ವ್ಯಕ್ತಿ ಮನೆಯಲ್ಲಿಯೇ ಏಳು ದಿನಗಳು ಪ್ರತ್ಯೇಕವಾಸಕ್ಕೆ ಒಳಪಡಬೇಕು. ಈ ಅವಧಿಯಲ್ಲಿ ಆರೋಗ್ಯ ಕಾರ್ಯಕರ್ತರು ನಿಯಮಿತವಾಗಿ ದೂರವಾಣಿ ಹಾಗೂ ಮನೆ ಭೇಟಿ ಮೂಲಕ ಆರೋಗ್ಯದ ಬಗ್ಗೆ ಮಾಹಿತಿ ಪಡೆದುಕೊಳ್ಳಲಿದ್ದಾರೆ. ಆರು ದಿನಗಳ ನಂತರ ಮತ್ತೆ ಆರ್‌ಟಿ–ಪಿಸಿಆರ್ ಪರೀಕ್ಷೆಗೆ ಒಳಪಡಬೇಕು. ವರದಿ ನೆಗೆಟಿವ್ ಬಂದಲ್ಲಿ ಮನೆಯಿಂದ ಹೊರಗೆ ಬರಲು ಅನುಮತಿ ನೀಡಲಾಗುವುದು' ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

'ಡಿ.2ರಂದು ಓಮೈಕ್ರಾನ್ ಸೋಂಕಿತರಾಗಿದ್ದ ವೈದ್ಯರಿಗೆ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಮುಂದುವರಿಸಲಾಗಿದೆ. ಆರ್‌ಟಿ–ಪಿಸಿಆರ್ ಪರೀಕ್ಷಾ ವರದಿಯಲ್ಲಿ ನೆಗೆಟಿವ್ ಫಲಿತಾಂಶ ಬಂದ ಬಳಿಕ ಮನೆಗೆ ಕಳುಹಿಸಲಾಗುವುದು' ಎಂದು ಬೌರಿಂಗ್ ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ.

ಕೋವಿಡ್ ನಕಲಿ ವರದಿ ಕೊಡಿಸಿದ್ದ ಉದ್ಯೋಗಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಕಲಿ ವರದಿ ನೀಡಿ ದಕ್ಷಿಣ ಆಫ್ರಿಕಾ ಪ್ರಜೆಯೊಬ್ಬರು ಪರಾರಿಯಾಗಿರುವ ಪ್ರಕರಣದ ತನಿಖೆ ಮುಂದುವರಿಸಿರುವ ಹೈಗ್ರೌಂಡ್ಸ್ ಪೊಲೀಸರು, ಸಾಫ್ಟ್‌ವೇರ್ ಕಂಪನಿ ಉದ್ಯೋಗಿಗಳು ಸೇರಿ ನಾಲ್ವರನ್ನು ಬಂಧಿಸಿದ್ದಾರೆ.

'ರಾಣೇಶ್, ರವೀಂದ್ರ, ಲ್ಯಾಬ್‌ವೊಂದರ ಸಿಬ್ಬಂದಿ ಪ್ರಶಾಂತ್, ಮನೋಜ್ ಎಂಬುವರನ್ನು ಬಂಧಿಸಲಾಗಿದೆ. ದಕ್ಷಿಣ ಆಫ್ರಿಕಾ ಪ್ರಜೆ ಪರಾರಿಯಾಗಲು ಇವರೆಲ್ಲ ಸಹಾಯ ಮಾಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಾಫ್ಟ್‌ವೇರ್ ಕಂಪನಿ ನಡೆಸುತ್ತಿರುವ ದಕ್ಷಿಣ ಆಫ್ರಿಕಾ ಪ್ರಜೆ, ಬೆಂಗಳೂರಿನ ಬೊಮ್ಮನಹಳ್ಳಿಯಲ್ಲಿ ಶಾಖೆ ತೆರೆದಿದ್ದರು. ಶಾಖೆಯಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಪಾಲ್ಗೊಳ್ಳಲೆಂದು ನ. 20ರಂದು ವಿಮಾನದಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದರು. ನಿಲ್ದಾಣದಲ್ಲಿ ಅವರನ್ನು ಪರೀಕ್ಷೆಗೆ ಒಳಪಡಿಸಿದಾಗ ಅವರಿಗೆ ಕೋವಿಡ್ ಇರುವುದು ದೃಢಪಟ್ಟಿತ್ತು. ಅವರಿಗೆ ಓಮೈಕ್ರಾನ್ ಸೋಂಕು ತಗುಲಿರುವ ಅನುಮಾನ ಇದ್ದಿದ್ದರಿಂದ ಶಾಂಗ್ರಿಲಾ ಹೋಟೆಲ್‌ನ ಕೊಠಡಿಯಲ್ಲಿ 14 ದಿನಗಳ ಪ್ರತ್ಯೇಕವಾಸದಲ್ಲಿ ಇರಿಸಲಾಗಿತ್ತು.'

'ಹೋಟೆಲ್ ಸಿಬ್ಬಂದಿಗೆ ಕೋವಿಡ್ ಪರೀಕ್ಷೆಯ ನಕಲಿ ವರದಿ ತೋರಿಸಿದ್ದ ಪ್ರಜೆ, ತಮಗೆ ಸೋಂಕು ಇಲ್ಲ ಎಂದು ನಂಬಿಸಿ ನ. 27ರಂದೇ ಕೊಠಡಿಯಿಂದ ಪರಾರಿಯಾಗಿದ್ದಾರೆ. ಅವರು ಪರಾರಿಯಾಗಲು ಸಹಕರಿಸಿದ್ದ ಹೋಟೆಲ್ ವಿರುದ್ಧ ಬಿಬಿಎಂಪಿ ಆರೋಗ್ಯ ಅಧಿಕಾರಿ ಡಾ.ಎಂ. ನವೀನ್‌ಕುಮಾರ್ ದೂರು ನೀಡಿದ್ದರು' ಎಂದೂ ಮೂಲಗಳು ತಿಳಿಸಿವೆ.

ಹಣ ಕೊಟ್ಟು ವರದಿ ಖರೀದಿ: 'ಕೊಠಡಿಯಲ್ಲಿದ್ದ ಪ್ರಜೆ, ತಮ್ಮ ಕಂಪನಿ ಉದ್ಯೋಗಿಗಳಾದ ರಾಣೇಶ್ ಹಾಗೂ ರವೀಂದ್ರ ಅವರನ್ನು ಸಂಪರ್ಕಿಸಿದ್ದರು. ದಕ್ಷಿಣ ಆಫ್ರಿಕಾಗೆ ವಾಪಸು ಹೋಗಲು ಅನುಕೂಲವಾಗುವಂತೆ 'ಕೋವಿಡ್ ಸೋಂಕು ಇಲ್ಲ ಎಂಬ' ವರದಿ ತರಿಸಿಕೊಡುವಂತೆ ಕೇಳಿದ್ದರು. ಅದಕ್ಕೆ ಒಪ್ಪಿದ್ದ ಆರೋಪಿಗಳು, ಲ್ಯಾಬ್ ಸಿಬ್ಬಂದಿಯನ್ನು ಸಂಪರ್ಕಿಸಿ ಹಣ ಕೊಟ್ಟು ನಕಲಿ ವರದಿ ಖರೀದಿಸಿ ತಂದುಕೊಟ್ಟಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಲ್ಯಾಬ್ ಸಿಬ್ಬಂದಿಗಳು ಹಲವರಿಗೆ ನಕಲಿ ವರದಿ ನೀಡಿರುವ ಅನುಮಾನವಿದೆ. ಆ ಬಗ್ಗೆ ತನಿಖೆ ಮುಂದುವರಿದಿದೆ' ಎಂದೂ ತಿಳಿಸಿವೆ.





ಸಿ.ಡಿ ಹಗರಣ: ಕಮಲ್ ಪಂತ್ ವಿರುದ್ಧದ ಎಫ್‌ಐಆರ್ ರದ್ದು

ಬೆಂಗಳೂರು: ಮಾಜಿ ಸಚಿವ ರಮೇಶ ಜಾರಕಿಹೊಳಿ ಅವರ ಲೈಂಗಿಕ ಸಿ.ಡಿ ಹಗರಣದಲ್ಲಿ ಬೆಂಗಳೂರು ನಗರ ಪೊಲೀಸ್ ಆಯುಕ್ತ ಕಮಲ್ ಪಂತ್, ಡಿಸಿಪಿ ಎಂ.ಎನ್.ಅನುಚೇತ್ ಹಾಗೂ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆ ಅಧಿಕಾರಿ ಬಿ.ಮಾರುತಿ ವಿರುದ್ಧ ತನಿಖೆ ನಡೆಸುವಂತೆ ನಗರದ 8ನೇ ಎಸಿಎಂಎಂ ನ್ಯಾಯಾಲಯ ನೀಡಿದ್ದ ಆದೇಶ ಮತ್ತು ಈ ಸಂಬಂಧದ ಎಫ್‌ಐಆರ್ ಅನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಕುರಿತಂತೆ ಕಮಲ್ ಪಂತ್, ಅನುಚೇತ್ ಮತ್ತು ಮಾರುತಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಶ್ರೀನಿವಾಸ ಹರೀಶ್ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಮಾನ್ಯ ಮಾಡಿದ್ದು, 'ಆಯುಕ್ತರು ಮತ್ತು ಇತರರು ಎಫ್‌ಐಆರ್ ದಾಖಲಿಸದೇ ಕರ್ತವ್ಯ ಲೋಪ ಎಸಗಿರುತ್ತಾರೆ ಎಂದು ಅವರ ವಿರುದ್ಧ 166 (A) ಐಪಿಸಿ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲು ಆದೇಶಿಸಿದ್ದು ತಪ್ಪು' ಎಂದು ಹೇಳಿದೆ.

ಆಯುಕ್ತರ ಪರ ವಾದ ಮಂಡಿಸಿದ ವಕೀಲ ಪಿ.ಪ್ರಸನ್ನಕುಮಾರ್, 'ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ದೂರು ನೀಡಿದ ತಕ್ಷಣ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಪ್ರಾಥಮಿಕ ವಿಚಾರಣೆ ಕೈಗೊಂಡು ಕಲ್ಲಹಳ್ಳಿಗೆ ನೋಟಿಸ್ ಜಾರಿ ಮಾಡಿದ್ದರು. ಪೊಲೀಸರ ಮುಂದೆ ಹಾಜರಾದ ದಿನೇಶ್ ಕಲ್ಲಳ್ಳಿ, ಸಿ.ಡಿಯನ್ನು ನನಗೆ ಯಾರು ಕೊಟ್ಟಿರುತ್ತಾರೋ ಅವರ ಬಗ್ಗೆಗಿನ ವಿವರಗಳು ಲಭ್ಯವಿಲ್ಲ ಹಾಗೂ ಹುಡುಗಿ ಉತ್ತರ ಕರ್ನಾಟಕದವಳು ಮತ್ತು ಆರ್.ಟಿ. ನಗರ ನಿವಾಸಿ ಎಂಬುದಷ್ಟೇ ಗೊತ್ತು' ಎಂದು ತಿಳಿಸಿದ್ದಳು.

'ದಿನೇಶ್ ಕಲ್ಲಳ್ಳಿ 2021ರ ಮಾ. 7ರಂದು ಪುನಃ ಪೊಲೀಸರ ಮುಂದೆ ಹಾಜರಾಗಿ, ನನ್ನ ದೂರನ್ನು ಹಿಂಪಡೆಯುತ್ತೇನೆ ಎಂದು ತಿಳಿಸಿರುತ್ತಾರೆ. 2021ರ ಮಾರ್ಚ್ 11ರಂದು ಆಯುಕ್ತ ಕಮಲ್ ಪಂತ್ ವಿಶೇಷ ತನಿಖಾ ತಂಡ ರಚಿಸಲು ಆದೇಶಿಸಿದ್ದು, ವಿಚಾರಣೆ ಮುಂದುವರೆದಿತ್ತು. ಆದರೆ, ಅದೇ ಕಾಲಕ್ಕೆ 2021ರ ಮಾರ್ಚ್ 26ರಂದು ಸಂತ್ರಸ್ತ ಮಹಿಳೆ ತನ್ನ ವಕೀಲರ ಮುಖಾಂತರ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ, ಕೂಡಲೇ ರಮೇಶ್ ಜಾರಕಿಹೊಳಿ ವಿರುದ್ಧ ಭಾರತೀಯ ದಂಡ ಸಂಹಿತೆ 376 ಸಿ (ಸಾರ್ವಜನಿಕ ಸೇವಕ ನಡೆಸುವ ಅತ್ಯಾಚಾರ) ಅಡಿ ಎಫ್‌ಐಆರ್ ದಾಖಲಿಸಿದರು. ನಂತರ ತನಿಖೆಯನ್ನು ಮಹಿಳಾ ಎಸಿಪಿ ಎಂ.ಸಿ.ಕವಿತಾ ಅವರಿಗೆ ವಹಿಸಲಾಗಿದ್ದು ಅವರು ತನಿಖೆಯನ್ನು ಪೂರ್ಣಗೊಳಿಸಿರುತ್ತಾರೆ' ಎಂದು ಪ್ರಸನ್ನಕುಮಾರ್ ವಿವರಿಸಿದರು.

'ಏತನ್ಮಧ್ಯೆ ವಕೀಲೆ ಗೀತಾ ಮಿಶ್ರಾ ದಾಖಲಿಸಿದ ಪಿಐಎಲ್‌ನಲ್ಲಿ ವಿಭಾಗೀಯನ್ಯಾಯಪೀಠವುಪ್ರಕರಣಕ್ಕೆಸಂಬಂಧಿಸಿದಂತೆಅಂತಿಮವರದಿಯನ್ನುಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಸಲ್ಲಿಸಬಾರದು ಎಂದು ಆದೇಶ ಮಾಡಿರುತ್ತದೆ. ಆದರೆ, ಈ ಎಲ್ಲಾ ಸಂಗತಿಗಳನ್ನು ದೂರುದಾರರು 8ನೇ ಎಸಿಎಂಎಂ ನ್ಯಾಯಾಲಯದ ಗಮನಕ್ಕೆ ತಾರದ ಕಾರಣ ಮ್ಯಾಜಿಸ್ಟ್ರೇಟ್ ತನಿಖೆಗೆ ಆದೇಶಿಸಿದ್ದಾರೆ. ಆದ್ದರಿಂದ, ಎಫ್‌ಐಆರ್ ರದ್ದುಗೊಳಿಸಿ ವಿಚಾರಣೆಯ ಆದೇಶ ವಜಾಮಾಡಬೇಕು' ಎಂದು ಕೋರಿದರು. ವಾದವನ್ನು ಮನ್ನಿಸಿದ ಪೀಠ ಅಧಿಕಾರಿಗಳ ವಿರುದ್ಧದ ಪ್ರಕರಣವನ್ನು ವಜಾಗೊಳಿಸಿ ಆದೇಶಿಸಿದೆ.

ಸಂಘಟನೆ ಹೆಸರಿನಲ್ಲಿ ಮನೆಗೆ ನುಗ್ಗಿ ಕೃತ್ಯ; 6 ಮಂದಿ ಬಂಧನ

ಬಟ್ಟೆ ಬಿಚ್ಚಿಸಿ ವಿಡಿಯೊ ಚಿತ್ರೀಕರಿಸಿ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯೊಬ್ಬರ ಮನೆಗೆ ನುಗ್ಗಿ ವ್ಯಕ್ತಿಯೊಬ್ಬರ ಬಟ್ಟೆ ಬಿಚ್ಚಿಸಿ ವಿಡಿಯೊ ಚಿತ್ರೀಕರಿಸಿ ಸುಲಿಗೆ ಮಾಡಿದ್ದ ಆರೋಪದಡಿ ಆರು ಮಂದಿಯನ್ನು ಬಸವೇಶ್ವರನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಠಾಣೆ ವ್ಯಾಪ್ತಿಯಲ್ಲಿರುವ ಮನೆಯೊಂದಕ್ಕೆ ನುಗ್ಗಿದ್ದ ಆರೋಪಿಗಳು, ಚಿನ್ನಾಭರಣ ಹಾಗೂ ನಗದು ಸುಲಿಗೆ ಮಾಡಿಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ಮನೆ ಮಾಲೀಕರಾದ ಮಹಿಳೆ ದೂರು ನೀಡಿದ್ದರು. ಸದ್ಯ 6 ಮಂದಿಯನ್ನು ಬಂಧಿಸಲಾಗಿದ್ದು, ಅದರಲ್ಲಿ ಮಹಿಳೆಯರು ಇದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಂಘಟನೆಯೊಂದರ ಕಾರ್ಯಕರ್ತರೆಂದು ಹೇಳಿಕೊಂಡು ಆರೋಪಿಗಳು ಕೃತ್ಯ ಎಸಗಿದ್ದರು. ಮನೆಯೊಳಗೆ ನುಗ್ಗುವ ವೇಳೆಯಲ್ಲಿ ಸಂಘಟನೆಯೊಂದರ ನೀಲಿ ಬಣ್ಣದ ಶಾಲು ಸಹ ಧರಿಸಿದ್ದರು. ಬಂಧಿತರಿಂದ ₹ 152.50 ಗ್ರಾಂ ಚಿನ್ನಾಭರಣ, ₹ 63,000 ನಗದು, ಮೊಬೈಲ್, ದ್ವಿಚಕ್ರ ವಾಹನ ಹಾಗೂ ಸಂಘಟನೆ ಘೋಷವಾಕ್ಯವಿದ್ದ ಎರಡು ಶಾಲುಗಳನ್ನು ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿವೆ.

'ಡಿ. 12ರಂದು ಪರಿಚಯಸ್ಥರ ಪುರುಷ ಹಾಗೂ ಯುವತಿ, ದೂರುದಾರರ ಮನೆಗೆ ಬಂದಿದ್ದರು. ಮೂವರು ಪರಸ್ಪರ ಮಾತನಾಡುತ್ತ ಕುಳಿತಿದ್ದರು. ಅದೇ ಸಂದರ್ಭದಲ್ಲೇ ಆರೋಪಿಗಳು ಮನೆಯೊಳಗೆ ನುಗ್ಗಿದ್ದರು. ಸಂಘಟನೆ ಸದಸ್ಯರೆಂದು ಹೇಳಿ ಕೂಗಾಡಿದ್ದ ಆರೋಪಿಗಳು, ಪುರುಷನ ಬಟ್ಟೆ ಬಿಚ್ಚಿಸಿ ವಿಡಿಯೊ ಚಿತ್ರೀಕರಿಸಿದ್ದರು. ₹ 5 ಲಕ್ಷ ನೀಡುವಂತೆ ಪುರುಷನನ್ನು ಒತ್ತಾಯಿಸಿದ್ದ ಆರೋಪಿಗಳು, ಹಣ ನೀಡದಿದ್ದರೆ ವಿಡಿಯೊವನ್ನು ಮಾಧ್ಯಮ ಹಾಗೂ ಪೊಲೀಸರಿಗೆ ಕೊಡುವುದಾಗಿ ಬೆದರಿಸಿದ್ದರು.'

'ಬೆದರಿದ್ದ ಪುರುಷ, ಫೋನ್ ಪೇ ಮೂಲಕ ಸ್ವಲ್ಪ ಹಣ ವರ್ಗಾವಣೆ ಮಾಡಿದ್ದರು. ಹೆಚ್ಚಿನ ಹಣಕ್ಕಾಗಿ ಒತ್ತಾಯಿಸಿದ್ದ ಆರೋಪಿಗಳು, ಬೀರುವಿನಲ್ಲಿದ್ದ ಚಿನ್ನಾಭರಣ ಹಾಗೂ ₹ 1.75 ಲಕ್ಷ ಸುಲಿಗೆ ಮಾಡಿಕೊಂಡು ಮನೆಯ ಬಾಗಿಲನ್ನು ಹೊರಕಿನಿಂದ ಲಾಕ್ ಮಾಡಿ ಪರಾರಿಯಾಗಿದ್ದರು.' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,
ನಂ.14, ರಜತ ಭವನ, 1ನೇ ಮುಖ್ಯರಸ್ತೆ, ಹಕ್ಕ ರಸ್ತೆ,ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104 ದೂರವಾಣಿ: 080–23300497, 41159606, 23359600
Email: jscbinfo@jscbl.com

ಟೆಂಡರ್ ಪ್ರಕಟಣೆ

ಬೆಂಗಳೂರಿನ ವಿಜಯನಗರ 2ನೇ ಹಂತ, ಹಂಪಿನಗರದಲ್ಲಿ "ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ಗೆ ಉದ್ದೇಶಿತ ವಾಣಿಜ್ಯ ಕಟ್ಟಡ" ನಿರ್ಮಾಣಕ್ಕಾಗಿ ಖ್ಯಾತಿ, ಅನುಭವ, ಅರ್ಹ/ ವಿದ್ಯಾರ್ಹತೆಯುಳ್ಳ ನೋಂದಾಯಿತ ಗುತ್ತಿಗೆದಾರರುಗಳಿಂದ ನಿಗದಿತ ಟೆಂಡರ್ ದಸ್ತಾವೇಜನ್ನು ಮೊಹರಾದ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಎರಡು ಪ್ರತ್ಯೇಕ ಲಕೋಟೆಗಳಲ್ಲಿ ಆಹ್ವಾನಿಸಲಾಗಿದೆ.

ಕಾಮಗಾರಿಯ ಅಂದಾಜು ಮೌಲ್ಯ ರೂ. 319.42 ಲಕ್ಷಗಳು (ಸಿವಿಲ್, ಆಂತರಿಕ, ವಿದ್ಯುತ್ ಮತ್ತು ಸ್ಯಾನಿಟರಿ ಪ್ಲಂಬಿಂಗ್ ಕೆಲಸಗಳೂ ಸೇರಿದಂತೆ)

ಅರ್ಹ ಗುತ್ತಿಗೆದಾರರು ನಗದಾಗಿ / ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಇದರ ಪರವಾಗಿ ಪಡೆದ ಡಿಡಿ ರೂಪದಲ್ಲಿ ರೂ.3500/– ಪಾವತಿ ಮಾಡಿ ಮೇಲೆ ತಿಳಿಸಿದ ಕಾಮಗಾರಿಗೆ ಟೆಂಡರ್ ದಸ್ತಾವೇಜನ್ನು ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ನಂ. 14, "ರಜತ ಭವನ", 1ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು – 560104, ಇಲ್ಲಿ ದಿನಾಂಕ 15–12–2021 ರಿಂದ 25–12–2021 ರವರೆಗೆ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು. ಭರ್ತಿ ಮಾಡಿದ ಮೊಹರಾದ ಟೆಂಡರುಗಳನ್ನು ದಿನಾಂಕ 27–12–2021ರ ಸಂಜೆ 5–00 ಗಂಟೆಯ ಒಳಗೆ ಇದೇ ಕಚೇರಿಗೆ ಸಲ್ಲಸತಕ್ಕದ್ದು.

ಯಾವುದೇ ಕಾರಣ ನೀಡದೆ ಅಥವಾ ಎಲ್ಲಾ ಕೊಟೇಶನ್‌ಗಳನ್ನು ಅಂಗೀಕರಿಸುವ / ತಿರಸ್ಕರಿಸುವ ಹಕ್ಕನ್ನು ಸಮಿತಿ ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಇವರು ಕಾದಿರಿಸಿಕೊಂಡಿದ್ದಾರೆ.

ದಿನಾಂಕ : 15–12–2021
ಸ್ಥಳ : ಬೆಂಗಳೂರು.

ಸಹಿ/–
ಅಧ್ಯಕ್ಷರು,
ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರರವರ ಕಛೇರಿ, ಯೋಜನೆ ಕೇಂದ್ರ–04, ಬಿಬಿಎಂಪಿ, 3ನೇ ಮಹಡಿ, ಆನೆಕ್ಸ್–02 ಕಟ್ಟಡ, ಎನ್.ಆರ್. ವೃತ್ತ, ಬೆಂಗಳೂರು–560 002

ಸಂ: ಕಾಪಾಅ(ಯೋಕೇಂ04)/ಟೆಂಡರ್/01/2021–22/ಕರೆ–3 ದಿನಾಂಕ: 14.12.2021

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)ಕರೆ–3
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಯೋಜನೆ–ಕೇಂದ್ರ–04 ವಿಭಾಗ, ಇವರು ಅರ್ಹ ಗುತ್ತಿಗೆದಾರರಿಂದ **ಬೆಂಗಳೂರು, ಗಾಂಧಿನಗರದ ಫ್ರೀಡಂ ಪಾರ್ಕ್ ಆವರಣದಲ್ಲಿ ಬಹು ಹಂತದ ಕಾರ್ ಪಾರ್ಕಿಂಗ್ ಕಟ್ಟಡದಲ್ಲಿ ಪಾರ್ಕಿಂಗ್ ಶುಲ್ಕ ಸಂಗ್ರಹ ಮತ್ತು ನಿಯಮಿತ ನಿರ್ವಹಣೆ ಸೇವೆಗಳನ್ನು ನಿರ್ವಹಿಸಲು** ಟೆಂಡರನ್ನು ಆಹ್ವಾನಿಸಿದ್ದಾರೆ. **ಇಎಂಡಿ ಘೋಷಣೆ:** ಟೆಂಡರ್‌ದಾರರು ಇಎಂಡಿ ಘೋಷಣಾ ಫಾರಂನ್ನು ಸಲ್ಲಿಸಬೇಕು. 1)ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ **ದಿನಾಂಕ: 15.12.2021ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಬಗೆಗಿನ ಪ್ರಶ್ನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : **21.12.2021ರ ಸಂಜೆ 5.30 ಗಂಟೆಯವರೆಗೆ.** 3)ಪ್ರಿ–ಬಿಡ್ ಮೀಟಿಂಗ್: **23.12.2021ರ 3.00 ಗಂಟೆಗೆ.** 4) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **29.12.2021ರ ಸಂಜೆ 5.30 ಗಂಟೆಯವರೆಗೆ** 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **31.12.2021ರ 4.00 ಗಂಟೆಗೆ.** 6) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: ನಂತರ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: www.eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ ಕೇಂದ್ರ–04 ವಿಭಾಗ.

"ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ"

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂ: ಬಿಐಎಎಪಿಎ/ಟಿಪಿ/ಭೂಉಬ/35/2021–22/1374 ದಿನಾಂಕ : 13–12–2021

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಭೂವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಕೇಶವ ಆರ್. ಬಿನ್ ಪಿ. ರಾಮಚಂದ್ರಪ್ಪ	ದೇವನಹಳ್ಳಿ	ವಿಜಯಪುರ	ಚಿಕ್ಕತತ್ತಮಂಗಲ	114	2–00 ಪೈಕಿ 1–11	ವ್ಯವಸಾಯ	ವಸತಿ

ಷರಾ :– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನು ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದೆಂದೂ ಸದರಿ ಜಮೀನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ದ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಶಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ವಾಸಾಸಂಇ/ಉನಿಕ/ಬೆಂಗ್ರಾಜಿ/279/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂ: ಬಿಐಎಎಪಿಎ/ಟಿಪಿ/ಭೂಉಬ/45/2021–22/1378 ದಿನಾಂಕ : 13–12–2021

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಭೂವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಫೈರೋಜ್ ಪಾಷ–ಅನ್ವರ್ ಪಾಷ ಮತ್ತು ಶ್ರೀ ಮೊಹಮ್ಮದ್ ಸಾಧಿಕ್ ಪಾಷ–ಅನ್ವರ್ ಪಾಷ	ದೇವನಹಳ್ಳಿ	ಕಸಬಾ	ಕೆಂಪತಿಮ್ಮನಹಳ್ಳಿ	90	6–00	ವ್ಯವಸಾಯ	ವಸತಿ
2.	ಶ್ರೀ ಪಿರೋಜ್ ಪಾಷ ಬಿನ್ ಅನ್ವರ್ ಪಾಷ	ದೇವನಹಳ್ಳಿ	ಕಸಬಾ	ಕೆಂಪತಿಮ್ಮನಹಳ್ಳಿ	108	1–08	ವ್ಯವಸಾಯ	ವಸತಿ
ಮೇಲ್ಕಂಡ ಭೂಮಾಲೀಕರುಗಳ ಪರವಾಗಿ ನೋಂದಾಯಿತ ಜಿಪಿಎದಾರರಾದ ಶ್ರೀ ಸಿ.ವಿ. ಮಂಜುನಾಥ್ ಬಿನ್ ಲೇಟ್ ವೆಂಕಟನರಸಿಂಹಯ್ಯ, ಅಧಿಕೃತ ನಿರ್ದೇಶಕರು, ಮೆ॥ ಟೆಲಿಕಾಂ ಎಂಪ್ಲಾಯೀಸ್ ಕೋ–ಆಪರೇಟೀವ್ ಹೌಸಿಂಗ್ ಸೋಸೈಟಿ ಲಿಮಿಟೆಡ್.								

ಷರಾ :– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನು ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದೆಂದೂ ಸದರಿ ಜಮೀನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ದ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಶಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ವಾಸಾಸಂಇ/ಉನಿಕ/ಬೆಂಗ್ರಾಜಿ/284/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂ: ಬಿಐಎಎಪಿಎ/ಟಿಪಿ/ಭೂಉಬ/33/2021–22/1380 ದಿನಾಂಕ : 13–12–2021

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಭೂವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಕೇಶವ ಆರ್. ಬಿನ್ ರಾಮಚಂದ್ರಪ್ಪ	ದೇವನಹಳ್ಳಿ	ವಿಜಯಪುರ	ಮಂಡಿಬೆಲೆ	72/4	0–22	ವ್ಯವಸಾಯ	ವಸತಿ
2.	ಶ್ರೀ ಕೇಶವ ಆರ್. ಬಿನ್ ಪಿ. ರಾಮಚಂದ್ರಪ್ಪ	ದೇವನಹಳ್ಳಿ	ವಿಜಯಪುರ	ಮಂಡಿಬೆಲೆ	204	1–00	ವ್ಯವಸಾಯ	ವಸತಿ

ಷರಾ :– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನು ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದೆಂದೂ ಸದರಿ ಜಮೀನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ದ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಶಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ವಾಸಾಸಂಇ/ಉನಿಕ/ಬೆಂಗ್ರಾಜಿ/288/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ಭದ್ರಕೋಟೆಗಳಲ್ಲೇ ಮುಗ್ಗರಿಸಿದ ಬಿಜೆಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್‌ಗೆ ಸ್ಥಳೀಯ ಸಂಸ್ಥೆಗಳಿಂದ ನಡೆದ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿ ಐದು ಕ್ಷೇತ್ರಗಳನ್ನು ಹೆಚ್ಚುವರಿಯಾಗಿ ಗೆದ್ದಿದ್ದರೂ, ತನ್ನ ಭದ್ರಕೋಟೆಗಳಲ್ಲಿ ಪೈಕಿ ಒಂದರಲ್ಲಿ ಸೋತಿದ್ದರೆ, ಕೆಲವು ಕಡೆಗಳಲ್ಲಿ ಗೆಲ್ಲಲು ಪ್ರಯಾಸ ಪಟ್ಟಿದೆ.

ಬೆಳಗಾವಿಯಲ್ಲಿ ಬಿಜೆಪಿ ಶಾಸಕರಾದ ರಮೇಶ ಜಾರಕಿಹೊಳಿ, ಬಾಲಚಂದ್ರ ಜಾರಕಿಹೊಳಿ ತಮ್ಮ ಸೋದರ ಲಖನ್ ಜಾರಕಿಹೊಳಿಯನ್ನು ಪಕ್ಷೇತರರಾಗಿ ಕಣಕ್ಕೆ ಇಳಿಸಿದ್ದರು. ಇಲ್ಲಿ ಮೇಲ್ಮನೆಯ ಮುಖ್ಯಸಚೇತಕರೂ ಆದ ಮಹಂತೇಶ ಕವಟಗಿಮಠ ಸೋಲು ಕಂಡಿದ್ದಾರೆ. ಇಬ್ಬರು ಪ್ರಭಾವಿ ಶಾಸಕರಿದ್ದರೂ ಲಖನ್ ಎರಡನೇ ಸ್ಥಾನಕ್ಕೆ ಸೀಮಿತರಾಗಿದ್ದಾರೆ. ಕಾಂಗ್ರೆಸ್‌ನ ಚನ್ನರಾಜ ಹಟ್ಟಿಹೊಳಿ ಮೊದಲ ಪ್ರಾಶಸ್ತ್ಯದ ಮತದಲ್ಲೇ ವಿಜಯ ಸಾಧಿಸಿದ್ದಾರೆ. ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ನೇತೃತ್ವ, ಕಾಂಗ್ರೆಸ್ ನಾಯಕರು ಒಗ್ಗಟ್ಟಿನ ಫಲ ಕಂಡಿದೆ.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕರ್ಮಭೂಮಿ, ಶಾಸಕ ಜಗದೀಶ ಶೆಟ್ಟರ್ ಪ್ರತಿನಿಧಿಸುವ ಧಾರವಾಡ ಕ್ಷೇತ್ರದಲ್ಲಿ ಪ್ರದೀಪ ಶೆಟ್ಟರ್ ಮತಗಳಿಕೆಯಲ್ಲಿ ಎರಡನೇ ಸ್ಥಾನ ಪಡೆದು, ಗೆಲುವು ಸಾಧಿಸಿದ್ದಾರೆ.

ಚಿಕ್ಕಮಗಳೂರಿನಲ್ಲಿ ಎಂ.ಕೆ. ಪ್ರಾಣೇಶ್ ಕೇವಲ 6 ಮತಗಳ ಅಂತರದಿಂದ ಕಷ್ಟಪಟ್ಟು ಗೆಲುವಿನ ನಗೆ ಬೀರಿದ್ದಾರೆ. ಬಿಜೆಪಿಯ ಭದ್ರನೆಲೆ ಎಂದೇ ಬಿಂಬಿತವಾಗುವ ತುಮಕೂರಿನಲ್ಲಿ ಆ ಪಕ್ಷ ಸೋತಿದೆ. ಮತ ಎಣಿಕೆಯಲ್ಲಿ ಕೊನೆಯವರೆಗೂ ತೀವ್ರ ಕುತೂಹಲ ಮೂಡಿಸಿದ್ದ ಮೈಸೂರು–ಚಾಮರಾಜನಗರ ಕ್ಷೇತ್ರದಲ್ಲಿಯೂ ಗೆಲ್ಲಲು ವಿಫಲವಾಗಿದೆ.

ಏಜೆಂಟರಿಗೆ ತೋರಿಸಿದ್ದ 2 ಮತ ತಿರಸ್ಕೃತ

ಬೆಳಗಾವಿ: ಗೌಪ್ಯವಾಗಿ ಮತದಾನ ಮಾಡದ ಕಾರಣ ವಿಧಾನಪರಿಷತ್ ಚುನಾವಣೆಯ 2 ಮತಗಳನ್ನು, ಎಣಿಕೆ ಪ್ರಕ್ರಿಯೆಗೂ ಮುನ್ನವೇ ತಿರಸ್ಕರಿಸಲಾಯಿತು.

ಈ ಕುರಿತು ಪಕ್ಷಗಳ ಏಜೆಂಟರಿಗೆ ಮನವರಿಕೆ ಮಾಡಿಕೊಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಆರ್. ವೆಂಕಟೇಶಕುಮಾರ್ ತಿಳಿಸಿದರು.

ಬೆಂಗಳೂರು ನಗರ ಕ್ಷೇತ್ರ ವಿಧಾನ ಪರಿಷತ್ ಚುವನಾವಣೆ ಜಯಸಿದ ಬಿಜೆಪಿ ಅಭ್ಯರ್ಥಿ ಗೋಪಿನಾಥ್ ರೆಡ್ಡಿ ಮಂಗಳವಾರ ನಗರದ ಮಹಾರಾಣಿ ವಿಜ್ಞಾನ ಕಾಲೇಜಿ ಎದುರು ಕಾರ್ಯಕರ್ತರು ನೃತ್ಯ ಮಾಡಿ ಸಂಭ್ರಮಿಸಿದರು. –ಪ್ರಜಾವಾಣಿ ಚಿತ್ರ

ಬೀದರ್

ಭೀಮರಾವ್ ಬಸವರಾಜ ಪಾಟೀಲ 1,789
ಗೆಲುವಿನ ಅಂತರ 227
ಪ್ರತಿಸ್ಪರ್ಧಿ: ಪ್ರಕಾಶ ಖಂಡ್ರೆ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಕಲಬುರಗಿ

ಬಿ.ಜಿ. ಪಾಟೀಲ 3,452
ಗೆಲುವಿನ ಅಂತರ 149
ಪ್ರತಿಸ್ಪರ್ಧಿ: ಶಿವಾನಂದ ಪಾಟೀಲ ಮರತೂರ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ರಾಯಚೂರು

ಶರಣಗೌಡ ಪಾಟೀಲ ಬಯ್ಯಾಪುರ 3,369
ಗೆಲುವಿನ ಅಂತರ 427
ಪ್ರತಿಸ್ಪರ್ಧಿ: ವಿಶ್ವನಾಥ ಬನಹಟ್ಟ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಬಳ್ಳಾರಿ

ಏಚರೆಡ್ಡಿ ಸತೀಶ್ 2,659
ಗೆಲುವಿನ ಅಂತರ 757
ಪ್ರತಿಸ್ಪರ್ಧಿ: ಕೆ.ಸಿ.ಕೊಂಡಯ್ಯ(ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಉತ್ತರ ಕನ್ನಡ

ಗಣಪತಿ ಉಳ್ವೇಕರ್ 1,514
ಗೆಲುವಿನ ಅಂತರ 183
ಪ್ರತಿಸ್ಪರ್ಧಿ: ಭೀಮಣ್ಣ ನಾಯ್ಕ(ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಚಿತ್ರದುರ್ಗ

ಕೆ.ಎಸ್. ನವೀನ್ 2,629
ಗೆಲುವಿನ ಅಂತರ 358
ಪ್ರತಿಸ್ಪರ್ಧಿ: ಬಿ.ಸೋಮಶೇಖರ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಶಿವಮೊಗ್ಗ

ಅರುಣ್ ಡಿ.ಎಸ್ 2,192
ಗೆಲುವಿನ ಅಂತರ 344
ಪ್ರತಿಸ್ಪರ್ಧಿ: ಆರ್.ಪ್ರಸನ್ನಕುಮಾರ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಹಾಸನ

ಆರ್. ಸೂರಜ್ 2281
ಗೆಲುವಿನ ಅಂತರ 1,533
ಪ್ರತಿಸ್ಪರ್ಧಿ: ಎಂ.ಶಂಕರ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ತುಮಕೂರು

ಆರ್.ರಾಜೇಂದ್ರ 3,135
ಗೆಲುವಿನ ಅಂತರ 1,085
ಪ್ರತಿಸ್ಪರ್ಧಿ: ಎನ್.ಲೋಕೇಶ್‌ಗೌಡ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಬೆಂಗಳೂರು

ಎಚ್.ಎಸ್. ಗೋಪಿನಾಥ್ 1,227
ಗೆಲುವಿನ ಅಂತರ 397
ಪ್ರತಿಸ್ಪರ್ಧಿ:ಯೂಸುಫ್ ಷರೀಫ್ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಕೋಲಾರ

ಎಂ.ಎಲ್.ಅನಿಲ್‌ಕುಮಾರ್ 2,340
ಗೆಲುವಿನ ಅಂತರ 441
ಪ್ರತಿಸ್ಪರ್ಧಿ: ಡಾ.ಕೆ.ಎನ್.ವೇಣುಗೋಪಾಲ್ (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಬೆಂಗಳೂರು ಗ್ರಾಮಾಂತರ

ಎಸ್. ರವಿ 2,262
ಗೆಲುವಿನ ಅಂತರ 722
ಪ್ರತಿಸ್ಪರ್ಧಿ: ರಮೇಶ್ ಗೌಡ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಚಿಕ್ಕಮಗಳೂರು

ಎಂ.ಕೆ. ಪ್ರಾಣೇಶ್ 1,188
ಗೆಲುವಿನ ಅಂತರ 06
ಪ್ರತಿಸ್ಪರ್ಧಿ: ಎ.ವಿ. ಗಾಯತ್ರಿ ಶಾಂತೇಗೌಡ
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಮಂಡ್ಯ

ದಿನೇಶ್ ಗೂಳಿಗೌಡ 2009
ಗೆಲುವಿನ ಅಂತರ 97
ಪ್ರತಿಸ್ಪರ್ಧಿ: ಎನ್.ಅಪ್ಪಾಜಿಗೌಡ (ಜೆಡಿಎಸ್)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಕೊಡಗು

ಸುಜಾ ಕುಶಾಲಪ್ಪ 705
ಗೆಲುವಿನ ಅಂತರ 102
ಪ್ರತಿಸ್ಪರ್ಧಿ: ಡಾ.ಮಂಥರ್‌ಗೌಡ (ಕಾಂಗ್ರೆಸ್)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ದ್ವಿ ಸದಸ್ಯ ಕ್ಷೇತ್ರಗಳು

ದಕ್ಷಿಣ ಕನ್ನಡ

ಕೋಟ ಶ್ರೀನಿವಾಸ ಪೂಜಾರಿ 3,672
ಗೆಲುವಿನ ಅಂತರ 1,593
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಮಂಜುನಾಥ ಭಂಡಾರಿ 2,079
ಗೆಲುವಿನ ಅಂತರ 1,875
ಪ್ರತಿಸ್ಪರ್ಧಿ: ಶಾಫಿ ಕೆ. ಬೆಳ್ಳಾರೆ (ಎಸ್‌ಡಿಪಿಐ)
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ವಿಜಯಪುರ

ಸುನೀಲ್‌ಗೌಡ ಪಾಟೀಲ 3,245
ಗೆಲುವಿನ ಅಂತರ 1,026
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಪಿ.ಎಚ್.ಪೂಜಾರ 2,219
ಗೆಲುವಿನ ಅಂತರ 753
ಪ್ರತಿಸ್ಪರ್ಧಿ:ಮಲ್ಲಿಕಾರ್ಜುನ ಲೋಣಿ (ಪಕ್ಷೇತರ)
ಕಳೆದ ಬಾರಿ ಗೆದ್ದ ಪಕ್ಷ; ಕಾಂಗ್ರೆಸ್

ಮೈಸೂರು

ಡಾ.ಡಿ.ತಿಮ್ಮಯ್ಯ 2,195
ಗೆಲುವಿನ ಅಂತರ 51
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)



ಸಿ.ಎನ್. ಮಂಜೇಗೌಡ 2,194
ಗೆಲುವಿನ ಅಂತರ 50
ಪ್ರತಿಸ್ಪರ್ಧಿ: ಆರ್.ರಘು (ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಜೆಡಿಎಸ್)

ಧಾರವಾಡ

ಸಲೀಂ ಅಹ್ಮದ್ 3,334
ಗೆಲುವಿನ ಅಂತರ 2,117
ಕಳೆದ ಬಾರಿ ಗೆದ್ದ ಪಕ್ಷ (ಕಾಂಗ್ರೆಸ್)

ಪ್ರದೀಪ ಶೆಟ್ಟರ್ 2,497
ಗೆಲುವಿನ ಅಂತರ 1,280
ಪ್ರತಿಸ್ಪರ್ಧಿ: ಮಲ್ಲಿಕಾರ್ಜುನ ಹಾವೇರಿ(ಪಕ್ಷೇತರ)
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಬೆಳಗಾವಿ

ಚನ್ನರಾಜ ಹಟ್ಟಿಹೊಳಿ 3,718
ಗೆಲುವಿನ ಅಂತರ 1,286
ಕಳೆದ ಬಾರಿ ಗೆದ್ದ ಪಕ್ಷ (ಬಿಜೆಪಿ)

ಲಖನ್ ಜಾರಕಿಹೊಳಿ 2,522
ಗೆಲುವಿನ ಅಂತರ 90
ಪ್ರತಿಸ್ಪರ್ಧಿ:ಮಹಾಂತೇಶ ಕವಟಗಿಮಠ(ಬಿಜೆಪಿ)
ಕಳೆದ ಬಾರಿ ಗೆದ್ದ ಪಕ್ಷ (ಪಕ್ಷೇತರ)

‘ಯಾರ ವಿರುದ್ಧವೂ ಅವಸರದ ಕ್ರಮ ಇಲ್ಲ’



ಬೊಮ್ಮಾಯಿ

ಬೆಳಗಾವಿ: ಬೆಳಗಾವಿ, ಮೈಸೂರು ಸೇರಿದಂತೆ ವಿವಿಧ ಕಡೆಗಳ ಫಲಿತಾಂಶದ ಬಗ್ಗೆ ಪಕ್ಷ ಸಭೆಯಲ್ಲಿ ಚರ್ಚೆ ಮಾಡುತ್ತೇವೆ. ಯಾರ ವಿರುದ್ಧವೂ ಅವಸರದ ಕ್ರಮ ಇಲ್ಲ ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಾರಾಣಸಿಯಿಂದ ಮಂಗಳವಾರ ಸಂಜೆ ಮರಳಿದ ಅವರು ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದರು.

ಬೆಳಗಾವಿಯಲ್ಲಿ 13 ಶಾಸಕರಿದ್ದರೂ ಬಿಜೆಪಿ ಅಭ್ಯರ್ಥಿ ಸೋತ ಬಗ್ಗೆ ಕೇಳಿದ ಪ್ರಶ್ನೆಗೆ, ‘ನಮ್ಮ ಮತಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆಗಿದೆ. ಈ ಬಗ್ಗೆ ಕೂಡಾ ಪಕ್ಷದ ಸಭೆಯಲ್ಲಿ ಕೂಲಂಕಶವಾಗಿ ಚರ್ಚೆ ನಡೆಸುತ್ತೇವೆ’ ಎಂದರು.

ರಮೇಶ ಜಾರಕಿಹೊಳಿ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳಿದ ಪ್ರಶ್ನೆಗೆ, ‘ಈಗಷ್ಟೆ ವಾರಾಣಸಿಯಿಂದ ಮರಳಿದ್ದೇನೆ. ಈ ಬಗ್ಗೆ ಪಕ್ಷದಲ್ಲಿ ಚರ್ಚೆ ಮಾಡುತ್ತೇವೆ. ಹಾಗೆಂದು ಯಾರ ವಿರುದ್ಧವೂ ಅವಸರದ ಕ್ರಮ ಇಲ್ಲ. ಪಕ್ಷದ ವರಿಷ್ಠರಿದ್ದಾರೆ. ಅವರು ನೋಡಿಕೊಳ್ಳುತ್ತಾರೆ’ ಎಂದರು.

‘ಚುನಾವಣೆ ನಡೆದ ಕ್ಷೇತ್ರಗಳಲ್ಲಿ ಕಳೆದ ಬಾರಿ 6 ಕ್ಷೇತ್ರಗಳನ್ನು ಗೆದ್ದಿದ್ದೆವು. ಈ ಬಾರಿ 5 ಕ್ಷೇತ್ರಗಳನ್ನು ಹೆಚ್ಚುವರಿಯಾಗಿ ಗೆದ್ದಿದ್ದೇವೆ. ಹೆಚ್ಚು ಗೆದ್ದಿರುವುದು ತೃಪ್ತಿ ತರಲೇಬೇಕಲ್ಲವೇ? ಗ್ರಾಮ ಪಂಚಾಯಿತಿ ಸದಸ್ಯರ ಸಂಖ್ಯೆ ಹೆಚ್ಚಿಸಿಕೊಂಡಿರುವುದರ ಸಂಕೇತವಿದು.’ ಎಂದರು.

‘ಬಿಜೆಪಿ ದಮ್ ಇಲ್ಲದ ಪಕ್ಷ’ ಎಂದು ಸಿದ್ದರಾಮಯ್ಯ ಟೀಕಿಸಿದ ಬಗ್ಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ‘ಅವರ ದಮ್ ಎಷ್ಟಿದೆ ಎನ್ನುವುದು ಗೊತ್ತು. ಅವರ ಕ್ಷೇತ್ರವನ್ನೇ ಉಳಿಸಿಕೊಳ್ಳಲು ಅವರಿಗೆ ಸಾಧ್ಯ ಆಗಿಲ್ಲ. ಅವರ ನೇತೃತ್ವದಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರವನ್ನೇ ಕಳೆದುಕೊಂಡಿದೆ’ ಎಂದರು.

ಸೋತ ಪ್ರಮುಖರು
- ಮಹಂತೇಶ ಕವಟಗಿಮಠ,
- ಕೆ.ಸಿ. ಕೊಂಡಯ್ಯ

ಪುನರಾಯ್ಕೆಯಾದವರು
- ಬಿ.ಜಿ.ಪಾಟೀಲ (ಕಲಬುರಗಿ),
- ಸುನೀಲ್‌ಗೌಡ ಪಾಟೀಲ (ವಿಜಯಪುರ),
- ಪ್ರದೀಪ ಶೆಟ್ಟರ್ (ಧಾರವಾಡ),
- ಕೋಟ ಶ್ರೀನಿವಾಸ ಪೂಜಾರಿ (ದಕ್ಷಿಣಕನ್ನಡ),
- ಎಂ.ಕೆ.ಪ್ರಾಣೇಶ್ (ಚಿಕ್ಕಮಗಳೂರು),
- ಎಸ್.ರವಿ (ಬೆಂಗಳೂರು ಗ್ರಾಮಾಂತರ)

ಮೊದಲ ಬಾರಿ ಸದಸ್ಯರು
- ಎಚ್.ಎಸ್. ಗೋಪಿನಾಥ್ (ಬೆಂಗಳೂರು ನಗರ),
- ಎಂ.ಎಲ್. ಅನಿಲ್‌ಕುಮಾರ್ (ಕೋಲಾರ– ಚಿಕ್ಕಬಳ್ಳಾಪುರ),
- ಆರ್. ರಾಜೇಂದ್ರ (ತುಮಕೂರು),
- ಸೂರಜ್ ರೇವಣ್ಣ (ಹಾಸನ),
- ಭೀಮರಾವ್ ಬಿ. ಪಾಟೀಲ (ಬೀದರ್)
- ದಿನೇಶ್ ಗೂಳಿಗೌಡ (ಮಂಡ್ಯ),
- ಡಿ. ತಿಮ್ಮಯ್ಯ,
- ಸಿ.ಎನ್. ಮಂಜೇಗೌಡ (ಮೈಸೂರು–ಚಾಮರಾಜ ನಗರ),
- ಸುಜಾ ಕುಶಾಲಪ್ಪ (ಕೊಡಗು),
- ಮಂಜುನಾಥ ಭಂಡಾರಿ (ದಕ್ಷಿಣ ಕನ್ನಡ),
- ಡಿ.ಎಸ್. ಅರುಣ್ (ಶಿವಮೊಗ್ಗ),
- ಕೆ.ಎಸ್.ನವೀನ್ (ಚಿತ್ರದುರ್ಗ),
- ವೈ.ಎಂ. ಸತೀಶ್ (ಬಳ್ಳಾರಿ),
- ಚನ್ನರಾಜ ಹಟ್ಟಿಹೊಳಿ,
- ಲಖನ್ ಜಾರಕಿಹೊಳಿ (ಬೆಳಗಾವಿ–ಚಿಕ್ಕೋಡಿ),
- ಗಣಪತಿ ಉಳ್ವೇಕರ (ಉತ್ತರ ಕನ್ನಡ),
- ಪಿ.ಎಚ್. ಪೂಜಾರ (ವಿಜಯಪುರ)
- ಶರಣಗೌಡ ಪಾಟೀಲ ಬಯ್ಯಾಪುರ (ಕೊಪ್ಪಳ–ರಾಯಚೂರು).
- ಸಲೀಂ ಅಹಮದ್ (ಧಾರವಾಡ- 1996–2008ರವರೆಗೆ ಎರಡು ಅವಧಿಯಲ್ಲಿ ವಿಧಾನಸಭೆಯಿಂದ ಪರಿಷತ್ತಿಗೆ ಆಯ್ಕೆಯಾಗಿದ್ದರು)

ಸ್ಪರ್ಧಿಸದ ಹಾಲಿ ಸದಸ್ಯರು
- ಎಸ್.ಆರ್.ಪಾಟೀಲ,
- ವಿಜಯ್ ಸಿಂಗ್,
- ಶ್ರೀನಿವಾಸ ಮಾನೆ,
- ಜಿ.ರಘು ಆಚಾರ್,
- ಕೆ.ಪ್ರತಾಪಚಂದ್ರ ಶೆಟ್ಟಿ,
- ಎಂ.ಎ.ಗೋಪಾಲಸ್ವಾಮಿ,
- ಎಂ.ನಾರಾಯಣಸ್ವಾಮಿ,
- ಸಿ. ಆರ್.ಮನೋಹರ್,
- ಸುನೀಲ್ ಸುಬ್ರಮಣಿ,
- ಸಂದೇಶ್ ನಾಗರಾಜು, ಕಾಂತರಾಜ್,
- ಶ್ರೀಕಾಂತ್ ಘೋಟ್ನೇಕರ,
- ವಿವೇಕರಾವ್ ಪಾಟೀಲ,
- ಬಸವರಾಜ ಪಾಟೀಲ ಇಟಗಿ.

ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದವರ ಪೈಕಿ ಕುಟುಂಬದವರೇ ಹೆಚ್ಚು

ಕುಟುಂಬದ ‘ಆಸ್ತಿ’ಯಾದ ಮೇಲ್ಮನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ಕಾಲದಲ್ಲಿ ರಾಜಕೀಯ ಮುತ್ಸದ್ದಿಗಳು, ವಿವಿಧ ಕ್ಷೇತ್ರದ ಪ್ರಾಜ್ಞರು, ಪ್ರಾತಿನಿಧ್ಯವನ್ನೇ ಕಾಣದ ತಳಸಮುದಾಯದವರಿಗೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ವೇದಿಕೆ ಕಲ್ಪಿಸಿದ್ದ ಮೇಲ್ಮನೆ ಈಗ ಕುಟುಂಬದವರ ಆಸ್ತಿಯಾಗುವತ್ತ ಹೆಜ್ಜೆ ಇಟ್ಟಿದೆ.

ಬಿಜೆಪಿ, ಕಾಂಗ್ರೆಸ್ ಭೇದವೆಣಿಸಿದೇ ಎಲ್ಲರೂ ಕುಟುಂಬದವರನ್ನೇ ಗೆಲ್ಲಿಸಲು ಪಣತೊಟ್ಟಿದ್ದಾರೆ. ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗುವ ಸದಸ್ಯರ ಪೈಕಿ ಕುಟುಂಬದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

- ದೇವೇಗೌಡರ ಕುಟುಂಬದ ಸೂರಜ್ ರೇವಣ್ಣ
- ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಸತೀಶ ಜಾರಕಿಹೊಳಿ, ಬಿಜೆಪಿಯ ರಮೇಶ ಜಾರಕಿಹೊಳಿ, ಬಾಲಚಂದ್ರ ಜಾರಕಿಹೊಳಿ ಸದಸ್ಯರಾಗಿದ್ದರೆ, ಮತ್ತೊಬ್ಬ ತಮ್ಮ ಲಖನ್ ಜಾರಕಿಹೊಳಿ ಈಗ ಮೇಲ್ಮನೆ ಪ್ರವೇಶಿಸಿದ್ದಾರೆ.
- ಬಿಜೆಪಿ ಶಾಸಕ ಜಗದೀಶ ಶೆಟ್ಟರ್ ತಮ್ಮ ಪ್ರದೀಪ ಶೆಟ್ಟರ್ ಮತ್ತೊಮ್ಮೆ ಆಯ್ಕೆಯಾಗಿದ್ದಾರೆ.
- ಮಡಿಕೇರಿ ಬಿಜೆಪಿ ಶಾಸಕ ಅಪ್ಪಚ್ಚು ರಂಜನ್ ತಮ್ಮ ಸುನಿಲ್ ಸುಬ್ರಮಣಿ ಸದ್ಯ ಮೇಲ್ಮನೆಯ ಸದಸ್ಯರಾಗಿದ್ದರೆ, ಈ ಬಾರಿ ಅವರ ಬದಲು ಮತ್ತೊಬ್ಬ ತಮ್ಮ ಸುಜಾ ಕುಶಾಲಪ್ಪ ಮೇಲ್ಮನೆಗೆ ಬಂದಿದ್ದಾರೆ.
- ಡಿ.ಕೆ. ಶಿವಕುಮಾರ್ ತಮ್ಮ ಸೋದರ ಸಂಬಂಧಿ ಎಸ್.ರವಿಯನ್ನು ಗೆಲ್ಲಿಸಿಕೊಂಡಿದ್ದಾರೆ.
- ಕಾಂಗ್ರೆಸ್ ಶಾಸಕ ಎಂ.ಬಿ. ಪಾಟೀಲರ ತಮ್ಮ ಸುನೀಲ್‌ಗೌಡ ಪಾಟೀಲ ಮತ್ತೊಮ್ಮೆ ಚುನಾಯಿತರಾಗಿದ್ದಾರೆ.
- ಕಾಂಗ್ರೆಸ್ ಶಾಸಕ ಅಮರೇಗೌಡ ಬಯ್ಯಾಪುರ ಅವರ ತಮ್ಮನ ಮಗ ಶರಣಗೌಡ ಪಾಟೀಲ ಬಯ್ಯಾಪುರ ಕೊಪ್ಪಳದಿಂದ ಆಯ್ಕೆಯಾಗಿದ್ದಾರೆ.
- ಕಾಂಗ್ರೆಸ್ ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ ಅವರ ತಮ್ಮ ಚನ್ನರಾಜ ಹಟ್ಟಿಹೊಳಿ ಬೆಳಗಾವಿಯಿಂದ ಚುನಾಯಿತರಾಗಿದ್ದಾರೆ.
- ತುಮಕೂರಿನಲ್ಲಿ ಕಾಂಗ್ರೆಸ್‌ನ ಮಾಜಿ ಶಾಸಕ ಕೆ.ಎನ್. ರಾಜಣ್ಣ ಪುತ್ರ ಆರ್. ರಾಜೇಂದ್ರ ಗೆದ್ದಿದ್ದಾರೆ.
- ವಿಧಾನಪರಿಷತ್ತನ್ನು ಬಹುಕಾಲ ಪ್ರತಿನಿಧಿಸಿ, ಸಭಾಪತಿಯಾಗಿದ್ದ ಡಿ.ಎಚ್. ಶಂಕರಮೂರ್ತಿ ಮಗ ಡಿ.ಎಸ್. ಅರುಣ್ ಶಿವಮೊಗ್ಗದಿಂದ ವಿಜೇತರಾಗಿದ್ದಾರೆ.
- ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ, ಶಾಸಕ ಸಿ.ಟಿ. ರವಿ ಅವರ ಹತ್ತಿರದ ಸಂಬಂಧಿ ಉಪಸಭಾಪತಿಯಾಗಿರುವ ಎಂ.ಕೆ. ಪ್ರಾಣೇಶ್ ಪುನರಾಯ್ಕೆಯಾಗಿದ್ದಾರೆ.

ಆಪ್ತ ಸಹಾಯಕನಿಗೆ ಒಲಿದ ‘ಅದೃಷ್ಟ’

ಸಚಿವರು, ಶಾಸಕರಿಗೆ ಆಪ್ತಸಹಾಯಕರಾಗಿ ಕೆಲಸ ಮಾಡಿದ ದಿನೇಶ್ ಗೂಳಿಗೌಡ ಅವರಿಗೆ ಈ ಬಾರಿ ‘ಅದೃಷ್ಟ’ ಒಲಿದು ಬಂದಿದೆ.

ಮೇಲ್ಮನೆ ಚುನಾವಣೆ ಘೋಷಣೆಯಾಗುವವರೆಗೂ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರ ವಿಶೇಷ ಕರ್ತವ್ಯಾಧಿಕಾರಿಯಾಗಿದ್ದ ದಿನೇಶ್, ಹುದ್ದೆಗೆ ದಿಢೀರ್ ರಾಜೀನಾಮೆ ಕೊಟ್ಟು ರಾತ್ರೋರಾತ್ರಿ ಕಾಂಗ್ರೆಸ್ ಸೇರಿ ಮಂಡ್ಯದಲ್ಲಿ ಅಭ್ಯರ್ಥಿಯೂ ಆದರು. ಚುನಾವಣೆಯಲ್ಲಿ ಗೆದ್ದ ದಿನೇಶ್ ಮೇಲ್ಮನೆ ಪ್ರವೇಶಿಸಿದ್ದಾರೆ. ಕೆಪಿಸಿಸಿಯ ಮಾಧ್ಯಮ ವಿಭಾಗದಲ್ಲಿ ಅನೇಕ ವರ್ಷ ಕೆಲಸ ಮಾಡಿದ್ದ ದಿನೇಶ್, ಜಿ.ಪರಮೇಶ್ವರ ಅವರು ಉಪಮುಖ್ಯಮಂತ್ರಿಯಾಗಿದ್ದಾಗ ವಿಶೇಷ ಕರ್ತವ್ಯಾಧಿಕಾರಿಯಾಗಿಯೂ ಕೆಲಸ ಮಾಡಿದ್ದರು.

‘ಪ್ರಜಾಪ್ರಭುತ್ವದ ಸೌಂದರ್ಯ ಉಳಿಸಿ’

ಗದಗ: ವಿಧಾನ ಪರಿಷತ್ ಚುನಾವಣೆಯ ಫಲಿತಾಂಶ ಪ್ರಕಟವಾಗಿದೆ. ಬಿಜೆಪಿ–ಕಾಂಗ್ರೆಸ್ ಸಮಬಲ ಸಾಧಿಸಿವೆ. ಪ್ರಾದೇಶಿಕ ಪಕ್ಷ ಜೆಡಿಎಸ್ ಎರಡು ಸ್ಥಾನ ಗೆದ್ದುಕೊಂಡಿದೆ. ಒಬ್ಬರು ಪಕ್ಷೇತರರೂ ಗೆಲುವಿನ ನಗು ಬೀರಿದ್ದಾರೆ.

‘ವಿಧಾನ ಪರಿಷತ್ ಚುನಾವಣೆ ಫಲಿತಾಂಶ ಯಾರಿಗೆ ಏನು ಲಾಭ?’ ಎನ್ನುವ ಕುರಿತು ಪ್ರಜಾವಾಣಿ ಮಂಗಳವಾರ ಆಯೋಜಿಸಿದ್ದ ಫೇಸ್‌ಬುಕ್ ಲೈವ್ ಸಂವಾದದಲ್ಲಿ ಅತಿಥಿಗಳು ಹಂಚಿಕೊಂಡ ಸಂಕ್ಷಿಪ್ತ ರೂಪ ಇಲ್ಲಿದೆ. ಪೂರ್ಣ ವೀಕ್ಷಣೆಗೆ: http://surl.li/ayrqd

ಪ್ರಜಾವಾಣಿ ಸಂವಾದ

‘ಗ್ರಾಮೀಣ ಜನರ ಬದುಕು ಹಸನುಗೊಳಿಸಿ’

ವಿಧಾನ ಪರಿಷತ್ ಚುನಾವಣೆಯಲ್ಲಿ ಹಣ, ಕೂಪನ್, ವಾಷಿಂಗ್ ಮಷಿನ್, ತಿರುಪತಿ ಲಡ್ಡು ವಿತರಣೆ ಆಗಿದೆ. ಆಣೆ ಪ್ರಮಾಣ ಮಾಡಿಸಿಕೊಂಡು ಮತ ಹಾಕಿಸಿಕೊಂಡಿದ್ದಾರೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನರನ್ನೂ ನೈತಿಕ ಭ್ರಷ್ಟತೆ ತಳ್ಳುತ್ತಿದ್ದಾರೆ.

ಮೂರು ಪಕ್ಷಗಳ ಅಭ್ಯರ್ಥಿಗಳಿಗೂ ನಾವು ಹಣ ಖರ್ಚು ಮಾಡಿಲ್ಲ ಎಂದು ಹೇಳುವ ಎದೆಗಾರಿಕೆ ಇದೆಯೇ? ಗೆಲ್ಲುವ ವಿಶ್ವಾಸ ಇದ್ದ ಮೇಲೆ ಲಂಗು ಲಗಾಮಿಲ್ಲದೇ ನಾಲಗೆ ಹರಿ ಬಿಟ್ಟಿದ್ದು ಏಕೆ? ಅಕ್ರಮ ಮಾರ್ಗ ಅನುಸರಿಸುವ, ಧರ್ಮದ ವಿಚಾರ ತರುವ ಅಗತ್ಯ ಏನಿತ್ತು? ಅಭಿವೃದ್ಧಿಗೆ ಕೇವಲ ಕ್ರಿಯಾಯೋಜನೆ ಮಾಡಿದರೆ ಸಾಲದು. ಗ್ರಾಮೀಣ ಜನರ ಬದುಕು ಹಸನುಗೊಳಿಸಲು ಶ್ರಮಿಸಬೇಕು.

ಕೆ.ಎಸ್.ವಿಮಲಾ, ಜನವಾದಿ ಮಹಿಳಾ ಸಂಘಟನೆ, ರಾಜ್ಯ ಉಪಾಧ್ಯಕ್ಷೆ

‘ವಿಧಾನಸಭೆ ಚುನಾವಣೆಗೆ ದಿಕ್ಸೂಚಿ’

ಈಗ ಫಲಿತಾಂಶ ಬಂದಿದೆ. ಬಿಜೆಪಿ ಭದ್ರಕೋಟೆಯಾಗಿದ್ದ ಕ್ಷೇತ್ರಗಳನ್ನೂ ಭೇದಿಸಿರುವ ಕಾಂಗ್ರೆಸ್ ತನ್ನ ಬಾವುಟ ಹಾರಿಸಿದೆ. ಕೆಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅತಿ ಹೆಚ್ಚು ಮತಗಳನ್ನು ಪಡೆದು ಗೆದ್ದಿದೆ. ಈ ಚುನಾವಣೆ 2023ರ ವಿಧಾನಸಭೆ ಚುನಾವಣೆಗೆ ದಿಕ್ಸೂಚಿ ಆಗಿದೆ.

ಬೆಳಗಾವಿಯಲ್ಲಿ ರಮೇಶ ಜಾರಕಿಹೊಳಿ ಚಾಲೆಂಜ್ ಮಾಡಿದ್ದರು. ಲಕ್ಷ್ಮಿ ಪಟಾಕಿ ಒಡೆಯುತ್ತೇವೆ ಎಂದು ತೊಡೆ ತಟ್ಟಿದ್ದರು. ಅವರ ನಡೆಯ ಕುರಿತು ಬಿಜೆಪಿ ತನ್ನ ನಿಲುವು ತಿಳಿಸಬೇಕು. ಅಧಿಕಾರ ಹಿಡಿಯಲು ಬಿಜೆಪಿ ಈ ಹಿಂದೆ ಅಪರೇಷನ್ ಕಮಲ ಮಾಡಿದೆ. ಇಂತಹ ವ್ಯವಸ್ಥೆಗೆ ಕಡಿವಾಣ ಹಾಕಬೇಕು.

ಎಂ.ಲಕ್ಷ್ಮಣ, ಕೆಪಿಸಿಸಿ ವಕ್ತಾರ

‘ಚುನಾವಣಾ ಸುಧಾರಣೆ ಪಕ್ಷದ ಅಜೆಂಡಾ’



ಈ ಬಾರಿಯ ಚುನಾವಣೆಯಲ್ಲಿ 15 ಕ್ಷೇತ್ರಗಳಲ್ಲಿ ಗೆಲ್ಲುವ ಗುರಿ ಹೊಂದಿದ್ದೆವು. 13 ಕ್ಷೇತ್ರಗಳಲ್ಲಿ ಗೆಲುವು ನಿಶ್ಚಿತ ಎಂದು ಭಾವಿಸಿದ್ದೆವು. ಬೆಳಗಾವಿಯಲ್ಲಿ ಪಕ್ಷಕ್ಕೆ ಹಿನ್ನಡೆಯಾಗಿರುವುದು ನಿಜ. ಕೆಲವು ಕಡೆಗಳಲ್ಲಿ ಕಾಂಗ್ರೆಸ್ ಕೋಟೆ ಭೇದಿಸಿದ್ದೇವೆ. ಎಂಟು ಕ್ಷೇತ್ರಗಳಲ್ಲಿ ಪ್ರಬಲ ಪೈಪೋಟಿ ನೀಡಿದ್ದೇವೆ.

ಕಾಂಗ್ರೆಸ್‌ನವರು ಜನತಾದಳ ಪ್ರಾಬಲ್ಯ ಇರುವ ಸ್ಥಳದಲ್ಲಿ ಮಾತ್ರ ಗೆದ್ದಿದ್ದಾರೆ. ವಿಧಾನಪರಿಷತ್‌ನಲ್ಲಿ ನಮ್ಮ ಬಲ ಆರರಿಂದ 11ಕ್ಕೆ ಏರಿಕೆಯಾಗಿರುವುದು ಸಾಮಾನ್ಯ ಏನಲ್ಲ. ಚುನಾವಣಾ ಸುಧಾರಣೆ ನಮ್ಮ ಪಕ್ಷದ ಮುಂದಿನ ಅಜೆಂಡಾ ಕೂಡ ಆಗಿದೆ. ಅಭ್ಯರ್ಥಿಗಳ ಆಯ್ಕೆಯಿಂದಲೇ ಸುಧಾರಣೆ ಆಗಬೇಕಿದೆ. ಭ್ರಷ್ಟಾಚಾರದ ಚುನಾವಣೆಗಳ ಬಗ್ಗೆ ಮಾಧ್ಯಮಗಳು ಬೆಳಕು ಚೆಲ್ಲಬೇಕು.

ಅಶ್ವತ್ಥನಾರಾಯಣಗೌಡ, ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ

‘ಜೆಡಿಎಸ್ ಧೃತಿಗೆಡಿಸಲು ಸಾಧ್ಯವಿಲ್ಲ’



ಬಿಜೆಪಿ–ಕಾಂಗ್ರೆಸ್ ಕೆಲವು ಕ್ಷೇತ್ರದಲ್ಲಿ ಒಳಒಪ್ಪಂದ ಮಾಡಿಕೊಂಡು ಒಂದೊಂದೇ ಅಭ್ಯರ್ಥಿ ಹಾಕಿ ಗೆಲುವು ಸಾಧಿಸಿವೆ. ಇನ್ನು ಕೆಲವೆಡೆ ನಮ್ಮ ಸಹಾಯ ಪಡೆದು ಗೆಲುವು ಸಾಧಿಸಿದ್ದಾರೆ.

ಕುಟುಂಬ ರಾಜಕಾರಣ ಮಾಡುತ್ತಿರುವುದು ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳೇ ಹೊರತು ಜೆಡಿಎಸ್ ಅಲ್ಲ. ಹಾಸನದಲ್ಲಿ ಮಾತ್ರ ಸೂರಜ್ ರೇವಣ್ಣ ಅವರಿಗೆ, ಉಳಿದ ಕಡೆಗಳಲ್ಲಿ ಪಕ್ಷಕ್ಕೆ ದುಡಿದವರಿಗೆ ಟಿಕೆಟ್ ನೀಡಲಾಗಿದೆ.

ಚುನಾವಣೆಯಲ್ಲಿ ಹಣ ಚೆಲ್ಲುವ ಕಾರಣಕ್ಕೆ ವಿಧಾನ ಪರಿಷತ್‌ನ ಅವಶ್ಯಕತೆ ಇಲ್ಲ ಎಂದು ಹೇಳುವುದು ಸರಿಯಲ್ಲ. ಎಲ್ಲ ಪಕ್ಷಗಳು ಅಧಿಕಾರ ಹಿಡಿಯಲು ವಾಮಮಾರ್ಗ ಬಳಸುವುದನ್ನು ನಿಲ್ಲಿಸಿದರೆ ವ್ಯವಸ್ಥೆ ಸರಿ ಹೋಗುತ್ತದೆ.

ಎಲ್.ಗಂಗಾಧರ ಮೂರ್ತಿ, ರಾಜ್ಯ ಜೆಡಿಎಸ್ ವಕ್ತಾರ

ಸಂಕ್ಷಿಪ್ತ ಸುದ್ದಿ

‘ಇನ್ನೊಬ್ಬ ಅಭ್ಯರ್ಥಿಯ ಅಗತ್ಯವಿರಲಿಲ್ಲ’

ಬೆಳಗಾವಿ: ‘ಚುನಾವಣೆಯಲ್ಲಿ ಪಕ್ಷದ ಅಧಿಕೃತ ಅಭ್ಯರ್ಥಿಯಾಗಿದ್ದೆ. ಹೀಗಿರುವಾಗ, ಮತ್ತೊಬ್ಬ ಅಭ್ಯರ್ಥಿ (ಪಕ್ಷೇತರ ಅಭ್ಯರ್ಥಿ ಲಖನ್ ಜಾರಕಿಹೊಳಿ) ಹಾಕುವ ಅಗತ್ಯವಿರಲಿಲ್ಲ’ ಎಂದು ಬಿಜೆಪಿ ಪರಾಜಿತ ಅಭ್ಯರ್ಥಿ ಮಹಾಂತೇಶ ಕವಟಗಿಮಠ ಹೇಳಿದರು.

ಪರೋಕ್ಷವಾಗಿ ತಮ್ಮದೇ ಪಕ್ಷದ ಶಾಸಕರಾದ ರಮೇಶ ಜಾರಕಿಹೊಳಿ, ಬಾಲಚಂದ್ರ ಜಾರಕಿಹೊಳಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ಅವರು, ‘ಬಿಜೆಪಿ ಸಂಘಟಿತವಾಗಿ ಪ್ರಯತ್ನಿಸಿದೆ. ವಿಫಲವಾಗಿದೆ ಎನ್ನಲಾಗದು. ಮತಗಳು ವಿಭಜನೆ ಆದ ಕಾರಣ ಸಮಸ್ಯೆಯಾಗಿದೆ. ಆದಾಗ್ಯೂ ಮತದಾರರ ತೀರ್ಪನ್ನು ಗೌರವಿಸುತ್ತೇನೆ’ ಎಂದರು.

ತಂದೆ ಇದ್ದ ಮೇಲ್ಮನೆಗೆ ಮಗನ ಪ್ರವೇಶ

ಶಿವಮೊಗ್ಗ: ಅವಿಭಜಿತ ಶಿವಮೊಗ್ಗ ಜಿಲ್ಲೆಯ ಕ್ಷೇತ್ರದಿಂದ ಮೇಲ್ಮನೆಗೆ ಆಯ್ಕೆಯಾದ ಬಿಜೆಪಿ ಅಭ್ಯರ್ಥಿ ಡಿ.ಎಸ್. ಅರುಣ್, ಮಾಜಿ ಸಭಾಪತಿ ಡಿ.ಎಚ್. ಶಂಕರಮೂರ್ತಿ ಅವರ ಪುತ್ರ.

ಶಂಕರಮೂರ್ತಿ ಅವರು ಮೂರು ದಶಕ ಕಾಲ ವಿಧಾನ ಪರಿಷತ್ ಸದಸ್ಯರಾಗಿದ್ದರು. ಈಗ ಅವರ ಪುತ್ರ ಮೊದಲ ಚುನಾವಣೆಯಲ್ಲೇ ಗೆಲುವು ಸಾಧಿಸಿ ಮೇಲ್ಮನೆಗೆ ಪ್ರವೇಶಿಸಿದ್ದಾರೆ.

ಚಿಕ್ಕೋಡಿ ಪಟ್ಟಣದಲ್ಲಿ ಮಂಗಳವಾರ ವಿಜಯೋತ್ಸವ ಮೆರವಣಿಗೆ ನಡೆಸುವ ವೇಳೆ ಲಖನ್ ಜಾರಕಿಹೊಳಿ ಬೆಂಬಲಿಗರೊಬ್ಬರು ₹ 500 ಮುಖಬೆಲೆಯ ನೋಟುಗಳನ್ನು ಗಾಳಿಗೆ ತೂರಿ ಸಂಭ್ರಮಿಸಿದ್ದಾರೆ

‘₹ 500ರ ನೋಟುಗಳ ತೂರಿ ಸಂಭ್ರಮ’

ಬೆಳಗಾವಿ: ಪರಿಷತ್ ಚುನಾವಣೆಯಲ್ಲಿ ಗೆದ್ದ ಪಕ್ಷೇತರ ಅಭ್ಯರ್ಥಿ ಲಖನ್ ಜಾರಕಿಹೊಳಿ ಅಭಿಮಾನಿಗಳು ಜಿಲ್ಲೆಯ ಚಿಕ್ಕೋಡಿಯಲ್ಲಿ ಮಂಗಳವಾರ ವಿಜಯೋತ್ಸವ ವೇಳೆ ಬೆಂಬಲಿಗರೊಬ್ಬರು ₹ 500 ಮುಖಬೆಲೆ ನೋಟುಗಳನ್ನು ಗಾಳಿಗೆ ತೂರಿ ಸಂಭ್ರಮಿಸಿದ್ದಾರೆ.

ಆ ವ್ಯಕ್ತಿ ಯಾರು ಎನ್ನುವುದು ತಿಳಿದುಬಂದಿಲ್ಲ. ಆದರೆ, ಅವರು ನೋಟನ್ನು ತೂರಿದ್ದನ್ನು ಸ್ಥಳೀಯರೊಬ್ಬರು ವಿಡಿಯೊ ಮಾಡಿದ್ದಾರೆ. ‘ಸಾವಿರಾರು ರೂಪಾಯಿಗಳನ್ನು ಅವರು ಎಸೆದರು. ಆಯ್ದುಕೊಳ್ಳಲು ಕೆಲವರು ಮುಗಿಬಿದ್ದರು’ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

ಆಟೊದಲ್ಲಿ ತೆರಳಿದ ‘ಶ್ರೀಮಂತ ಅಭ್ಯರ್ಥಿ’

ಬೆಂಗಳೂರು: ಶ್ರೀಮಂತ ಅಭ್ಯರ್ಥಿ ಎಂದೇ ಗುರುತಿಸಲಾಗಿದ್ದ ಬೆಂಗಳೂರು ನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಯೂಸುಫ್ ಷರೀಫ್ (ಕೆಜಿಎಫ್ ಬಾಬು) ಅವರು, ಸೋಲು ಖಚಿತ ಆದಂತೆ ಆಟೊದಲ್ಲಿ ಮನೆಗೆ ತೆರಳಿದರು

ಮತ ಎಣಿಕೆ ನಡೆದ ಮಹಾರಾಣಿ ವಿಜ್ಞಾನ ಕಾಲೇಜು ಕೇಂದ್ರಕ್ಕೆ ಐಷಾರಾಮಿ ಕಾರಿನಲ್ಲಿ ಬಂದಿದ್ದ ಅವರು, ಸೋಲು ಖಚಿತ ಎನ್ನುವುದು ಮನವರಿಕೆಯಾಗುತ್ತಲೇ ಅರ್ಧದಲ್ಲೇ ತರಾತುರಿಯಲ್ಲಿ ಹೊರ ನಡೆದರು. ತೀವ್ರ ಬೇಸರದಲ್ಲಿದ್ದ ಅವರು, ಕೇಂದ್ರದ ಹೊರಗೆ ಇದ್ದ ಆಟೊದಲ್ಲಿ ಮನೆಗೆ ತೆರಳಿದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸವಾಲು– ವಸತಿ ಸಚಿವ ಸೋಮಣ್ಣ ಪ್ರತಿ ಸವಾಲು

‘ನಾನು ಹೇಳಿದ್ದು ಸುಳ್ಳಾದ್ರೆ ಸ್ಥಾನ ತ್ಯಾಗ’

ಪ್ರಜಾವಾಣಿ ವಾರ್ತೆ

ಬೆಳಗಾವಿ(ಸುವರ್ಣಸೌಧ): ಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ತಾವು ಹೇಳಿದ್ದು ಸುಳ್ಳೆಂದು ಸಾಬೀತಾದರೆ ತಮ್ಮ ಸ್ಥಾನಗಳನ್ನು ತ್ಯಾಗ ಮಾಡುವುದಾಗಿ ಒಂದು ಕಾಲದ ಗುರು–ಶಿಷ್ಯರಾದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ವಸತಿ ಸಚಿವ ವಿ.ಸೋಮಣ್ಣ ಅವರು ಸವಾಲು– ಪ್ರತಿ ಸವಾಲು ಹಾಕಿದ ಘಟನೆ ನಡೆಯಿತು.

ಅತಿವೃಷ್ಟಿಯಿಂದ ಬೆಳೆ ಹಾನಿಯಾಗಿರುವ ಬಗ್ಗೆ ನಿಯಮ 69ರಡಿ ವಿಧಾನಸಭೆಯಲ್ಲಿ ಮಾತನಾಡುವಾಗ ಸಿದ್ದರಾಮಯ್ಯ ಮತ್ತು ಸೋಮಣ್ಣ ಮಧ್ಯೆ ಬಿಸಿ ಬಿಸಿ ವಾಗ್ವಾದ ನಡೆಯಿತು. ಇಬ್ಬರೂ ತಮ್ಮ ಬಳಿ ಲಭ್ಯವಿದ್ದ ದಾಖಲೆಗಳನ್ನು ಮುಂದಿಟ್ಟು ಮಾತನಾಡಿದರು. ಸುಮಾರು ಒಂದು ತಾಸಿನಷ್ಟು ಜಟಾಪಟಿ ನಡೆಯಿತು.

ಬಿಜೆಪಿ ಸರ್ಕಾರಕ್ಕೆ ಅಧಿಕಾರಕ್ಕೆ ಬಂದ ಮೇಲೆ ಒಂದೂ ಮನೆಯನ್ನು ಕಟ್ಟಿ ಕೊಟ್ಟಿಲ್ಲ ಎಂದು ಸಿದ್ದರಾಮಯ್ಯ ಆಕ್ಷೇಪ ವ್ಯಕ್ತಪಡಿಸಿದ್ದೂ ಅಲ್ಲದೆ, ತಮ್ಮ ಸರ್ಕಾರ ಇದ್ದಾಗ 15 ಲಕ್ಷ ಮನೆಗಳನ್ನು ಕಟ್ಟಿಕೊಟ್ಟಿದ್ದಾಗಿ ಪ್ರತಿಪಾದಿಸಿದರು.

ಆಗ ಸದನದಲ್ಲಿ ಸೋಮಣ್ಣ ಇರಲಿಲ್ಲ. ಸರ್ಕಾರದ ಪರವಾಗಿ ಸಮರ್ಥನೆಗೆ ನಿಂತ ಸಾರಿಗೆ ಸಚಿವ ಬಿ.ಶ್ರೀರಾಮುಲು ಅವರು, ‘ನಿಮ್ಮ ಸರ್ಕಾರ ಇದ್ದಾಗ ಮನೆಗಳನ್ನು ಘೋಷಿಸಿತ್ತೇ ಹೊರತು ಮನೆಗಳನ್ನು ಕಟ್ಟಲು ಒಂದು ರೂಪಾಯಿ ಬಿಡುಗಡೆ ಮಾಡಲಿಲ್ಲ’

ವಿ.ಸೋಮಣ್ಣ

ಸಿದ್ದರಾಮಯ್ಯ

ಎಂದರು. ‘ಏಯ್ ರಾಮುಲು ನಿಂಗೆ ಸಮರ್ಥನೆ ಮಾಡಿಕೊಳ್ಳಲು ಗೊತ್ತಾಗಲ್ಲ ಕುತ್ಕೊಳಪ್ಪ’ ಎಂದು ಸಿದ್ದರಾಮಯ್ಯ ಗದರಿದರು.

ತಮ್ಮ ಇಲಾಖೆಯ ವಿಷಯ ಪ್ರಸ್ತಾಪವಾಗಿದ್ದು ಕೇಳಿ ಸದನದೊಳಗೆ ದೌಡಾಯಿಸಿದ ಸೋಮಣ್ಣ ಕ್ಷಣ ಕಾಲ ಆಸನದಲ್ಲಿ ಸಾವರಿಸಿಕೊಂಡರು. ಬಳಿಕ ಸಿದ್ದರಾಮಯ್ಯ ಅವರ ವಾಗ್ದಾಳಿಯನ್ನು ಎದುರಿಸಲು ನಿಂತರು. ‘ಸತ್ಯವಾದ ಹೇಳಿಕೆ ಕೊಡಿ ಸಿದ್ದರಾಮಯ್ಯ ಅವರೇ, ನಾನು ನಿಮ್ಮ ಗರಡಿಯಲ್ಲೇ ಬೆಳೆದವನು’ ಎಂದರು.

ಆಗಲೂ ಪಟ್ಟು ಬಿಡದ ಸಿದ್ದರಾಮಯ್ಯ, ‘ನೀವು ಏನು ಹೇಳಬೇಕೋ ಅದನ್ನು ಉತ್ತರ ಕೊಡುವಾಗ ಹೇಳಿ, ನಿಮ್ಮ ಸರ್ಕಾರ ಬಂದ ಮೇಲೆ ಒಂದೇ ಒಂದು ಮನೆ ಕಟ್ಟಲಿಲ್ಲ. ಎಂ.ಟಿ.ಬಿ.ನಾಗರಾಜ್ ಸಮ್ಮಿಶ್ರ ಸರ್ಕಾರದಲ್ಲಿ ವಸತಿ ಸಚಿವರಾಗಿದ್ದಾಗ ಬಾದಾಮಿಗೆ 7,500 ಮನೆ ಘೋಷಿಸಿದರು. ಎಷ್ಟು ಮನೆ ಕಟ್ಟಿ ಕೊಟ್ಟಿದ್ದೀರಿ’ ಎಂದು ಪ್ರಶ್ನಿಸಿದರು.

‘2018 ರಲ್ಲಿ ಚುನಾವಣೆಗೆ ಹೋಗುವ ಮುನ್ನ 20 ಲಕ್ಷ ಮನೆ ಕಟ್ಟುತ್ತೀರಿ ಘೋಷಿಸಿದಿರಿ. ಆದರೆ, ಒಂದು ರೂಪಾಯಿಯನ್ನೂ ಕೊಡಲಿಲ್ಲ. ಅಷ್ಟೇ ಅಲ್ಲ, 15 ಲಕ್ಷ ಮನೆಗಳಿಗೆ ಕಾರ್ಯಾದೇಶವನ್ನು ಮಾಡಿ ಹೋದಿರಿ. ಆ ಬಳಿಕ ಬಂದ ಎಚ್.ಡಿ.ಕುಮಾರಸ್ವಾಮಿ ಅವರ ಸರ್ಕಾರ, ಒಂದು ರೂಪಾಯಿ ಬಿಡುಗಡೆ ಮಾಡದೇ 15 ಲಕ್ಷ ಮನೆಗಳಿಗೆ ಕಾರ್ಯಾದೇಶ ನೀಡಿದರು‘ ಎಂದು ಸೋಮಣ್ಣ ತಿರುಗೇಟು ನೀಡಿದರು.

‘ನಮ್ಮ ಸರ್ಕಾರ ಬಂದ ಬಳಿಕ ನೀವು ಘೋಷಿಸಿದ ಯೋಜನೆ ಆಗಿದ್ದರೂ ಅದಕ್ಕೆ ₹10 ಸಾವಿರ ಕೋಟಿ ಬಿಡುಗಡೆ ಮಾಡಿದೆವು. ಮನೆ ನಿರ್ಮಾಣ ಕಾರ್ಯವನ್ನು ಮುಂದುವರೆಸಿದೆವು. ನಿಮ್ಮ ಕಾರ್ಯಕ್ರಮ ರದ್ದು ಮಾಡಿ, ಹೊಸತಾಗಿ ನಮ್ಮದೇ ಮಾಡಬಹುದಿತ್ತು. ಆದರೆ, ಅದು ಬಡವರಿಗೆ ಸಂಬಂಧಿಸಿದ ಯೋಜನೆ ಆಗಿದ್ದರಿಂದ ಆ ರೀತಿ ಮಾಡಲು ಹೋಗಲಿಲ್ಲ’ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘2018 ರ ಬಜೆಟ್ ಭಾಷಣದಲ್ಲಿ ಮುಂದಿನ 5 ವರ್ಷದಲ್ಲಿ 20 ಲಕ್ಷ ಮನೆ ಕಟ್ಟುವುದಾಗಿ ಆಶ್ವಾಸನೆ ನೀಡಿದ್ದೆವು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿದ್ದರೆ ಮಾಡುತ್ತಿದ್ದೆವು. ನಮ್ಮ ಸರ್ಕಾರ ಅಧಿಕಾರಕ್ಕೆ ಬರಲಿಲ್ಲ. ಆದರೆ, ನಿಮ್ಮ ಸರ್ಕಾರ ಒಂದು ಮನೆಯನ್ನಾದರೂ ಕಟ್ಟಿದೆಯೇ’ ಎಂದು ಪ್ರಶ್ನಿಸಿದರು.

‘ನಾನು ಸುಳ್ಳು ಹೇಳಿದರೆ ನನ್ನ ಸ್ಥಾನ ತ್ಯಾಗ ಮಾಡಿ ಹೋಗುತ್ತೇನೆ. ನಿಮ್ಮ ಬಳಿ ದಾಖಲೆ ಇದ್ದರೆ ಇಡಿ’ ಎಂದು ಸಿದ್ದರಾಮಯ್ಯ ಸವಾಲು ಹಾಕಿದರು. ಅದಕ್ಕೆ ಪ್ರತಿಕ್ರಿಯಿಸಿದ ಸೋಮಣ್ಣ, ‘ನನ್ನ ಬಳಿಯೂ ದಾಖಲೆಗಳು ಇವೆ. ನಾನು ಹೇಳಿದ್ದು ಸುಳ್ಳಾದರೆ ಈ ಜಾಗದಲ್ಲಿ ಮುಂದುವರೆಯುವುದಿಲ್ಲ’ ಎಂದರು. ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ಮಧ್ಯೆ ಬಿಸಿ ಬಿಸಿ ವಾಗ್ವಾದ ನಡೆಯಿತು.

ಬೆಳೆ ಹಾನಿ ಪರಿಹಾರ ಹೆಚ್ಚಳಕ್ಕೆ ಆಗ್ರಹ

‘ಬೆಳೆಹಾನಿಗೆ ಸಂಬಂಧಿಸಿದಂತೆ 2014ರ ಬಳಿಕ ಎನ್‌ಡಿಆರ್‌ಎಫ್ ಮಾರ್ಗಸೂಚಿಯನ್ನು ಪರಿಷ್ಕರಣೆ ಮಾಡಿಲ್ಲ. ಸಂತ್ರಸ್ತ ರೈತರಿಗೆ ಚಿಕ್ಕಾಸು ಪರಿಹಾರ ನೀಡಲಾಗುತ್ತಿದೆ’ ಎಂದು ಸಿದ್ದರಾಮಯ್ಯ ಆರೋಪಿಸಿದರು.

ನಿಯಮ 69ರಡಿ ವಿಧಾನಸಭೆಯಲ್ಲಿ ಮಂಗಳವಾರ ನಡೆದ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ’ಬೆಳೆಹಾನಿ ಉಂಟಾಗಿರುವ ಒಣ ಜಮೀನಿಗೆ ಹೆಕ್ಟೇರ್‌ಗೆ ₹6,800, ನೀರಾವರಿ ಜಮೀನಿಗೆ ₹13,500 ಹಾಗೂ ತೋಟಗಾರಿಕಾ ಜಮೀನಿಗೆ ₹18,000 ಪರಿಹಾರ ನೀಡಲಾಗುತ್ತಿದೆ. ಪರಿಹಾರ ಮೊತ್ತವನ್ನು ಕ್ರಮವಾಗಿ ₹20,400, ₹40,500 ಹಾಗೂ ₹54 ಸಾವಿರಕ್ಕೆ ಹೆಚ್ಚಿಸಬೇಕು. ಎನ್‌ಡಿಆರ್‌ಎಫ್ ಮಾರ್ಗಸೂಚಿ ಬದಿಗಿಟ್ಟು ಜನರಿಗೆ ಪರಿಹಾರ ನೀಡಬೇಕು‘ ಎಂದು ಆಗ್ರಹಿಸಿದರು.

’ಮಳೆ ಹಾನಿಯಿಂದ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದರೆ, ಜನರ ನೋವಿಗೆ ಸ್ಪಂದಿಸಬೇಕಾದ ಜಿಲ್ಲಾ ಉಸ್ತುವಾರಿ ಸಚಿವರೇ ಇಲ್ಲ. ಜನಸ್ವರಾಜ್ ಯಾತ್ರೆ ಹೆಸರಿನಲ್ಲಿ ಕೊರೊನಾ ಹರಡುವುದರಲ್ಲಿ ಸಚಿವರು ನಿರತರಾಗಿದ್ದರು. ಕಂದಾಯ ಸಚಿವರು ಮಾತ್ರ ಒಂದೆರಡು ಜಿಲ್ಲೆಗಳಿಗೆ ಭೇಟಿ ನೀಡಿದ್ದಾರೆ’ ಎಂದು ಟೀಕಿಸಿದರು.

‘ಘೋಷಣೆ ಕಮಿಟ್‌ಮೆಂಟ್ ಆಗಲ್ಲ’

ಕ್ರಿಯಾಲೋಪವೆತ್ತಿದ ಕಾಂಗ್ರೆಸ್‌ನ ಕೆ.ಆರ್. ರಮೇಶ್ ಕುಮಾರ್ ಅವರು, ‘ನಾವು ಮತ್ತೆ ಆರಿಸಿ ಬಂದರೆ ಮನೆ ಕಟ್ಟಿಕೊಡುತ್ತೇವೆ ಎಂದು ಬಜೆಟ್ ಭಾಷಣದಲ್ಲಿ ಆಶ್ವಾಸನೆ ನೀಡಿದ್ದೇ ಹೊರತು ಅದು ಕಮಿಟ್‌ಮೆಂಟ್ (ಬದ್ಧತೆ) ಆಗಿರಲಿಲ್ಲ. 20 ಲಕ್ಷ ಅಲ್ಲ 1 ಕೋಟಿ ಹೇಳಬಹುದು, ಆದರೆ ಅದು ಕಮಿಟ್‌ಮೆಂಟ್ ಆಗಲ್ಲ. ಗ್ರಾಮ ಪಂಚಾಯಿತಿಯಿಂದ ಫಲಾನುಭವಿ ಗುರುತಿಸಿ ರಾಜೀವ್‌ಗಾಂಧಿ ವಸತಿ ನಿಗಮದಿಂದ ಕಾರ್ಯಾದೇಶ ಆದಾಗಲೇ ಅದಕ್ಕೆ ಬದ್ಧತೆ ಬರುತ್ತದೆ’ ಎಂದರು.

‘ಶಾಲೆಗಳಲ್ಲಿ ಕಟ್ಟಡ, ಅಗ್ನಿ ಸುರಕ್ಷತೆ: ಶೀಘ್ರ ಹೊಸ ಸುತ್ತೋಲೆ’

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ‘ಖಾಸಗಿ ಶಾಲೆಗಳ ಮಾನ್ಯತೆ ನವೀಕರಣಕ್ಕೆ ಕಟ್ಟಡ ಮತ್ತು ಅಗ್ನಿ ಸುರಕ್ಷತಾ ಪ್ರಮಾಣಪತ್ರಗಳನ್ನು ಕಡ್ಡಾಯವಾಗಿ ಪಡೆಯಬೇಕೆಂಬ ನಿಯಮಕ್ಕೆ ಸಂಬಂಧಿಸಿದಂತೆ ಎಸ್.ವಿ. ಸಂಕನೂರ ಸಮಿತಿಯ ಶಿಫಾರಸು ಮತ್ತು ಇತ್ತೀಚಿನ ಸುತ್ತೋಲೆಯ ಕುರಿತಂತೆ ಅಧಿವೇಶನ ಮುಗಿಯುವುದರ ಒಳಗೆ ಹೊಸ ಸುತ್ತೋಲೆ ಹೊರಡಿಸಲಾಗುವುದು’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಪ್ರಸ್ತಾಪಿಸಿದ ವಿಷಯದ ಮೇಲೆ ನಡೆದ ಚರ್ಚೆಯ ಬಳಿಕ ಉತ್ತರ ನೀಡಿದ ಸಚಿವರು, ‘ಶಾಲೆಗಳು ನವೀಕರಣ ಆಗಿಲ್ಲ ಎಂಬ ಕಾರಣಕ್ಕೆ ಶಿಕ್ಷಕರ ವೇತನ ತಡೆಹಿಡಿದಿದ್ದರೆ ತಕ್ಷಣ ಬಿಡುಗಡೆ ಮಾಡಲಾಗುವುದು. ಈ ಕಾರಣಕ್ಕೆ ವಿದ್ಯಾರ್ಥಿಗಳು ಪರೀಕ್ಷೆ ಬರೆಯುವುದರಿಂದ ವಂಚಿತರಾಗದಂತೆ ನೋಡಿಕೊಳ್ಳಲಾಗುವುದು’ ಎಂದು ಭರವಸೆ ನೀಡಿದರು.

‘ಕಟ್ಟಡ ಮತ್ತು ಅಗ್ನಿಶಾಮಕ ಸುರಕ್ಷತಾ ಕ್ರಮಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಶಾಲೆಗಳಿಗೆ ಇಲ್ಲದ ನಿಯಮಗಳನ್ನು ಖಾಸಗಿ ಶಾಲೆಗಳಿಗೆ ಅನ್ವಯಿಸಲಾಗಿದೆ. ಈ ಕುರಿತು ಎಸ್.ವಿ. ಸಂಕನೂರ ಸಮಿತಿ ನೀಡಿರುವ ವರದಿಯ ಶಿಫಾರಸುಗಳನ್ನು ಪರಿಗಣಿಸದೆ ಸರ್ಕಾರ ಸುತ್ತೋಲೆ ಹೊರಡಿಸಿದೆ’ ಎಂದು ಶ್ರೀಕಂಠೇಗೌಡ ದೂರಿದರು.

ಜೆಡಿಎಸ್‌ನ ಭೋಜೇಗೌಡ, ‘ಖಾಸಗಿ ಶಾಲೆಗಳು ಮಾನ್ಯತೆ ನವೀಕರಿಸದಿದ್ದರೆ ಪರೀಕ್ಷೆ ಬರೆಯಲು ವಿದ್ಯಾರ್ಥಿಗಳಿಗೆ ಅವಕಾಶ ನೀಡುವುದಿಲ್ಲ ಎಂದು ಸುತ್ತೋಲೆಯ ಮೂಲಕ ಬೆದರಿಕೆ ಒಡ್ಡಲಾಗಿದೆ’ ಎಂದರು. ‘ಖಾಸಗಿ ಶಾಲೆಗಳ ಕತ್ತು ಹಿಚುಕಲು ಸರ್ಕಾರ ಸುತ್ತೋಲೆ ಹೊರಡಿಸಿದಂತಿದೆ. ಅದನ್ನು ವಾಪಸು ಪಡೆಯದಿದ್ದರೆ ಸರ್ಕಾರಿ ಶಾಲೆಗಳನ್ನು ಮುಚ್ಚಲಾಗುವುದು’ ಎಂದು ಜೆಡಿಎಸ್‌ನ ಮರಿತಿಬ್ಬೇಗೌಡ ಆವೇಶಭರಿತರಾಗಿ ಮಾತನಾಡಿದರು. ಈ ವೇಳೆ ಮಧ್ಯಪ್ರವೇಶಿಸಿದ ಸಚಿವ ಜೆ.ಸಿ. ಮಾಧುಸ್ವಾಮಿ ಮತ್ತು ಬಿಜೆಪಿಯ ಸದಸ್ಯರು, ಗೌಡರ ಮಾತಿಗೆ ತಿರುಗೇಟು ನೀಡಿದರು. ಆಗ ಮಾತಿನ ಚಕಮಕಿಯೂ ನಡೆಯಿತು.

‘ಖಾಸಗಿ ಶಾಲೆಗಳ ಮೇಲೆ ಗದಾಪ್ರಹಾರ ಸೂಕ್ತವಲ್ಲ. ಪ್ರತಿವರ್ಷ ಮಾನ್ಯತೆ ನವೀಕರಿಸುವ ಅಗತ್ಯವೇನು’ ಎಂದು ವಿರೋಧ ಪಕ್ಷದ ನಾಯಕ ಎಸ್. ಆರ್. ಪಾಟೀಲ ಪ್ರಶ್ನಿಸಿದರು. ಬಿಜೆಪಿಯ ಪುಟ್ಟಣ್ಣ, ‘ಸುತ್ತೋಲೆಯನ್ನು ಸದನದಲ್ಲಿಯೇ ಹರಿದು, ಶಿಕ್ಷಣ ಸಚಿವರ ಮುಖದ ಮೇಲೆ ಬಿಸಾಕಬೇಕು ಎಂದುಕೊಂಡಿದ್ದೆ. ಆದರೆ, ಸಚಿವ ಬಿ.ಸಿ. ನಾಗೇಶ್ ಹೊಸಬರು. ಸಜ್ಜನ ರಾಜಕಾರಣಿ. ಈ ಸಮಸ್ಯೆಯನ್ನು ಪರಿಹರಿಸುವ ವಿಶ್ವಾಸವಿದೆ’ ಎಂದರು. ಬಿಜೆಪಿಯ ಅರುಣ್ ಶಹಾಪುರ, ‘ಕಟ್ಟಡ ಮತ್ತು ಅಗ್ನಿ ಸುರಕ್ಷತೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಕಾರ್ಯಸಾಧುವಲ್ಲ’ ಎಂದು ಅಭಿಪ್ರಾಯಪಟ್ಟರು. ಬಿಜೆಪಿಯ ತೇಜಶ್ವಿನಿ ಗೌಡ, ಶಶೀಲ್ ನಮೋಶಿ ಕೂಡಾ ಮಾತನಾಡಿದರು.

ಚರ್ಚೆಯ ಬಳಿಕ ಉತ್ತರಿಸಿದ ಸಚಿವರು, ‘2018ಕ್ಕಿಂತ ಪೂರ್ವ ಮತ್ತು ನಂತರ ಆರಂಭವಾದ ಶಾಲೆಗಳು ಕಡ್ಡಾಯವಾಗಿ ಒಂದು ವರ್ಷದ ಒಳಗೆ ಎಲ್ಲ ಸುರಕ್ಷತಾ ಕ್ರಮಗಳನ್ನು ಅಳವಡಿಸುವಂತೆ 2018ರಲ್ಲಿಯೇ ಸುತ್ತೋಲೆ ಹೊರಡಿಸಲಾಗಿದೆ. ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಂತೆ ಎಲ್ಲ ಶಾಲೆಗಳು ಕಟ್ಟಡ ಮತ್ತು ಅಗ್ನಿ ಸುರಕ್ಷತಾ ಕ್ರಮಗಳನ್ನು ಪಡೆಯುವುದು ಕಡ್ಡಾಯ’ ಎಂದರು.

ಅಕ್ರಮ ನೇಮಕ: ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಶಿಫಾರಸು

ಕುಲಪತಿ, ಕುಲಸಚಿವರ ವಿರುದ್ಧ ಕಠಿಣ ಕ್ರಮ

ಪ್ರಜಾವಾಣಿ ವಾರ್ತೆ

ಬೆಳಗಾವಿ(ಸುವರ್ಣ ವಿಧಾನಸೌಧ): ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಯುಜಿಸಿ ನಿಯಮಗಳನ್ನು ಉಲ್ಲಂಘಿಸಿ ನೇಮಕಾತಿ ಮಾಡಿರುವ ಕುಲಪತಿಗಳು ಮತ್ತು ಕುಲಸಚಿವರ ವಿರುದ್ಧ ಕಠಿಣ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು ಎಂದು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಶಿಫಾರಸು ಮಾಡಿದೆ.

ಭಾರತ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ ವರದಿಯಲ್ಲಿನ ಬೋಧನಾ ಸಿಬ್ಬಂದಿ ನೇಮಕಾತಿ, ಪದೋನ್ನತಿ ಮತ್ತು ವೇತನ ನಿಗದಿಯ ವಿಷಯಾಧಾರಿತ ಲೆಕ್ಕಪರಿಶೋಧನೆ ಬಗ್ಗೆ ಸಮಿತಿಯ ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾಯಿತು.

ಅಲ್ಲದೆ, ಸರ್ಕಾರದ ಹಂತದಲ್ಲಿ ನೇಮಕಾತಿಗಳಿಗೆ ಅನುಮೋದನೆ ನೀಡಿರುವ ಅಧಿಕಾರಿಗಳ ವಿರುದ್ಧವೂ ಶಿಸ್ತಿನ ಕ್ರಮತೆಗೆದುಕೊಳ್ಳಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.

ವರದಿಯ ಪ್ರಮುಖ ಶಿಫಾರಸುಗಳು:

- ನಿಯಮ ಬಾಹಿರವಾಗಿ ನೇಮಕವಾಗಿರುವ, ಪದೋನ್ನತಿ ಹೊಂದಿರುವ ಪ್ರಾಧ್ಯಾಪಕರು, ಸಹಾಯಕ ಗ್ರಂಥಪಾಲಕರು, ಇತರೆ ಬೋಧನಾ ಸಿಬ್ಬಂದಿ ಸೇವೆಯಲ್ಲಿದ್ದರೆ, ತಕ್ಷಣವೇ ಅಂತಹವರನ್ನು ವಜಾಗೊಳಿಸಬೇಕು. ಪಾವತಿಸಿರುವ ಹೆಚ್ಚುವರಿ ಮೊತ್ತವನ್ನು ಸಂಬಂಧಪಟ್ಟ ವಿಶ್ವವಿದ್ಯಾಲಯಗಳು, ಕಾಲೇಜುಗಳು ವಸೂಲಿ ಮಾಡಬೇಕು.
- ಚಾಲ್ತಿಯಲ್ಲಿದ್ದ ಯುಜಿಸಿ ನಿಯಮಾವಳಿಗಳನ್ನು ಪಾಲಿಸದೇ ದುರುದ್ದೇಶಪೂರ್ವಕವಾಗಿ ವಿಶ್ವವಿದ್ಯಾಲಯಗಳ ಪರಿನಿಯಮಗಳನ್ನು ರಚನೆ ಮಾಡಿ, ಅದರ ಪ್ರಕಾರ ಕಾನೂನು ಬಾಹಿರವಾಗಿ ನೇಮಕಾತಿಯನ್ನು ವಿಶ್ವವಿದ್ಯಾಲಯಗಳು ಮಾಡಿರುವುದು ಸರಿಯಲ್ಲ. ಆಗಿರುವ ಲೋಪದೋಷಗಳನ್ನು ಶೀಘ್ರವಾಗಿ ಸರಿಪಡಿಸಿ, ಅನುಸರಣಾ ವರದಿ ಸಲ್ಲಿಸಬೇಕು.
- ಹಿಂದೆ ಗೌರವಾನಿತ್ವರೂ, ಪ್ರಾಮಾಣಿಕರು ಮತ್ತು ಸಮಾಜಕ್ಕೆ ಮಾದರಿಯಾದ ವ್ಯಕ್ತಿಗಳು ಕುಲಪತಿಗಳು ಆಗುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ಅರ್ಹತೆ ಇಲ್ಲದವರನ್ನು ಕುಲಪತಿಗಳನ್ನಾಗಿ ಆಯ್ಕೆ ಮಾಡಲಾಗುತ್ತಿದೆ. ಇದರಿಂದ ವಿಶ್ವವಿದ್ಯಾಲಯಗಳ ಗುಣಮಟ್ಟ ಕುಸಿಯುತ್ತಿದೆ. ಉನ್ನತ ಶಿಕ್ಷಣದ ಗುಣಮಟ್ಟ ಕಾಪಾಡಲು ಅಗತ್ಯವಿರುವ ಕ್ರಮ ತೆಗೆದುಕೊಳ್ಳಬೇಕು.
- ಯುಜಿಸಿ ಮತ್ತು ಎಐಸಿಟಿಇ ಶೈಕ್ಷಣಿಕ ಸಿಬ್ಬಂದಿ ನೇಮಕಾತಿ ಕುರಿತು ಕನಿಷ್ಠ ವಿದ್ಯಾರ್ಹತೆ, ಆಯ್ಕೆ ಸಮಿತಿಯ ರಚನೆ ಕುರಿತು ನೇಮಕಾತಿ ಸೂತ್ರಗಳನ್ನು ನಿಗದಿಪಡಿಸುತ್ತದೆ. ಸೂತ್ರಗಳನ್ನು ಉಲ್ಲಂಘಿಸಿ, ಹಲವಾರು ವಿಶ್ವವಿದ್ಯಾಲಯಗಳಲ್ಲಿ ನಿಯಮ ಬಾಹಿರ ನೇಮಕಾತಿ ಮಾಡಿರುವುದನ್ನು ಮಹಾಲೇಖಪಾಲರ ವರದಿ ಹೇಳಿದೆ. ಇಂತಹ ಲೋಪದೋಷಗಳನ್ನು ನಿಯಂತ್ರಿಸಲು ಮತ್ತು ಉತ್ತಮ ಗುಣಮಟ್ಟದ ಬೋಧನ ಮತ್ತು ಬೋಧನೇತರ ಸಿಬ್ಬಂದಿ ನೇಮಕಾತಿ ಮಾಡಲು ಪಾರದರ್ಶಕವಾದ ಒಂದು ನೇಮಕಾತಿ ಆಯೋಗ ರಚನೆ ಅಥವಾ ಬದಲಿ ವ್ಯವಸ್ಥೆ ಕಾರ್ಯಗತಗೊಳಿಸಬೇಕು.

ಪರಿಷತ್ ಅಗತ್ಯವಿದೆಯೇ: ಈಶ್ವರಪ್ಪ

ಬೆಳಗಾವಿ(ಸುವರ್ಣ ವಿಧಾನಸೌಧ): ವಿಧಾನಪರಿಷತ್ ಇರಬೇಕಾ ಅಥವಾ ರದ್ದುಪಡಿಸಬೇಕಾ ಎಂಬ ಬಗ್ಗೆ ಹಿಂದಿನಿಂದಲೂ ಚರ್ಚೆ ನಡೆದುಕೊಂಡು ಬಂದಿದ್ದು, ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಅವರು ಮಂಗಳವಾರ ನೀಡಿರುವ ಹೇಳಿಕೆ ಚರ್ಚೆಗೆ ಗ್ರಾಸವಾಗಿದೆ.

ವಿಧಾನಪರಿಷತ್ ಚುನಾವಣಾ ಫಲಿತಾಂಶದ ಕುರಿತ ಹೇಳಿಕೆ ನೀಡುವ ಸಂದರ್ಭದಲ್ಲಿ ಅವರು, ‘ವಿಧಾನ ಪರಿಷತ್ ಇರಬೇಕಾ ಅಥವಾ ಇರಬೇಡವೇ ಎಂಬ ಬಗ್ಗೆ ಜಿಜ್ಞಾಸೆ ಕಾಡಲಾರಂಭಿಸಿದೆ. ಚಿಂತಕರ ಚಾವಡಿಯಲ್ಲಿ ಈ ಬಗ್ಗೆ ಚರ್ಚೆ ನಡೆಯಬೇಕು ಮತ್ತು ಸ್ಪಷ್ಟ ತೀರ್ಮಾನ ತೆಗೆದುಕೊಳ್ಳಬೇಕು’ ಎಂದು ಅವರು ಹೇಳಿದರು.

ಈ ಹಿಂದೆ ಎರಡು ಬಾರಿ ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದ ಈಶ್ವರಪ್ಪ ಅವರನ್ನು ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಆಯ್ಕೆ ಮಾಡಿತ್ತು. ಒಮ್ಮೆ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದ ಅವರು, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಮೇಲ್ಮನೆಯ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದರು.

ಅಂಗವಿಕಲರ ಸಬಲೀಕರಣ: ₹ 127.89 ಕೋಟಿ ವ್ಯರ್ಥ

ಬೆಳಗಾವಿ (ಸುವರ್ಣ ವಿಧಾನಸೌಧ): 2018–19ರಿಂದ 2020–21ರವರೆಗೆ ಅಂಗವಿಕಲರ ಅಭಿವೃದ್ಧಿಗಾಗಿ ಬಜೆಟ್‌ನಲ್ಲಿ ಒದಗಿಸಿದ್ದ ಅನುದಾನದಲ್ಲಿ ₹127.89 ಕೋಟಿ ಬಳಕೆಯಾಗದೇ ಉಳಿದಿದೆ.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಹಣಮಂತ ನಿರಾಣಿ ಮತ್ತು ಅರುಣ್ ಶಹಾಪೂರ ಅವರ ಪ್ರಶ್ನೆಗಳಿಗೆ ಉತ್ತರ ನೀಡಿದ ಅಂಗವಿಕಲರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಖಾತೆ ಸಚಿವ ಹಾಲಪ್ಪ ಆಚಾರ್ ಈ ಮಾಹಿತಿ ನೀಡಿದರು. ಮೂರು ವರ್ಷಗಳ ಅವಧಿಯಲ್ಲಿ ಅಂಗವಿಕಲರ ಸಬಲೀಕರಣಕ್ಕಾಗಿ ₹ 1654 ಕೋಟಿ ಅನುದಾನ ಮಂಜೂರು ಮಾಡಲಾಗಿತ್ತು. ಈ ಪೈಕಿ ₹1,525 ಕೋಟಿ ಮಾತ್ರ ಬಳಕೆಯಾಗಿದೆ ಎಂದು ತಿಳಿಸಿದರು.

‘ಕಡ್ಡಾಯ ಸೇವೆ: ಆರು ತಿಂಗಳಿಂದ ವೇತನವಿಲ್ಲ’

ಬೆಳಗಾವಿ (ಸುವರ್ಣ ವಿಧಾನಸೌಧ): ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ಪದವಿ ಶಿಕ್ಷಣ ಪೂರೈಸಿ, ಕಡ್ಡಾಯ ಸರ್ಕಾರಿ ಸೇವೆಯಲ್ಲಿ ಕೆಲಸ ಮಾಡುತ್ತಿರುವ ಸಾವಿರಾರು ವೈದ್ಯರಿಗೆ ಆರು ತಿಂಗಳಿಂದ ವೇತನ ನೀಡಿಲ್ಲ ಎಂದು ಬಿಜೆಪಿಯ ವೈ.ಎ. ನಾರಾಯಣಸ್ವಾಮಿ ದೂರಿದರು.

ವಿಧಾನ ಪರಿಷತ್‌ನಲ್ಲಿ ಮಂಗಳವಾರ ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ‘ಕೋರ್ಸ್ ಪೂರೈಸಿದ ತಕ್ಷಣವೇ ಕಡ್ಡಾಯ ಸರ್ಕಾರಿ ಸೇವೆಗೆ ನಿಯೋಜಿತರಾದ ವೈದ್ಯರಿಗೆ ವೇತನ ಪಾವತಿಸಲು ಇನ್ನೂ ಹಣ ಬಿಡುಗಡೆ ಮಾಡಿಲ್ಲ. ಇದು ಸರಿಯಲ್ಲ, ಕಡ್ಡಾಯ ಸೇವೆಯಲ್ಲಿರುವ ವೈದ್ಯರಿಗೆ ವೇತನ ಪಾವತಿಗೆ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನಕ್ಕೆ ಆಗಮಿಸುವ ಜನರಿಗೆ ಆಹಾರ ತಯಾರಿಕೆಯಲ್ಲಿ ತೊಡಗಿರುವ ಮಹಿಳೆಯರು –ಪ್ರಜಾವಾಣಿ ಚಿತ್ರ

ಉಪ ನೋಂದಾಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಕಡ್ಡಾಯ

ಮತಾಂತರ: ಸರ್ಕಾರಿ ಸವಲತ್ತಿಗೆ ಸಂಚಕಾರ

• ರಾಜೇಶ್ ರೈ ಚಟ್ಲ

ಬೆಳಗಾವಿ (ಸುವರ್ಣ ವಿಧಾನಸೌಧ): ಮತಾಂತರ ನಿಷೇಧ ಕಾಯ್ದೆ ಜಾರಿಗಾಗಿ, ರಾಜ್ಯ ಸರ್ಕಾರ ಇಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಮಸೂದೆ ಮಂಡನೆಗೆ ಸಿದ್ಧತೆ ನಡೆಸುತ್ತಿದೆ. ಆ ಬೆನ್ನಲ್ಲೆ, ಮತಾಂತರಗೊಂಡವರ ಮೂಲ ಜಾತಿ ‘ಮೀಸಲಾತಿ’ ಸೌಲಭ್ಯದ ವಿಚಾರ ಚರ್ಚೆಗೆ ಗ್ರಾಸವಾಗಿದೆ.

ಸದ್ಯ ಪರಿಶಿಷ್ಟ ಜಾತಿಗೆ ಶೇ 15, ಪರಿಶಿಷ್ಟ ವರ್ಗಕ್ಕೆ ಶೇ 3 ಮೀಸಲಾತಿ ಸೌಲಭ್ಯವಿದೆ. ಕ್ರೈಸ್ತ, ಮುಸ್ಲಿಂ ಧರ್ಮಕ್ಕೆ ಪರಿಶಿಷ್ಟರು (ಎಸ್‌ಸಿ, ಎಸ್‌ಟಿ) ಮತಾಂತರವಾದರೆ ಅಂಥವರು ಸರ್ಕಾರದ ಆದೇಶದ ಪ್ರಕಾರ ಮೀಸಲಾತಿಯೂ ಸೇರಿದಂತೆ ಇತರ ಎಲ್ಲ ಸೌಲಭ್ಯಗಳನ್ನು ಕಳೆದುಕೊಳ್ಳುತ್ತಾರೆ. ಮತಾಂತರಗೊಂಡ ಪರಿಶಿಷ್ಟರು ಈ ಮೀಸಲಾತಿ ಅವಕಾಶದ ಬದಲು ಧಾರ್ಮಿಕ ಅಲ್ಪಸಂಖ್ಯಾತರಿಗೆ ಸಿಗುವ ಶೇ 4 ಮೀಸಲಾತಿ ಪಡೆಯಲು ಅರ್ಹರಾಗುತ್ತಾರೆ.

ಮತಾಂತರ ಕಾಯ್ದೆ ಜಾರಿಗೆ ಬಂದರೆ ಮತಾಂತರಗೊಂಡವರು ಉಪ ನೋಂದಾಣಾಧಿಕಾರಿ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬೇಕು ಎಂಬ ನಿಯಮ ಕಡ್ಡಾಯ ಆಗಲಿದೆ. ನೋಂದಣಿಯಾದರೆ ಅಂಥವರ ಜಾತಿ ಪ್ರಮಾಣಪತ್ರ ರದ್ದು ಆಗುತ್ತದೆ ಎನ್ನುವುದು ಸರ್ಕಾರದ ವಾದ. ಆದರೆ, ಜಾತಿ ಮೀಸಲಾತಿ, ಇತರ ಸೌಲಭ್ಯಗಳನ್ನು ಕಳೆದುಕೊಳ್ಳಬಾರದು ಎಂಬ ಕಾರಣಕ್ಕೆ ಮತಾಂತರಗೊಂಡ ಬಳಿಕವೂ ತಮ್ಮ ಜಾತಿ ಪ್ರಮಾಣಪತ್ರದಲ್ಲಿ ಮೂಲ ಜಾತಿಯನ್ನೇ ನಮೂದಿಸುತ್ತಿದ್ದಾರೆ. ಅಲ್ಲದೆ, ದಾಖಲೆಗಳಲ್ಲಿರುವ ತಮ್ಮ ಹೆಸರನ್ನು ಕೂಡಾ ಬದಲಾಯಿಸಿಕೊಳ್ಳುವುದಿಲ್ಲ.

‘ಅಸ್ಪೃಶ್ಯತೆ ಸೇರಿದಂತೆ ಸಾಮಾಜಿಕ ಅನಿಷ್ಟಗಳಿಂದ ಮುಕ್ತಗೊಳಿಸಿ, ಸಮಾಜದ ಮುಖ್ಯವಾಹಿನಿಗೆ ತರಬೇಕು ಎಂಬ ಕಾರಣಕ್ಕೆ ಪರಿಶಿಷ್ಟರಿಗೆ ಹೆಚ್ಚಿನ ಮೀಸಲಾತಿ, ಇತರ ಪ್ರತ್ಯೇಕ ಸೌಲಭ್ಯಗಳನ್ನು ಸಂವಿಧಾನದಡಿಯಲ್ಲಿ ಕಲ್ಪಿಸಲಾಗಿದೆ. ಒಮ್ಮೆ ಧರ್ಮ ಬದಲಾಯಿಸಿದರೆ, ಮತಾಂತರಗೊಂಡ ಧರ್ಮದಲ್ಲಿ ಸಮಾನತೆ ಪಡೆಯುತ್ತಾರೆ. ಕ್ರೈಸ್ತ ಧರ್ಮಕ್ಕೆ ಬದಲಾದ ಅನೇಕರು ಮೀಸಲಾತಿ ಸೌಲಭ್ಯ ಉಳಿಸಿಕೊಳ್ಳಲು, ಮತಾಂತರ ಆಗಿರುವುದನ್ನು ತೋರಿಸಿಕೊಳ್ಳುವುದಿಲ್ಲ. ನಿಯಮದ ಪ್ರಕಾರ, ಧರ್ಮ ಬದಲಾಯಿಸಿದರೆ ಮೀಸಲಾತಿ ಕಳೆದುಕೊಳ್ಳುತ್ತಾರೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

‘ಲಿಂಗಾಯತರು, ಒಕ್ಕಲಿಗರು ಸೇರಿದಂತೆ ಮೇಲ್ವರ್ಗದವರು ಕೂಡಾ ಕ್ರೈಸ್ತ, ಮುಸ್ಲಿಂ ಧರ್ಮಕ್ಕೆ ಮತಾಂತರಗೊಂಡರೆ, ಧಾರ್ಮಿಕವಾಗಿ ಅಲ್ಪಸಂಖ್ಯಾತರಾಗುತ್ತಾರೆ. ಮತಾಂತರ ಆಗಿದ್ದೇನೆ ಎಂದು ದಾಖಲೆ ಸಲ್ಲಿಸಿದರೆ ಅದನ್ನು ಪರಿಶೀಲಿಸಿ ಮೀಸಲಾತಿ ಕೊಡುವ ಬಗ್ಗೆ ನಿರ್ಣಯ ತೆಗೆದುಕೊಳ್ಳಲಾಗುತ್ತದೆ. ಆದರೆ, ಪರಿಶಿಷ್ಟರು ಬೌದ್ಧ ಧರ್ಮಕ್ಕೆ ಹೋದರೆ ಮೀಸಲಾತಿ ಸೌಲಭ್ಯವನ್ನು ಉಳಿಸಿಕೊಳ್ಳುತ್ತಾರೆ. ಯಾಕೆಂದರೆ, ಬೌದ್ಧ ಧರ್ಮ ಹಿಂದೂ ಧರ್ಮದಿಂದ ಪ್ರತ್ಯೇಕವಾದುದು’ ಎಂದರು.

‘ಬೌದ್ಧ, ಸಿಖ್ ಮತ್ತು ಹಿಂದೂ ಧರ್ಮದಲ್ಲಿ ಪರಿಶಿಷ್ಟರಿದ್ದಾರೆ. ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳ್ಳುವವರ ಪೈಕಿ ಶೇಕಡಾ 80ರಷ್ಟು ಮಂದಿ ಪರಿಶಿಷ್ಟರು. ಉಳಿದ ಶೇ 20ರಷ್ಟು ಮಂದಿ ಇತರ ಧರ್ಮದವರು. ಆದರೆ, ಮತಾಂತರದಿಂದ ಸಾಮಾಜಿಕವಾಗಿ ಸ್ಥಾನಮಾನ ಪಡೆದು, ಗುರುತಿಸಿಕೊಳ್ಳಲು ಪರಿಶಿಷ್ಟರಿಗೆ ಸಹಾಯ ಆಗುತ್ತದೆ. ಹೀಗಾಗಿ, ಧರ್ಮ ಬದಲಿಸಿಕೊಂಡರೂ ಅದನ್ನು ತೋರಿಸಿಕೊಳ್ಳದೆ ಜಾತಿ ಕಾಲಂನಲ್ಲಿ ತಮ್ಮ ಮೂಲ ಜಾತಿಯನ್ನೇ (ಎಸ್‌ಸಿ, ಎಸ್‌ಟಿ) ನಮೂದಿಸುತ್ತಾರೆ. ಜೊತೆಗೆ, ಎಲ್ಲ ಮೀಸಲಾತಿ ಸೌಲಭ್ಯಗಳನ್ನೂ ಪಡೆದುಕೊಳ್ಳುತ್ತಾರೆ.’

‘ಇತ್ತೀಚೆಗೆ ಪರಿಶಿಷ್ಟರು ಹೆಚ್ಚಿನ ಸಂಖ್ಯೆಯಲ್ಲಿ ‘ಮರಳಿ ಮನೆಗೆ’ ಎಂದು ಬೌದ್ಧ ಧರ್ಮದ ಕಡೆಗೆ ಹೋಗುತ್ತಿದ್ದಾರೆ. ಕೆಲವು ಕಡೆ ಪರಿಶಿಷ್ಟರು ಸಾಮೂಹಿಕವಾಗಿ ಬೌದ್ಧ ಧರ್ಮದ ಕಡೆಗೆ ಮುಖ ಮಾಡುತ್ತಿದ್ದಾರೆ. ಅದು ಮತಾಂತರ ಅಲ್ಲ, ಧರ್ಮ ಬದಲಾಯಿಸಿದರೆ ಮಾತ್ರ ಮತಾಂತರವಾಗುತ್ತದೆ. ಮತಾಂತರ ಕಾಯ್ದೆ ತರುವ ಹಿಂದೆ, ಮೀಸಲಾತಿ ರದ್ದುಗೊಳ್ಳಲಿದೆ ಎನ್ನುವ ಬೆದರಿಸುವ ತಂತ್ರವಿದೆ ಎಂಬ ಆರೋಪವೂ ಇದೆ. ಮತಾಂತರ ವಿಷಯ ಕೇಂದ್ರ ಸರ್ಕಾರದ ನೀತಿ. ರಾಜ್ಯ ಸರ್ಕಾರ ಏನೂ ಮಾಡಲು ಬರುವುದಿಲ್ಲ’ ಎಂದೂ ಅವರು ಹೇಳಿದರು.

ಮತಾಂತರವಾದರೆ...

‘ಪರಿಶಿಷ್ಟರನ್ನು ಹೊರತುಪಡಿಸಿ ಇತರ ಜಾತಿಯವರು ಮತಾಂತರವಾದರೆ ಯಾವ ಜಾತಿ ಮೀಸಲಾತಿಯ ಪ್ರಮಾಣ ಅನ್ವಯ ಆಗಲಿದೆ ಎನ್ನುವುದು ಗೊಂದಲಕ್ಕೆ ಕಾರಣವಾಗಿದೆ. ಸದ್ಯದ ಜಾತಿ ಮೀಸಲಾತಿ ಪ್ರಮಾಣದ ಪ್ರಕಾರ ಪ್ರವರ್ಗ 1ರಲ್ಲಿ ಶೇ 4, ಪ್ರವರ್ಗ 2ಎಯಲ್ಲಿ ಶೇ 15, 3ಎಯಲ್ಲಿ ಶೇ 4, ಪ್ರವರ್ಗ 3 ಬಿಯಲ್ಲಿ ಶೇ 5ರಷ್ಟು ಮೀಸಲಾತಿ ನೀಡಲಾಗುತ್ತಿದೆ. ಈ ಪ್ರವರ್ಗದಲ್ಲಿರುವವರು ಕ್ರೈಸ್ತ ಧರ್ಮಕ್ಕೆ ಮತಾಂತರವಾದರೆ, ಧಾರ್ಮಿಕ ಅಲ್ಪಸಂಖ್ಯಾತರಿರುವ ಪ್ರವರ್ಗ 2ಬಿಯಲ್ಲಿರುವ ಶೇ 4 ಮೀಸಲಾತಿಯನ್ನೇ ನೀಡಬೇಕಾಗುತ್ತದೆಯೇ ಎನ್ನುವ ಬಗ್ಗೆ ಗೊಂದಲವಿದೆ’ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

‘ಪರಿಶಿಷ್ಟರು ಮತಾಂತರವಾದರೆ ಮೂಲ ಜಾತಿಯಲ್ಲಿ ಇದ್ದಾಗ ಅರ್ಹವಾಗಿ ಪಡೆಯುತ್ತಿದ್ದ ಮೀಸಲಾತಿ ಸೌಲಭ್ಯವನ್ನು ಕಳೆದುಕೊಳ್ಳುತ್ತಾರೆ. ಅಂಥವರು ದಲಿತರ ಮೇಲಿನ ದೌರ್ಜನ್ಯ ತಡೆ ಕಾಯ್ದೆ 1989 (ತಿದ್ದುಪಡಿ 2015) ವ್ಯಾಪ್ತಿಯಿಂದ ಹೊರಗುಳಿಯಲಿದ್ದಾರೆ. ಜೊತೆಗೆ, ಆಶ್ರಯ, ಅಂಬೇಡ್ಕರ್ ಸೇರಿದಂತೆ ವಿವಿಧ ವಸತಿ ಯೋಜನೆಗಳಲ್ಲಿ ಲಭ್ಯ ಸಹಾಯಧನ, ರಿಯಾಯಿತಿಗಳನ್ನು ಪಡೆಯಲು ಕೂಡಾ ಅನರ್ಹರಾಗುತ್ತಾರೆ’ ಎಂದೂ ಅವರು ವಿವರಿಸಿದರು.

THE FEDERAL BANK LIMITED
Regd. Office: Aluva, Kerala.
ZONAL OFFICE: 1st Floor, Halcyon Complex, No.9, St Marks Road, Bangalore-560 001.e-mail:bgrr-cpc@federalbank.co.in
Phone: 080-22074610/604/613/624/625

BGRR/PvtSale/2021-22 NOTICE FOR PRIVATE SALE OF GOLD 14/12/2021

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 22-12-2021 as shown below:

Br.BGR/Jalahalli: 17/1, Savithri, S M Road, Jalahalli West, Bangalore - 560 015, Ph: 080 -28372201 15826100508135,15826100500900,15826400076189. Br.BGR/Jayanagar: K M Plaza,,Kanakapura Main Road, 30th Cross, 7th Block, Jayanagar, Bangalore - 560 082,Ph:No. 080-26655558 :-13876400046049,13876400046056.

Bangalore 14-12-2021 Vice President & Zonal Head

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ

ಬಹುಮಹಡಿ ಕಟ್ಟಡ, ಬೆಂಗಳೂರು.

ಸಂಖ್ಯೆ: ಆರ್‌ಡಿ 59 ಜಿಆರ್‌ಸಿ 2021 ದಿನಾಂಕ: 19–11–2021

ಅಧಿಸೂಚನೆ

ಕೇಂದ್ರ ತನಿಖಾ ಬ್ಯೂರೋ (ಸಿಬಿಐ) ಠೇವಣಿದಾರರ ದೂರಿನ ಬಗ್ಗೆ ಸೂಕ್ತ ತನಿಖೆ ಕೈಗೊಂಡು ಸಲ್ಲಿಸಿದ ತನಿಖಾ ವರದಿಯನ್ನಾಧರಿಸಿ ಮೆ॥ ಐ ಮಾನಿಟರಿ ಅಡ್ವೈಸರಿ (ಐಎಂಎ) ಹಾಗೂ ಅದರ ಸಮೂಹ ಸಂಸ್ಥೆಗಳು ಠೇವಣಿದಾರರಿಂದ ಗುಟ್ಟಾಗಿ ಹಾಗೂ ಕಾನೂನುಬಾಹಿರವಾಗಿ ಠೇವಣಿಗಳನ್ನು ಅಥವಾ ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸುವ ಮೋಸದ ವ್ಯವಹಾರಗಳಲ್ಲಿ ತೊಡಗಿರುವುದು ಹಾಗೂ ಆ ತರುವಾಯ ಅವಧಿ ಮುಗಿದ ಮೇಲೆ ಅಥವಾ ಠೇವಣಿದಾರರು ಅಥವಾ ಫಿರ್ಯಾದುದಾರು ಸಲ್ಲಿಸಿದ ಬೇಡಿಕೆ ಮೇಲಾಗಲಿ ಆಶ್ವಾಸನೆ ನೀಡಿದ ಬಡ್ಡಿ ಹಾಗೂ ಇತರೆ ಖಾತರಿ ಪ್ರಯೋಜನಗಳನ್ನು ನೀಡಲು ವಿಫಲವಾಗಿರುವುದು ಹಾಗೂ ಅವರಿಗೆ ಆಶ್ವಾಸನೆ ನೀಡಿದ ಸೇವೆಗಳನ್ನು ಒದಗಿಸಲು ವಿಫಲವಾಗಿರುವುದು ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರ ಐಎಂಎ ಮೂಲಕ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಮೆ॥ ಐ ಮಾನಿಟರಿ ಅಡ್ವೈಸರಿ (ಐಎಂಎ) ಹಾಗೂ ಅದರ ಸಮೂಹ ಸಂಸ್ಥೆಗಳು ಹಾಗೂ ಅವರ ಸಹವರ್ತಿ ಜನರು ಠೇವಣಿದಾರರಿಂದ ಅಥವಾ ಫಿರ್ಯಾದುದಾರರಿಂದ ಸಂಗ್ರಹಿಸಲಾದ ಹಣದಿಂದ ಜಮೀನು, ಚರ ಹಾಗೂ ಸ್ಥಿರಾಸ್ತಿಗಳನ್ನು, ನಗದು ಹಾಗೂ ಇತರೆ ವಸ್ತುವನ್ನು ಆರ್ಜಿಸಿರುವುದು ಹಾಗೂ ಆ ಮೂಲಕ ಠೇವಣಿ ಹಾಗೂ ಹಣವನ್ನು ಪಡೆದಿರುವ ಉದ್ದೇಶಿತ ಉದ್ದೇಶಗಳಿಗೆ ಬಳಸದೆ ಬೇರೆ ಕಡೆ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಮೆ॥ ಐ ಮಾನಿಟರಿ ಅಡ್ವೈಸರಿ (ಐಎಂಎ) ಹಾಗೂ ಅದರ ಸಮೂಹ ಸಂಸ್ಥೆಗಳ ಹಾಗೂ ಅವುಗಳ ಸಹವರ್ತಿ ಜನರ ಕೃತ್ಯಗಳು ಮುಗ್ಧ ಜನರಿಗೆ ವಂಚಿಸುವ ಉದ್ದೇಶದಿಂದ ಠೇವಣಿದಾರರ ಅಥವಾ ಫಿರ್ಯಾದುದಾರರ ಹಿತಾಸಕ್ತಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ನಂಬಲು ಸರ್ಕಾರವು ಕಾರಣಗಳನ್ನು ಹೊಂದಿದ್ದು, ಮೆ॥ ಐ ಮಾನಿಟರಿ ಅಡ್ವೈಸರಿ (ಐಎಂಎ) ಹಾಗೂ ಅದರ ಸಮೂಹ ಸಂಸ್ಥೆಗಳಲ್ಲಿನ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ಅಗತ್ಯವಾಗಿರುತ್ತದೆ.

ಆದ್ದರಿಂದ, ಸರ್ಕಾರವು ಸಕ್ಷಮ ಪ್ರಾಧಿಕಾರದ ವರದಿಯನ್ನು ಪರಿಗಣಿಸಿದ ತರುವಾಯ ಹಾಗೂ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ತುರ್ತು ಅಗತ್ಯವಿದೆ ಎಂದು ಸ್ವಯಂ ಮನವರಿಕೆ ಮಾಡಿಕೊಂಡು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಅಧಿನಿಯಮ, 2004 (2005ರ ಕರ್ನಾಟಕ ಅಧಿನಿಯಮ, 30)ರ 3ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಮೂಲಕ ಈ ಕೆಳಕಂಡಂತೆ ಆದೇಶವನ್ನು ಮಾಡುತ್ತದೆ, ಎಂದರೆ:

“ಆದೇಶ”

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಅಧಿನಿಯಮ, 2004 (2005ರ ಕರ್ನಾಟಕ ಅಧಿನಿಯಮ, 30)ರ 3ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಈ ಮೇಲೆ ನಿರೂಪಿಸಲಾದ ಸನ್ನಿವೇಶಗಳ ಹಿನ್ನಲೆಯಲ್ಲಿ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವ ಸಲುವಾಗಿ ಮೆ॥ ಐ ಮಾನಿಟರಿ ಅಡ್ವೈಸರಿ (ಐಎಂಎ) ಹಾಗೂ ಅದರ ಸಮೂಹ ಸಂಸ್ಥೆಗಳಿಗೆ ಸೇರಿದೆ ಎನ್ನಲಾದ ಚರಾಸ್ತಿಗಳನ್ನು ಜಪ್ತಿ ಮಾಡುವುದು ಅವಶ್ಯಕವಾಗಿದೆ ಎಂದು ಮನಗಂಡಿರುವುದರಿಂದ, ಸದರಿ ಹಣಕಾಸು ಸಂಸ್ಥೆಯ ಅಂಥ ಹಣ ಅಥವಾ ಅಂಥ ಇತರೆ ಸ್ವತ್ತುಗಳು ಅಥವಾ ಸಂಸ್ಥೆಯ ಪ್ರವರ್ತಕರ, ಪಾಲುದಾರರ, ನಿರ್ದೇಶಕರ, ವ್ಯವಸ್ಥಾಪಕರ ಅಥವಾ ಸದಸ್ಯರ ಅಥವಾ ಯಾರೇ ಇತರೆ ವ್ಯಕ್ತಿಯ ವೈಯಕ್ತಿಕ ಆಸ್ತಿಗಳು ಠೇವಣಿಗಳನ್ನು, ಬಡ್ಡಿ ಅಥವಾ ಇತರೆ ಖಾತ್ರಿ ಪ್ರಯೋಜನಗಳನ್ನು ಠೇವಣಿದಾರರಿಗೆ ಮರುಸಂದಾಯ ಮಾಡುವುದಕ್ಕೆ ಸಂಬಂಧಿಸಿದಂತೆ ಪರ್ಯಾಪ್ತವಾಗಿಲ್ಲವೆಂದು ಗೊತ್ತಾದಲ್ಲಿ ಮೆ॥ ಐ ಮಾನಿಟರಿ ಅಡ್ವೈಸರಿ (ಐಎಂಎ) ಹಾಗೂ ಅದರ ಸಮೂಹ ಸಂಸ್ಥೆಗಳು ಸಂಗ್ರಹಿಸಲಾದ ಠೇವಣಿಗಳಿಂದ ತನ್ನ ಹೆಸರಿನಲ್ಲಾಗಲಿ ಅಥವಾ ಯಾರೇ ಇತರೆ ವ್ಯಕ್ತಿಗಳ ಹೆಸರಿನಲ್ಲಿ ಆರ್ಜಿಸಿದೆ ಎನ್ನಲಾದ ಈ ಆದೇಶದ ಅನುಬಂಧದಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲಾ ಚರಾಸ್ತಿಗಳನ್ನು ಸರ್ಕಾರವು ಈ ಮೂಲಕ ಜಪ್ತಿ ಮಾಡಿಕೊಳ್ಳುತ್ತದೆ.

ಟಿಪ್ಪಣಿ: ವಿಶೇಷ ನ್ಯಾಯಾಲಯದ ಮುಂದಿನ ಆದೇಶದವರೆಗೆ ಬಾಕಿ ಇರಿಸಿ, ಮೇಲೆ ಹೇಳಿದ ಎಲ್ಲಾ ಚರಾಸ್ತಿಗಳನ್ನು ಅಧಿಕೃತ ರಾಜ್ಯಪತ್ರದಲ್ಲಿ ಈ ಆದೇಶವು ಪ್ರಕಟಣೆಗೊಂಡ ದಿನಾಂಕದಿಂದ ಸರ್ಕಾರವು ನೇಮಕ ಮಾಡಿರುವ ಸಕ್ಷಮ ಪ್ರಾಧಿಕಾರದಲ್ಲಿ ಕೂಡಲೇ ನಿಯುತವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಸಹಿ/–
(ಡಾ. ಎಂ.ಎನ್. ರಾಜೇಂದ್ರ ಪ್ರಸಾದ್)
ಸರ್ಕಾರದ ಉಪ ಕಾರ್ಯದರ್ಶಿ (ಪ್ರ)
ಕಂದಾಯ ಇಲಾಖೆ
(ಭೂಮಾಪನ, ಸೇವೆಗಳು–1 ಮತ್ತು ವಿಶೇಷ ಕೋಶ)

ಅನುಬಂಧ

ಕ್ರ. ಸಂ.	ವಾಹನದ ನೋಂದಣಿ ಸಂಖ್ಯೆ.	ವಾಹನದ ವಿವರ	ದಾಖಲೆ ವಿವರ	ಅಂದಾಜು ಮೌಲ್ಯಗಳು (ರೂ.ಗಳಲ್ಲಿ)
1	ಕೆಎ–03 ಜೆ.ಡಬ್ಲ್ಯು.1360	ಟಿ.ವಿ.ಎಕ್ಸ್–ಎಕ್ಸ್‌ಎಲ್–100 ಹೆವಿಡ್ಯೂಟಿ	ಸಿ.ಬಿ.ಐ. ರವರ ವರದಿ ನಂ.ಆರ್.ಸಿ 14(ಎ)/2019–ಸಿ.ಬಿ.ಐ–ಎ.ಸಿ.ಬಿ–ಬಿ.ಎಲ್.ಆರ್. ದಿನಾಂಕ: 18–02–2021 & 04–08–2021.	25000/-
2	ಕೆಎ–03 ಜೆ.ಡಬ್ಲ್ಯು.1361	ಟಿ.ವಿ.ಎಕ್ಸ್–ಎಕ್ಸ್‌ಎಲ್–100 ಹೆವಿಡ್ಯೂಟಿ		25000/-
3	ಕೆಎ–03 ಜೆ.ಆರ್.7006	ಟಿ.ವಿ.ಎಕ್ಸ್–ಎಕ್ಸ್‌ಎಲ್–100 ಹೆವಿಡ್ಯೂಟಿ		23000/-
4	ಕೆಎ–03 ಜೆ.ಆರ್.8804	ಟಿ.ವಿ.ಎಕ್ಸ್–ಎಕ್ಸ್‌ಎಲ್–100 ಹೆವಿಡ್ಯೂಟಿ		23000/-
5	ಕೆಎ–03 ಜೆ.ಡಬ್ಲ್ಯು.1785	ಟಿ.ವಿ.ಎಕ್ಸ್–ಎಕ್ಸ್‌ಎಲ್–100 ಹೆವಿಡ್ಯೂಟಿ		25000/-
6	ಕೆ.ಎ–03 ಜೆ.ಎಕ್ಸ್ 3774	ಹೊಂಡಾ ಆಕ್ಟೀವಾ		36000/-
7	ಕೆ.ಎ–03 ಜೆ.ಎಕ್ಸ್ 3771	ಹೊಂಡಾ ಆಕ್ಟೀವಾ		36000/-
8	ಕೆ.ಎ–03 ಜೆ.ಎಕ್ಸ್ 3770	ಹೊಂಡಾ ಆಕ್ಟೀವಾ		36000/-
9	ಕೆ.ಎ–51 ಬಿ 8031	ಟಾಟಾವಿಂಗರ್ ಆಂಬ್ಯುಲೆನ್ಸ್		31650/-
10	ಕೆ.ಎ–03 ಎಂ.ಎಕ್ಸ್ 0246	ಬೊಲೆರೊ ಜೀಪ್	ಸಿ.ಬಿ.ಐ. ರವರ ವರದಿ ನಂ.ಆರ್.ಸಿ 14(ಎ)/2019–ಸಿ.ಬಿ.ಐ–ಎ.ಸಿ.ಬಿ–ಬಿ.ಎಲ್.ಆರ್. ದಿನಾಂಕ: 04–08–2021.	275000/-
11	ಕೆ.ಎ–05 ಎಂ.ಪಿ 2707	ಮಾರುತಿ ಎರ್ಟಿಗಾ		225000/-
12	ಕೆ.ಎ–05 ಎಂ.ಡಬ್ಲ್ಯು.2807	i10 ಗ್ರಾಂಡ್		230000/-
13	ಕೆ.ಎ–05 ಎಂ.ಪಿ 8021	ಮಾರುತಿ ರಿಟ್ಸ್		75000/-
			ಒಟ್ಟು	10,65,650/-

ಸಂಖ್ಯೆ: ಕಂಇ 59 ಜಿಆರ್‌ಸಿ 2021

ಸಹಿ/–
(ಡಾ. ಎಂ.ಎನ್. ರಾಜೇಂದ್ರ ಪ್ರಸಾದ್)
ಸರ್ಕಾರದ ಉಪ ಕಾರ್ಯದರ್ಶಿ (ಪ್ರ)
ಕಂದಾಯ ಇಲಾಖೆ
(ಭೂಮಾಪನ, ಸೇವೆಗಳು–1 ಮತ್ತು ವಿಶೇಷ ಕೋಶ)

ವಾಸಾಸಂಇ/ಬೆಂ.ನ/ಅಡ್ವಟೋರ್/2333/2021–22

ಒಂದೇ ದಿನ ಎರಡು ಪರೀಕ್ಷೆ!

ಪ್ರಜಾವಾಣಿ ವಾರ್ತೆ

ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪೌಷ್ಠಿಕಾಂಶ ಮತ್ತು ಆರೋಗ್ಯ ಶಿಕ್ಷಣದ ಸ್ನಾತಕೋತ್ತರ ಡಿಪ್ಲೊಮಾ ಪರೀಕ್ಷೆ ಹಾಗೂ ಕರ್ನಾಟಕ ಲೋಕಸೇವಾ ಆಯೋಗದ ಗ್ರೂಪ್ ಸಿ ಹುದ್ದೆಯ ಪರೀಕ್ಷೆಗಳು ಡಿ. 19ರಂದು ನಿಗದಿಯಾಗಿದ್ದು, ಎರಡೂ ಪರೀಕ್ಷೆಗಳನ್ನು ಒಂದೇ ದಿನ ಬರೆಯುವುದಾದರೂ ಹೇಗೆ ಎಂದು ಅಭ್ಯರ್ಥಿಗಳು ಪ್ರಶ್ನಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ವಿವಿ ಕುಲಸಚಿವ ರಾಜಣ್ಣ, 'ವಿದ್ಯಾರ್ಥಿಗಳ ಭವಿಷ್ಯ ನಮಗೆ ಮುಖ್ಯ. ಎರಡೂ ಪರೀಕ್ಷೆ ಬರೆಯುವವರು ಪರೀಕ್ಷೆಯ ಪ್ರವೇಶಪತ್ರದ ಪ್ರತಿಯೊಂದಿಗೆ ಮನವಿ ಪತ್ರ ನೀಡಿದ್ದಲ್ಲಿ ಪರೀಕ್ಷೆಯನ್ನು ಮುಂದೂಡಲಾಗುವುದು' ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆಆರ್‌ಎಸ್*	124.80	124.80	5,059	4,832
ಹಾರಂಗಿ	2,859	2,854.27	77	600
ಕಬಿನಿ	2284.00	2,283.55	800	700
ಹೇಮಾವತಿ	2,922	2,912.90	1,372	2,540
ಲಿಂಗನಮಕ್ಕಿ	1,819	1,810.65	1,549	00
ಸೂಪಾ (ಮೀ)	564	553.93	00	4,497
ಮಾಣಿ	594.36	586.22	00	00
ತುಂಗಭದ್ರಾ	1,633	1,632.99	5,017	4,831
ಮಲಪ್ರಭಾ	2079.50	2,077.10	00	769
ಘಟಪ್ರಭಾ	2,175	2,166.16	172	172
ಭದ್ರಾ	186	186	1,057	1,057
ಆಲಮಟ್ಟಿ (ಮೀ)	519.60	519.38	4,417	6,373
ನಾರಾಯಣಪುರ (ಮೀ)	492.25	4,91.47	5,124	7969

*ನೆಲಮಟ್ಟದಿಂದ

ಆರಿದ ತೇಜಸ್ವಿಯ 'ಶಕ್ತಿ' ದೀಪ

• ನರೇಂದ್ರ ರೈ ದೇರ್ಲ

ರಾಜೇಶ್ವರಿ ತೇಜಸ್ವಿ ನಿಧನ

ಬೆಂಗಳೂರು: ಸಾಹಿತಿ ದಿವಂಗತ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಪತ್ನಿ ರಾಜೇಶ್ವರಿ ತೇಜಸ್ವಿ (84) ಅವರು ಅಲ್ಪಕಾಲದ ಅನಾರೋಗ್ಯದಿಂದ ನಗರದ ರಾಜಲಕ್ಷ್ಮೀ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾದರು.

ಅವರಿಗೆ ಇಬ್ಬರು ಪುತ್ರಿಯರು ಇದ್ದಾರೆ. ನಗರದ ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಪುತ್ರಿ ಸುಸ್ಮಿತಾ ಅವರ ನಿವಾಸದಲ್ಲಿ ಅವರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಬಳಿಕ ರಾಜೇಶ್ವರಿ ಅವರ ಇಚ್ಛೆಯಂತೆ ಬೌರಿಂಗ್ ಆಸ್ಪತ್ರೆಗೆ ದೇಹದಾನ ಮಾಡಲಾಯಿತು. ರಾಜೇಶ್ವರಿಯವರು ಮೈಸೂರು ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರದಲ್ಲಿ ಆನರ್ಸ್ ಮತ್ತು ಎಂ.ಎ. ಓದಿದವರು. ತೇಜಸ್ವಿ ಅವರನ್ನು ಪ್ರೀತಿಸಿ ವಿವಾಹವಾಗಿದ್ದ ಅವರು, ತಮ್ಮ ಬರಹಗಳ ಮೂಲಕ ಗುರುತಿಸಿಕೊಂಡಿದ್ದರು. 'ನನ್ನ ತೇಜಸ್ವಿ', 'ನಮ್ಮ ಮನೆಗೂ ಗಾಂಧಿ ಬಂದರು' ಅವರ ಕೃತಿಗಳು. ತೇಜಸ್ವಿ ನಿಧನದ ಬಳಿಕವೂ ಅವರು ಮೂಡಿಗೆರೆಯ ಮನೆಯಲ್ಲೇ ನೆಲೆಸಿದ್ದರು. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನದ ಸದಸ್ಯರಾಗಿ, ತೇಜಸ್ವಿ ಬದುಕಿನ ದಾಖಲೆಗಳನ್ನು ಕಾಪಾಡಿಕೊಂಡು ಒಂದು ಮ್ಯೂಸಿಯಂ ಸ್ಥಾಪಿಸುವ ಸಿದ್ಧತೆಯಲ್ಲಿದ್ದರು.

'ಅಮ್ಮ ತುಂಬು ಜೀವನ ನಡೆಸಿ ಬದುಕಿಗೆ ವಿದಾಯ ಹೇಳಿದ್ದಾರೆ. ತುಂಬಾ ಮಾನವೀಯ ಕಾಳಜಿಯಿದ್ದ ನಿಜ ಸ್ಥೈರ್ಯ ಹೊಂದಿದ್ದ ಮಹಿಳೆ. ಹೆಚ್ಚು ಕಷ್ಟಪಡದೇ ಹೊರಟುಹೋದರು. ಅಂತಿಮ ಕಾರ್ಯವನ್ನೂ ಅವರ ಇಚ್ಛೆಯಂತೆ ನಡೆಸಿ ದೇಹದಾನ ಮಾಡುತ್ತಿದ್ದೇವೆ' ಎಂದು ಹಿರಿಯ ಪುತ್ರಿ ಸುಸ್ಮಿತಾ ತಿಳಿಸಿದರು. ಹಲವು ಗಣ್ಯರು ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

'ನಿಮ್ಮ ಕಾಫಿಪುಡಿ ಮುಗಿಸಲು ನಾನೊಂದು ಎಮ್ಮೆ ಸಾಕಬೇಕು'. ಶಿವರಾಮ ಕಾರಂತರ ಪತ್ರ ಓದಿ ರಾಜೇಶ್ವರಿಗೆ ನಗು ತಡೆಯಲಾಗಲಿಲ್ಲ.

ಹೌದು ಎರಡು ದಿನ 'ನಿರುತ್ತರ'ದಲ್ಲಿ ಉಳಿದಿದ್ದ ಶಿವರಾಮ ಕಾರಂತರಿಗೆ ರಾಜೇಶ್ವರಿಯವರು ಕಳುಹಿಸಿದ್ದ ಕಾಫಿಪುಡಿಯ ಪ್ರಮಾಣ ನೋಡಿದ ಕಾರಂತರು 'ನಿರುತ್ತರ'ಕ್ಕೆ ಬರೆದ ಉತ್ತರವದು.

'ತೇಜಸ್ವಿ, ಕಾರಂತರನ್ನು ನೇರವಾಗಿ ಭೇಟಿಯಾದವರಲ್ಲ. 'ನಾನು ಪರಿಸರದ ಬಗ್ಗೆ ಬರೆಯುವೆ. ನೀವೂ ಬರೆಯುತ್ತೀರಿ. ನಾನು ಗಮನಿಸಿ ಬರೆಯುವೆ. ನೀವು ಅನುಭವಿಸಿ ಬರೆಯುವಿರಿ. ನನ್ನ ಅನುಭವಕ್ಕಿಂತ ನಿಮ್ಮದೇ ಹಿರಿದು. ನಿಮ್ಮ ಮನೆಗೆ ಬರುವವನಿದ್ದೇನೆ' ಹೀಗೆಂದು ತನಗಿಂತ ಹಿರಿಯ ಲೇಖಕ ಶಿವರಾಮ ಕಾರಂತರು ಪೂರ್ಣಚಂದ್ರ ತೇಜಸ್ವಿಯವರಿಗೆ ಪತ್ರ ಬರೆದಾಗ ಗಂಡನಿಗಿಂತ ಹೆಚ್ಚು ಹಿರಿಹಿರಿ ಹಿಗ್ಗಿದವರು, ಸಂಭ್ರಮಿಸಿದವರು ರಾಜೇಶ್ವರಿ.

ತೇಜಸ್ವಿಯವರ ಕೃತಿಗಳಲ್ಲಿ ಮೂಡಿಗೆರೆಯ ಮಹಾಜನರು, ಸ್ವಂತ ತೋಟದ ಕೂಲಿಯಾಳುಗಳು ಬಂದು ಹೋದಷ್ಟು ಸಲೀಸಾಗಿ 'ರಾಜೇಶ್' (ರಾಜೇಶ್ವರಿ ಅವರನ್ನು ತೇಜಸ್ವಿ ಕರೆಯುತ್ತಿದ್ದ ಹೆಸರು) ತೇಜಸ್ವಿ ಅವರ ಕೃತಿಗಳಲ್ಲಿ ಕಾಣಿಸಿಕೊಂಡಿಲ್ಲ. ತೇಜಸ್ವಿ ಕೃತಿಯ ಮೊದಲ ಓದುಗಳಾಗುವುದೇ ಪರಮಸುಖ ಎಂದು ಭಾವಿಸಿದವರು ರಾಜೇಶ್ವರಿ.

'ಕುವೆಂಪು ಮಗನಂತೆ, ಸುರಸುಂದರನಂತೆ, ಬಹಳ ಬುದ್ಧಿವಂತ' ಎಂದು ಕೇಳಿಸಿಕೊಂಡಿದ್ದ ತತ್ವಶಾಸ್ತ್ರ ಎಂ.ಎ. ಮಾಡುವ ರಾಜೇಶ್ವರಿ ಅದೇ ಕ್ಯಾಂಪಸ್ಸಿನಲ್ಲಿದ್ದ ಕನ್ನಡ ಎಂ.ಎ. ತರಗತಿಗೆ ಆಗಾಗ ಬಂದು ಇಣುಕುತ್ತಿದ್ದರಂತೆ. ಈ ಪ್ರೇಮಕಥೆ ಕನ್ನಡಿಗರಿಗೆ ಗೊತ್ತಾಗಿದ್ದು ರಾಜೇಶ್ವರಿ ಅವರ 'ನನ್ನ ತೇಜಸ್ವಿ'ಯಲ್ಲೇ.

ತೇಜಸ್ವಿ, ಕುವೆಂಪು ಜತೆಗಿನ ಕರ್ನಾಟಕದ ನೂರಾರು ಬರಹಗಾರ, ಸಾಧಕರ ಪತ್ರಗಳನ್ನು ನನ್ನೆದುರಿಟ್ಟ ರಾಜೇಶ್ವರಿಯವರು, 'ಈ ಕಟ್ಟಿನಲ್ಲಿ ಎರಡು ಸಾವಿರಕ್ಕೂ ಹೆಚ್ಚು ಪತ್ರಗಳಿವೆ. ಸಂಪಾದಿಸಿ ಪುಸ್ತಕ ಮಾಡಿಕೊಡುವ ಜವಾಬ್ದಾರಿ ನಿಮ್ಮದು' ಎಂದು ಹೇಳಿದಾಗ, ಆ ಕ್ಷಣ ರಾಜೇಶ್ವರಿ ಕುಟುಂಬ ನನ್ನೊಂದಿಗೆ ಇರಿಸಿದ ಪ್ರೀತಿ, ನಂಬಿಕೆಗೆ ನ್ಯಾಯ ಒದಗಿಸಲು ಸಾಧ್ಯವೇ ಇಲ್ಲ ಎಂದು ಅನ್ನಿಸಿದ್ದೂ ಹೌದು.

'ತೇಜಸ್ವಿ ಪತ್ರಗಳು' ಪುಸ್ತಕ ಬಿಡುಗಡೆಗೆ ಬಂದವರು ದೇಲಕ್ಕೆ ಬಂದು ಮನೆಯಂಗಳದಲ್ಲಿ ನಿಂತು ಹೇಳಿದ ಮೊದಲ ಮಾತೇ 'ತೇಜಸ್ವಿ ಇಲ್ಲಿಗೊಮ್ಮೆ ಬರಬೇಕಿತ್ತು' ಎಂದು. 'ಅವರಿಲ್ಲ, ಅಮ್ಮ ನೀವು ಬಂದಿರಲ್ಲ. ಅದೇ ನನ್ನ ಭಾಗ್ಯ' ಎಂದಿದ್ದೆ.

ತೇಜಸ್ವಿಯವರು ಚಿಕ್ಕಮಗಳೂರಿನ ಮೂಡಿಗೆರೆಯನ್ನೇ ಆಯ್ಕೆ ಮಾಡಿಕೊಳ್ಳಲು ಕಾರಣ ರಾಜೇಶ್ವರಿಯವರೇ. ರಾಜೇಶ್ವರಿ ಅವರ ತೌರು ಮೂಡಿಗೆರೆ. ರಾಜೇಶ್ವರಿ ಲೌಕಿಕವಾಗಿ ತೇಜಸ್ವಿ, ಕುಟುಂಬ, ಕೃಷಿ ವಿಚಾರದಲ್ಲಿ ಗರಿಷ್ಠ ನಿಗಾ ಇಡುತ್ತಿದ್ದರು. ಗಂಡ–ಹೆಂಡತಿ ಹಳ್ಳಿಗೆ ಸರಿದು ಕೃಷಿ ಉತ್ಪನ್ನಗಳನ್ನು ಸಂತೆಗೆ ಒಯ್ದು ಮಾರಿದ ಕಡು ಕಷ್ಟದ ದಿನಗಳೂ ಅವರಿಗೆ ನೆನಪಿವೆ.

ತೇಜಸ್ವಿ ಇಲ್ಲವಾದ ಮೇಲೆ 'ನಿರುತ್ತರ' ತೋಟ ಸೊಂಪಾಗಿ ನಳನಳಿಸಿದ್ದಿದೆ. ಕಾಳುಮೆಣಸನ್ನು ಬೇಗ ಒಣಗಿಸುವ, ಮೆಣಸನ್ನು ಕಡುಕಪ್ಪು ಮಾಡುವ ತಂತ್ರವನ್ನು ನನಗೂ ಅವರು ಕಲಿಸಿದ್ದರು. 'ನಿರುತ್ತರ'ದ ಹಸಿರು ಮತ್ತು ತೇಜಸ್ವಿ ಅವರ ನೆನಪಿಗಾಗಿ ಮಕ್ಕಳಿಬ್ಬರೂ ಅವರನ್ನು ರಾಜಧಾನಿಗೆ ಕರೆದರೂ ಹೋಗಲಿಲ್ಲ.

ರಾಜೇಶ್ವರಿ ತೇಜಸ್ವಿ ಅವರು ಬರವಣಿಗೆಯಲ್ಲಿ ತೊಡಗಿದ್ದು ತೇಜಸ್ವಿ ಇಲ್ಲವಾದ ಮೇಲೆಯೇ. 'ನಮ್ಮ ಮನೆಗೆ ಗಾಂಧಿ ಬಂದರು' ಎಂಬ ಕೃತಿಗಿಂತ ಅವರು ಬರೆದ 'ನನ್ನ ತೇಜಸ್ವಿ' ಶ್ರೇಷ್ಠ ಕೃತಿ. ಪತಿಯ ಅಕಾಲಿಕ ಸಾವು ಮತ್ತು ತನ್ನನ್ನು ಆವರಿಸಿದ ಕಾಡು, ಅಲ್ಲಿಯ ಏಕಾಂತ ತೇಜಸ್ವಿ ಅವರೊಂದಿಗಿನ ಒಟ್ಟು ಸಂಬಂಧ ಅವರಿಂದ ಇಂಥ ಕೃತಿಯನ್ನು ಬರೆಸಿದೆ. ಅದು ರಾಜೇಶ್ವರಿ ಮತ್ತು ತೇಜಸ್ವಿ ಇಬ್ಬರ ಆತ್ಮಕತೆಯೂ ಹೌದು. ತೇಜಸ್ವಿ ಬದುಕಿಗೆ ಗಟ್ಟಿ ಪಾಯವಾಗಿದ್ದ ರಾಜೇಶ್ವರಿ ಸಾವಿನಲ್ಲೂ ಮಾದರಿಯಾದವರು.

(ಲೇಖಕ ತೇಜಸ್ವಿಯವರ ಒಡನಾಡಿ, ಲೇಖಕ, ಕೃಷಿಕ)



ರಾಜೇಶ್ವರಿ ಅವರ ಜತೆ ಪತಿ ಪೂರ್ಣಚಂದ್ರ ತೇಜಸ್ವಿ

ಕ್ರೈಸ್ತರ ಮೇಲೆ ದಾಳಿ 11 ತಿಂಗಳಲ್ಲಿ 39 ಪ್ರಕರಣ

ಪ್ರಜಾವಾಣಿ ವಾರ್ತೆ

ಕ್ರೈಸ್ತರ ಮೇಲಿನ ಹಿಂಸೆಗಳಲ್ಲಿ ಭಾಗಿಯಾಗುವ ಪೊಲೀಸರು ಅಸಹಿಷ್ಣುತೆ, ಧರ್ಮಾಂಧ ಸಂಸ್ಕೃತಿಯನ್ನು ಉತ್ತೇಜಿಸುತ್ತಿದ್ದಾರೆ.
ಪಿಯುಸಿಎಲ್ ಬೆಂಗಳೂರು ನಗರ ಘಟಕದ ಅಧ್ಯಕ್ಷ

ಬೆಂಗಳೂರು: ಈ ವರ್ಷದ ಜನವರಿಯಿಂದ ನವೆಂಬರ್‌ವರೆಗೆ ಚರ್ಚ್‌ಗಳು, ಪಾದ್ರಿಗಳು ಹಾಗೂ ಕ್ರೈಸ್ತ ಸಮುದಾಯದವರ ಮೇಲಿನ ದಾಳಿ ಹಾಗೂ ಹಿಂಸಾಚಾರಕ್ಕೆ ಸಂಬಂಧಿಸಿದ 39 ಪ್ರಕರಣಗಳು ರಾಜ್ಯದಲ್ಲಿ ನಡೆದಿವೆ ಎಂದು ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ (ಪಿಯುಸಿಎಲ್) ಸಂಘಟನೆ ಹೇಳಿದೆ.

ರಾಜ್ಯದಲ್ಲಿ ಕ್ರೈಸ್ತರ ಮೇಲಿನ ಹಿಂಸಾಚಾರದ ಅಧ್ಯಯನ ನಡೆಸಿರುವ ಪಿಯುಸಿಎಲ್ 'ಧರ್ಮಾಂತರಣೆಯ ಅಪರಾಧೀಕರಣ' ವರದಿಯನ್ನು ಇಲ್ಲಿ ಮಂಗಳವಾರ ಬಿಡುಗಡೆ ಮಾಡಿತು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಿಯುಸಿಎಲ್ ರಾಜ್ಯ ಘಟಕದ ಅಧ್ಯಕ್ಷ ವೈ.ಜೆ.ರಾಜೇಂದ್ರ, 'ಹುಬ್ಬಳ್ಳಿ, ಯಾದಗಿರಿ, ಬೆಂಗಳೂರು, ಕಾರವಾರ, ತಿಪಟೂರು, ರಾಮನಗರ, ಬೆಳಗಾವಿ, ಮಂಡ್ಯ ಸೇರಿದಂತೆ ರಾಜ್ಯದ ವಿವಿಧೆಡೆ ನಡೆದಿರುವ ಕ್ರೈಸ್ತರ ಮೇಲಿನ 39 ಹಿಂಸಾಚಾರಗಳಲ್ಲಿ ಹಿಂದುತ್ವವಾದಿ ಸಂಘಟನೆಗಳ ಪಾತ್ರವಿದೆ. ಪ್ರಾರ್ಥನಾ ಸಭೆಗಳನ್ನು ತಡೆಯಲು ಬಿಜೆಪಿ, ಆರ್‌ಎಸ್‌ಎಸ್, ಬಜರಂಗದಳ, ಹಿಂದೂ ಜಾಗರಣ ವೇದಿಕೆ ಸೇರಿ, ಕೋಮುವಾದಿ ಶಕ್ತಿಗಳು ಸ್ಥಳೀಯ ನಾಯಕರ ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸುತ್ತಿವೆ' ಎಂದರು.

'ವರ್ಷದ ಮೊದಲ ಒಂಬತ್ತು ತಿಂಗಳಲ್ಲಿ ಕ್ರೈಸ್ತರ ಮೇಲಿನ ದಾಳಿಗೆ ಸಂಬಂಧಿಸಿದ 300ಕ್ಕೂ ಹೆಚ್ಚು ಪ್ರಕರಣಗಳನ್ನು ಎಐಸಿಸಿ, ಯುಸಿಎಫ್ ಹಾಗೂ ಯುನೈಟೆಡ್ ಅಗೇನ್ಸ್ಟ್ ಹೇಟ್ ಸಂಸ್ಥೆಗಳು ವರದಿ ಮಾಡಿದ್ದವು. ವರದಿಯಾಗದ ಪ್ರಕರಣಗಳೂ ಬಹಳಷ್ಟಿವೆ' ಎಂದು ತಿಳಿಸಿದರು.

ವಕೀಲರಾದ ಮಾನವಿ ಅತ್ರಿ, 'ಕ್ರೈಸ್ತ ಧರ್ಮ ಪ್ರಚಾರ ವಿರೋಧಿಸಿ ಈ ದಾಳಿಗಳು ನಡೆದಿವೆ. ಬಲವಂತದ ಧರ್ಮದ ಆಚರಣೆಯ ಹಕ್ಕಿನ ಮೇಲೆ ನಡೆದ ದಾಳಿಗಳಿವು. ಈ ದುಷ್ಕೃತ್ಯಗಳಲ್ಲಿ ಪೊಲೀಸರ ಪಾತ್ರವೂ ಮಿತಿಮೀರಿದೆ. ಸಂತ್ರಸ್ತರ ವಿರುದ್ಧವೇ ಪೊಲೀಸರು ಮೊಕದ್ದಮೆ ದಾಖಲಿಸಿರುವುದು ಕಂಡು ಬಂದಿದೆ. ದಾಳಿ ನಡೆಸಿದವರನ್ನು ಬಂಧಿಸುವ ಬದಲು ಪೊಲೀಸರು ಪಾದ್ರಿಗಳನ್ನು ಹಾಗೂ ಕ್ರೈಸ್ತ ಧರ್ಮದ ಅನುಯಾಯಿಗಳನ್ನೇ ಬಂಧಿಸುತ್ತಿದ್ದಾರೆ. ಪ್ರಾರ್ಥನೆ ಸ್ಥಗಿತಗೊಳಿಸುವಂತೆಯೂ ಸೂಚನೆ ನೀಡಿದ್ದಾರೆ. ಬಿಜೆಪಿ ಶಾಸಕರೊಬ್ಬರು ಹಾಗೂ ಸಚಿವರೊಬ್ಬರು ಕ್ರೈಸ್ತರ ಮೇಲೆ ದಬ್ಬಾಳಿಕೆ ಮಾಡಿದ ಪೊಲೀಸರಿಗೆ ಬೆಂಬಲ ಸೂಚಿಸಿದ್ದಾರೆ' ಎಂದರು.

'ನೆರೆ ಹೊರೆಯವರು, ಪೊಲೀಸ್ ಅಧಿಕಾರಿಗಳು, ಹಿಂದುತ್ವವಾದಿ ನಾಯಕರು ನಡೆಸಿರುವ ದ್ವೇಷಾಪರಾಧಗಳಿಂದ ಕ್ರೈಸ್ತರ ಜೀವನೋಪಾಯ, ಆಹಾರ ಭದ್ರತೆ ಹಾಗೂ ಸಾಮಾಜಿಕ ಯೋಗಕ್ಷೇಮದ ಮೇಲೆ ತೀವ್ರ ಪರಿಣಾಮ ಉಂಟಾಗಿದೆ. ಈ ಮಾನವ ಹಕ್ಕುಗಳ ಉಲ್ಲಂಘನೆ ವಿರುದ್ಧ ಮಾನವ ಹಕ್ಕುಗಳ ಆಯೋಗ ಹಾಗೂ ಅಲ್ಪಸಂಖ್ಯಾತರ ಆಯೋಗ ಕ್ರಮ ಕೈಗೊಳ್ಳಬೇಕು. 'ಬಲವಂತದ ಮತಾಂತರ' ಎಂಬ ವೈಭವೀಕೃತ ಸುದ್ದಿ ಬಿತ್ತರಿಸುವುದನ್ನು ಮೊದಲು ನಿಲ್ಲಿಸಬೇಕು ಎಂದು ಪಿಯುಸಿಎಲ್ ಒತ್ತಾಯಿಸಿದೆ.

'ಮತಾಂತರ ನಿಷೇಧ ಮಸೂದೆ ಬೇಡ'

'ರಾಜ್ಯದಲ್ಲಿ ಈಗಲೇ ಕ್ರೈಸ್ತರ ಮೇಲೆ ವಾರಕ್ಕೊಂದರಂತೆ ದಾಳಿಗಳು ನಡೆಯುತ್ತಿವೆ. ಮತಾಂತರ ನಿಷೇಧ ಕಾಯ್ದೆ ಜಾರಿಯಾದರೆ, ಕ್ರೈಸ್ತರಿಗೆ ಮತ್ತಷ್ಟು ತೊಂದರೆ ನೀಡಲು ಆಕ್ರಮಣಕಾರರಿಗೆ ಪೂರ್ಣಾಧಿಕಾರ ನೀಡಲಿದೆ. ಅಧಿವೇಶನದಲ್ಲಿ ಮತಾಂತರ ನಿಷೇಧ ಮಸೂದೆಯನ್ನು ಯಾವ ಕಾರಣಕ್ಕೂ ಸರ್ಕಾರ ಮಂಡಿಸಬಾರದು' ಎಂದು ವೈ.ಜೆ.ರಾಜೇಂದ್ರ ಆಗ್ರಹಿಸಿದರು.

ಕೈ–ಕಮಲ ಸಮಬಲ

ಒಂದನೇ ಪುಟದಿಂದ

ವಿಜಯಪುರದಲ್ಲಿ ಪಕ್ಷೇತರ ಅಭ್ಯರ್ಥಿ ಮಲ್ಲಿಕಾರ್ಜುನ ಲೋಣಿ, ಮತ ಎಣಿಕೆಯ ಕೊನೆ ಕ್ಷಣದವರೆಗೂ ಬಿಜೆಪಿಯ ಪಿ.ಎಚ್. ಪೂಜಾರ್‌ಗೆ ಸೋಲಿನ ಸವಾಲನ್ನು ಒಡ್ಡುತ್ತಲೇ ಬಂದರು. ಮೈಸೂರಿನಲ್ಲಿ ಬಿಜೆಪಿ ಅಭ್ಯರ್ಥಿ ರಘು ಕೌಟಿಲ್ಯ ಗೆದ್ದೇ ಬಿಟ್ಟೆನೆಂದು ಬೀಗಿದ್ದರು. ಎರಡನೇ ಪ್ರಾಶಸ್ತ್ಯದ ಮತ ಎಣಿಕೆ ವೇಳೆ ಜೆಡಿಎಸ್‌ನ ಮಂಜೇಗೌಡ ಮುಂಚೂಣಿಗೆ ಬಂದು 'ಕೌಟಿಲ್ಯ'ನ ಲೆಕ್ಕಾಚಾರವನ್ನೇ ತಲೆಕೆಳಗು ಮಾಡಿದರು. ಎರಡನೇ ಪ್ರಾಶಸ್ತ್ಯದಲ್ಲಿ ಪಡೆದ ಮತದ ಮೌಲ್ಯ ಎಷ್ಟೆಂದು ನಿಗದಿ ಮಾಡಿದ ಬಳಿಕ ಯಾವ ಅಭ್ಯರ್ಥಿಯನ್ನು ಕೈಬಿಡಬೇಕು ಎಂಬ ನಿರ್ಣಯದ ಸುತ್ತಿನಲ್ಲಿ (ಎಲಿಮಿನೇಷನ್), ಮಂಜೇಗೌಡರು ಗೆದ್ದು ಜೆಡಿಎಸ್‌ಗೆ 'ಉಸಿರು' ತಂದುಕೊಟ್ಟರು.

₹30 ಸಾವಿರದಿಂದ ₹3 ಲಕ್ಷದವರೆಗೆ ಒಂದು ಮತ ಬಿಕರಿಯಾಗಿದ್ದು, ಹಣದ ಹೊಳೆಯೇ ಚುನಾವಣೆಯಲ್ಲಿ ಹರಿಯಿತು. ಇದು ಪ್ರಜಾತಾಂತ್ರಿಕವಾಗಿ ನಡೆದ ಚುನಾವಣೆಯಲ್ಲ; ಮತ ಮಾರಾಟದ ಮತದಾನ ಎಂದು ಮೂರು ಪಕ್ಷಗಳ ನೇತಾರರೇ ವಿಶ್ಲೇಷಣೆ ಮಾಡುವಷ್ಟು, ಅಭ್ಯರ್ಥಿಗಳ ಸಂಪತ್ತು ಕರಗಿತು. ಹಾಗಿದ್ದರೂ ₹1746 ಕೋಟಿ ಆಸ್ತಿ ಘೋಷಿಸಿ, ಅತಿ ಶ್ರೀಮಂತ ಅಭ್ಯರ್ಥಿ ಎಂದೇ ಬಿಂಬಿತರಾಗಿದ್ದ ಬೆಂಗಳೂರು ನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಯೂಸುಫ್ ಷರೀಫ್ (ಕೆಜಿಎಫ್ ಬಾಬು) ಈ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಾಗಲೇ ಇಲ್ಲ.

ಬಿಜೆಪಿಗೆ ಸಂಭ್ರಮ ತರದ ಸಾಧನೆ: ಆರು ಕ್ಷೇತ್ರಗಳಲ್ಲಿ ಪ್ರತಿನಿಧಿಸುತ್ತಿದ್ದ ಬಿಜೆಪಿ ಈ ಚುನಾವಣೆಯಲ್ಲಿ ತನ್ನ ಬಲ 11ಕ್ಕೆ ಏರಿಸಿಕೊಂಡಿದೆ. ತಮ್ಮ ತವರು ಜಿಲ್ಲೆಗೆ ಸೇರಿದ ತಾವು ಪ್ರತಿನಿಧಿಸುವ ಕ್ಷೇತ್ರದ ನೆರೆಯ ಕ್ಷೇತ್ರ ಹಾನಗಲ್‌ನಲ್ಲಿ ನಡೆದ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳಲಾಗದೇ ಮುಗ್ಗರಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಈ ಚುನಾವಣೆ ತುಸು ಸಮಾಧಾನ ತಂದಿದೆ. ಸ್ಥಳೀಯ ಸಂಸ್ಥೆಗಳಲ್ಲಿ ತಮ್ಮದೇ ಪ್ರಭಾವ ಹೊಂದಿರುವ ಹಳೆ ಮೈಸೂರು ಭಾಗ ಬಿಟ್ಟರೆ ಉಳಿದ ಕಡೆ ಹೆಚ್ಚಿನ ಶಾಸಕರು, ಸಂಸದರನ್ನು ಹೊಂದಿರುವ ಬಿಜೆಪಿಗೆ ಈ ಗೆಲುವು ಸಂಭ್ರಮ ಪಡುವಂತಹದ್ದೇನಲ್ಲ.

> **ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲುವು ಪಕ್ಷದ ಅಭಿವೃದ್ಧಿ ಕಾರ್ಯಸೂಚಿಗೆ ದೊರೆತ ಜನಾದೇಶದ ಅನುಮೋದನೆ**
> **ಬಿ.ಎಸ್.ಯಡಿಯೂರಪ್ಪ,** ಬಿಜೆಪಿ ಶಾಸಕ

ಏಕೆಂದರೆ, ಸಂಘಟನಾ ಬಲವುಳ್ಳ ಆಡಳಿತಾರೂಢ ಬಿಜೆಪಿಗೆ ಜೆಡಿಎಸ್ ಕೋಟೆಯೊಳಗೆ ನುಗ್ಗಿ ಗೆಲ್ಲುವ ಅಥವಾ ಕಾಂಗ್ರೆಸ್ ಅನ್ನು ಹೆಡೆಮುರಿ ಕಟ್ಟಲು ಸಾಧ್ಯವಾಗಿಲ್ಲ. ತನ್ನ ಭದ್ರಕೋಟೆ ಎಂದೇ ಆ ಪಕ್ಷದ ನಾಯಕರು ಹೇಳಿಕೊಳ್ಳುವ ಕಡೆಗಳಲ್ಲಿ ಸಲೀಸಿನ ಜಯ ಸಿಕ್ಕಿಲ್ಲ. ದ್ವಿಸದಸ್ಯ ಕ್ಷೇತ್ರದ ಪೈಕಿ ದಕ್ಷಿಣ ಕನ್ನಡದಲ್ಲಿ ಮಾತ್ರ ಮೊದಲ ಪ್ರಾಶಸ್ತ್ಯದ ಮತದಿಂದ ಅದು ಗೆದ್ದಿದ್ದರೆ, ಬೆಳಗಾವಿಯಲ್ಲಿ ಸೋತಿದೆ. ಧಾರವಾಡದಲ್ಲಿ ಎರಡನೇ ಸ್ಥಾನ ಸಿಕ್ಕಿದರೆ, ಮೈಸೂರಿನಲ್ಲಿ ಸೋಲನುಭವಿಸಿದೆ. ವಿಜಯಪುರದಲ್ಲಿ ಕಷ್ಟಪಟ್ಟು ಗೆಲುವು ಪಡೆದಿದೆ. ಏಕ ಸದಸ್ಯ ಕ್ಷೇತ್ರಗಳ ಪೈಕಿ ಚಿಕ್ಕಮಗಳೂರು, ಕೊಡಗಿನಲ್ಲಿ ಪ್ರಯಾಸದಲ್ಲೇ ಗೆದ್ದಿದೆ. ಹಾಗಿದ್ದರೂ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಸೋಲುಣಿಸಿ ಕೆಲವು ಕ್ಷೇತ್ರಗಳನ್ನು ತಮ್ಮದಾಗಿಸಿಕೊಂಡಿದೆ. ಭಾರಿ ಪ್ರಯತ್ನ ಪಟ್ಟಿದ್ದ ಕೋಲಾರ, ತುಮಕೂರಿನಲ್ಲಿ ತೀವ್ರ ಹಿನ್ನಡೆ ಕಂಡಿದೆ.

ಪಕ್ಷದ ಒಳಗಿನ ಅತೃಪ್ತಿ ಹೇಗೆ ಸೋಲಾಗಿ ಪರಿಣಮಿಸಿತು ಎಂಬುದನ್ನು ಬಿಜೆಪಿ ನಾಯಕರಿಗೆ ಈ ಚುನಾವಣೆ ತೋರಿಸಿದೆ. ಏಕೆಂದರೆ, ಬೆಳಗಾವಿಯಲ್ಲಿ ಬಂಡಾಯ ಅಭ್ಯರ್ಥಿಯಾಗಿ ಲಖನ್ ಅವರನ್ನು ಕಣಕ್ಕೆ ಇಳಿಸಿದ್ದರಿಂದಾಗಿ ಪರಿಷತ್ತಿನ ಮುಖ್ಯಸಚೇತಕರೂ ಆಗಿರುವ ಅಧಿಕೃತ ಅಭ್ಯರ್ಥಿ ಮಹಂತೇಶ ಕವಟಗಿಮಠ ಸೋತು ಮನೆ ಸೇರಬೇಕಾದ ಸ್ಥಿತಿ ಬಂದಿತು.

ಕಾಂಗ್ರೆಸ್‌ಗೆ ತೃಪ್ತಿ: ಪ್ರತಿನಿಧಿಸುತ್ತಿದ್ದ 14 ಕ್ಷೇತ್ರಗಳಲ್ಲಿ ಮೂರು ಸ್ಥಾನಗಳನ್ನು ಕಳೆದುಕೊಂಡಿದ್ದರೂ ಜೆಡಿಎಸ್‌ನ ಕಾರ್ಯಸ್ಥಾನ ಹೊಕ್ಕು ಗೆಲುವು ಸಾಧಿಸಿರುವುದು ಕಾಂಗ್ರೆಸ್ ನಾಯಕರಿಗೆ ಸಮಾಧಾನ ತರುವ ಅಂಶ. ಆದರೆ, ಕೆ.ಸಿ. ಕೊಂಡಯ್ಯ ಅವರನ್ನು ಗೆಲ್ಲಿಸಿಕೊಳ್ಳಲು ಆ ಪಕ್ಷಕ್ಕೆ ಸಾಧ್ಯವಾಗಲಿಲ್ಲ.

ಒಕ್ಕಲಿಗರ ಪ್ರಾಬಲ್ಯವಿರುವ, ಜೆಡಿಎಸ್ ಶಾಸಕರೇ ಹೆಚ್ಚಿರುವ ಮಂಡ್ಯ, ಬೆಂಗಳೂರು ಗ್ರಾಮಾಂತರಗಳಲ್ಲಿ ಕಾಂಗ್ರೆಸ್ ಗೆದ್ದಿದೆ. ಇನ್ನು ತುಮಕೂರು, ಕೋಲಾರ–ಚಿಕ್ಕಬಳ್ಳಾಪುರ ಕ್ಷೇತ್ರಗಳು ಜೆಡಿಎಸ್ ತೆಕ್ಕೆಯಲ್ಲೇ ಇದ್ದವು. ಅಲ್ಲಿ ಗೆಲ್ಲುವ ರಣತಂತ್ರವನ್ನು ಬಿಜೆಪಿ ಪ್ರತಿನಿಧಿಸುವ ಆಯಾ ಜಿಲ್ಲೆಗಳ ಉಸ್ತುವಾರಿ ಸಚಿವರು ಹೆಣೆದಿದ್ದರು. ಈ ಕ್ಷೇತ್ರಗಳನ್ನು ಈಗ ಪ್ರತಿನಿಧಿಸುತ್ತಿರುವ ಜೆಡಿಎಸ್ ಸದಸ್ಯರು, ಕಾಂಗ್ರೆಸ್ ಸೇರಿದ್ದು 'ಕೈ' ಪಾಳಯಕ್ಕೆ ವರದಾನವಾಯಿತು.

ಮಂಡ್ಯದಲ್ಲಿ ಜೆಡಿಎಸ್ ಸೋಲಿಸಲೇಬೇಕು ಎಂದು ಕಾಂಗ್ರೆಸ್ ನಾಯಕ ಚೆಲುವರಾಯಸ್ವಾಮಿ ನಡೆಸಿದ ತಂತ್ರ ಯಶಸ್ವಿಯಾಯಿತು. 'ಇಲ್ಲಿನ ಸೋಲಿಗೆ ಕಾಂಗ್ರೆಸ್–ಬಿಜೆಪಿ ನಾಯಕರ ಒಳಒಪ್ಪಂದವೇ ಕಾರಣ' ಎಂದು ಕುಮಾರಸ್ವಾಮಿ ದೂರಿರುವುದರಲ್ಲಿ ಸುಳ್ಳು ಇದ್ದಂತಿಲ್ಲ.

ಜೆಡಿಎಸ್‌ಗೆ ಪಾಠ: ಚುನಾವಣೆ ಆರಂಭದಿಂದಲೂ ಗೊಂದಲದಲ್ಲೇ ಕಾರ್ಯಕರ್ತರನ್ನು ಇಟ್ಟು ತಮ್ಮದೇ 'ರಾಜಕಾರಣ'ವನ್ನು ನಡೆಸಲು ಹೊರಟ ಎಚ್.ಡಿ. ಕುಮಾರಸ್ವಾಮಿಯವರ ಧೋರಣೆ ಅವರಿಗೇ ಮುಳುವಾಗಿದೆ. ಮತದಾನದ ದಿನಾಂಕ ಹತ್ತಿರವಾದಂತೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾದ ಎಚ್.ಡಿ. ದೇವೇಗೌಡರು, ಸಂದೇಶವೊಂದನ್ನು ಕೊಡಲು ನೋಡಿದರು. ಅದು ಫಲಕೊಡುವ ಬದಲು, ಮರ್ಮದೇಟು ನೀಡಿತು. ಬಿಜೆಪಿ ಜತೆಗೆ ಒಪ್ಪಂದ ಕುರಿತು ಕೊನೆಕ್ಷಣದವರೆಗೂ ದ್ವಂದ್ವ ಹೇಳಿಕೆ ನೀಡುತ್ತಾ ಬಂದ ಕುಮಾರಸ್ವಾಮಿಯವರ ನಡೆಯೂ ಪರಿಣಾಮ ಬೀರಿತು.

ತನ್ನ ಪ್ರಭಾವಳಿಯ ನೆಲದಲ್ಲೇ ಗೆಲ್ಲಲಾಗದಷ್ಟು ದುರ್ಬಲಗೊಳ್ಳುತ್ತಿರುವುದರ ಅರಿವನ್ನು ಈ ಫಲಿತಾಂಶ ದಳಪತಿಗಳಿಗೆ ಮೂಡಿಸಿದೆ. ಸ್ಪಷ್ಟ ನಿಲುವಿಲ್ಲದಿದ್ದರೆ ಇರುವ ಅಸ್ತಿತ್ವವನ್ನೂ ಕಳೆದುಕೊಳ್ಳಬೇಕಾಗುತ್ತದೆ ಎಂಬ ಪಾಠವನ್ನು ಕಲಿಸಿಕೊಟ್ಟಿದೆ.

ನಾಲ್ಕೂ ಮನೆಗಳಲ್ಲಿ ಗೌಡರ ಕುಟುಂಬದ ಪ್ರಾತಿನಿಧ್ಯ

ಹಾಸನದಲ್ಲಿ ಸೂರಜ್ ರೇವಣ್ಣ ಗೆಲ್ಲುವ ಮೂಲಕ ಪ್ರಜಾತಂತ್ರದ ನಾಲ್ಕೂ ಮನೆಗಳಲ್ಲಿ ಪ್ರಾತಿನಿಧ್ಯ ಪಡೆದ ಕರ್ನಾಟಕದ ಏಕೈಕ ಕುಟುಂಬ ಎಂಬ ವಿಶೇಷಣ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಕುಟುಂಬಕ್ಕೆ ಸಲ್ಲುತ್ತದೆ.

ರಾಜ್ಯಸಭೆಯಲ್ಲಿ ಕುಟುಂಬದ ಹಿರಿಯಜ್ಜ ದೇವೇಗೌಡರು, ಲೋಕಸಭೆಯಲ್ಲಿ ಪ್ರಜ್ವಲ್ ರೇವಣ್ಣ, ವಿಧಾನಸಭೆಯಲ್ಲಿ ಎಚ್.ಡಿ. ರೇವಣ್ಣ, ಎಚ್.ಡಿ. ಕುಮಾರಸ್ವಾಮಿ, ಅನಿತಾ ಕುಮಾರಸ್ವಾಮಿ, ಪರಿಷತ್ತಿನಲ್ಲಿ ಸೂರಜ್ ಸದಸ್ಯರಾಗಿದ್ದಾರೆ. ಜಿಲ್ಲಾ ಪಂಚಾಯಿತಿ ಅವಧಿ ಮುಗಿಯುವವರೆಗೆ ಭವಾನಿ ರೇವಣ್ಣ ಸದಸ್ಯರಾಗಿದ್ದು, ಅವರೂ ಅಧಿಕಾರದಲ್ಲಿದ್ದರೆ ತಳಹಂತದವರೆಗೂ ಅವರ ಕುಟುಂಬ ಪ್ರಾತಿನಿಧ್ಯ ಪಡೆದಂತಾಗುತ್ತಿತ್ತು. ಇವರಲ್ಲದೇ ಕುಟುಂಬದ ಬೀಗರಾದ ಡಿ.ಸಿ. ತಮ್ಮಣ್ಣ, ಸಿ.ಎನ್. ಬಾಲಕೃಷ್ಣ ವಿಧಾನಸಭೆ ಪ್ರತಿನಿಧಿಸುತ್ತಿದ್ದಾರೆ.

ಪ್ರಭಾವತಿ, ಭಾನುಮತಿಗೆ 'ಎಚ್.ಎಸ್. ಪಾರ್ವತಿ ಪ್ರಶಸ್ತಿ'

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘವು 2020 ಹಾಗೂ 2021ನೇ ಸಾಲಿನ 'ಎಚ್.ಎಸ್. ಪಾರ್ವತಿ ಪ್ರಶಸ್ತಿ' ಘೋಷಿಸಿದ್ದು, ಲೇಖಕಿಯರಾದ ಎಸ್.ವಿ. ಪ್ರಭಾವತಿ ಹಾಗೂ ವೈ.ಸಿ. ಭಾನುಮತಿ ಆಯ್ಕೆಯಾಗಿದ್ದಾರೆ.



ವೈ.ಸಿ. ಭಾನುಮತಿ

ಎಸ್.ವಿ. ಪ್ರಭಾವತಿ

ಈ ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ. ಇದೇ 20ರಂದು ಸಂಜೆ 4 ಗಂಟೆಗೆ ಬೆಂಗಳೂರಿನ ನರಸಿಂಹರಾಜ ಕಾಲೊನಿಯ ಬಿ.ಎಂ. ಶ್ರೀ. ಪ್ರತಿಷ್ಠಾನದ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಲೇಖಕಿ ವಿಜಯಾ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕವಯತ್ರಿ ಎಚ್.ಎಲ್. ಪುಷ್ಪಾ ಅವರು ಅಭಿನಂದನಾ ನುಡಿ ನುಡಿಯಲಿದ್ದಾರೆ ಎಂದು ಸಂಘದ ಅಧ್ಯಕ್ಷೆ ವನಮಾಲಾ ಸಂಪನ್ನ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರರವರ ಕಛೇರಿ,
ಬಿಟಿಎಂ ಲೇಔಟ್ ವಿಭಾಗ, ಬಿಬಿಎಂಪಿ ವಾಣಿಜ್ಯ ಸಂಕೀರ್ಣ,
2ನೇ ಮಹಡಿ, ಲಕ್ಕಸಂದ್ರ ಹೊಸೂರ್ ರಸ್ತೆ, ಆಡುಗೋಡಿ, ಬೆಂಗಳೂರು–30

ಸಂ: ಕಾಪಾಅ/ಬಿಟಿಎಂ/ಕಿಅ/ಇ–ಪ್ರೊಕ್/11/2021–22 ದಿನಾಂಕ:14.12.2021

ಟೆಂಡರ್ ಅಧಿಸೂಚನೆ
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ) 1ನೇ ಕರೆ

ಕಾರ್ಯಪಾಲಕ ಅಭಿಯಂತರರು, ಬಿಟಿಎಂ ಲೇಔಟ್ ವಿಭಾಗ ಇವರು ಬೃಬೆಂಮಪಾ ಆಯುಕ್ತರ ಪರವಾಗಿ, ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	ವಾರ್ಡ್ ಸಂಖ್ಯೆ 151ರ ಕೋರಮಂಗಲದಲ್ಲಿ, ಕೋರಮಂಗಲ 5ನೇ ಬ್ಲಾಕ್ 2ನೇ ಅಡ್ಡರಸ್ತೆಯಲ್ಲಿರುವ ಕಾರ್ಪೋರೇಟರ್ ಕಛೇರಿ ಮತ್ತು ಇತರ ಕಛೇರಿಗಳ ಹೆಚ್ಚುವರಿ ನಿರ್ಮಾಣ ಕಾಮಗಾರಿ.	200.00

ಇಎಂಡಿ ಘೋಷಣೆ: ಸರ್ಕಾರದ ಆದೇಶ ಸಂಖ್ಯೆ ಜಿಒ ಎಫ್‌ಡಿ675/ಇಎಕ್ಸ್‌ಪಿ12/2020, ದಿನಾಂಕ: 22.12.2020. 1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : 23.12.2021ರ ಸಂಜೆ 4.00 ಗಂಟೆಯವರೆಗೆ 3) ಟೆಂಡರ್‌ಗಳನ್ನು ತೆರೆಯುವ ದಿನಾಂಕ: 24.12.2021ರಸಂಜೆ 4.30 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: www.eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಬಿಟಿಎಂ ಲೇಔಟ್ ವಿಭಾಗ,

"ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ"
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಸ್ತಿ ಅಧಿಕಾರಿಗಳ ಕಛೇರಿ, ಗಾ.ಕೃ.ವಿ.ಕೆ, ಬೆಂಗಳೂರು–560 065.

ಸಂಖ್ಯೆ:ಎಸ್.ಪಿ.ಒ/ಇ–ಪ್ರೊಕ್ಯೂರ್‌ಮೆಂಟ್/112/2021–22 ದಿನಾಂಕ:09.12.2021

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಕೃಷಿ ವಿದ್ಯಾನಿಲಯಕ್ಕೆ ಅವಶ್ಯವಿರುವ ಉಪಕರಣಗಳು ಕ್ರಮ ಸಂ. 1 ರಿಂದ 11ರ ವರೆವಿಗೆ ಸರಬರಾಜು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಜಿ–1 ಮತ್ತು ಕೆ.ಜಿ–2 ನಿಬಂಧನೆಗೊಳಪಟ್ಟಂತೆ ಟೆಂಡರನ್ನು ಕರೆಯಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಆಸಕ್ತಿಯುಳ್ಳ ಅರ್ಹ ಕಂಪನಿಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: www.eproc.karnataka.gov.in ಮುಖಾಂತರ ಭಾಗವಹಿಸಬಹುದು. ಕೆ.ಜಿ–1 ಮತ್ತು ಕೆ.ಜಿ–2 ಟೆಂಡರ್ ಡಾಕ್ಯುಮೆಂಟ್, ಟೆಂಡರ್ ನೋಟಿಫಿಕೇಷನ್, ಟೆಂಡರ್ ಶೆಡ್ಯೂಲ್, ಇ.ಎಂ.ಡಿ ದರ, ಟೆಂಡರ್ ಫಾರ್ಮ್‌ಗಳನ್ನು ಈ ಮೇಲಿನ ವೆಬ್‌ಸೈಟ್ ಮುಖಾಂತರ ಪಡೆಯಬಹುದು. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 10.01.2022 ಸಂಜೆ 4.00 ಘಂಟೆಯವರೆಗೆ ಮತ್ತು ಟೆಂಡರನ್ನು ತೆರೆಯುವ ದಿನಾಂಕ: 12.01.2022 ಸಮಯ ಬೆಳಗ್ಗೆ 10.30 ಘಂಟೆಗೆ ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯವು ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ತಿರಸ್ಕರಿಸುವ ಅಥವಾ ಅಂಗೀಕರಿಸುವ ಅಧಿಕಾರವನ್ನು ಹೊಂದಿರುತ್ತದೆ. ಹೆಚ್ಚಿನ ಮಾಹಿತಿಗಾಗಿ www.uasbangalore.edu.in or www.eproc.karnataka.gov.in ಮತ್ತು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ಸಂಖ್ಯೆ: 080–8046010000 / 8022631200 ಮತ್ತು ಸರಕು ಖರೀದಿ ಅಧಿಕಾರಿಗಳು, ಯು.ಎ.ಎಸ್. ಜಿ.ಕೆ.ವಿ.ಕೆ., ಬೆಂಗಳೂರು–560065. ದೂರವಾಣಿ ಸಂಖ್ಯೆ: 080–23630128 ಸಂಪರ್ಕಿಸಿ.

ಸಹಿ/–
ಆಸ್ತಿ ಅಧಿಕಾರಿ

DIPR/DDU/AAPL/RO2340/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ನಂ. 5 & 6, "ಜಲಭವನ," ಬಿಟಿಎಂ ಬಡಾವಣೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 029.
ದೂರವಾಣಿ: 080-26539004 / 41106504 , e-mail : cekwbbng@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಏಜೆನ್ಸಿ / ಗುತ್ತಿಗೆದಾರರಿಂದ ಇಡುಗಂಟು ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ (ದ್ವಿಲಕೋಟೆ ಪದ್ಧತಿಯಲ್ಲಿ) ಆಹ್ವಾನಿಸಲಾಗಿದೆ.

No.:KWB/TEC/CE(B)/NGT-TND/HON-UGD/1770/2021-22 Dt:13.12.2021 (Call-7)

1) ಕಾಮಗಾರಿಯ ವಿವರ: ಭಾಗ–1 : ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಕಾರ್ಯಕ್ರಮದಡಿ ಹೊನ್ನಾಳಿ ಪಟ್ಟಣದಲ್ಲಿ ಹಾಲಿ ಇರುವ ಒಳಚರಂಡಿ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುವ / ಅಭಿವೃದ್ಧಿಗೊಳಿಸುವ ಕಾಮಗಾರಿಗಳು (ಇಡುಗಂಟು).
ಭಾಗ–2 : ಹೊನ್ನಾಳಿ ಪಟ್ಟಣದಲ್ಲಿ ದೋಷ ಹೊಣೆಗಾರಿಕೆ ಅವಧಿ ಒಳಗೊಂಡಂತೆ ಐದು ವರ್ಷಗಳ ಅವಧಿಗೆ ನಿರ್ವಹಣೆ ಮತ್ತು ದುರಸ್ತಿ (ಇಡುಗಂಟು) (ವರ್ಕ್ ಇಂಡೆಂಟ್ ಸಂಖ್ಯೆ: KUWSDB/2021-22/WS/ WORK_INDENT3006-/CALL-4).
ಟೆಂಡರ್‌ನ ಅಂದಾಜು ಮೊತ್ತ (ಜಿಎಸ್‌ಟಿ ಹೊರತಪಡಿಸಿ): ರೂ. 2275.74 ಲಕ್ಷಗಳು. ಇಎಂಡಿ ಮೊತ್ತ : ಇಲ್ಲ ಟೆಂಡರ್ ಪ್ರಕ್ರಿಯೆ ಶುಲ್ಕ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಂತೆ. ಕಾಮಗಾರಿ ಪೂರ್ಣಗೊಳಿಸುವ ಅವಧಿ : ಭಾಗ–1 ಕ್ಕೆ 12 ತಿಂಗಳು ಮತ್ತು ಭಾಗ–2 ಕ್ಕೆ 60 ತಿಂಗಳು (ಮಳೆಗಾಲ ಸೇರಿದಂತೆ).

ವಿವರಗಳು	
ಟೆಂಡರ್ ದಸ್ತಾವೇಜುಗಳು ದೊರೆಯುವ ದಿನಾಂಕ	15.12.2021, ಬೆಳಗ್ಗೆ 11.00 ಗಂಟೆಯ ನಂತರ
ವಿವರಗಳನ್ನು ಪಡೆಯಲು ಕೊನೆಯ ದಿನಾಂಕ ಮತ್ತು ಸಮಯ	22.12.2021, ಬೆಳಗ್ಗೆ 11.00 ಗಂಟೆಯವರೆಗೆ
ಪೂರ್ವಭಾವಿ ಸಭೆಯ ದಿನಾಂಕ	22.12.2021 ಬೆಳಗ್ಗೆ 11.30 ಗಂಟೆಗೆ
ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	29.12.2021, ಸಂಜೆ 17.30 ಗಂಟೆಯವರೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	01.01.2022, ಬೆಳಗ್ಗೆ 11.00 ಗಂಟೆಯ ನಂತರ
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	03.01.2022, ಬೆಳಗ್ಗೆ 11.00 ಗಂಟೆಯ ನಂತರ

ಹೆಚ್ಚಿನ ವಿವರಗಳನ್ನು ಮುಖ್ಯ ಅಭಿಯಂತರರು (ಬೆಂ), ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರುರವರ ಕಛೇರಿಯಿಂದ ಅಥವಾ ವೆಬ್‌ಸೈಟ್ https://eproc.karmnataka.gov.in ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ : 080-22371090 / 22373788, ಇ–ಮೇಲ್: hphelpdesk.blr@intarvo.com ನಿಂದ ಪಡೆಯಬಹುದು.

ಸಹಿ/– ಮುಖ್ಯ ಅಭಿಯಂತರರು (ಬೆಂ)
ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು.

ವಾಸಾಸಂಇ/ಬೆಂ.ನ/ಜಿಎ/2345/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆ, ಮಡಿಕೇರಿ
(ಕರ್ನಾಟಕ ಸರ್ಕಾರದ [illegible] ಸ್ವಾಯತ್ತ ಸಂಸ್ಥೆ)
ಉಲ್ಲೇಖ: [illegible] ದಿನಾಂಕ: 13–12–2021

ವೈದ್ಯಕೀಯ ಪುಸ್ತಕಗಳ ಪ್ರದರ್ಶನ ಅಧಿಸೂಚನೆ

ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆ, ಮಡಿಕೇರಿ ಇದರ ಎಸ್‌ಸಿಪಿ/ಟಿಎಸ್‌ಪಿ ಸ್ಕೀಮ್ ಅಡಿಯಲ್ಲಿ ಯುಜಿ (ಎಂಬಿಬಿಎಸ್), ಪಿಜಿ ಮತ್ತು ಗ್ರಂಥಾಲಯಕ್ಕೆ ಪುಸ್ತಕಗಳನ್ನು ಖರೀದಿಸಲು ಉದ್ದೇಶಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ 21–12–2021 ರಂದು ಬೆಳಿಗ್ಗೆ 9–00 ರಿಂದ ಸಂಜೆ 4–30 ಗಂಟೆಯವರೆಗೆ ಪುಸ್ತಕ ಪ್ರದರ್ಶನ ಆಯೋಜಿಸಲಾಗುತ್ತಿದ್ದು, ಸದರಿ ಪ್ರದರ್ಶನದಲ್ಲಿ ಯುಜಿ ಮೆಡಿಕಲ್ ವಿಷಯದ ಪುಸ್ತಕಗಳನ್ನು ಪ್ರದರ್ಶಿಸಲು ಪ್ರಕಾಶಕರು ಹಾಗೂ ಅಧಿಕೃತ ವಿತರಕರನ್ನು ಆಹ್ವಾನಿಸಲಾಗಿದೆ. ಸದರಿ ಪ್ರದರ್ಶನದಲ್ಲಿ ತಮ್ಮ ಪಾಲ್ಗೊಳ್ಳುವಿಕೆಯನ್ನು 17–12–2021 ರಂದು ಸಂಜೆ 4–00 ಗಂಟೆಯೊಳಗೆ ಕೆಳಕಂಡ ಇಮೇಲ್ ಐಡಿ ಮೂಲಕ ಖಚಿತಪಡಿಸುವುದು. ಫೋನ್ : 08272–220606 ವೆಬ್‌ಸೈಟ್ www.kimskodagu.kar.nic.in ಇ–ಮೇಲ್ : directormckodagu@gmail.com

ಡೀನ್ ಮತ್ತು ನಿರ್ದೇಶಕರು
ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆ, ಮಡಿಕೇರಿ – 571201

ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
59, ರಿಚ್‌ಮಂಡ್ ರಸ್ತೆ, (ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ) ಬೆಂಗಳೂರು–25
ದೂರವಾಣಿ : 080 – 25584102/25594893
ವೆಬ್‌ಸೈಟ್: www.ksphc.org ಇ–ಮೇಲ್ : eecontractksphc@gmail.com

ಸಂಖ್ಯೆ ಕಾಅ/ಕರಾಪೊವ&ಮೂಸೌಅನಿನಿ/ಕಾಂಟ್ರಾಕ್ಟ್/ಟಿಎನ್‌ಡಿ/2021–22/863 ದಿನಾಂಕ: 14.12.2021

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

ಕರಾಪೊವ ಮತ್ತು ಮೂಸೌಅನಿನಿ ಕರ್ನಾಟಕ ಪಾರದರ್ಶಕತೆ 2000 ಕಾಯ್ದೆ ಹಾಗೂ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂ–3 & 4 ರ ಪ್ರಕಾರ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಆರಕ್ಷಕ ಠಾಣೆಗಳ ನಿರ್ಮಾಣದ ಕಾಮಗಾರಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in (ದ್ವಿ ಲಕೋಟೆ ಪದ್ಧತಿ) ಮೂಲಕ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಇಂಡೆಂಟ್ ಸಂಖ್ಯೆಗಳು : 1780, 1777, 1779, 1776, 1775, 1689, 1791, 1661, 1774, 1785, 1790, 1665, 1714, 1769, 1788, 1795, 1793, 1796, 1786 & 1792

ಕನಿಷ್ಠ ಎಪಿಟಿ ರೂ.88.30 ಲಕ್ಷಗಳು ಹಾಗೂ ಗರಿಷ್ಠ ಎಪಿಟಿ ರೂ.510.00 ಲಕ್ಷಗಳು. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.

ಟೆಂಡರ್ ಶುಲ್ಕ, ಇಎಂಡಿ ಶುಲ್ಕ, ಟೆಂಡರ್ ಡಾಕ್ಯುಮೆಂಟ್‌ಗಳು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಇತ್ಯಾದಿ ಮುಂತಾದ ವಿವರಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 17.12.2021 ರಿಂದ ಲಭ್ಯವಿರುವುದು. ಹೆಚ್ಚಿನ ವಿವರಗಳನ್ನು ಕರಾಪೊವ ಮತ್ತು ಮೂಸೌಅನಿನಿ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

"ಕರಾಪೊವ ಮತ್ತು ಮೂಸೌಅನಿನಿ ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಹೊಂದಿದೆ".

ಸೂಚನೆ: ಇನ್ನು ಮುಂದೆ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ / ಮಾರ್ಪಾಡು ಇದ್ದಲ್ಲಿ ಇದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಸಿಲಾಗುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು – ಗುತ್ತಿಗೆ

ವಾ.ಸಾ.ಸಂ.ಇ/ಬೆಂ.ನಗರ/2350/ಆಕಾರ್/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಆಯುಕ್ತರ ಕಛೇರಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ
ನಂ. 8, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು
ಸಂಖ್ಯೆ:ಎಫ್‌ಸಿಎಸ್‌ಸಿಎ/ಎಡಿ20ಡಬ್ಲ್ಯೂಟಿ/2/2021(ಇ–ಆಫೀಸ್)
ದಿನಾಂಕ:13.12.2021

ಇ– ಟೆಂಡರ್ ನೋಟಿಫಿಕೇಷನ್

ಆಸಕ್ತ ಅರ್ಹ ಬಿಡ್ಡುದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ 31 ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳಿಗೆ ಆಹಾರ ಧಾನ್ಯಗಳನ್ನು ಎಫ್.ಸಿ.ಐ. ಗೋದಾಮುಗಳಲ್ಲಿ ಲೋಡ್ ಮಾಡಿಕೊಂಡು ಟಿ.ಎ.ಪಿ.ಸಿ.ಎಂ.ಎಸ್/ಕೆ.ಎಫ್.ಸಿ.ಎಸ್.ಸಿ/ಇತರೆ ಸಗಟು ಗೋದಾಮುಗಳಿಗೆ ರಸ್ತೆ ಮೂಲಕವಾಗಿ ಸಾಗಾಣಿಕೆ ಮಾಡಿ ಮತ್ತು ಸದರಿ ಗೋದಾಮುಗಳಿಗೆ ಅನ್‌ಲೋಡ್ ಮಾಡಲು ಆಯುಕ್ತರು ಜ್ಞಾಪನ ಪತ್ರ ನೀಡಿದ ದಿನಾಂಕದಿಂದ ಎರಡು ವರ್ಷದ ಅವಧಿಯವರೆಗೆ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತ ಬಿಡ್‌ದಾರರು ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: www.eproc.karnataka.gov.in ರಿಂದ ದಿನಾಂಕ: 15.12.2021 ರಿಂದ 17.01.2022 ಸಂಜೆ 5.30 ವರೆಗೆ ಡೌನ್‌ಲೋಡ್ ಮಾಡಿಕೊಂಡು ಅರ್ಜಿ ಸಲ್ಲಿಸಬಹುದು. ಟೆಂಡರ್ ಪ್ರಕಟಣೆಯ ದಿನಾಂಕ:15.12.2021. ಪ್ರೀ ಬಿಡ್ ಮೀಟಿಂಗ್ ದಿನಾಂಕ: 22.12.2021, ಬೆಳಿಗ್ಗೆ 11.30 ಗಂಟೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ (ಭರ್ತಿ ಮಾಡಿದ ಟೆಕ್ನಿಕಲ್ ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಸಲ್ಲಿಸುವುದು): 17.01.2022, ಸಂಜೆ 5.30 ಗಂಟೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ಸಂಬಂಧಿಸಿದ ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ): 19.01.2022, ಬೆಳಿಗ್ಗೆ 11.00 ಗಂಟೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ (ಆಯುಕ್ತರ ಕಛೇರಿಯಲ್ಲಿ): 02.02.2022, ಬೆಳಿಗ್ಗೆ 11.00 ಗಂಟೆ. ಟೆಂಡರ್‌ದಾರರು ಇಎಂಡಿ ಮೊತ್ತ ರೂ.4.00 ಲಕ್ಷ (ರೂ.ನಾಲ್ಕು ಲಕ್ಷ ಮಾತ್ರ) ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಫ್ಲಾಟ್‌ಫಾರಂ ಮೂಲಕ ಪಾವತಿಸುವುದು. ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ರನ್ವಯ ಪ್ರೋಸಸಿಂಗ್ ವೆಚ್ಚವನ್ನು ಪಾವತಿಸುವುದು. ಟೆಂಡರ್ ಒಪ್ಪುವ ಸಮಿತಿಗೆ ಟೆಂಡರ್ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ರದ್ದುಪಡಿಸುವ ಮತ್ತು ಪರಿಶೀಲನೆಗೆ ಒಳಪಡಿಸುವ ಹಕ್ಕನ್ನು ಕಾಯ್ದಿರಿಸಿದೆ. ಇತರೆ ಹೆಚ್ಚಿನ ವಿವರಗಳನ್ನು ಟೆಂಡರ್ ಡ್ಯಾಕ್ಯುಮೆಂಟ್‌ನಿಂದ ಪಡೆಯುವುದು.

ಸಹಿ/– ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಬೆಂಗಳೂರು

ವಾಸಾಸಂಇ/ಉನಿ.ನ/2337/ಎಂಸಿಎ/2021–22





ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
5ನೇ ಮಹಡಿ, ಪ್ಲಾಟ್ ನಂ: 1234, ಕೆಎಸ್‌ಐಐಡಿಸಿ ಕಟ್ಟಡ, ಐಟಿ ಪಾರ್ಕ್, ಸೌತ್ ಬ್ಲಾಕ್ ರಾಜಾಜಿನಗರ, ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು–560010. ದೂರವಾಣಿ: 080–22342163, E-mail: karnregs.office@gmail.com

ಸಂಖ್ಯೆ: ಗ್ರಾಅಪ:204:ಉಖಾಯೋ:2021 ದಿನಾಂಕ: 13.12.2021

ಅಧಿಸೂಚನೆ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಈ ಕೆಳಕಂಡ ಜಿಲ್ಲೆಗಳಲ್ಲಿ ಒಂಬುಡ್ಸ್‌ಮನ್ ಹುದ್ದೆಗಳ ನೇಮಕಾತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಜಿಲ್ಲೆಗಳ ಹೆಸರು: ಬೆಳಗಾವಿ, ಬೆಂಗಳೂರು ಗ್ರಾಮಾಂತರ / ನಗರ, ಶಿವಮೊಗ್ಗ, ಚಿತ್ರದುರ್ಗ, ಬೀದರ, ಹಾಸನ / ಕೊಡಗು, ಕೊಪ್ಪಳ ಮತ್ತು ವಿಜಯನಗರ.

ಜಿಲ್ಲೆಗಳಲ್ಲಿ ಒಂಬುಡ್ಸ್‌ಮನ್ ಆಗಿ ಕಾರ್ಯನಿರ್ವಹಿಸಲು ಆಸಕ್ತಿ ಇರುವ ವ್ಯಕ್ತಿಗಳು ಅರ್ಹತಾ ಮಾನದಂಡಗಳು ಹಾಗೂ ಇತರೆ ಸೇವಾ ಷರತ್ತುಗಳ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.rdpr.karnataka.gov.in ಅನ್ನು ನೋಡುವುದು. ನಿಗಧಿ ಪಡಿಸಿರುವ ಅರ್ಜಿ ನಮೂನೆಯನ್ನು ಮೇಲಿನ ವೆಬ್–ಸೈಟ್ ನಿಂದ ಅವರೋಹಣ (download) ಮಾಡಿಕೊಳ್ಳಬಹುದಾಗಿರುತ್ತದೆ. ಅವಶ್ಯಕ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಆಯುಕ್ತರು ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, 5ನೇ ಮಹಡಿ, ಪ್ಲಾಟ್ ನಂ.1234, ಕೆ.ಎಸ್.ಐ.ಐ.ಡಿ.ಸಿ. ಕಟ್ಟಡ, ಐ.ಟಿ. ಪಾರ್ಕ್, ಸೌತ್ ಬ್ಲಾಕ್, ರಾಜಾಜಿನಗರ, ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು–560044. ಇವರಿಗೆ ದಿನಾಂಕ: 14.01.2022 ರೊಳಗೆ ತಲುಪುವಂತೆ ಸಲ್ಲಿಸಬಹುದಾಗಿದೆ. ಕೊನೆಯ ದಿನಾಂಕದ ನಂತರ ಸ್ವೀಕೃತವಾಗುವ ಮತ್ತು ಅಪೂರ್ಣ ಮಾಹಿತಿ ಹೊಂದಿರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು (ಆಡಳಿತ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ (ದೂರವಾಣಿ ಸಂಖ್ಯೆ: 080–22342163) ಇವರನ್ನು ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ಮುಖ್ಯ ಕಾರ್ಯಾಚರಣೆ ಅಧಿಕಾರಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

DIPR/DDU/Zen/RO-2353/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ ಬುಧವಾರ, 15 ಡಿಸೆಂಬರ್ 2021

ತಂತ್ರಜ್ಞಾನ



ಅಮೆರಿಕದವರು ಸಿಪಾಯಿಪಡೆಗೆ ಎಂದಿದ್ದ ಜಿಪಿಎಸ್‌ನ ತಾಂತ್ರಿಕ ಕಾರ್ಯವಿಧಾನಗಳನ್ನು ಮಾಮೂಲಿ ವಿಮಾನಗಳಿಗೂ ಬಿಟ್ಟುಕೊಟ್ಟರು. ಮುಂದೆ ಅದು ಜನಸಾಮಾನ್ಯರ ಬಳಕೆಗೂ ಸಿಗುವಂತಾಯಿತು.

ದಾರಿ ಯಾವುದಯ್ಯ ಜಿಪಿಎಸ್ಸು...

ಶರತ್ ಭಟ್ ಸೇರಾಜೆ

‘ಓ ಇಂಥಲ್ಲಿಗೆ ಹೋಗುವುದು ಹೇಗೆ’ ಅಂತ ಯಾರನ್ನಾದರೂ ನಿಲ್ಲಿಸಿ ಕೇಳಿದರೆ, ‘ಗೊತ್ತಿಲ್ಲ ಸಾರ್’ ಎಂಬ ಮಿತವಚನದಿಂದ ಹಿಡಿದು, ‘ಒಂದ್ ಕೆಲ್ಸ ಮಾಡಿ, ಸೀದಾ ಹೋಗಿ, ಡೆಡ್ ಎಂಡಲ್ಲಿ ಲೆಫ್ಟ್ ತಗೊಳ್ಳಿ... ’ ಎಂದು ಮುಂತಾಗಿ ಸಾಗುವ ಹಿತವಚನದವರೆಗೆ ತರಹೇವಾರಿ ಉತ್ತರಗಳು ಸಿಕ್ಕುತ್ತಿದ್ದ ಕಾಲ ಹೋಗಿ, ದಾರಿ ಕಾಣದಾದವರ ಪಾಲಿಗೆ ವರವಾಗಿ ಜಿಪಿಎಸ್ಸೆಂಬ ಮಾಯೆ ಬಂದು ವರ್ಷಗಳೇ ಸರಿದಿವೆ. ಈ ತಂತ್ರಜ್ಞಾನದ ಜನ್ಮವೃತ್ತಾಂತವನ್ನು, ಅದು ಬೆಳೆದು ಬಂದ ಪರಿಯನ್ನು ಸ್ವಲ್ಪ ಕೆದಕಿದರೆ ಸ್ವಾರಸ್ಯಕರವಾದ ವಿಷಯಗಳು ಸಿಗುತ್ತವೆ.

1957ರಲ್ಲಿ ರಷ್ಯಾದ ವಿಜ್ಞಾನಿಗಳು ಭೂಮಿಯನ್ನು ಪೂರ್ತಿ ಸುತ್ತಬಲ್ಲ ಉಪಗ್ರಹವನ್ನು ಹಾರಿಸಿದಾಗ, ಅದರ ಚಲನೆಯನ್ನು ಅಧ್ಯಯನ ಮಾಡಿದ ಅಮೆರಿಕದ ವಿಜ್ಞಾನಿಗಳ ತಲೆಯಲ್ಲಿ ಈ ಜಿಪಿಎಸ್ಸಿನ ಉಪಾಯ ನಿಧಾನಕ್ಕೆ ಮೊಳಕೆಯೊಡೆದದ್ದು. ನಾವೆಲ್ಲಿದ್ದೇವೆ ಎಂದು ಈ ತಂತ್ರಜ್ಞಾನಕ್ಕೆ ಗೊತ್ತಾಗುವುದು ಹೇಗೆ ಎಂಬುದರ ಕಥೆಯೂ ಅಲ್ಲೇ ಇದೆ. ಅದನ್ನೊಂದಿಷ್ಟು ನೋಡೋಣ.

ಈಗ, ಒಬ್ಬರು, ‘ನಾನು ಮಂಗಳೂರಿನಿಂದ ಐವತ್ತು ಕಿಲೋಮೀಟರ್ ದೂರದಲ್ಲಿದ್ದೇನೆ,’ ಎಂದು ತಿಳಿಸಿದರೆ, ಅವರು ಎಲ್ಲಿದ್ದಾರೆ ಎಂಬುದನ್ನು ಹೇಳುವುದು ಕಷ್ಟ. ಅದೇ ಆಸಾಮಿ, ‘ಇಲ್ಲಿಂದ ಉಡುಪಿಗೆ ಹತ್ತು ಕಿಲೋಮೀಟರ್’ ಅಂತ ಮಾಹಿತಿ ಸೇರಿಸಿದರೆ, ನಮಗೆ ಅವರು ಎಲ್ಲಿದ್ದಾರೆ ಎಂಬ ಕಲ್ಪನೆ ಬರತೊಡಗುತ್ತದೆ. ಅದೇ ವ್ಯಕ್ತಿ, ‘ನಾನು ಬೆಂಗಳೂರಿನಿಂದ 400 ಕಿಲೋಮೀಟರ್ ದೂರದಲ್ಲಿಯೂ, ಮೂಡಿಗೆರೆಯಿಂದ ನೂರೈವತ್ತು ಕಿಲೋಮೀಟರ್ ಆಚೆಗೂ ಇದ್ದೇನೆ’ ಅಂತ ಹೇಳಿಬಿಟ್ಟರೆ, ಅವರು ಎಲ್ಲಿದ್ದಾರೆಂಬ ಗುಟ್ಟನ್ನು ರಟ್ಟು ಮಾಡುವುದಕ್ಕೆ ಈ ನಾಲ್ಕು ವಿವರಗಳು ಸಾಕು. ಈ ನಾಲ್ಕು ಕಡೆಗಳಿಂದ ಅಷ್ಟಷ್ಟು ದೂರ ಇರುವ ಸ್ಥಳ ಯಾವುದು ಅಂತ ಒಂದು ಪೆನ್ನು ಹಿಡಿದು ನಕಾಶೆಯಲ್ಲಿ ಗೆರೆಗಳನ್ನೆಳೆದರೆ, ವಿಷಯ ಗೊತ್ತಾಗಿಬಿಡುತ್ತದೆ. ಜಿಪಿಎಸ್ ತಂತ್ರಜ್ಞಾನ ಮಾಡುವುದೂ ಇಂಥದ್ದೇ ಯುಕ್ತಿಯ ಕೆಲಸ. ಭೂಮಿಯಿಂದ ಸುಮಾರು ಇಪ್ಪತ್ತು ಸಾವಿರ ಕಿಲೋಮಿಟರ್‌ಗಳಷ್ಟು ಎತ್ತರದಲ್ಲಿ ಸುತ್ತುತ್ತಿರುವ ಎರಡು ಡಜನ್ ಉಪಗ್ರಹಗಳ ಜೊತೆ ನಿಮ್ಮ ‘ಸ್ಮಾರ್ಟ್ ಫೋನ್’ಗಳಲ್ಲಿ ಇರುವ ಜಿಪಿಎಸ್ ರಿಸೀವರ್, ಹೀಗೆ ಮಾತಾಡಿಕೊಂಡರೆ ಆಯ್ತು. ನಾಲ್ಕು ಉಪಗ್ರಹಗಳ ಜೊತೆ, ‘ನೀವೆಲ್ಲಿದ್ದೀರಿ’ ಅಂತ ಮಾತಾಡಿಕೊಂಡರೆ, ನಿಮ್ಮ ಜಿಪಿಎಸ್ ರಿಸೀವರಿಗೆ ‘ತಾನೆಲ್ಲಿದ್ದೇನೆ’ ಅಂತಲೂ ಲೆಕ್ಕ ಹಾಕಲು ಸಾಧ್ಯ; ಒಂದಷ್ಟು ಗಣಿತಶಾಸ್ತ್ರವೂ ಭೂಗೋಳಶಾಸ್ತ್ರವೂ ಭೌತಶಾಸ್ತ್ರದ ಒಂದಷ್ಟು ನಿಯಮಗಳೂ ಗೊತ್ತಿದ್ದರೆ ಆಯಿತು.

ಅಮೆರಿಕದವರು ಇದನ್ನು ತಯಾರಿಸಿದ್ದು ಸೈನ್ಯದ ಬಳಕೆಗೆ. ಯುದ್ಧವಿಮಾನಗಳು, ಜಲಾಂತರ್ಗಾಮಿ ನೌಕೆಗಳು ಇವುಗಳಿಗೆಲ್ಲ ‘ತಾನೆಲ್ಲಿದ್ದೇನೆ’ ಅಂತ ಗೊತ್ತಾಗಲಿಕ್ಕೆ ‘ಡಿಪಾರ್ಟ್‌ಮೆಂಟ್ ಆಫ್ ಡಿಫೆನ್ಸ್’ನವರು ಈ ತಂತ್ರಜ್ಞಾನಕ್ಕೆ ರಾಶಿ ರಾಶಿ ದುಡ್ಡು ಸುರಿದದ್ದು. ಈಗಲೂ ವರ್ಷಕ್ಕೆ ನೂರಿನ್ನೂರು ಕೋಟಿ ಡಾಲರ್ ಸುರಿದು ಅದರ ಉಸ್ತುವಾರಿ ನೋಡಿಕೊಳ್ಳುವುದು ಅಮೆರಿಕದ ಸೇನೆಯೇ. ಹೀಗೆಂದು ಜಿಪಿಎಸ್ ಸಂಕೇತಗಳನ್ನು ಬಳಸಲು ಬೇರೆ ದೇಶಗಳಿಗೆ ವರ್ಷಕ್ಕಿಷ್ಟು ಅಂತ ಚಂದಾ ಶುಲ್ಕವೇನೂ ಇಲ್ಲ. ಇದರ ಹಿಂದಿರುವುದು 1983ರಲ್ಲಿ ನಡೆದೊಂದು ಕಥೆ.

ಆದದ್ದಿಷ್ಟು: ಕೊರಿಯನ್ ಏರ್‌ಲೈನ್ಸ್‌ನ ವಿಮಾನವೊಂದರ ಗಣಕಯಂತ್ರಗಳ ಲೆಕ್ಕಾಚಾರದಲ್ಲಿ ಏನೋ ಏರುಪೇರಾಗಿ, ಆ ಸ್ಖಾಲಿತ್ಯದ ಫಲವಾಗಿ ಆ ವಿಮಾನ ರಷ್ಯಾದ ವಿಮಾನಯಾನ ಪ್ರದೇಶಕ್ಕೆ ನುಗ್ಗಿತು, ಮೊದಲೇ ಶೀತಲಸಮರದ ಕೇಡುಗಾಲ, ರಷ್ಯನ್ನರು ಬಿಡುತ್ತಾರೆಯೇ? ಅದನ್ನು ಯಾವುದೋ ಗೂಢಚರ್ಯೆ ಮಾಡಲಿಕ್ಕೆ ಬಂದ ವಿಮಾನ ಅಂತ ತಪ್ಪಾಗಿ ತಿಳಿದು ಅದಕ್ಕೆ ಗುರಿಯಿಟ್ಟು ಕ್ಷಿಪಣಿಯನ್ನು ಹಾರಿಸಿಯೇ ಬಿಟ್ಟಿತು ರಷ್ಯಾ. ಬಿಲ್ಗಾರನು ಎಚ್ಚ ಬಾಣದಂತೆ ಅದು ಆ ವಿಮಾನವನ್ನು ಹೊಡೆದುರುಳಿಸಿತು. ಇಷ್ಟಾದ ಮೇಲೆ, ಈ ವಿಮಾನಗಳು ತಪ್ಪಿಯೂ ಆ ಕಡೆ ಸುಳಿಯುವುದು ಬೇಡ ಅಂತ, ಅಮೆರಿಕದವರು ಸಿಪಾಯಿಪಡೆಗೆ ಅಂತಿದ್ದ ಜಿಪಿಎಸ್‌ನ ತಾಂತ್ರಿಕ ಕಾರ್ಯವಿಧಾನಗಳನ್ನು ಮಾಮೂಲಿ ವಿಮಾನಗಳಿಗೂ ಬಿಟ್ಟುಕೊಟ್ಟರು. ಮುಂದೆ ಅದು ಜನಸಾಮಾನ್ಯರ ಬಳಕೆಗೂ ಸಿಗುವಂತಾಯಿತು.

ಆದರೂ ತೊಂಬತ್ತರ ದಶಕದ ಜಿಪಿಎಸ್‌ಗಳು ಸ್ವಲ್ಪ ಎಡವಟ್ಟು ಮಾಡುತ್ತಿದ್ದವು; ‘ನಾಲ್ಕನೇ ಅಡ್ಡರಸ್ತೆಯ ಗೆಳೆಯನ ಮನೆಗೆ ಹೊರಟರೆ, ಎಂಟನೇ ಮುಖ್ಯರಸ್ತೆಯಲ್ಲಿರುವ ಮುಸುಡಿ ಕಂಡರಾಗದವನ ಮನೆಗೆ ಕರೆದುಕೊಂಡು ಹೋಗುತ್ತದೆ, ಇಲ್ಲಿರುವ ಇಡ್ಲಿ ಹೋಟೆಲ್ಲಿಗೆ ಮುಖ ಮಾಡಿದರೆ ಈ ಜಿಪಿಎಸ್ಸು ಅಲ್ಲಿರುವ ಬಿರಿಯಾನಿ ಅಡ್ಡಾದ ಕಡೆಗೆ ಎಳೆದುಕೊಂಡು ಹೋಗುತ್ತದೆ’ ಎಂಬಂತಿದ್ದವು ಆ ಕಾಲದ ಜಿಪಿಎಸ್ ಉಪಕರಣಗಳು. ಉಪಗ್ರಹಗಳೇನೋ ಆಗಲೂ ಇದ್ದವು, ತಂತ್ರಜ್ಞಾನವೂ ಇತ್ತು, ಆದರೂ ಯಾಕೆ ಹೀಗೆ ಎಂಬುದಕ್ಕೆ ಮತ್ತೊಂದೇ ಕಥೆಯಿದೆ. ಹೇಳಿಕೇಳಿ ಇದೊಂದು ಮಿಲಿಟರಿಗಾಗಿ ತಯಾರಾದ ತಂತ್ರ, ಹೀಗಾಗಿ ಇದೇನಾದರೂ ದುರುಪಯೋಗವಾದರೆ ಎಂಬ ಚಿಂತೆ ಸೈನ್ಯದವರಿಗೆ ಇದ್ದೇ ಇತ್ತು. ‘ನಮ್ಮ ಯುದ್ಧವಿಮಾನಗಳು, ನೌಕೆಗಳು ಇಂಥಲ್ಲೇ ಇವೆ ಅಂತ ಈ ಹಾಳು ಜಿಪಿಎಸ್ಸು ನಿಷ್ಕೃಷ್ಟವಾಗಿ ಬೆರಳೆತ್ತಿ ತೋರಿಸಿಬಿಟ್ಟರೆ, ಅವರೆಡೆಗೆ ತುಪಾಕಿ ಹಾರಿಸಿ ಘಾತಿಸಲಿಕ್ಕೆ ಬೆರಳು ತುರಿಸುತ್ತ ಕೂತಿರುವ ಶತ್ರುಪಡೆಯ ಕೈಗೆ ಕೋಲು ಕೊಟ್ಟು ಹೊಡೆಸಿಕೊಂಡ ಹಾಗಾಗುತ್ತದೆ, ‘ನಾವಿಲ್ಲಿದ್ದೇವೆ’ ಅಂತ ಹೇಳಿದರೆ ಬಂದು ಹೊಡೆಯುವವರಿಗೆ ಆಹ್ವಾನಪತ್ರಿಕೆ ಕೊಟ್ಟುಬಂದ ಹಾಗಾಗಲಿಕ್ಕಿಲ್ಲವ’ ಎಂಬ ಚಿಂತೆ ಅಮೆರಿಕದ ಸೈನ್ಯದ ತಲೆ ಹೊಕ್ಕಿತು. ಹೀಗಾಗಿ ಉಪಗ್ರಹಗಳಿಂದ ಬರುವ ಸಂಕೇತಗಳಲ್ಲಿ ಅಮೆರಿಕದವರೇ ಬೇಕೆಂತಲೇ ಸ್ವಲ್ಪ ತಪ್ಪು ಬೆರೆಸಿ ಸಾಧನಗಳ ಲೆಕ್ಕದಲ್ಲಿ ಒಂದಷ್ಟು ದೋಷ ಬರುವ ಹಾಗೆ ನೋಡಿಕೊಂಡರು! ಇದನ್ನವರು ಸರಿ ಮಾಡಿದ್ದು ಸುಮಾರು ಇಪ್ಪತ್ತು ವರ್ಷಗಳ ಹಿಂದೆಯಷ್ಟೇ. ಹೀಗೆ, ವಿಜ್ಞಾನದ ಹಿಂದೆ ಮುಂದೆ ಇರುವ ವಿಜ್ಞಾನೇತರ ಪ್ರೇರಣೆ–ಪ್ರಚೋದನೆಗಳದ್ದೇ ಒಂದು ದೊಡ್ಡ ಕಥೆ. ❖

ವರ್ಚುವಲ್ ವಾಸ್ತವ!

ಮುಂದಿನ ವರ್ಷದಲ್ಲಿ ಉನ್ನತ ಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣದಲ್ಲಿ ಆಗ್ಮೆಂಟೆಡ್ ರಿಯಾಲಿಟಿ ಹಾಗೂ ವರ್ಚುವಲ್ ರಿಯಾಲಿಟಿ ಉದ್ಯಮ ಸುಮಾರು ₹ 14 ಸಾವಿರ ಕೋಟಿ ಆಗಲಿದೆ ಎಂದು ಊಹಿಸಲಾಗಿದೆ.

ಕೃಷ್ಣ ಭಟ್

ಶಾಲೆ, ತರಗತಿಯ ಕೋಣೆಗಳು, ಕಪ್ಪುಹಲಗೆಗಳೆಲ್ಲವೂ ಈ ಕೋವಿಡ್ ಕಾಲದಲ್ಲಿ ಡಿಜಿಟಲ್ ಸ್ಪರ್ಶ ಪಡೆದುಕೊಂಡವು. ತರಗತಿಗಳು ಖಾಲಿಯಾಗಿ, ಬೆಂಚ್‌ಗಳ ಜಾಗದಲ್ಲಿ ಮೊಬೈಲ್, ಕಂಪ್ಯೂಟರ್‌ಗಳು ಬಂದು ಕೂತಿದ್ದವು. ಆದರೆ, ಈ ಕೋವಿಡ್ ಕಾಲಕ್ಕೂ ಸ್ವಲ್ಪ ಹಿಂದಿನಿಂದಲೇ ಒಂದು ತಂತ್ರಜ್ಞಾನ ನಿಧಾನವಾಗಿ ಶಿಕ್ಷಣಕ್ಷೇತ್ರವನ್ನು ಅಮೂಲಾಗ್ರವಾಗಿ ಬದಲಿಸುವ ಕಡೆಗೆ ಹೆಜ್ಜೆ ಇಡುತ್ತಿತ್ತು. ಕೋವಿಡ್‌ಗೂ ಮೊದಲು ‘ವರ್ಚುವಲ್ ರಿಯಾಲಿಟಿ’ ಹಾಗೂ ‘ಆಗ್ಮೆಂಟೆಡ್ ರಿಯಾಲಿಟಿ’ ಎಂಬ ತಂತ್ರಜ್ಞಾನ ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹವಾಗಿ ಕಾಣಿಸಿಕೊಳ್ಳಲು ಇನ್ನೂ ಹಲವು ವರ್ಷಗಳು ಬೇಕು ಎಂದು ಹೇಳಲಾಗುತ್ತಿತ್ತಾದರೂ, ಕೋವಿಡ್‌ನಿಂದಾಗಿ ಈ ತಂತ್ರಜ್ಞಾನಗಳ ಹೆಜ್ಜೆ ವೇಗವಾಗಿದೆ.

ಏನಿದು ವರ್ಚುವಲ್ ರಿಯಾಲಿಟಿ?

ವರ್ಚುವಲ್ ರಿಯಾಲಿಟಿ (ವಿಆರ್) ಎಂಬುದು ‘ನೋಡಿ ಕಲಿ ಮಾಡಿ ತಿಳಿ’ ಎಂಬ ಹಳೆಯ ಕಲ್ಪನೆಯನ್ನೇ ಮರುರೂಪಿಸುವ ವಿಧಾನ. ಇತಿಹಾಸದ ಪಾಠದಲ್ಲಿ ಐತಿಹಾಸಿಕ ಸ್ಥಳಗಳನ್ನೇ ವರ್ಚುವಲ್ ರಿಯಾಲಿಟಿಯಲ್ಲಿ ಮರುಸೃಷ್ಟಿ ಮಾಡಿ ಅದರಲ್ಲಿ ವಿದ್ಯಾರ್ಥಿಯನ್ನು ನಿಲ್ಲಿಸಿ ಆತನಿಗೆ ಪಾಠ ಹೇಳಬಹುದು. ಒಂದು ವಾಸ್ತುಶಿಲ್ಪದ ಬಗ್ಗೆ ತಿಳಿಯಬೇಕೆಂದರೆ, ಅದರ ಮಾದರಿ ಇರುವಲ್ಲಿಗೇ ಹೋಗಬೇಕೆಂದಿಲ್ಲ. ತರಗತಿಯಲ್ಲೇ ಕುಳಿತು ಅಲ್ಲಿಗೆ ಹೋದ ಅನುಭವವನ್ನು ಪಡೆಯಬಹುದು ಮತ್ತು ವಿಸ್ತೃತವಾಗಿ ಅಧ್ಯಯನ ಮಾಡಬಹುದು.

ಅನುಭವಕ್ಕೆ ಇಲ್ಲಿ ಆದ್ಯತೆ. ಸಾಮಾನ್ಯವಾಗಿ ಓದಿ, ಕೇಳಿ, ನೋಡಿ ಬರೆಯುವುದಕ್ಕಿಂತ ಹೊಸ ಅಂಶ ‘ಅನುಭವ’ ಇಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಇದು ವಿದ್ಯಾರ್ಥಿ ಹೆಚ್ಚು ಸಕ್ರಿಯವಾಗಿ ಕಲಿಯಲು ಅನುಕೂಲ ಮಾಡಿಕೊಡುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.

ದೊಡ್ಡ ದೊಡ್ಡ ಕಂಪನಿಗಳಿಗೂ ಆಸಕ್ತಿ

ಸದ್ಯಕ್ಕೆ ಗೂಗಲ್‌ನಲ್ಲಿ ಹಲವು ನಗರಗಳಲ್ಲಿ ವರ್ಚುವಲ್ ಫೀಲ್ಡ್ ಟ್ರಿಪ್ ನಡೆಸಬಹುದು. ‘ಸ್ಟ್ರೀಟ್ ವ್ಯೂ’ ಎಂಬ ಗೂಗಲ್ ಸೇವೆಯನ್ನೇ ಇದಕ್ಕೂ ಬಳಸಲಾಗಿದೆ. ಇನ್ನು ಭಾರತದಲ್ಲಿ ರಿಲಾಯನ್ಸ್ ಸಂಸ್ಥೆ ಈ ನಿಟ್ಟಿನಲ್ಲಿ ಹಲವು ಪ್ರಯೋಗಗಳಲ್ಲಿ ನಿರತವಾಗಿದೆ. ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ಹಲವು ಸಂಸ್ಥೆಗಳನ್ನು ರಿಲಾಯನ್ಸ್ ಖರೀದಿ ಮಾಡಿದೆ. ಫೇಸ್‌ಬುಕ್ ಕೂಡ ‘ಒಕುಲಸ್’ ಎಂಬ ವಿಆರ್ ಹೆಡ್‌ಸೆಟ್‌ಗಳನ್ನು ತಯಾರಿಸುವ ಕಂಪನಿಯ ಜೊತೆಗೆ ಒಪ್ಪಂದ ಮಾಡಿಕೊಂಡಿದೆ ಹಾಗೂ ತನ್ನದೇ ವಿಆರ್ ಸಿಸ್ಟಮ್ ಸಿದ್ಧಪಡಿಸಿದೆ. ಒಕುಲಸ್ ಹೆಡ್‌ಸೆಟ್ ಬಳಸಿಕೊಂಡು ಫೇಸ್‌ಬುಕ್ ಅನ್ನು ವಿಆರ್ ಹೆಡ್‌ಸೆಟ್‌ನಲ್ಲಿ ಬಳಕೆ ಮಾಡಬಹುದು.



ಮುಂದಿನ ವರ್ಷದಲ್ಲಿ ಉನ್ನತ ಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣದಲ್ಲಿ ಆಗ್ಮೆಂಟೆಡ್ ರಿಯಾಲಿಟಿ ಹಾಗೂ ವರ್ಚುವಲ್ ರಿಯಾಲಿಟಿ ಉದ್ಯಮ ಸುಮಾರು ₹ 14 ಸಾವಿರ ಕೋಟಿ ಆಗಲಿದೆ ಎಂದು ಊಹಿಸಲಾಗಿದೆ. ಅಂದರೆ, ಇದು ಎಷ್ಟು ದೊಡ್ಡ ಮಟ್ಟದಲ್ಲಿ ಶಿಕ್ಷಣ ಕ್ಷೇತ್ರವನ್ನು ಆವರಿಸಿಕೊಳ್ಳಲಿದೆ ಎಂಬುದರ ಅಂದಾಜಾದೀತು.

ಉನ್ನತ ಶಿಕ್ಷಣದಲ್ಲಿ ಹೆಚ್ಚು ಪ್ರಭಾವ

ವರ್ಚುವಲ್ ರಿಯಾಲಿಟಿಯ ಜೊತೆಗೆ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಮತ್ತು ಆಗ್ಮೆಂಟೆಡ್ ರಿಯಾಲಿಟಿ ಕೂಡ ಸೇರಿದರೆ ಅದನ್ನು ಮಿಕ್ಸೆಡ್ ರಿಯಾಲಿಟಿ ಎನ್ನಲಾಗುತ್ತದೆ. ಈ ಮಿಕ್ಸೆಡ್ ರಿಯಾಲಿಟಿ ಈಗ ಉನ್ನತ ಶಿಕ್ಷಣದಲ್ಲಿ ಹೆಚ್ಚಿನ ಪ್ರಭಾವ ಬೀರುತ್ತಿದೆ. ಸಾಮಾನ್ಯವಾಗಿ ಯಾವುದೇ ತಂತ್ರಜ್ಞಾನ ಮೊದಲು ಉನ್ನತ ಶಿಕ್ಷಣಕ್ಕೆ ಬಂದು, ನಂತರ ಮಾಧ್ಯಮಿಕ ಹಾಗೂ ಪ್ರಾಥಮಿಕ ಶಿಕ್ಷಣ ವಲಯಕ್ಕೆ ವಿಸ್ತಾರವಾಗುವುದು ಸಹಜ. ಮಿಕ್ಸೆಡ್ ರಿಯಾಲಿಟಿಯನ್ನು ವಿದ್ಯಾರ್ಥಿಗಳಿಗೆ ಒದಗಿಸುವ ನಿಟ್ಟಿನಲ್ಲಿ ಹಲವು ಶಿಕ್ಷಣ ಸಂಸ್ಥೆಗಳು ಹಾಗೂ ಕಂಪನಿಗಳು ಕೆಲಸ ಮಾಡುತ್ತಿವೆ.

ಕೆಲವು ಉದಾಹರಣೆಗಳು

ವಿಜ್ಞಾನದ ಹಲವು ಪರಿಕಲ್ಪನೆಗಳನ್ನು ಈಗ ವಾಸ್ತವವಾಗಿಸಬಹುದು. ಉದಾಹರಣೆಗೆ, ಚಂಡಮಾರುತ ಹೇಗೆ ಉತ್ಪತ್ತಿಯಾಗುತ್ತದೆ ಮತ್ತು ಅದು ಹೇಗೆ ಸಾಗುತ್ತದೆ ಎಂಬುದನ್ನು ಆಗ್ಮೆಂಟೆಡ್ ರಿಯಾಲಿಟಿ ಮೂಲಕ ತರಗತಿಯಲ್ಲೇ ಪ್ರಾಯೋಗಿಕವಾಗಿ ತೋರಿಸಬಹುದು. ಅಷ್ಟೇ ಅಲ್ಲ, ಜೇನುಗೂಡಿನಲ್ಲಿ ಜೇನುನೊಣಗಳು ಹೇಗೆ ಕೆಲಸ ಮಾಡುತ್ತವೆ ಎಂಬುದರ ಮಾದರಿಯನ್ನೂ ಪ್ರಾಯೋಗಿಕವಾಗಿ ತೋರಿಸಬಹುದು.

ಸ್ಕೈವ್ಯೂ ಎಂಬ ಆಪ್ ಈಗಾಗಲೇ ಮಾರುಕಟ್ಟೆಯಲ್ಲಿ ಲಭ್ಯವಿದೆ. ಇದನ್ನು ಮೊಬೈಲ್‌ನಲ್ಲಿ ಇಳಿಸಿಕೊಂಡು ಆಕಾಶಕ್ಕೆ ಹಿಡಿದರೆ, ಯಾವ ನಕ್ಷತ್ರ, ಗ್ರಹಗಳು ಎಲ್ಲೆಲ್ಲಿ ಇವೆ ಎಂಬುದನ್ನು ತೋರಿಸಿ ಹೇಳುತ್ತದೆ.

ವಿಜ್ಞಾನದ ವಿದ್ಯಾರ್ಥಿಗಳು ಅಧ್ಯಯನಕ್ಕೆ ಈ ಹಿಂದೆ ಕಪ್ಪೆಗಳನ್ನು ಹಿಡಿದುತಂದು ಲ್ಯಾಬ್‌ನಲ್ಲಿ ಅವುಗಳ ಹೊಟ್ಟೆ ಸೀಳುತ್ತಿದ್ದವು. ಆದರೆ, ಈಗ ಫ್ರಾಗ್ಗಿಪೀಡಿಯಾ ಆ್ಯಪ್ ನಮಗೆ ಕಪ್ಪೆಯ ಎಲ್ಲ ಅಂಗಾಂಗವನ್ನೂ ಎಆರ್ ತಂತ್ರಜ್ಞಾನದ ಮೂಲಕ ಒದಗಿಸುತ್ತದೆ.

ಮೈಕ್ರೋಸಾಫ್ಟ್‌ನ ಹಾಲೋಲೆನ್ಸ್ ವೈದ್ಯಕೀಯ ವಿದ್ಯಾರ್ಥಿಗಳಿಗೆ ಮಿಕ್ಸೆಡ್ ರಿಯಾಲಿಟಿಯಲ್ಲಿ ಮಾನವನ ದೇಹದ ಅಧ್ಯಯನಕ್ಕೆ ಪ್ಲಾಟ್‌ಫಾರಂ ಅನ್ನು ನಿರ್ಮಾಣ ಮಾಡಿಕೊಟ್ಟಿದೆ.

ಸ್ಟೇಜ್‌ನ ಮೇಲೆ ನಿಂತು ಭಾಷಣ ಮಾಡಲು ಹೆದರಿಕೆ ಇರುವವರಿಗೆ ಆ ಭಯವನ್ನು ಹೋಗಲಾಡಿಸಲು ವರ್ಚುವಲ್ ಸ್ಪೀಚ್ ಒಂದು ಅದ್ಭುತ ವೇದಿಕೆಯನ್ನು ರೂಪಿಸಿದೆ. ಈ ವೇದಿಕೆಯ ಎದುರು ಇರುವವರೆಲ್ಲ ವರ್ಚುವಲ್ ಜನರು. ಇವರ ಎದುರಿಗೆ ಮಾತನಾಡಿ ವೇದಿಕೆಯ ಮೇಲೆ ಮಾತನಾಡುವ ಭಯವನ್ನು ನಿವಾರಿಸಿಕೊಳ್ಳಬಹುದು. ❖

ವಾಹನೋದ್ಯಮದ 2ನೇ ಕ್ರಾಂತಿ



ಉದಯ ಶಂಕರ ಪುರಾಣಿಕ

ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಮೆಶೀನ್ ಲರ್ನಿಂಗ್, ಡೀಪ್ ಲರ್ನಿಂಗ್ ಮೊದಲಾದ ತಂತ್ರಜ್ಞಾನಗಳನ್ನು ಭಾರತವೂ ಸೇರಿದಂತೆ ಹಲವಾರು ದೇಶಗಳಲ್ಲಿರುವ ಬ್ಯಾಂಕುಗಳು, ವಿಮಾ ಸಂಸ್ಥೆಗಳು, ಉದ್ಯಮಗಳು, ಆಸ್ಪತ್ರೆಗಳು, ರಕ್ಷಣಾ ಪಡೆಗಳು, ಸಾರ್ವಜನಿಕ ಸಾರಿಗೆ, ಬಂದರು ನಿರ್ವಹಣೆ - ಹೀಗೆ ಹಲವಾರು ಕ್ಷೇತ್ರಗಳಲ್ಲಿ ಬಳಸಲಾಗುತ್ತಿದೆ. 2025ರ ಹೊತ್ತಿಗೆ, ಪ್ರತಿವರ್ಷ ವಿಶ್ವದಾದ್ಯಂತ ವಾಹನೋದ್ಯಮದಲ್ಲಿ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ತಂತ್ರಜ್ಞಾನ ಬಳಸಲು ಸುಮಾರು 62,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ನಿರೀಕ್ಷೆ ಇದೆ.

ಮೋಟಾರು ವಾಹನಗಳು ಬಳಕೆಗೆ ಬರುವ ಮೊದಲು ನೂರಾರು ವರ್ಷಗಳ ಕಾಲ ಕುದುರೆಗಾಡಿಗಳು, ಎತ್ತಿನ ಬಂಡಿ ಮೊದಲಾದವುಗಳನ್ನು ಜನರು ಬಳಸುತ್ತಿದ್ದರು. ಲಂಡನ್ ನಗರದಲ್ಲಿ ಹೆಚ್ಚಾಗುತ್ತಿರುವ ಕುದುರೆಗಾಡಿಗಳಿಂದ ಮಾಲಿನ್ಯವಾಗುತ್ತದೆ ಎನ್ನುವ ಆತಂಕದ ಲೇಖನವನ್ನು ವರ್ಷ 1894ರಲ್ಲಿ ಲಂಡನ್ ಟೈಮ್ಸ್ ಪತ್ರಿಕೆ ಪ್ರಕಟಿಸಿತ್ತು. ಲಂಡನ್‌ನಲ್ಲಿ ಕುದುರೆಗಾಡಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಅನಿಯಿಂತ್ರಿತವಾಗಿ ಹೆಚ್ಚಾಗುತ್ತಿದ್ದರೆ, 1940ರ ದಶಕದ ಮಧ್ಯಭಾಗದಲ್ಲಿ, ಲಂಡನ್‌ನ ರಸ್ತೆಗಳಲ್ಲಿ ಜನರು ಓಡಾಡಲು ಸಾಧ್ಯವಾಗುವುದಿಲ್ಲ. ಏಕೆಂದರೆ ಪ್ರತಿಯೊಂದು ರಸ್ತೆಯಲ್ಲಿ ಒಂಬತ್ತು ಅಡಿಗಳಷ್ಟು ಕುದುರೆ ಲದ್ದಿ ಬಿದ್ದಿರುತ್ತದೆ ಎನ್ನುವ ಆತಂಕವನ್ನು ಆ ಲೇಖನದಲ್ಲಿ ವ್ಯಕ್ತಪಡಿಸಲಾಗಿತ್ತು. ಆದರೆ 1900ರಿಂದ 1920 ಅವಧಿಯಲ್ಲಿ ಉಗಿಯಿಂದ ಚಲಿಸುವ ಯಂತ್ರಗಳ ಬದಲಾಗಿ ಇಂಟರ್ನಲ್ ಕಂಬಷ್ಟನ್ ಇಂಜೀನ್ (ಐಸಿ ಇಂಜೀನ್), ಕುದುರೆಗಾಡಿಗಳ ಬದಲಾಗಿ ಮೋಟಾರು ಕಾರುಗಳು – ಹೀಗೆ ವಾಹನೋದ್ಯಮದಲ್ಲಿ ಮೊದಲ ಕ್ರಾಂತಿ ನೆಡೆಯಿತು. ಪೆಟ್ರೋಲ್, ಡಿಸೇಲ್ ಪಂಪ್‌ಗಳು, ಮೋಟಾರು ವಾಹನಗಳ ತಯಾರಿಕೆ ಉದ್ಯಮಗಳು, ವಾಹನಗಳ ದುರಸ್ತಿ ಕೇಂದ್ರಗಳು, ವಾಹನಗಳ ಬಿಡಿಭಾಗಗಳ ತಯಾರಕರು, ವಾಹನಗಳ ಮಾರಾಟ ಸಂಸ್ಥೆಗಳು, ಸಮೂಹ ಸಾರಿಗೆಗಾಗಿ ಬಸ್ ಬಳಕೆ, ಸರಕು ಸಾಗಾಣಿಕೆಗಾಗಿ ಟ್ರಕ್ ಮೊದಲಾದ ಸರಕು ಸಾಗಾಣಿಕೆ ವಾಹನಗಳ ಬಳಕೆ – ಹೀಗೆ ಈ ಪ್ರಥಮ ಕ್ರಾಂತಿ ಹಲವು ಹೊಸ ಆಯಾಮಗಳನ್ನು ತೆರೆಯಿತು. ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಾವಿರಾರು ಜನರಿಗೆ ಉದ್ಯೋಗ ದೊರೆಯಿತು. ಆದೇ ರೀತಿ ವಾಹನಗಳ ಬಳಕೆ ಹೆಚ್ಚಾದಂತೆ, ಪರಿಸರ ಮಾಲಿನ್ಯದಂತಹ ಸಮಸ್ಯೆಗಳು ಹೆಚ್ಚಾದವು.

ವರ್ಷ 2030ರ ಹೊತ್ತಿಗೆ ವಾಹನೋದ್ಯಮದಲ್ಲಿ ಎರಡನೆಯ ಕ್ರಾಂತಿ ನಡೆಯಲಿದೆ ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ಹೆಚ್ಚು ಪರಿಸರ ಸ್ನೇಹಿಯಾದ ವಿದ್ಯುತ್ ಚಾಲಿತ ವಾಹನಗಳು, ಸ್ವಯಂಚಾಲಿತ ವಾಹನಗಳು, ಅಧುನಿಕ ತಂತ್ರಜ್ಞಾನ ಮತ್ತು ಸಂವಹನ ವ್ಯವಸ್ಥೆಯನ್ನು ಹೊಂದಿರುವ ರಸ್ತೆಗಳು, ಪ್ರಯಾಣಿಕರಿಗೆ ಮೌಲ್ಯಾಧಾರಿತ ಸೇವೆಗಳು – ಹೀಗೆ ಅನೇಕ ಹೊಸ ಆಯಾಮಗಳನ್ನು ಈ ಎರಡನೆಯ ಕ್ರಾಂತಿ ತೆರೆದಿಡಲಿದೆಯಂತೆ. ವಾಹನೋದ್ಯಮಗಳ ಜೊತೆಯಲ್ಲಿ ತಂತ್ರಜ್ಞಾನ ಸಂಸ್ಥೆಗಳು ಮತ್ತು ನವೋದ್ಯಮಗಳು ಜೊತೆಗೂಡಿ ಕೆಲಸ ಮಾಡಲಿದ್ದು, ಪರಿಸರಸ್ನೇಹಿ, ಹೆಚ್ಚು ಸುರಕ್ಷತೆ ಮತ್ತು ಸೇವೆಗಳನ್ನು ನೀಡುವ ವಾಹನಗಳನ್ನು ಸುಲಭ ದರದಲ್ಲಿ ಜನಸಾಮಾನ್ಯರಿಗೆ ನೀಡಲು ಮುಂದಾಗುತ್ತಾರೆ. ಇದರಿಂದ ವಾಹನೋದ್ಯಮದಲ್ಲಿ ಹೊಸ ಆವಿಷ್ಕಾರಗಳು ಮತ್ತು ತಂತ್ರಜ್ಞಾನಗಳ ಅಭಿವೃದ್ಧಿ ಹೆಚ್ಚಾಗಲಿದೆ ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ.

2030ರಲ್ಲಿ ವಿಶ್ವವಾಹನೋದ್ಯಮದಲ್ಲಿ ಎರಡನೆಯ ಕ್ರಾಂತಿ ನಡೆಯಲಿದೆ ಎನ್ನುವಾಗ, ವಿಶ್ವದ ಪ್ರಮುಖ ವಾಹನ ಉದ್ಯಮಗಳು ಅಧುನಿಕ ತಂತ್ರಜ್ಞಾನಗಳ ಬಳಕೆಯಲ್ಲಿ ಹೆಚ್ಚು ಆಸಕ್ತಿ ತೋರಿಸುತ್ತಿವೆ ಮತ್ತು ಸಾವಿರಾರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುತ್ತಿವೆ. ಉದಾಹರಣೆಗೆ, ವಿಶ್ವವಿಖ್ಯಾತ ಫೋರ್ಡ್ ಸಂಸ್ಥೆ, ಈಗಾಗಲೇ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮೊದಲಾದ ತಂತ್ರಜ್ಞಾನಗಳನ್ನು ಬಳಸಲು ಪ್ರಾರಂಭಿಸಿದೆ. ಕಳೆದ 20 ವರ್ಷಗಳಿಂದ ಫೋರ್ಡ್ ಸಂಶೋಧನ ಕೇಂದ್ರವು, ಫೋರ್ಡ್ ಸಂಸ್ಥೆಗೆ ಸೂಕ್ತವಾದ ಅಧುನಿಕ ತಂತ್ರಜ್ಞಾನಗಳನ್ನು ಅಭಿವೃದ್ಧಿ ಮಾಡುತ್ತಿದೆ. ಹೀಗಾಗಿ, ಸುಮಾರು 15 ವರ್ಷಗಳ ಹಿಂದೆ, ನ್ಯೂರಲ್ ನೆಟವರ್ಕ್ ತಂತ್ರಜ್ಞಾನ ಆಧಾರಿತ ಅತ್ಯಾಧುನಿಕ ಮಿಸ್‌ಫೈರ್ ಪತ್ತೆ ಮಾಡುವ ವ್ಯವಸ್ಥೆಯನ್ನು ಫೋರ್ಡ್ ಸಂಸ್ಥೆ ಬಳಸಲು ಪ್ರಾರಂಭಿಸಿತು. ವಾಹನದ ಇಂಜೀನ್ ಚಾಲನೆಯಲ್ಲಿರುವಾಗ, ಮಿಸ್‌ಫೈರ್ ಸಮಸ್ಯೆಯಿದ್ದರೆ ಅದನ್ನು ತಕ್ಷಣ ಗುರುತಿಸಲು ಮತ್ತು ಈ ಸಮಸ್ಯೆ ಉಂಟಾಗಲು ಏನು ಕಾರಣಗಳು ಎಂದು ತಿಳಿಯಲು ಈ ವ್ಯವಸ್ಥೆ ಸಹಾಯಕವಾಗಿದೆ. ಅದೇ ರೀತಿ, ವಾಹನದ ಗುಣಮಟ್ಟ ಪರೀಕ್ಷೆಯಲ್ಲೂ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ತಂತ್ರಜ್ಞಾನವನ್ನು ಫೋರ್ಡ್ ಸಂಸ್ಥೆ ಬಳಸುತ್ತಿದೆ. ಉದಾಹರಣೆಗೆ, ಮನುಷ್ಯನ ಕಣ್ಣಿಗೆ ಕಾಣಿಸದಷ್ಟು ಸೂಕ್ಷ್ಮವಾಗಿರುವ ಸುಕ್ಕುಗಳು ವಾಹನದ ಸೀಟಿನ ಹೊದಿಕೆಯಲ್ಲಿ ಕಂಡು ಬಂದರೂ, ತಕ್ಷಣ ಅದನ್ನು ಗುರುತಿಸಲಾಗುತ್ತಿದೆ. ವಾಹನ ತಯಾರಿಕೆಗೆ ಬೇಕಾದ ಬಿಡಿಭಾಗಗಳ ನಿರ್ವಹಣೆ, ಹೊಸ ಬಿಡಿಭಾಗಗಳಿಗೆ ಆರ್ಡರ್ ಮಾಡುವುದು, ಪೂರೈಸಲಾದ ಹೊಸ ಬಿಡಿಭಾಗಗಳ ಗುಣಮಟ್ಟ ಪರೀಕ್ಷೆ – ಹೀಗೆ ವಿವಿಧ ಕೆಲಸಗಳನ್ನು ನ್ಯೂರಲ್ ನೆಟವರ್ಕ್ ತಂತ್ರಜ್ಞಾನ ಬಳಸಿ ಯಶಸ್ವಿಯಾಗಿ ಮಾಡಲಾಗುತ್ತಿದೆ. ❖

ಸುಭಾಷಿತ

ಭೂತಕಾಲಕ್ಕೆ ನಾವು ನಿರಂತರವಾಗಿ ಸವಾಲು ಹಾಕುತ್ತಿರಬೇಕು. ಅದರಿಂದ ಪ್ರತಿದಿನವೂ ನಮ್ಮನ್ನು ನಾವು ನವೀಕರಿಸಿಕೊಳ್ಳಲು ಸಾಧ್ಯ.

–ಸುಮಂತ್ರ ಘೋಷಾಲ್

ಬಿಜೆಪಿ–ಕಾಂಗ್ರೆಸ್‌ಗೆ ಸಮಬಲದ ತೃಪ್ತಿ ಜೆಡಿಎಸ್‌ಗೆ ಚಿಂತೆ ತಂದ ಫಲಿತಾಂಶ

ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯ ಫಲಿತಾಂಶ ಹೊರಬಿದ್ದಿದೆ. ಒಟ್ಟು 25 ಕ್ಷೇತ್ರಗಳ ಪೈಕಿ 20ರಲ್ಲಿ ಸ್ಪರ್ಧಿಸಿದ್ದ ಆಡಳಿತಾರೂಢ ಬಿಜೆಪಿ 11 ಕ್ಷೇತ್ರಗಳಲ್ಲಿ ಜಯ ಗಳಿಸಿ, ಸಮಾಧಾನದ ನಿಟ್ಟುಸಿರುಬಿಟ್ಟಿದೆ. ವಿಧಾನ ಪರಿಷತ್‌ನಲ್ಲಿ ಬಿಜೆಪಿಗೆ ಬಹುಮತದ ಕೊರತೆ ಇತ್ತು. ಮಸೂದೆಗಳಿಗೆ ಅಂಗೀಕಾರ ಪಡೆಯಲು ಇತರ ಪಕ್ಷಗಳ ನೆರವು ಪಡೆಯಬೇಕಿತ್ತು. ಈಗ 11 ಸ್ಥಾನಗಳನ್ನು ಗೆಲ್ಲುವ ಮೂಲಕ ಬಹುಮತದ ಸನಿಹಕ್ಕೆ ತಲುಪಿರುವ ಹಿನ್ನೆಲೆಯಲ್ಲಿ ಈ ಸಮಾಧಾನವನ್ನು ಗುರುತಿಸಬಹುದು. ಆದರೆ, ಚುನಾವಣಾ ಪ್ರಚಾರದ ವೇಳೆ 15 ಸ್ಥಾನಗಳನ್ನು ಗೆಲ್ಲುವ ಆ ಪಕ್ಷದ ಆತ್ಮವಿಶ್ವಾಸದ ಮಾತುಗಳು ಠುಸ್ ಆಗಿವೆ. ಅದರಲ್ಲೂ ಬೆಳಗಾವಿಯ ದ್ವಿಸದಸ್ಯ ಕ್ಷೇತ್ರದಲ್ಲಿ ಒಂದನ್ನೂ ಗೆಲ್ಲಲಾಗದೆ ಹೋದದ್ದು ಪಕ್ಷದ ಪ್ರತಿಷ್ಠೆಗೆ ಬಿದ್ದ ಹೊಡೆತ ಎಂದೇ ಹೇಳಬಹುದು. ಬಿಜೆಪಿಯು ಬೆಳಗಾವಿಯಲ್ಲಿ ಸಂಸದರು ಮತ್ತು ಹೆಚ್ಚು ಶಾಸಕರನ್ನು ಹೊಂದಿದೆ. ಪಕ್ಷದ ಅಭ್ಯರ್ಥಿ ಮಹಾಂತೇಶ ಕವಟಗಿಮಠ ಅವರು ಪರಿಷತ್ತಿನಲ್ಲಿ ಆಡಳಿತ ಪಕ್ಷದ ಮುಖ್ಯ ಸಚೇತಕರೂ ಆಗಿದ್ದಾರೆ. ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಈ ಚುನಾವಣೆಯು ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ಆದರೆ ಇಲ್ಲಿ ಕಾಂಗ್ರೆಸ್ ಅಭ್ಯರ್ಥಿ ಅತ್ಯಧಿಕ ಮತ ಗಳಿಸಿ ಮೊದಲ ಸುತ್ತಿನಲ್ಲೇ ಗೆದ್ದಿದ್ದಾರೆ. ಅಲ್ಲದೆ, ರಮೇಶ ಜಾರಕಿಹೊಳಿಯವರ ಸೋದರ, ಪಕ್ಷೇತರ ಅಭ್ಯರ್ಥಿ ಲಖನ್ ಜಾರಕಿಹೊಳಿ ಗೆಲುವು ಸಾಧಿಸಿರುವುದು ಪಕ್ಷದೊಳಗೇ ಸಂಶಯದ ಸುಳಿಯನ್ನು ಸೃಷ್ಟಿಸಿದೆ ಎನ್ನುವುದು ಸುಳ್ಳಲ್ಲ.

ಪಕ್ಷಗಳು ತಮ್ಮ ಗಟ್ಟಿನೆಲೆ ಎಂದು ಭಾವಿಸಿದ್ದ ಕೆಲ ಕ್ಷೇತ್ರಗಳಲ್ಲೇ ಸೋಲು ಕಂಡಿರುವುದು ಗಮನಾರ್ಹ ಬದಲಾವಣೆ

ಸಂಖ್ಯಾಬಲದ ದೃಷ್ಟಿಯಿಂದ ಕಾಂಗ್ರೆಸ್ ಕಳೆದುಕೊಂಡದ್ದೇ ಹೆಚ್ಚು. ತೆರವಾದ ಕ್ಷೇತ್ರಗಳಲ್ಲಿ ಪಕ್ಷ 14 ಕಡೆ ಪ್ರಾತಿನಿಧ್ಯ ಹೊಂದಿತ್ತು. ಈಗ 11 ಸ್ಥಾನಗಳನ್ನು ಮಾತ್ರ ಗೆದ್ದುಕೊಳ್ಳಲು ಅದಕ್ಕೆ ಸಾಧ್ಯವಾಗಿದೆ. ಚಿಕ್ಕಮಗಳೂರಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಅತ್ಯಂತ ಅಲ್ಪ ಅಂತರದಿಂದ ಸೋಲು ಅನುಭವಿಸಿದ್ದಾರೆ. ಈ ಸೋಲಿನ ಹೊರತಾಗಿಯೂ ಹಳೆ ಮೈಸೂರಿನ ಜಿಲ್ಲೆಗಳಲ್ಲಿ ಜೆಡಿಎಸ್ ಪಕ್ಷವನ್ನು ಕಾಂಗ್ರೆಸ್ ಹಿಂದಿಕ್ಕಿ ಮೇಲುಗೈ ಸಾಧಿಸಿರುವುದು ಗಮನಾರ್ಹ ಸಂಗತಿ. ಅದೂ ಅಲ್ಲದೆ, ಫಲಿತಾಂಶವನ್ನು ಗಮನಿಸಿದಾಗ ದ್ವಿಸದಸ್ಯ ಕ್ಷೇತ್ರಗಳು ಇರುವ ಕಡೆ ದಕ್ಷಿಣ ಕನ್ನಡ ಜಿಲ್ಲೆಯೊಂದನ್ನು ಬಿಟ್ಟು ಉಳಿದ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮೊದಲ ಸ್ಥಾನ ಪಡೆದಿದೆ. ಪಕ್ಷ ಬಹುನಿರೀಕ್ಷೆ ಹೊಂದಿದ್ದ ಚಿತ್ರದುರ್ಗ, ಬಳ್ಳಾರಿಯಲ್ಲಿ ಸೋತಿದ್ದು ಪಕ್ಷಕ್ಕೆ ಹೊಡೆತ ನೀಡಿದೆಯಾದರೂ ಒಟ್ಟಾರೆ ಫಲಿತಾಂಶದ ಬಗ್ಗೆ ಕಾಂಗ್ರೆಸ್ ನಾಯಕರು ತೃಪ್ತಿ ಹೊಂದಲು ಕಾರಣಗಳಿವೆ. ಜೆಡಿಎಸ್‌ನ ನಾಲ್ವರು ಸದಸ್ಯರು ನಿವೃತ್ತಿ ಹೊಂದುತ್ತಿದ್ದಾರೆ. ಈ ಸಲ ಆರು ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಜೆಡಿಎಸ್, ಎರಡು ಕ್ಷೇತ್ರಗಳಲ್ಲಿ ಮಾತ್ರ ಗೆಲುವು ಪಡೆದು ಹಿನ್ನಡೆ ಅನುಭವಿಸಿದೆ. ಅದರಲ್ಲೂ ಗಟ್ಟಿ ನೆಲೆ ಹೊಂದಿರುವ ಮಂಡ್ಯ, ಕೋಲಾರ, ತುಮಕೂರಿನಲ್ಲಿ ಸೋಲು ಅನುಭವಿಸಿರುವುದು ಪಕ್ಷದ ಭವಿಷ್ಯದ ಬಗ್ಗೆ ಕಾರ್ಯಕರ್ತರಲ್ಲಿ ಚಿಂತೆ ಹುಟ್ಟುಹಾಕುವುದು ನಿಶ್ಚಿತ. ‘ಚುನಾವಣೆಯಲ್ಲಿ ಜನಬಲದ ಮುಂದೆ ಹಣಬಲ ಗೆದ್ದಿದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಪ್ರತಿಕ್ರಿಯೆ ನೀಡಿದ್ದಾರೆ. ಅವರು ಏನೇ ಹೇಳಲಿ; ಹಳೆಮೈಸೂರು ಭಾಗದಲ್ಲಿ ಪಕ್ಷದ ಈ ನಿರಾಶಾದಾಯಕ ಪ್ರದರ್ಶನವು ಕಾರ್ಯಕರ್ತರ ಧೃತಿಗೆಡಿಸುವುದರಲ್ಲಿ ಸಂದೇಹವಿಲ್ಲ. ಹಾಸನ ಕ್ಷೇತ್ರವನ್ನು ಕಾಂಗ್ರೆಸ್‌ನಿಂದ ಜೆಡಿಎಸ್ ಕಸಿದುಕೊಂಡಿದೆಯಾದರೂ ಇಲ್ಲಿ ಗೆದ್ದಿರುವುದು ಎಚ್.ಡಿ.ದೇವೇಗೌಡ ಅವರ ಕುಟುಂಬದ ಕುಡಿ ಎನ್ನುವುದು ಕುತೂಹಲಕರ ಸಂಗತಿ.

ಫಲಿತಾಂಶ ಏನೇ ಇರಲಿ, ಈ ಸಲದ ಚುನಾವಣೆಯು ಹಲವು ಪ್ರಶ್ನೆಗಳನ್ನು ಸಾರ್ವಜನಿಕ ಚರ್ಚೆಯ ಮುನ್ನೆಲೆಗೆ ತಂದಿದೆ. ಗೆದ್ದಿರುವ ಅಭ್ಯರ್ಥಿಗಳ ಪೈಕಿ ಶೇಕಡ 40ಕ್ಕೂ ಹೆಚ್ಚು ಮಂದಿ ರಾಜಕೀಯ ಹಿನ್ನೆಲೆ ಹೊಂದಿರುವ ಕುಟುಂಬಗಳಿಂದ ಬಂದವರು ಎನ್ನುವುದು ಗಮನಿಸಬೇಕಾದ ಸಂಗತಿ. ಪರಿವಾರದ ರಾಜಕಾರಣಕ್ಕೆ ಬೆಂಬಲ ನೀಡುವಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ನಡುವೆ ಯಾವುದೇ ವ್ಯತ್ಯಾಸ ಕಾಣಿಸುತ್ತಿಲ್ಲ ಎನ್ನುವುದು ಈ ಚುನಾವಣೆಯಲ್ಲಿ ಸ್ಪಷ್ಟವಾಗಿದೆ. ರಾಜ್ಯದಲ್ಲಿ ರಾಜಕೀಯ ಎನ್ನುವುದು ಅಧಿಕಾರದಲ್ಲಿ ಇರುವವರ ಕುಟುಂಬಗಳಿಗೇ ಮೀಸಲಾದರೆ ಪ್ರಜಾಪ್ರಭುತ್ವದ ಮೂಲಸೂತ್ರಗಳು ಅರ್ಥ ಕಳೆದುಕೊಳ್ಳುತ್ತವೆ ಎನ್ನಬೇಕಾಗುತ್ತದೆ. ಅದೂ ಅಲ್ಲದೆ ಈ ಸಲ ಅಭ್ಯರ್ಥಿಗಳು ಖರ್ಚು ಮಾಡಿರುವ ಹಣದ ಪ್ರಮಾಣವು ಪರಿಷತ್‌ನ ಮಹತ್ವವನ್ನು ಕುಂದಿಸುವಂತಿದೆ. ಮೇಲ್ಮನೆ ಎಂದರೆ ರಾಜಕೀಯ ಸಹಿತ ವಿವಿಧ ಕ್ಷೇತ್ರಗಳಲ್ಲಿ ಅನುಭವ– ಪರಿಣತಿ ಹೊಂದಿರುವ ಹಿರಿಯರ ಮನೆ ಎಂದೇ ಪರಿಗಣಿಸಲಾಗಿತ್ತು. ಆದರೆ ಈ ಸಲ ಎಲ್ಲ ಪಕ್ಷಗಳೂ ಚುನಾವಣೆಗೆ ಟಿಕೆಟ್ ನೀಡಿದಾಗ ಪರಿಗಣಿಸಿದ್ದು ಹಣಬಲವನ್ನು ಎನ್ನುವುದು ಮೇಲ್ನೋಟಕ್ಕೇ ಎದ್ದು ಕಾಣುವಂತಿತ್ತು. ಚುನಾವಣೆಯಲ್ಲಿ ಹೆಚ್ಚಿನ ಕ್ಷೇತ್ರಗಳಲ್ಲಿ ಪ್ರತೀ ಮತಕ್ಕೆ ₹ 50 ಸಾವಿರದಿಂದ ಒಂದು ಲಕ್ಷದವರೆಗೆ ಮತದಾರರಿಗೆ ಆಮಿಷ ಒಡ್ಡಲಾಗಿತ್ತು ಎಂದು ವರದಿಯಾಗಿರುವುದನ್ನು ಗಮನಿಸಿದರೆ ಮೇಲ್ಮನೆ ಚುನಾವಣೆ ಪ್ರಕ್ರಿಯೆಯಲ್ಲಿ ಸುಧಾರಣೆಗಳು ಆಗಬೇಕು ಎಂಬುದು ಮನದಟ್ಟಾಗುತ್ತದೆ.

ಹಿಂದೂಗಳ ಮನಸ್ಸಿನಲ್ಲಿ ಮತ್ತೆ ಕೇಂದ್ರ ಸ್ಥಾನ ಪಡೆಯಲು ಪಕ್ಷ ಮಾಡಬೇಕಿರುವ ಕೆಲಸಗಳು ಇನ್ನೂ ಇವೆ

ಕಾಂಗ್ರೆಸ್: ಹಿಂದೂ ಬೇರುಗಳ ಮರುಶೋಧ

ವಿಶ್ಲೇಷಣೆ

ಸುಧೀಂದ್ರ ಕುಲಕರ್ಣಿ

ನಾನು ಚುನಾವಣಾಪೂರ್ವ ರಾಜಕೀಯ ಪರಿಸ್ಥಿತಿಯನ್ನು ತಿಳಿದುಕೊಳ್ಳುವ ಉದ್ದೇಶದಿಂದ ಕಳೆದ ಪಾಕ್ಷಿಕದಲ್ಲಿ ಗೋವಾದಲ್ಲಿ ಇದ್ದೆ. ಅಲ್ಲಿ ಹಿರಿಯ ಬುದ್ಧಿಜೀವಿಗಳು, ಬರಹಗಾರರು ಮತ್ತು ಸಾಮಾಜಿಕ ಕಾರ್ಯಕರ್ತರ ಗುಂಪಿನ ಜೊತೆ ಮಾತುಕತೆ ನಡೆಸಿದೆ (ಈಚೆಗಷ್ಟೇ ಜ್ಞಾನಪೀಠ ಪ್ರಶಸ್ತಿಗೆ ಆಯ್ಕೆಯಾಗಿರುವ ಕೊಂಕಣಿ ಲೇಖಕ ದಾಮೋದರ ಮೌಜೊ ಅವರೂ ಅಲ್ಲಿದ್ದರು. ಅವರಿಗೆ ನನ್ನ ಅಭಿನಂದನೆಗಳು).

2024ರ ಲೋಕಸಭಾ ಚುನಾವಣೆಗೂ ಮೊದಲು ದೇಶದ ಎಲ್ಲೆಡೆ ಕಾಂಗ್ರೆಸ್ಸಿನ ಪುನಶ್ಚೇತನ ಹೇಗೆ, ಕಾಂಗ್ರೆಸ್ಸನ್ನು ಬಿಜೆಪಿ ವಿರೋಧಿ ಪಕ್ಷಗಳ ಸಮನ್ವಯಕಾರನಾಗಿ ಮಾಡುವುದು ಹೇಗೆ ಎಂಬ ಬಗ್ಗೆ ಮಾತನಾಡುವಾಗ ನಾನು, ‘ಕಾಂಗ್ರೆಸ್ ಪಕ್ಷವು ಹಿಂದೂ ಸಮುದಾಯದ ಹೃದಯವನ್ನು ಮತ್ತೆ ಗೆದ್ದುಕೊಳ್ಳಬೇಕು. ಭಾರತೀಯ ಸಮಾಜದ ಬಹುಸಂಖ್ಯಾತರು ಅವರು. ತಾನು ಹಿಂದೂ ವಿರೋಧಿ ಮತ್ತು ಮುಸ್ಲಿಂ ಪರ ಎನ್ನುವ ಚಿತ್ರಣವನ್ನು ಕಾಂಗ್ರೆಸ್ ಮೀರಬೇಕು. ಬಿಜೆಪಿ ಮತ್ತು ಸಂಘ ಪರಿವಾರ ಕಟ್ಟಿರುವ ಈ ಬಗೆಯ ಚಿತ್ರಣವು ಕಾಂಗ್ರೆಸ್ಸಿಗೆ ಬಹಳ ಹಾನಿ ಉಂಟುಮಾಡಿದೆ’ ಎಂದು ಹೇಳಿದೆ. ಇದು, ಪಕ್ಷಕ್ಕಾಗಿ ಅನೇಕ ವರ್ಷಗಳ ಕಾಲ ಕೆಲಸ ಮಾಡಿದ ಕಾರ್ಯಕರ್ತರೂ ಸೇರಿದಂತೆ ದೇಶದ ಸಹಸ್ರಾರು ಮಂದಿಯ ಅಭಿಪ್ರಾಯವೂ ಹೌದು.

ಕಾಂಗ್ರೆಸ್ಸಿನ ಕಾರ್ಯಕರ್ತರ ನಡುವೆ ಈ ಬಗ್ಗೆ ಮರು ಆಲೋಚನೆ ನಡೆಯಬೇಕು ಎಂಬುದಕ್ಕೆ ಕಾರಣಗಳಿವೆ. 2014ರಲ್ಲಿ ನರೇಂದ್ರ ಮೋದಿ ಅವರು ಅಧಿಕಾರಕ್ಕೆ ಬಂದ ನಂತರದಲ್ಲಿ ಸಂಘ ಪರಿವಾರವು ಕಾಂಗ್ರೆಸ್ಸಿನ ಮೂಲ ನಂಬಿಕೆಗಳಲ್ಲಿ ಒಂದಾಗಿರುವ ಧರ್ಮನಿರಪೇಕ್ಷತೆಯು ಹಿಂದೂ ವಿರೋಧಿ ಎಂದು ವ್ಯವಸ್ಥಿತವಾಗಿ ಬಿಂಬಿಸುವಲ್ಲಿ ಯಶಸ್ವಿಯಾಗಿದೆ. ದೇಶದ ಸಂವಿಧಾನದ ಪೀಠಿಕೆಯಿಂದ ಧರ್ಮನಿರಪೇಕ್ಷ ಪದವನ್ನು (ಮತ್ತು ಸಮಾಜವಾದಿ ಎಂಬ ಪದವನ್ನು) ತೆಗೆಯುವುದು ಅದಕ್ಕೆ ಬೇಕಾಗಿದೆ. ಇದಕ್ಕಿಂತ ಹೆಚ್ಚಾಗಿ, ಸಂಘ ಪರಿವಾರದ ಪ್ರಚಾರಾಂದೋಲನವು ಬಹಳ ಜಾಣತನದಿಂದ ತನ್ನ ಹಿಂದುತ್ವ ಸಿದ್ಧಾಂತವನ್ನು– ಇದು ರಾಜಕೀಯ ಅಧಿಕಾರಕ್ಕಾಗಿ ಹಿಂದೂ ಧರ್ಮದ ಒರಟು ದುರ್ಬಳಕೆ– ಭಾರತದ ರಾಷ್ಟ್ರೀಯತೆ ಜೊತೆ ಸಮೀಕರಿಸುತ್ತಿದೆ. ಹಿಂದುತ್ವವನ್ನು ವಿರೋಧಿಸುವವರು ಭಾರತದ ವಿರುದ್ಧ ಇದ್ದಾರೆ ಎಂಬಂತೆ, ಹಾಗಾಗಿ ಅವರು ರಾಷ್ಟ್ರವಿರೋಧಿಗಳು ಎಂಬಂತೆ ಚಿತ್ರಿಸಲಾಗುತ್ತಿದೆ. ಬೇಸರದ ಸಂಗತಿಯೆಂದರೆ, ಹಿಂದೂ ಸಮಾಜದ ಧ್ವನಿ ಇರುವ ಒಂದು ದೊಡ್ಡ ವರ್ಗವು ಈ ಪ್ರಚಾರಾಂದೋಲನಕ್ಕೆ ಈಡಾಗಿದೆ. 2014 ಮತ್ತು 2019ರಲ್ಲಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹಿನ್ನಡೆ ಅನುಭವಿಸಿದ್ದಕ್ಕೆ ಇದು ಮುಖ್ಯ ಕಾರಣಗಳಲ್ಲಿ ಒಂದು.

ಕಾಂಗ್ರೆಸ್ ನಾಯಕತ್ವವು ತಪ್ಪುಗಳನ್ನು ತಿದ್ದಿಕೊಳ್ಳುವ ಕೆಲವು ಹೆಜ್ಜೆಗಳನ್ನು ಇರಿಸಲು ಕೊನೆಗೂ ತೀರ್ಮಾನಿಸಿದೆ. ಪಕ್ಷದ ಮಾಜಿ (ಬಹುಶಃ ಭಾವಿ) ಅಧ್ಯಕ್ಷ ರಾಹುಲ್ ಗಾಂಧಿ ಅವರು ರಾಜಸ್ಥಾನದ ಜೈಪುರದಲ್ಲಿ ಡಿಸೆಂಬರ್ 12ರಂದು ಮಾಡಿದ ಪ್ರಮುಖ ಭಾಷಣವೊಂದರಿಂದ ಇದು ಖಚಿತವಾಗುತ್ತದೆ. ಹಿಂದೂಗಳು ಮತ್ತು ಹಿಂದುತ್ವವಾದಿಗಳ ನಡುವೆ ವ್ಯತ್ಯಾಸವಿದೆ ಎನ್ನುತ್ತ ರಾಹುಲ್ ಅವರು ತಾವು ಹಿಂದುತ್ವವನ್ನು ವಿರೋಧಿಸುವ ಹಿಂದೂ ಎಂದು ಹೇಳಿದರು. ನಿಜವಾದ ಹಿಂದೂ ಎಲ್ಲ ಧರ್ಮಗಳನ್ನು ಗೌರವಿಸುತ್ತಾನೆ ಎಂದರು. ಹಿಂದುತ್ವವು ಇತರರನ್ನು ದ್ವೇಷಿಸುವಂತೆ, ಇತರರ ವಿಚಾರದಲ್ಲಿ ಹಿಂಸಾತ್ಮಕವಾಗಿ ಇರುವಂತೆ ಹೇಳುತ್ತದೆ ಎಂದರು. ನಿಜವಾದ ಹಿಂದೂಗಳು ಸತ್ಯಾಗ್ರಹದಲ್ಲಿ ನಂಬಿಕೆ ಇರಿಸಿದ್ದಾರೆ; ಹಿಂದುತ್ವವಾದಿಗಳಿಗೆ ‘ಸತ್ತಾ ಆಗ್ರಹ’ದಲ್ಲಿ ನಂಬಿಕೆ ಇದೆ ಎಂದರು. ‘ಭಾರತದಲ್ಲಿ ಇಂದು ಇರುವುದು ಹಿಂದುತ್ವವಾದಿಗಳ ಆಡಳಿತ. ಹಿಂದೂಗಳ ಆಡಳಿತವಲ್ಲ. ನಾವು ಹಿಂದುತ್ವವಾದಿಗಳನ್ನು ಇಳಿಸಿ, ಹಿಂದೂಗಳ ಆಡಳಿತವನ್ನು ಮತ್ತೆ ಸ್ಥಾಪಿಸಬೇಕು’ ಎಂದು ಅವರು ಹೇಳಿದರು.

ರಾಹುಲ್ ಅವರ ಮಾತುಗಳು ಹಿಂದೂ ಧರ್ಮ ಹಾಗೂ ಧರ್ಮನಿರಪೇಕ್ಷತೆಯ ವಿಚಾರದಲ್ಲಿ ಕಾಂಗ್ರೆಸ್ಸಿನ ನಿಲುವಿನ ಸುತ್ತ ಇರುವ ರಾಷ್ಟ್ರೀಯ ಸಂಕಥನವನ್ನು ಬದಲಿಸಲಿವೆ ಎಂಬುದು ಬಹುತೇಕ ಖಚಿತ. ವಾಸ್ತವದಲ್ಲಿ ತನ್ನ ವಿರೋಧಿಗಳ ಪ್ರಚಾರಾಂದೋಲನವನ್ನು ವಿರೋಧಿಸಲು ಕಾಂಗ್ರೆಸ್ ಇಷ್ಟೊಂದು ಸಮಯ ತೆಗೆದುಕೊಳ್ಳಬೇಕಿರಲಿಲ್ಲ. 1999ರ ಜನವರಿ 16ರ ಸಭೆಯಲ್ಲಿ ಪಕ್ಷದ ಅತ್ಯುನ್ನತ ಮಂಡಳಿಯಾದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ‘ಭಾರತದಲ್ಲಿ ಧರ್ಮನಿರಪೇಕ್ಷತೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಖಚಿತಪಡಿಸುವುದು ಹಿಂದೂ ಧರ್ಮ’ ಎಂಬ ನಿರ್ಣಯವನ್ನು ಒಕ್ಕೊರಲಿನಿಂದ ಕೈಗೊಂಡಿತ್ತು. ಸೋನಿಯಾ ಗಾಂಧಿ ಅವರು 1998ರ ಮಾರ್ಚ್‌ನಲ್ಲಿ ಕಾಂಗ್ರೆಸ್ಸಿನ ಅಧ್ಯಕ್ಷೆಯಾಗಿ ಅಧಿಕಾರ ವಹಿಸಿಕೊಂಡ ಒಂದು ವರ್ಷದೊಳಗೆ ಈ ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ ಇದನ್ನು ಈಗ ಕಾಂಗ್ರೆಸ್ಸಿನ ನಾಯಕರೂ ಕಾರ್ಯಕರ್ತರೂ ಬಹುತೇಕ ಮರೆತಿದ್ದಾರೆ.

1999ರ ಈ ನಿರ್ಣಯದ ಹಿಂದೆ ಪಕ್ಷದ ಹಿಂದಿನ ವಕ್ತಾರರಾಗಿದ್ದ ವಿಠಲರಾವ್ ಗಾಡ್ಗೀಳ್ ಅವರ ಪ್ರಭಾವ ಇತ್ತು. ‘ಮುಸ್ಲಿಮರು ಮತದಾರರ ಸಮುದಾಯದ ಶೇಕಡ 18ರಷ್ಟು ಮಾತ್ರ ಇದ್ದಾರೆ. ಅವರೆಲ್ಲರೂ ಕಾಂಗ್ರೆಸ್ಸಿಗೇ ಮತ ಚಲಾಯಿಸಿದರೂ ಪಕ್ಷವು ಅಧಿಕಾರಕ್ಕೆ ಬರುವುದಿಲ್ಲ. ಇನ್ನುಳಿದ ಶೇ 82ರಷ್ಟು ಜನರ ಭಾವನೆಗಳನ್ನು ನಾವು ಕಡೆಗಣಿಸುತ್ತ ಸಾಗಲು ಆಗದು’ ಎಂದು ಗಾಡ್ಗೀಳರು ಹೇಳಿದ್ದರು ಎನ್ನುವುದು ರಶೀದ್ ಕಿದ್ವಾಯಿ ಅವರ ‘24 ಅಕ್ಬರ್ ರೋಡ್’ ಪುಸ್ತಕದಲ್ಲಿ ಉಲ್ಲೇಖವಾಗಿದೆ. ಗಾಡ್ಗೀಳರ ಮಾತುಗಳಿಗೆ ಇಂದಿನ ಕಾಂಗ್ರೆಸ್ ನಾಯಕರು ಗಮನ ನೀಡಿದರೆ ಒಳಿತು. ಕಾಂಗ್ರೆಸ್ ಪಕ್ಷವು ಮುಸ್ಲಿಂ ತುಷ್ಟೀಕರಣದಲ್ಲಿ ತೊಡಗಿದೆ, ಮುಸ್ಲಿಮರನ್ನು ಮತಬ್ಯಾಂಕ್ ಆಗಿ ಪರಿಗಣಿಸಿದೆ ಎಂದು ಬಿಜೆಪಿ ನಾಯಕರು ನಡೆಸಿದ ಅಬ್ಬರದ ಪ್ರಚಾರವು ಕಾಂಗ್ರೆಸ್ಸಿಗೆ ಹಿಂದೂಗಳ ಮತ ಕಡಿಮೆ ಆಗಲು ಒಂದು ಮುಖ್ಯ ಕಾರಣ. ಈ ಪ್ರಚಾರಾಂದೋಲನವು ಪೂರ್ಣ ಸತ್ಯವಲ್ಲ. ಆದರೆ, 1980ರ ದಶಕದ ನಂತರದಲ್ಲಿ ಇದು ಪರಿಣಾಮಕಾರಿ ಆಗುತ್ತಬಂತು. ರಾಜೀವ್ ಗಾಂಧಿ ಅವರು ಶಾ ಬಾನೊ ಪ್ರಕರಣದಲ್ಲಿ ತೆಗೆದುಕೊಂಡ ನಿರ್ಧಾರ ಹಾಗೂ ರಾಮ ಜನ್ಮಭೂಮಿ– ಬಾಬರಿ ಮಸೀದಿ ವಿಚಾರದಲ್ಲಿ ಕಾಂಗ್ರೆಸ್ ತೆಗೆದುಕೊಂಡ ದ್ವಂದ್ವ ನಿಲುವು ಇದಕ್ಕೆ ಕಾರಣವಾದವು.

ಆದರೆ, ಈಗ ಕಾಂಗ್ರೆಸ್ ಪಕ್ಷವು ತನ್ನ ಹಿಂದೂ ನಿಲುವನ್ನು ಮರುಸ್ಥಾಪಿಸಲು ಹೊರಟಿದೆ. ಹಾಗಾಗಿ, ಹಿಂದೂ ಧರ್ಮದ ಮೂಲ ಮೌಲ್ಯಗಳಲ್ಲಿ ನಂಬಿಕೆ ಇರುವ ಎಲ್ಲರೂ ರಾಹುಲ್ ಅವರ ಭಾಷಣವನ್ನು ಸ್ವಾಗತಿಸಬೇಕು. ಆದರೆ, ಹಿಂದೂಗಳ ಮನಸ್ಸಿನಲ್ಲಿ ಮತ್ತೆ ಕೇಂದ್ರ ಸ್ಥಾನ ಪಡೆದುಕೊಳ್ಳಲು ಕಾಂಗ್ರೆಸ್ ಮಾಡಬೇಕಿರುವ ಕೆಲಸಗಳು ಇನ್ನೂ ಇವೆ. ತಾನು ಹಿಂದೂ ಪರ ನಿಲುವು ತೆಗೆದುಕೊಂಡಿರುವುದು ಭಾರತದ ರಾಜಕಾರಣವನ್ನು ಹಿಂದೂಮಯಗೊಳಿಸಿದ ಬಿಜೆಪಿಯ ತಂತ್ರಗಾರಿಕೆಗೆ ಪ್ರತಿತಂತ್ರ ಅಲ್ಲ, ಬದಲಿಗೆ ತನ್ನಲ್ಲಿನ ಸೈದ್ಧಾಂತಿಕ ಬದಲಾವಣೆಯ ನೈಜ ಅಭಿವ್ಯಕ್ತಿ ಎಂದು ಕಾಂಗ್ರೆಸ್ ಪಕ್ಷವು ಜನರ ಮನಸ್ಸಿಗೆ ಒಪ್ಪುವಂತೆ ಹೇಳಬೇಕು. ಸರ್ವಧರ್ಮ ಸಮಭಾವ ನಿಲುವನ್ನು ತೆಗೆದುಕೊಳ್ಳುವ ಜವಾಬ್ದಾರಿ ಹಿಂದೂಗಳದ್ದು ಮಾತ್ರವೇ ಅಲ್ಲ, ಮುಸ್ಲಿಮರು ಮತ್ತು ಕ್ರೈಸ್ತರು ಕೂಡ ಧರ್ಮನಿರಪೇಕ್ಷತೆ, ಕೋಮು ಸೌಹಾರ್ದ ಕಾಪಾಡುವ ಸಮಾನ ಕರ್ತವ್ಯ ಹೊಂದಿದ್ದಾರೆ ಎಂಬುದನ್ನು ಕಾಂಗ್ರೆಸ್ ಸ್ಪಷ್ಟವಾಗಿ ಹೇಳಬೇಕು. ಹಿಂದೂಗಳ ಮನಸ್ಸು ಗೆಲ್ಲುವ ಯತ್ನದಲ್ಲಿ ಮುಸ್ಲಿಮರು ಹಾಗೂ ಇತರ ಧಾರ್ಮಿಕ ಅಲ್ಪಸಂಖ್ಯಾತರ ನ್ಯಾಯಬದ್ಧ ಆಶೋತ್ತರಗಳನ್ನು ಕಾಂಗ್ರೆಸ್ ಕಡೆಗಣಿಸಬಾರದು. ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಸ್ತ್ರೀ ಸಬಲೀಕರಣದ ಮೌಲ್ಯಗಳ ಪ್ರತಿಷ್ಠಾಪನೆಗೆ ಹಿಂದೂ ಧರ್ಮದಲ್ಲಿ ಸುಧಾರಣೆಗೆ ಕೂಡ ಕಾಂಗ್ರೆಸ್ ಬೆಂಬಲ ನೀಡಬೇಕು. ಭಾರತದಲ್ಲಿ ಇಂದು ಇರುವ ಆಘಾತಕಾರಿ ಮಟ್ಟದ ಸಂಪತ್ತಿನ ಅಸಮಾನ ಹಂಚಿಕೆಯನ್ನು ತಗ್ಗಿಸಲು ಕಾಂಗ್ರೆಸ್ ಪಕ್ಷವು ಸಮಾಜವಾದಿ ಅಭಿವೃದ್ಧಿ ಮಾದರಿಯಲ್ಲಿನ ತನ್ನ ನಂಬಿಕೆಗಳನ್ನು ಯಾವ ಹಿಂಜರಿಕೆಯೂ ಇಲ್ಲದೆ ಹೇಳಬೇಕು. ಅದಕ್ಕಾಗಿ, ಹಿಂದೂ ಧರ್ಮದಲ್ಲಿ ಇರುವ ಸಮಾಜವಾದಿ ಆದರ್ಶಗಳನ್ನು ಪ್ರಚುರಪಡಿಸುವ ಕೆಲಸವನ್ನು ಪಕ್ಷ ಮಾಡಬೇಕು. ಸ್ವಾಮಿ ವಿವೇಕಾನಂದ ಮತ್ತು ಮಹಾತ್ಮ ಗಾಂಧಿ ಅವರ ಮಾತುಗಳಲ್ಲಿ ಈ ಮೌಲ್ಯಗಳು ಕಾಣಿಸುತ್ತವೆ.

ಹಿಂದೂ ಧರ್ಮದ ಉತ್ತಮ ಆಚರಣೆಗಳಲ್ಲಿರುವ ತನ್ನ ಬೇರುಗಳನ್ನು ಕಾಂಗ್ರೆಸ್ ಮರುಶೋಧಿಸಿಕೊಳ್ಳಬೇಕು. ಬದ್ಧತೆ, ವಿಶ್ವಾಸ, ಶ್ರಮದೊಂದಿಗೆ ಅವುಗಳನ್ನು ಮತ್ತೆ ಪೋಷಿಸಬೇಕು. ತಾನು ಸತ್ಯಾಗ್ರಹಿ ಹಿಂದೂಗಳ ಸಂಘಟನೆ, ಬರೀ ಸತ್ತಾ ಆಗ್ರಹಿ ಹಿಂದೂಗಳ ಸಂಘಟನೆ ಅಲ್ಲ ಎಂಬುದನ್ನು ಕ್ರಿಯೆಯಲ್ಲಿಯೂ ತೋರಿಸಿಕೊಡಬೇಕು.

ಚುರುಮುರಿ

ಕಲಾಪ ಕಪ್

• ಮಣ್ಣೆ ರಾಜು

‘ಆಡಳಿತ ಪಕ್ಷ, ವಿರೋಧ ಪಕ್ಷಗಳ ನಡುವಿನ ಚಳಿಗಾಲದ ಟೂರ್ನಿಯ ಕಲಾಪ ಕಪ್ ಯಾರ ಪಾಲಾಗಬಹುದು?’ ಸುಮಿ ಕೇಳಿದಳು.

‘ಇದು ಸೀಮಿತ ಓವರ್‌ಗಳ ಒನ್ ಡೇ ಟೂರ್ನಿ ಅಲ್ಲ, ಟೆನ್ ಡೇ ಮ್ಯಾಚ್. ಎದುರಾಳಿಗಳಿಗೆ ಎದುರೇಟು ಕೊಟ್ಟು ಮುಖಭಂಗ ಮಾಡುವವರು ವಿಜೇತರಾಗಬಹುದು’ ಅಂದ ಶಂಕ್ರಿ.

‘ಆಡಳಿತ ವೈಫಲ್ಯ, ಅಭಿವೃದ್ಧಿ ಕುಂಠಿತ, ಭ್ರಷ್ಟಾಚಾರದ ಬಾಲ್‌ಗಳನ್ನು ಎಸೆದರೆ ಆಡಳಿತ ಪಕ್ಷವನ್ನು ಆಲೌಟ್ ಮಾಡಬಹುದು ಅಲ್ವೇನ್ರೀ?’

‘ಸುಲಭವಲ್ಲ, ಅಪಾಯಕಾರಿ ಬಾಲ್‌ಗಳನ್ನು ರಕ್ಷಣಾತ್ಮಕವಾಗಿ ಆಡಿ, ಕಳಪೆ ಎಸೆತಗಳಿಗೆ ತಕ್ಕ ಉತ್ತರ ನೀಡಿ ತಂಡದ ಸ್ಕೋರ್ ಹೆಚ್ಚಿಸಿಕೊಳ್ಳುವ ಪರಿಣತ ಬ್ಯಾಟರ್‌ಗಳು ಆಡಳಿತ ಪಕ್ಷದಲ್ಲಿ ಇದ್ದಾರಂತೆ’.

‘ಪರ್ಸೆಂಟೇಜ್ ದೌರ್ಬಲ್ಯದ ಸ್ಪಿನ್ ದಾಳಿ ಮಾಡಿದರೆ ಫೇಸ್ ಮಾಡಲಾಗದ ಬ್ಯಾಟರ್‌ಗಳನ್ನು ಎಲ್‌ಬಿಡಬ್ಲ್ಯುಗೆ ಕೆಡವಬಹುದು ಕಣ್ರೀ...’

‘ಸೂಕ್ತ ಪುರಾವೆ ಪ್ರದರ್ಶಿಸದ ಕಾರಣ ಅದು ನೋ ಬಾಲ್ ಆಗಬಹುದು’.

‘ಇಷ್ಟಕ್ಕೇ ವಿರೋಧ ಪಕ್ಷದವರು ಪಂದ್ಯವನ್ನು ಕೈ ಚೆಲ್ಲಲಾರರು, ತಮ್ಮ ಬತ್ತಳಿಕೆಯಲ್ಲಿರುವ ಮತ್ತಷ್ಟು ಮಾರಕ ಅಸ್ತ್ರಗಳನ್ನು ಪ್ರಯೋಗಿಸಿ ಆಡಳಿತ ಪಕ್ಷದ ಮುಖಭಂಗ ಮಾಡ್ತಾರೆ ನೋಡ್ತಿರಿ...’

‘ಅಂಥಾ ಇಕ್ಕಟ್ಟಿನ ಸಂದರ್ಭ ಎದುರಾದರೆ ಆಡಳಿತ ಪಕ್ಷವು ಮತಾಂತರ ನಿಷೇಧದ ರಕ್ಷಣಾತ್ಮಕ ಆಟಕ್ಕೆ ಮೊರೆಹೋಗಿ ಎದುರಾಳಿ ಬೌಲರ್‌ಗಳ ತಾಳ್ಮೆ ಕೆಡಿಸಬಹುದು’.

‘ಜಾತಿಮತದ ವಿರುದ್ಧದ ಆಟ ಆಡೋದು ಕಷ್ಟವೇನ್ರೀ?’

‘ಹೌದು, ಆಹಾರ ಪದ್ಧತಿ ಹಾಗೂ ಜಾತಿ ಇವೆರಡೂ ಅಪಾಯಕಾರಿ. ಇವುಗಳ ವಿರುದ್ಧ ಆಡಿ ಗೆದ್ದವರಿಲ್ಲ. ಅದರಲ್ಲೂ ಜಾತಿ ಎಂಬುದು ಸರ್ಕಸ್ ಸಿಂಹ ಇದ್ದಂತೆ. ಅದರ ಆಟ ನೋಡಿಕೊಂಡು ಆನಂದಪಡಬೇಕಷ್ಟೇ. ಕೆಣಕಿದರೆ ಮೈಮೇಲೆ ಬಿದ್ದು ಅನಾಹುತ ಮಾಡಿಬಿಡುತ್ತದೆ’.

‘ಹೀಗಾದ್ರೆ, ಕಲಾಪ ಟೂರ್ನಿಯ ಚೆಂಡಾಟ ಮತ್ತೊಂದು ಭಂಡಾಟದಂತಾಗಿ ಫಲಿತಾಂಶ ಬಾರದೆ ನೀರಸ ಡ್ರಾನಲ್ಲಿ ಮುಗಿಯುತ್ತೇನೊ ಕಣ್ರೀ...’ ಸುಮಿ ಅನುಮಾನ ವ್ಯಕ್ತಪಡಿಸಿದಳು.

ದಿನದ ಟ್ವೀಟ್

ಮಹತ್ಕಾರ್ಯ ನಿಲ್ಲದಿರಲಿ

ಮೂಡಿಗೆರೆ ತಾಲ್ಲೂಕಿನ ಕೊಟ್ಟಿಗೆಹಾರದಲ್ಲಿ ‘ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ’ದ ಕೆಲಸದಲ್ಲಿ ರಾಜೇಶ್ವರಿ ತೇಜಸ್ವಿ ಅವರು ಅವಿರತವಾಗಿ ನಿರತರಾಗಿದ್ದರು. ಈಗ ಆ ಮಹತ್ಕಾರ್ಯ ನಿಲ್ಲಬಾರದು. ಪ್ರತಿಷ್ಠಾನದ ಯೋಜನೆಗಳು ಕಾರ್ಯಗತವಾಗಲು ಸರ್ಕಾರ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು.

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಕಿಡಿನುಡಿ

ಮುಖ್ಯಮಂತ್ರಿ (ಯೋಗಿ ಆದಿತ್ಯನಾಥ) ಎಷ್ಟು ಚತುರ ಇದ್ದಾರೆ ನೋಡಿ, ಅವರು ಗಂಗಾ ನದಿಯಲ್ಲಿ ಮುಳುಗು ಹಾಕಲೇ ಇಲ್ಲ. ಅವರು ಯಾಕೆ ಮುಳುಗು ಹಾಕಿಲ್ಲ? ನಾನು ಮೀರಠ್‌ಗೆ ಹೋಗಿದ್ದೆ. ಅಲ್ಲಿ ನದಿ ನೀರನ್ನು ನೋಡಿದೆ. ಅದು ಕಪ್ಪು ಬಣ್ಣಕ್ಕೆ ತಿರುಗಿತ್ತು.

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ

25 ವರ್ಷಗಳ ಹಿಂದೆ

ಭಾನುವಾರ, 15-12-1996

• ಮುಳಬಾಗಲು: ಗೋಲಿಬಾರ್ 3 ಸಾವು; ಕರ್ಫ್ಯೂ ಜಾರಿ

ಕೋಲಾರ, ಡಿ. 14– ಮುಳಬಾಗಲು ಪಟ್ಟಣದ ಪ್ರಾರ್ಥನಾ ಮಂದಿರವೊಂದರಲ್ಲಿ ಮಾಂಸದ ತುಂಡುಗಳನ್ನು ಎಸೆದಿದ್ದ ಪ್ರಕರಣದ ವಿರುದ್ಧ ಪ್ರತಿಭಟಿಸಲು ಸೇರಿದ್ದ ಗುಂಪು ಹಿಂಸಾಚಾರಕ್ಕಿಳಿದು ಕಲ್ಲು ತೂರಾಟ ನಡೆಸಿದಾಗ ಪರಿಸ್ಥಿತಿಯನ್ನು ನಿಯಂತ್ರಿಸಲು ಪೊಲೀಸರು ನಡೆಸಿದ ಗೋಲಿಬಾರ್‌ನಲ್ಲಿ ಮೂವರು ಮೃತಪಟ್ಟು ಇಪ್ಪತ್ತಕ್ಕೂ ಹೆಚ್ಚು ಜನರು ಗಾಯಗೊಂಡರು.

ಹಿಂಸಾಚಾರದ ನಂತರ ಪಟ್ಟಣದಲ್ಲಿ ಕರ್ಫ್ಯೂ ಜಾರಿ ಮಾಡಲಾಗಿದೆ. ವ್ಯಾಪಕ ಪೊಲೀಸ್ ಬಂದೋಬಸ್ತ್ ಮಾಡಲಾಗಿದ್ದು, ಪರಿಸ್ಥಿತಿ ಈಗ ನಿಯಂತ್ರಣದಲ್ಲಿದೆ.

• ‘ಇತ್ಯರ್ಥಕ್ಕೆ ಕಾದಿರುವ 3 ಕೋಟಿ ಖಟ್ಲೆಗಳು’

ಬೆಂಗಳೂರು, ಡಿ. 14– ‘ದೇಶದ ವಿವಿಧ ನ್ಯಾಯಾಲಯಗಳಲ್ಲಿ ಮೂರು ಕೋಟಿಗೂ ಅಧಿಕ ಮೊಕದ್ದಮೆಗಳು ಇತ್ಯರ್ಥಕ್ಕಾಗಿ ಕಾದಿದ್ದು, ಇವುಗಳ ವಿಲೇವಾರಿಯಲ್ಲಿ ಆಗುವ ಯಾವುದೇ ವಿಳಂಬವು ನ್ಯಾಯಾಂಗದಲ್ಲಿಯೇ ಜನತೆಯ ವಿಶ್ವಾಸವನ್ನು ಕುಂದಿಸಬಹುದು’ ಎಂದು ಕೇಂದ್ರ ಕಾನೂನು ಸಚಿವ ರಮಾಕಾಂತ ಡಿ. ಖಲಪ್ ಇಲ್ಲಿ ಇಂದು ಎಚ್ಚರಿಸಿದರು.

‘ದಕ್ಷಿಣ ಭಾರತದಲ್ಲಿ ಸುಪ್ರೀಂ ಕೋರ್ಟಿನ ಪೀಠ ಸ್ಥಾಪಿಸಬೇಕು; ಇನ್ನೆಲ್ಲೋ ಒಂದೆಡೆ ಹೈಕೋರ್ಟಿನ ಪೀಠ ಸ್ಥಾಪಿಸಬೇಕು ಎಂಬ ಒತ್ತಾಯವನ್ನು ನ್ಯಾಯಾಂಗದ ಪ್ರಮುಖ ಸೂತ್ರಧಾರಿಗಳಾಗಿರುವ ವಕೀಲರು ಮಾಡುತ್ತಿದ್ದಾರೆ. ಅದು ತಪ್ಪಲ್ಲ. ಆದರೆ, ಬಾಕಿ ಇರುವ ಕೋಟ್ಯಂತರ ಮೊಕದ್ದಮೆಗಳ ಇತ್ಯರ್ಥಕ್ಕೆ ಇದಕ್ಕಿಂತ ಹೆಚ್ಚಿನ ಆದ್ಯತೆ ಅಗತ್ಯ’ ಎಂದು ಅವರು ಪ್ರತಿಪಾದಿಸಿದರು.

50 ವರ್ಷಗಳ ಹಿಂದೆ

ಬುಧವಾರ, 15-12-1971

• ಫಿರಂಗಿ ಪ್ರವಾಹದಿಂದ ಢಾಕಾ ತಲ್ಲಣ

ನವದೆಹಲಿ, ಡಿ. 14– ಬಾಂಗ್ಲಾದ ಢಾಕಾ ನಗರದ ಪಾಕಿಸ್ತಾನಿ ರಕ್ಷಣಾ ವ್ಯೂಹಗಳ ಮೇಲೆ ಭಾರತೀಯ ಸೈನಿಕರು ಇಂದು ಪ್ರಬಲ ಫಿರಂಗಿ ದಾಳಿಯನ್ನು ಆರಂಭಿಸುತ್ತಿದ್ದಂತೆ ಅಲ್ಲಿರುವ ಪಾಕ್ ಲಷ್ಕರಿಶಾಹಿಯ ಕೆಲವು ಅಧಿಕಾರಿಗಳು ನಮ್ಮ ಪಡೆಗೆ ಶರಣಾಗತರಾದರು. ಢಾಕಾ ಐಜಿಪಿ ಸೇರಿ ಅನೇಕ ಅತ್ಯುನ್ನತ ಅಧಿಕಾರಿಗಳು ರಾಜೀನಾಮೆ ನೀಡಿ ಅಂತರರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆಗೆ ರಕ್ಷಣೆಗಾಗಿ ಮೊರೆ ಇಟ್ಟರು.

ಇನ್ನೂ ಪಾಕಿಸ್ತಾನದ ವಶದಲ್ಲಿರುವ ರಾಜಧಾನಿ ಢಾಕಾದತ್ತ ಪೂರ್ವ ಮತ್ತು ಉತ್ತರ ದಿಕ್ಕುಗಳಿಂದ ನಮ್ಮ ಪಡೆಗಳು ಮುನ್ನಡೆಯುತ್ತಿವೆ. ಮುತ್ತಿಗೆ ‘ಬಹಳ ಯಶಸ್ವಿಯಾಗಿದೆ’.

• ಭದ್ರತಾ ಮಂಡಳಿಗೆ ಫ್ರಾನ್ಸ್-ಬ್ರಿಟನ್ ಹೊಸ ನಿರ್ಣಯ

ವಿಶ್ವಸಂಸ್ಥೆ, ಡಿ. 14– ಭಾರತ– ಪಾಕಿಸ್ತಾನಗಳ ನಡುವಣ ಯುದ್ಧವನ್ನು ಅಂತ್ಯಗೊಳಿಸಲು ಹೊಸ ಭದ್ರತಾ ಮಂಡಳಿ ಸೂತ್ರದ ಬಗ್ಗೆ ಬ್ರಿಟನ್ ಮತ್ತು ಫ್ರಾನ್ಸ್‌ಗಳು ಇಂದು ಕಾರ್ಯನಿರತವಾಗಿದ್ದವೆಂದು ವರದಿಯಾಗಿದೆ.

ವಾಸ್ತವಿಕ ಪರಿಸ್ಥಿತಿಗೆ ಮನ್ನಣೆ ಕೊಡುವ ಈ ಎರಡು ರಾಷ್ಟ್ರಗಳ ನಿರ್ಣಯಕ್ಕೆ ಭದ್ರತಾ ಮಂಡಳಿಯಲ್ಲಿ ಸರ್ವಾನುಮತದ ಬೆಂಬಲ ದೊರಕುವ ನಿರೀಕ್ಷೆ ಇದೆ.

ಸಂಗತ

ಜೀವನ್ಮುಖಿಯಾಗಲಿ ನಮ್ಮ ಜಗತ್ತು

ಎದೆಭಾರ ಕಳೆದುಕೊಳ್ಳುವ ಸುಸಂದರ್ಭಗಳನ್ನು ನಮಗಾಗಿ ಸೃಷ್ಟಿ ಮಾಡಿಕೊಳ್ಳಲೇಬೇಕಾದ ಅನಿವಾರ್ಯ ಸಂದರ್ಭ ಇದು

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಹಿರಿಯರೊಬ್ಬರು ಮೊನ್ನೆ ದಾರಿಯಲ್ಲಿ ಸಿಕ್ಕ ತಮ್ಮ ಹಳೆಯ ಗೆಳೆಯರೊಬ್ಬರ ಮಗನನ್ನು ಮಾತನಾಡಿಸುತ್ತಾ ಅವರ ಮನೆಯವರೆಗೂ ನಡೆದುಹೋಗಿದ್ದರು. ಆದರೆ ಗೇಟಲ್ಲಿಂದಲೇ ‘ಸರಿ ಬರ್ತೀನಿ... ಬಾಯ್ ಅಂಕಲ್’ ಅಂತ ಒಳನಡೆದ ಯುವಕನ ನಡವಳಿಕೆ ಬಗ್ಗೆ, ಕುಟುಂಬದ ಹಿತೈಷಿಯಾಗಿದ್ದ ಹಿರಿಯರಿಗೆ ಅತೀವ ಬೇಸರವಾಯಿತು.

ಮನುಷ್ಯ ಸಮಾಜಜೀವಿ, ತಾವು ಸಮಾಜದೊಟ್ಟಿಗೆ ಬದುಕಬೇಕಾದವರು ಅನ್ನುವ ಪ್ರಜ್ಞೆಯನ್ನೇ ಹೊಸ ಪೀಳಿಗೆಯು ಮರೆಯಲು ಕಾರಣವೇನು? ‘ಯಾರ ಹಂಗೇನಿದೆ’ ಎಂಬ ಮನಃಸ್ಥಿತಿಯಲ್ಲಿ ತಮ್ಮ ಪರಿಧಿಯನ್ನು ನಿರಂತರವಾಗಿ ಸಂಕುಚಿಸಿಕೊಳ್ಳಲು ಕಾರಣವೇನು? ಮನೆ ಮತ್ತು ಸಮಾಜದ ಬಾಹ್ಯ ಒತ್ತಡದಲ್ಲಿ ಮಕ್ಕಳು ತಮಗೊಪ್ಪದ, ತಮ್ಮದಲ್ಲದ ಭಾಷೆ, ಓದು, ಅಂಕ, ಹುದ್ದೆ ಮತ್ತು ಸಂಪತ್ತಿನ ಕ್ರೋಡೀಕರಣವನ್ನೇ ಯಶಸ್ಸೆಂದು ಪರಿಭಾವಿಸಿ ಕೃತಕ ಬದುಕಿಗೆ ಬಂದಿಯಾಗುವ ಬಗೆ ಕಣ್ಣೆದುರಿಗಿದೆ. ಮಕ್ಕಳನ್ನು ಕಾನ್ವೆಂಟ್ ಸಂಸ್ಕೃತಿಗೆ ತಳ್ಳಿ, ಅಂಕ-ರ‍್ಯಾಂಕ್‌ಗಳ ಆಧಾರದ ಮೇಲಿನ ಜೀವನಕ್ರಮಕ್ಕೂ ಕೇವಲ ಕಾಸು ತರುವ ಉದ್ಯೋಗಕ್ಕೂ ಬೆನ್ನುಬಿದ್ದದ್ದರ ಪರಿಣಾಮವದು.

ಆಗೆಲ್ಲಾ ಸಿದ್ಧಮಾದರಿಯಾಗಿ ಮನೆಯ ಒಳ ಹೊರಗು ಲಭ್ಯವಿದ್ದ ಬದುಕಿನ ಪಾಠಗಳಲ್ಲಿ, ಬೆವರಿನ ಕಥೆಗಳಲ್ಲಿ ಜೀವನಮೌಲ್ಯಗಳ ಬೀಜ ಬಿತ್ತನೆ ಸಾಧ್ಯವಿತ್ತು. ಯಾರಾದರೂ ನಮ್ಮೆಡೆಗೆ ಆತ್ಮೀಯತೆ ತೋರುತ್ತಾರೆಂದರೆ ಅಲ್ಲೇನೋ ವಂಚನೆಯ ಸಂಚಿದೆ ಎಂದು ಅನುಮಾನ ಪಡಬೇಕಾದ ಸಂದರ್ಭವಿದು!

ಈಗೀಗ ಲೆಕ್ಕಾಚಾರದ ಬದುಕಿನಲ್ಲಿ ಸ್ವಾರ್ಥ-ಸಂಕುಚಿತತೆಯೊಂದಿಗೆ ಬೇರೂರಿದ ಧನದಾಹ ಮತ್ತು ಯಾಂತ್ರಿಕ ಜೀವನಕ್ರಮವು ಬಾಂಧವ್ಯದ ತಂತುವನ್ನು ಸಡಿಲಗೊಳಿಸಿದೆ. ಪೇಟೆ- ಪಟ್ಟಣಗಳು ಒಡನಾಟದ ಬೆಸುಗೆಯಲ್ಲಿ ನಿರ್ಜೀವೀಕರಣಗೊಂಡಾಗಿದೆ. ಹೃದಯ ವೈಶಾಲ್ಯದಿಂದ ಜೀವಿಸುತ್ತಿದ್ದ ಅನ್ನದಾತ ಹಳ್ಳಿಗಳೂ ಹೀಗೆ ಜಡವಾದರೆ ನಾಳೆಗಳ ಕಥೆ ಏನು? ಪೇಟೆಯೆಡೆಗೆ ವಲಸೆ ಹೊರಡುವ ಯುವಶಕ್ತಿಯ ಏಕಮುಖ ಪ್ರವಾಹದಲ್ಲಿ ಹಳ್ಳಿಗಳು ತಮ್ಮ ವೈಭವ ಹಾಗಿರಲಿ ಗುಣ-ಚೈತನ್ಯವನ್ನೂ ಕಳೆದುಕೊಂಡು ನಿತ್ರಾಣಗೊಳ್ಳುತ್ತಿವೆ.

ಹಿಂದೆಲ್ಲಾ, ಇದ್ದ ಅಲ್ಪ ಸೌಖ್ಯದಲ್ಲಿ ಸಹನೆಯೂ ವಿನಯವೂ ಇದ್ದವು. ಮೈಲಿಗೊಂದು ಮನೆಯಿದ್ದರೂ ಮುಖತಃ ಮಾತಾಡಿಬರಲು ಪುರಸತ್ತು ಇತ್ತು. ಕಷ್ಟ-ಸುಖಗಳಲ್ಲಿ ಪರಸ್ಪರ ಪಾಲ್ಗೊಳ್ಳುವಿಕೆಯಿತ್ತು. ಸಹಬಾಳ್ವೆಯ ಖುಷಿಯಿತ್ತು. ಇವತ್ತು ಹಾಗಿಲ್ಲ. ಬದುಕು ಅವಸರದ ಬೆನ್ನೇರಿದೆ. ಮನುಷ್ಯ ಸಾಕ್ಷರನಾದಂತೆಲ್ಲಾ ಸ್ವಾರ್ಥಿಯಾಗಿಬಿಟ್ಟ, ಸೌಲಭ್ಯ ಹೆಚ್ಚಿದಂತೆಲ್ಲಾ ಸಂಕುಚಿತತೆಯಲ್ಲಿ ಬಂದಿಯಾದ. ತನ್ನದೇ ಮುಕ್ತ ಮಾತು, ನಿರಾಳ ನಗು, ಸಹಜ ಭಾವಗಳನ್ನು ಮರೆತ.

ಮೊಬೈಲು, ಇಂಟರ್ನೆಟ್ ಯುಗದ ಸಂಪರ್ಕ ಕ್ರಾಂತಿಯು ಜಗತ್ತನ್ನು ಕಿರಿದಾಗಿಸಿ ದೂರದೇಶದ ಅನಾಮಿಕರೊಟ್ಟಿಗೆ ಸಂಬಂಧ ಬೆಸೆದಿದ್ದರೂ ಪಕ್ಕದಲ್ಲೇ ಕುಳಿತವರ ಬಗೆಗೊಂದು ದಿವ್ಯನಿರ್ಲಕ್ಷ್ಯ ತಳೆಯಲು ಕಾರಣವಾಗಿರುವುದು ಸುಳ್ಳಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಅಪಾರ ಸ್ನೇಹಿತರನ್ನು ಕಲೆಹಾಕುವ ಭ್ರಮೆಯಲ್ಲಿ ನೆರೆಮನೆಯವರೊಟ್ಟಿಗೆ ಅಪರಿಚಿತರಾಗಿ ಉಳಿದು ನಾವೀಗ ದ್ವೀಪದಂತೆ ಬದುಕುವುದನ್ನು ರೂಢಿಸಿಕೊಂಡಿದ್ದೇವೆ. ಧಾವಂತದ ಬದುಕಿನ ಭಾಗವಾಗಿ ಎರಗಿರುವ ಅಪರಿಮಿತ ಒತ್ತಡಗಳನ್ನು ಮೀರಿ ಸಾವಧಾನ ಮತ್ತು ಮನೋಸ್ಥೈರ್ಯವನ್ನು ಕಾಯ್ದುಕೊಳ್ಳುವ, ಜೀವನೋತ್ಸಾಹವನ್ನು ಸಾಕಿಕೊಳ್ಳಬೇಕಾದ ಸವಾಲು ನಮಗಿದೆ.

ಹಲವೆಡೆ ಕೊರೊನಾದ ಕಾಲಘಟ್ಟವು ತಂದೊಡ್ಡಿರುವ ಸಾವು-ನೋವು, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತ್ಯಂತರಗಳಲ್ಲಿ ಮನಸ್ಸು ಮರಗಟ್ಟಿದೆ. ಸದ್ಯದ ಸಂಕಟದಿಂದ ಪಾರಾಗುವ ಮಾರ್ಗವನ್ನು ಅತ್ಯಂತ ಜರೂರಾಗಿ ಹುಡುಕಿಕೊಳ್ಳಬೇಕಿದೆ.

ಬಹುಮುಖ್ಯವಾಗಿ, ಪ್ರತಿಷ್ಠೆ ಬದಿಗೊತ್ತಿ ತೆರೆದ ಮನಸ್ಸಿನಿಂದ ಪರಿಚಿತರೊಟ್ಟಿಗೆ ಪರಸ್ಪರ ಬೆರೆಯುವಂತಾಗಬೇಕು. ಅಕ್ಕಪಕ್ಕದವರು, ಬಂಧುಗಳ ಮನೆಗಳಿಗೆ ಆಗಾಗ ಭೇಟಿ ನೀಡುವ, ಇರುವುದನ್ನು ಹಂಚಿ ತಿನ್ನುವ, ಕಷ್ಟಸುಖಗಳಿಗೆ ಪರಸ್ಪರ ಕಿವಿಯಾಗುವ, ಸಣ್ಣದೊಂದು ಕುಶಲೋಪರಿಯಲ್ಲಿ ಕೂತು ಹರಟುವ, ಹಗುರಾಗುವ ಅಗತ್ಯವೀಗ ಹಿಂದೆಂದಿಗಿಂತಲೂ ಹೆಚ್ಚಿದೆ. ವಾಸ್ತವವನ್ನು ಒಪ್ಪಿಕೊಳ್ಳುವ, ವಿಭಿನ್ನ ಆಚಾರ- ಸಂಸ್ಕೃತಿಯನ್ನು ಸಹಿಸಿಕೊಳ್ಳುವ, ಇತರರ ಸದ್ಗುಣ- ಸಾಧನೆಗಳನ್ನು ಪ್ರಶಂಸಿಸುವ ಮನೋಭಾವ ಹೊಂದುವುದು ಅಪೇಕ್ಷಣೀಯ.

ಮನುಷ್ಯನನ್ನುಳಿದ ಜಗತ್ತಿನ ಜೀವಪ್ರಭೇದಗಳು ಸಮತೆಯನ್ನು ಬದುಕುತ್ತವೆ. ಮಮತೆಗೆ ಹಾತೊರೆಯುತ್ತವೆ. ಮನುಷ್ಯ ಮಾತ್ರ ಹುಟ್ಟಿನ ಕಾರಣಕ್ಕೆ ಜಾತಿ- ಧರ್ಮ, ಹಣ- ಅಂತಸ್ತು, ದೇಶ- ಭಾಷೆಗಳ ಗೋಡೆಗಳಲ್ಲಿ ಪ್ರತ್ಯೇಕಗೊಳ್ಳುತ್ತಾನೆ. ಎಲ್ಲಾ ಥರದ ಭೇದಭಾವದ ಗಡಿಬೇಲಿಯನ್ನು ಕಿತ್ತೊಗೆದು ಗೆರೆಯಾಚೆಯ ವಿಶಾಲ ಬಯಲಿನಲ್ಲಿ ಮನೆಮಕ್ಕಳು ಆಡಿ ಬೆಳೆಯುವಂತಾದರೆ ಭವಿಷ್ಯದಲ್ಲಿ ಸಮಾಜವು ಅನಾಚಾರ, ಹಿಂಸೆ- ಕ್ರೌರ್ಯಗಳ ವಿಜೃಂಭಣೆ, ಮೌಲ್ಯ ಕುಸಿತದ ಕಳವಳವನ್ನು ಕಳೆದೀತು. ಪ್ರೀತಿ, ಸ್ನೇಹ, ಸಹಿಷ್ಣುತೆ, ಸಹಬಾಳ್ವೆಯ ಬಗ್ಗೆ ಪುಂಖಾನುಪುಂಖ ಪ್ರವಚನ ನೀಡಬೇಕಾದ ದರ್ದು ಕೂಡ ಕಡಿಮೆಯಾದೀತು.

ಯಶವಂತ ಚಿತ್ತಾಲರು ಹೇಳಿದಂತೆ ‘ನಾವು ಮನುಷ್ಯರಾಗಿ ಹುಟ್ಟಿಲ್ಲ, ಮನುಷ್ಯರಾಗಲು ಹುಟ್ಟಿದ್ದೇವೆ’. ಹಾಗಾಗಿ ಎಲ್ಲರೊಳಗೊಂದಾಗುವುದು ಮುಖ್ಯ. ದುರಾಸೆ, ಅತಿರೇಕ, ತಲ್ಲಣಗಳಲ್ಲಿ ಬೇಯುತ್ತಿರುವ ಮನಸ್ಸನ್ನು ಸಂತೈಸಿಕೊಳ್ಳಬೇಕು. ಮನಸ್ಸು ಕದಡುವ ನಕಾರಾತ್ಮಕತೆಗಳಿಂದ, ಟಿ.ವಿ-ಮೊಬೈಲು ಹಾವಳಿಗಳಿಂದ ಪಾರಾಗಿ, ಇಷ್ಟದ ವ್ಯಕ್ತಿ- ವಿಚಾರಗಳ ಸಾಂಗತ್ಯದಲ್ಲಿ ಜೀವನ್ಮುಖಿಯಾಗಿ ಅರಳುವ ಬಗೆಯನ್ನು ಅರಸಬೇಕು.

ವಾಚಕರ ವಾಣಿ

ನಿವೃತ್ತ ಕಾರ್ಮಿಕರತ್ತ ಚಿತ್ತ ಹರಿಸಿ

ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲಿ ದಶಕಗಳ ಕಾಲ ಕಾರ್ಮಿಕರಾಗಿ ದುಡಿದವರಿಗೆ, 1995ರಲ್ಲಿ ಜಾರಿಗೆ ಬಂದ ಇ.ಪಿ.ಎಫ್. ಮೂಲಕ ಸಿಗುವ ನಿವೃತ್ತಿ ವೇತನ ಕೇವಲ ₹ 500ರಿಂದ 1,900. ಆದರೆ ನಾಲ್ಕನೇ ದರ್ಜೆಯ ಸರ್ಕಾರಿ ನೌಕರರು ಸಹ ತಿಂಗಳಿಗೆ ₹ 20 ಸಾವಿರದಿಂದ 25 ಸಾವಿರದವರೆಗೆ ನಿವೃತ್ತಿ ವೇತನವನ್ನು ಪಡೆಯುತ್ತಿದ್ದಾರೆ. ಈಗ ಪೆಟ್ರೋಲ್‌ನಿಂದ ಅಡುಗೆ ಎಣ್ಣೆಯವರೆಗೆ ಶೇ 50ರಿಂದ 65ರಷ್ಟು ಬೆಲೆ ಏರಿಕೆಯಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರಿಗೆ ಆಗಾಗ ತುಟ್ಟಿಭತ್ಯೆಯನ್ನು ನೀಡಲಾಗುತ್ತದೆ. ಆದರೆ ಸೇವಾ ದಿನಗಳಲ್ಲಿ ದುಡಿಮೆಯ ಮೂಲಕ ದೇಶದ ವರಮಾನಕ್ಕೆ ಕೊಡುಗೆ ನೀಡಿರುವ ಕಾರ್ಖಾನೆಗಳ ಕಾರ್ಮಿಕರಿಗೆ ಮಾತ್ರ ಇಂತಹ ಯಾವುದೇ ಸೌಲಭ್ಯವಿಲ್ಲ.

ಇಂದಿನ ದಿನಗಳಲ್ಲಿ ಈ ನಿವೃತ್ತ ಕಾರ್ಮಿಕರು ಜೀವನ ನಡೆಸುವುದು ಕಷ್ಟವಾಗಿದೆ. ಹೀಗಾಗಿ ಸರ್ಕಾರ ಅವರಿಗೆ ಕನಿಷ್ಠ ₹ 10,000 ನಿವೃತ್ತಿ ವೇತನ ವಿತರಣೆಗೆ ಕ್ರಮ ಕೈಗೊಳ್ಳಬೇಕು.

ಸಿ.ಕಾಳಯ್ಯ, ಬೆಂಗಳೂರು

ಅಸಹನೀಯ ಅಸಮಾನತೆ

‘ವಿಶ್ವ ಅಸಮಾನತೆ– 2022’ ವರದಿಯ ಪ್ರಕಾರ, ಜಗತ್ತಿನಲ್ಲಿ ಭಾರತವು ಅತಿ ಅಸಮಾನತೆಯುಳ್ಳ ದೇಶವಾಗಿದೆ. ಇಲ್ಲಿ ಒಟ್ಟು ಜನಸಂಖ್ಯೆಯ ಶೇ 1ರಷ್ಟು ಜನರು ದೇಶದ ಒಟ್ಟು ವರಮಾನದಲ್ಲಿ ಶೇ 22ರಷ್ಟು ಪಾಲು ಪಡೆದಿದ್ದರೆ, ಸಾಮಾಜಿಕ ಸ್ತರವಿನ್ಯಾಸದ ಕೆಳಗಿನ ಶೇ 50ರಷ್ಟು ಜನರು ಒಟ್ಟು ವರಮಾನದಲ್ಲಿ ಶೇ 13ರಷ್ಟು ಪಾಲು ಪಡೆದಿದ್ದಾರೆ. ವಸಾಹತು ಕಾಲದಲ್ಲಿ (1858-1947) ದೇಶದ ಶೇ 10ರಷ್ಟು ಜನರು ದೇಶದ ವರಮಾನದಲ್ಲಿ ಶೇ 50ರಷ್ಟು ಪಾಲು ಪಡೆದಿದ್ದರು.

ಸ್ವಾತಂತ್ರ್ಯೋತ್ತರ ಎರಡು- ಮೂರು ದಶಕಗಳಲ್ಲಿ ಇವರ ಪಾಲು ಶೇ 35ರಿಂದ ಶೇ 40ಕ್ಕಿಳಿದಿದೆ. ಆದರೆ 21ನೆಯ ಶತಮಾನದಲ್ಲಿ ಇವರ ಪಾಲು ರಾಕ್ಷಸ ಸ್ವರೂಪದಲ್ಲಿ ಏರಿಕೆಯಾಗುತ್ತಿದೆ. ಉದಾ: ದೇಶದಲ್ಲಿನ ಕುಟುಂಬಗಳ ಸರಾಸರಿ ಸಂಪತ್ತು ₹ 9.83 ಲಕ್ಷ. ಆದರೆ ಕೆಳಸ್ತರದ ಕುಟುಂಬಗಳ ಸರಾಸರಿ ಸಂಪತ್ತು ₹ 0.66 ಲಕ್ಷ. ಮಧ್ಯಮವರ್ಗದ ಸರಾಸರಿ ಸಂಪತ್ತು ₹ 7.23 ಲಕ್ಷ. ಅತಿ ಶ್ರೀಮಂತರ ಸರಾಸರಿ ಸಂಪತ್ತು ₹ 63.54 ಲಕ್ಷ. ಅತ್ಯಂತ ಶ್ರೀಮಂತರ ಸರಾಸರಿ ಸಂಪತ್ತು ₹ 324.49 ಲಕ್ಷ.

ಈ ಬೆಳವಣಿಗೆಯು ನಮ್ಮ ಸಂವಿಧಾನದ ಭಾಗ 4ರ ಪರಿಚ್ಛೇದ 38ರ ಸೆಕ್ಷನ್ 2ರ ಉಲ್ಲಂಘನೆಯಾಗಿದೆ. ಆದ್ದರಿಂದ ಇದನ್ನು ತಡೆಯುವುದು ಸರ್ಕಾರದ ಕರ್ತವ್ಯ. ಈ ಆರ್ಥಿಕ ಅಸಮಾನತೆಯ ಜೊತೆಯಲ್ಲಿ ‘ಸನಾತನ ಅಸಮಾನತೆ’ ಮತ್ತು ‘ಜಾತಿ ಅಸಮಾನತೆ’ ಸೇರಿದರೆ ಜನರ ಬದುಕು ಅಸಹನೀಯವಾಗುತ್ತದೆ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಮಾಸ್ಕ್ ಬಳಕೆ ಇಳಿಕೆ ಯಾಕೆ?

ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ಓಮೈಕ್ರಾನ್ ಕಾಣಿಸಿಕೊಂಡಿರುವ ಈ ಸಂದರ್ಭದಲ್ಲಿ, ಮಾಸ್ಕ್ ಬಳಕೆ ಮತ್ತು ಲಸಿಕೆ ಹಾಕಿಸಿಕೊಳ್ಳುವಿಕೆಯಲ್ಲಿ ಜನರು ನಿರಾಸಕ್ತಿ ತೋರಿಸುತ್ತಿರುವುದು ಶೋಚನೀಯ ಸಂಗತಿ. ಈಗಾಗಲೇ ಕೊರೊನಾದಿಂದ ಜನ ಬಹಳಷ್ಟು ಸಂಕಷ್ಟ ಅನುಭವಿಸಿದ್ದಾರೆ.

ದೇಶದ ಆರ್ಥಿಕ ಸ್ಥಿತಿಯಲ್ಲಿ ಏರುಪೇರಾಗಿದೆ. ಸಾವಿರಾರು ಜನರು ಕೆಲಸ ಕಳೆದುಕೊಂಡು ಕಂಗಾಲಾಗಿದ್ದಾರೆ. ವಸ್ತುಸ್ಥಿತಿ ಹೀಗಿರುವಾಗ, ಸೋಂಕಿನ ವಿರುದ್ಧ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಾದುದು ಜನರ ಕರ್ತವ್ಯವಲ್ಲವೇ?

ಇಂದಿರಾ ಶ್ರೀಧರ್, ಮಳಲಕೆರೆ

ಮತಾಂತರ: ಅಜ್ಞಾನ ತೊಡೆಯುವ ಪ್ರಯತ್ನಗಳಾಗಲಿ

ಬೆಳಗಾವಿಯಲ್ಲಿ ಈಗ ನಡೆಯುತ್ತಿರುವ ವಿಧಾನಮಂಡಲ ಅಧಿವೇಶನದಲ್ಲಿ ಸರ್ಕಾರವು ಮತಾಂತರ ನಿಷೇಧ ಮಸೂದೆ ಮಂಡನೆಯ ಸುಳಿವನ್ನು ನೀಡಿರುವ ಸುದ್ದಿಯು ಬಿಜೆಪಿಯ ಮೂಲವಾದ ಆರ್‌ಎಸ್‌ಎಸ್‌ನ ಮತೀಯ ಭ್ರಮೆಯ ಕುರುಹನ್ನು ಸೂಚಿಸುತ್ತದೆ. ಇದು, ರಾಜಕೀಯ ನಾಟಕದ ಮತ್ತೊಂದು ಅಂಕ. ಸಂವಿಧಾನದ 25 (1)ನೇ ವಿಧಿಯಲ್ಲಿ ಹೇಳಿರುವ ಧಾರ್ಮಿಕ ಸ್ವಾತಂತ್ರ್ಯದ ಉಲ್ಲಂಘನೆ.

ಒಬ್ಬ ವೈದ್ಯ ಜ್ವರ ಅಥವಾ ರೋಗದ ಮೂಲಕಾರಣವನ್ನು ಕಂಡುಕೊಂಡು ಅದಕ್ಕೆ ಸೂಕ್ತವಾದ ಔಷಧೋಪಚಾರ ಮಾಡುತ್ತಾನೆಯೇ ವಿನಾ ಕೇವಲ ಜ್ವರವನ್ನು ಇಳಿಸುವ ಯಾವುದೋ ಒಂದು ಮಾತ್ರೆಯನ್ನು ಕೊಟ್ಟು ಕಳಿಸಿದರೆ ರೋಗ ವಾಸಿಯಾಗದು. ಮತಾಂತರದ ಮೂಲ ಕಾರಣ ಏನು ಎಂಬುದರ ಬಗ್ಗೆ ಸ್ವಾಮಿ ವಿವೇಕಾನಂದರು ಹೀಗೆ ಅಭಿಪ್ರಾಯಪಟ್ಟಿದ್ದಾರೆ: ಕ್ರೈಸ್ತ ಮಿಷನರಿಗಳು ಭಾರತಕ್ಕೆ ಬಂದು ಮತಾಂತರ ಮಾಡುವುದನ್ನು ವಿರೋಧಿಸುವ ಅವರು, ‘ಬಲಪ್ರಯೋಗದಿಂದ ಅವರನ್ನು (ಹಿಂದೂ ಜನರನ್ನು) ಇಸ್ಲಾಂ ಮತಕ್ಕೆ ಸೇರಿಸಿದರು ಎನ್ನುವುದು ಶುದ್ಧ ತಪ್ಪು. ಜಮೀನುದಾರರ ಉಪಟಳದಿಂದ, ಪುರೋಹಿತರ ಹಿಂಸೆಯಿಂದ ತಪ್ಪಿಸಿಕೊಳ್ಳಬೇಕೆಂದು ಮುಸಲ್ಮಾನರಾದರು. ಬ್ರಾಹ್ಮಣರ ಬಂಧನದಿಂದ ಪಾರಾಗಲು ಯತ್ನಿಸಿದ ಜನಸಾಮಾನ್ಯರು ಕ್ರೈಸ್ತಧರ್ಮ ಮುಂತಾದ ದೇಶದೊಳಗಿನ ವಿರೋಧಿ ಮತಧಾರ್ಮಿಕ ಹಾವಳಿಗೆ ಸಿಕ್ಕಿದರು’ ಎನ್ನುತ್ತಾರೆ.

ಲಕ್ಷಾಂತರ ಮಂದಿಯೊಂದಿಗೆ ಬೌದ್ಧಧರ್ಮಕ್ಕೆ ಮತಾಂತರಗೊಂಡ ಡಾ. ಅಂಬೇಡ್ಕರ್ ಅವರು, ‘ದಲಿತರು ಹಿಂದೂ ಧರ್ಮವನ್ನು ತೊರೆದು, ಬೇರೆ ಧರ್ಮಗಳನ್ನು ಅಪ್ಪಿಕೊಳ್ಳುವ ಮೂಲಕ ವಿಮೋಚನೆ ಪಡೆಯಬೇಕು’ ಎಂದದ್ದಾದರೂ ಏಕೆ? ಈ ಮಾತುಗಳು ಮತಾಂತರದ ಕಾರಣವನ್ನು ಮತ್ತು ಅದರಿಂದ ಮಾತ್ರ ಶೋಷಿತವರ್ಗಗಳು ವಿಮುಕ್ತಿ ಪಡೆಯುತ್ತವೆ ಎಂಬ ಕಠೋರ ಸತ್ಯವನ್ನು ನಮ್ಮೆದುರು ಎತ್ತಿ ತೋರಿಸುತ್ತಿವೆ. ಶತ ಶತಮಾನಗಳಿಂದ ಬಂದಿರುವ ಈ ತಾರತಮ್ಯವನ್ನು ಸರಿಪಡಿಸುವ ಬದಲು ‘ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಎಳೆದರು’ ಎಂಬಂತೆ ಅರ್ಥಹೀನ ಆಜ್ಞೆಗಳನ್ನು ಮಾಡುತ್ತ ಹೋದರೆ, ಪರಿಸ್ಥಿತಿಯಲ್ಲಿ ಏನೂ ಬದಲಾವಣೆಯಾಗದು. ಆದ್ದರಿಂದ ಈ ರೀತಿಯ ಒರಟು ಕಾನೂನುಗಳಿಗಿಂತ ಎರಡೂ ಕಡೆಯ ಗುಂಪುಗಳ– ಜನರ ಅಜ್ಞಾನ, ಆತಂಕಗಳನ್ನು ಹೋಗಲಾಡಿಸುವ ರಚನಾತ್ಮಕ ಪ್ರಯತ್ನಗಳನ್ನು ಕೈಗೊಳ್ಳುವುದು ಲೇಸಲ್ಲವೇ?

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸುಂದರಿಯರ ಸೇವಾಭಾವ

ಅಮೆರಿಕದ ಮಿಸ್ ಯೂನಿವರ್ಸ್ ಆರ್ಗನೈಸೇಷನ್ (ಎಂಯುಒ) ಪ್ರತಿ ವರ್ಷ ಭುವನ ಸುಂದರಿ ಸ್ಪರ್ಧೆಯನ್ನು ನಡೆಸುತ್ತದೆ. ಇದು ಮಹಿಳೆಯರಿಗಾಗಿ ಮಹಿಳೆಯರೇ ಸ್ಥಾಪಿಸಿ, ಮಹಿಳೆಯರೇ ನಡೆಸುತ್ತಿರುವ ಸಂಘಟನೆಯಾಗಿದೆ. ಭುವನ ಸುಂದರಿ ಸ್ಪರ್ಧೆ ಮತ್ತು ವಿಜೇತರನ್ನು ಬಳಸಿಕೊಂಡು, ವಿಶ್ವದ ಹಲವೆಡೆ ಸಾಮಾಜಿಕ ಕಾರ್ಯಗಳನ್ನು ನಡೆಸುವ ಕೆಲಸವನ್ನು ಎಂಯುಒ ಮಾಡುತ್ತಿದೆ. ಈ ಕಾರಣದಿಂದಲೇ ಸಾಮಾಜಿಕ ಕ್ಷೇತ್ರದಲ್ಲಿ ಕೆಲಸ ಮಾಡಿದವರೇ ಹೆಚ್ಚಿನ ಸಂದರ್ಭದಲ್ಲಿ ಸ್ಪರ್ಧೆಗಳಲ್ಲಿ ವಿಜೇತರಾಗುತ್ತಾರೆ.

ವಿಶ್ವದ ಎಲ್ಲಾ ಸಂಸ್ಕೃತಿಯ ಮತ್ತು ಎಲ್ಲಾ ಹಿನ್ನೆಲೆಯ ಮಹಿಳೆಯರ ಸಾಧನೆಗಳನ್ನು ಸಂಭ್ರಮಿಸುವ ಉದ್ದೇಶದಿಂದ ಈ ಸಂಘಟನೆಯು ಭುವನ ಸುಂದರಿ ಸ್ಪರ್ಧೆಯನ್ನು ನಡೆಸುತ್ತಾ ಬಂದಿದೆ. ಈ ಸ್ಪರ್ಧೆಯ ಮೂಲಕ ಮಹಿಳೆಯರಲ್ಲಿ ವಿಶ್ವಾಸ ವೃದ್ಧಿಸುವ ಕೆಲಸ ಮಾಡಲಾಗುತ್ತದೆ ಎಂದು ಎಂಯುಒ ಹೇಳಿಕೊಂಡಿದೆ. ಭುವನ ಸುಂದರಿ ಮಾತ್ರವಲ್ಲದೆ 'ಮಿಸ್ ಯುಎಸ್‌ಎ' ಮತ್ತು 'ಮಿಸ್ ಟೀನ್ ಯುಎಸ್‌ಎ' ಸ್ಪರ್ಧೆಗಳನ್ನೂ ಎಂಯುಒ ಆಯೋಜಿಸುತ್ತದೆ. ಪ್ರತಿ ವರ್ಷ ಈ ಮೂರೂ ಸ್ಪರ್ಧೆಗಳಲ್ಲಿ ಸ್ಪರ್ಧಿಸಲು 10,000 ಯುವತಿಯರಿಗೆ ಅವಕಾಶ ನೀಡಲಾಗುತ್ತದೆ.

ವಿಶ್ವದಾದ್ಯಂತ ವಿವಿಧ ಸಾಮಾಜಿಕ ಕಾರ್ಯಗಳಿಗಾಗಿ ನಿಧಿ ಸಂಗ್ರಹ ಮತ್ತು ಸೇವೆ ನೀಡುವಲ್ಲಿ ಎಂಯುಒ ಹಲವು ಸ್ವಯಂಸೇವಾ ಸಂಸ್ಥೆಗಳೊಂದಿಗೆ ಕೈಜೋಡಿಸಿದೆ. ಈ ಎಲ್ಲಾ ಕಾರ್ಯಗಳಲ್ಲಿ ಆ ವರ್ಷದ ವಿಜೇತರು ರಾಯಭಾರಿಯಾಗಿ ಸೇವೆ ಸಲ್ಲಿಸುತ್ತಾರೆ. ವಿಶ್ವದ 85 ಅಭಿವೃದ್ಧಿಶೀಲ ದೇಶಗಳಲ್ಲಿ ಸೀಳುತುಟಿ ಸಮಸ್ಯೆಯಿಂದ ಬಳಲುತ್ತಿರುವ ಮಕ್ಕಳಿಗೆ ಚಿಕಿತ್ಸೆ ನೀಡಲು ಎಂಯುಒ 'ಸ್ಮೈಲ್ ಟ್ರೈನ್' ಎಂಬ ಕಾರ್ಯಕ್ರಮವನ್ನು ನಡೆಸುತ್ತಿದೆ. ಈ ಸಮಸ್ಯೆಯಿಂದ ಬಳಲುತ್ತಿರುವ ಮಕ್ಕಳಿಗೆ ಸಂಪೂರ್ಣ ಉಚಿತ ಚಿಕಿತ್ಸೆ ಮತ್ತು ಚಿಕಿತ್ಸೆ ನಂತರದ ಆರೈಕೆಯನ್ನು ಸ್ಮೈಲ್ ಟ್ರೈನ್ ಕಾರ್ಯಕ್ರಮದ ಅಡಿ ನೀಡಲಾಗುತ್ತದೆ.

ವಿಶ್ವದಾದ್ಯಂತ ಅಂಗವೈಕಲ್ಯದಿಂದ ಬಳಲುತ್ತಿರುವ ಜನರನ್ನು ಒಟ್ಟುಗೂಡಿಸುವ, ಅವರಿಗೆ ವಿದ್ಯಾಭ್ಯಾಸ ತರಬೇತಿ ನೀಡುವ ಮತ್ತು ಉದ್ಯೋಗಾವಕಾಶ ಕಲ್ಪಿಸುವ ಸಲುವಾಗಿ 'ಬೆಸ್ಟ್ ಬಡೀಸ್' ಸ್ವಯಂಸೇವಾ ಸಂಘಟನೆ ದುಡಿಯುತ್ತಿದೆ. ಈ ಕಾರ್ಯದಲ್ಲಿ ನೆರವಾಗಲು ಎಂಯುಒ, ಬೆಸ್ಟ್ ಬಡೀಸ್ ಜತೆಗೆ ಕೈಜೋಡಿಸಿದೆ. ಈ ಸಂಘಟನೆಯು 50 ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, 1,400ಕ್ಕೂ ಹೆಚ್ಚು ಕೇಂದ್ರಗಳನ್ನು ಹೊಂದಿದೆ. ಈವರೆಗೆ 7 ಲಕ್ಷ ಜನರು ಈ ಕಾರ್ಯಕ್ರಮದ ಫಲಾನುಭವಿಗಳಾಗಿದ್ದಾರೆ.

ವಿಶ್ವದ ಹಲವು ದೇಶಗಳಲ್ಲಿ ಎಚ್‌ಐವಿ ಮತ್ತು ಏಡ್ಸ್, ಕ್ಯಾನ್ಸರ್ ಹಾಗೂ ಇತರ ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಉಚಿತವಾಗಿ ಊಟವನ್ನು ಪೂರೈಸಲು 'ಗಾಡ್ಸ್ ಲವ್, ವಿ ಡೆಲಿವರ್' ಸಂಘಟನೆ ದುಡಿಯುತ್ತಿದೆ. ತಮಗಾಗಿ ಆಹಾರ ಸಿದ್ಧಪಡಿಸಿಕೊಳ್ಳಲು ಅಶಕ್ತರಾಗಿರುವ ಮತ್ತು ದೈಹಿಕವಾಗಿ ಸಮರ್ಥರಲ್ಲದ ರೋಗಿಗಳಿಗೆ, ಪಥ್ಯದ ಆಹಾರವನ್ನು ಈ ಕಾರ್ಯಕ್ರಮದ ಅಡಿ ನೀಡಲಾಗುತ್ತದೆ. ಈ ಕಾರ್ಯದಲ್ಲಿ 'ಗಾಡ್ಸ್ ಲವ್, ವಿ ಡೆಲಿವರ್' ಜತೆಗೆ ಎಂಯುಒ ಕೈಜೋಡಿಸಿದೆ.

> ನಂಬುವುದನ್ನು, ಪ್ರಯತ್ನ ಮಾಡುವುದನ್ನು, ಕಲಿಯುವುದನ್ನು ಯಾರು ನಿಲ್ಲಿಸುವುದಿಲ್ಲವೋ ಅವರ ಜೀವನದಲ್ಲಿ ದೊಡ್ಡ ಸಂಗತಿಗಳು ನಡೆಯುತ್ತವೆ
>
> **ಹರ್ನಾಜ್ ಕೌರ್ ಸಂಧು**
> ಭುವನ ಸುಂದರಿ ಸೌಂದರ್ಯ ಸ್ಪರ್ಧೆ ವಿಜೇತೆ

ದಿಟ್ಟ ಮನದ ಸುಂದರಿ

'ಒಂದು ಸಾಮಾನ್ಯ ಹಳ್ಳಿಯಲ್ಲಿ ಹುಟ್ಟಿದ ನಾನು ಬೆಳೆಯುತ್ತಾ ಅಂತರ್ಮುಖಿಯಾದೆ. ಸರ್ಕಾರಿ ಕಾಲೇಜಿನಲ್ಲಿ ಓದಿದೆ. ನನ್ನ ದೇಹದ ಕುರಿತು ಅವಹೇಳನ (ಬಾಡಿ ಶೇಮಿಂಗ್) ಮಾಡಲಾಯಿತು. ಹಲವು ಬಾರಿ ಇದು ಪುನರಾವರ್ತನೆಯಾಯಿತು. ಮಾನಸಿಕ ಗೊಂದಲದಲ್ಲಿದ್ದ ನಾನು, ಬದಲಾಗಬೇಕು ಎಂದು ನಿರ್ಧರಿಸಿದೆ. ನನ್ನೊಳಗಿನ ಸಾಮರ್ಥ್ಯವನ್ನು ಅರಿತುಕೊಂಡೆ. ರೂಪದರ್ಶಿಯಾಗುವ ನನ್ನ ಕನಸನ್ನ ಜನರು ಮೂದಲಿಸಿದರು, ಆದರೆ ಅಮ್ಮ ನನ್ನ ಬೆನ್ನಿಗೆ ನಿಂತರು. ನನ್ನೊಳಗಿದ್ದ ಆತ್ಮವಿಶ್ವಾಸವೇ ಇಂದು ಜಗತ್ತು ನನ್ನತ್ತ ತಿರುಗಿ ನೋಡುವಂತೆ ಮಾಡಿದೆ...'

ಹರ್ನಾಜ್ ಕೌರ್ ಸಂಧು ಅವರು 'ಭುವನ ಸುಂದರಿ' ಜಾಗತಿಕ ಸೌಂದರ್ಯ ಸ್ಪರ್ಧೆಯಲ್ಲಿ ಜಾಣ್ಮೆಯ ಹಾಗೂ ದಿಟ್ಟತನದ ಉತ್ತರಗಳನ್ನು ನೀಡಿ, ಪ್ರಶಸ್ತಿ ಮುಡಿಗೇರಿಸಿಕೊಂಡದ್ದರ ಹಿಂದೆ ಇಂತಹ ಸಾಕಷ್ಟು ದಿಟ್ಟ ಕಥನಗಳಿವೆ.

ಗುರುದಾಸ್‌ಪುರ ಸಮೀಪದ ಕೊಹಲಿ ಎಂಬ ಗ್ರಾಮದಲ್ಲಿ ಜನಿಸಿದ ಅವರು, ಚಂಡೀಗಡದಲ್ಲಿ ಬೆಳೆದರು. ಸರ್ಕಾರಿ ಕಾಲೇಜಿನಲ್ಲಿ ಪದವಿ ಪಡೆದ ಅವರು ತಮ್ಮ 17ನೇ ವಯಸ್ಸಿನಲ್ಲಿ ಸೌಂದರ್ಯ ಸ್ಪರ್ಧೆಗಳಲ್ಲಿ ಭಾವಹಿಸಲು ಶುರು ಮಾಡಿದರು. ನಿಂದಕರೂ ಮೆಚ್ಚುವ ರೀತಿಯಲ್ಲಿ, ಮಿಸ್ ಮ್ಯಾಕ್ಸ್ ಎಮರ್ಜಿಂಗ್ ಸ್ಟಾರ್ ಇಂಡಿಯಾ, ಫೆಮಿನಾ ಮಿಸ್ ಇಂಡಿಯಾ ಪಂಜಾಬ್, ಮಿಸ್ ದಿವಾ ಯೂನಿವರ್ಸ್ ಪ್ರಶಸ್ತಿಗಳನ್ನು ಅವರು ಬಾಚಿಕೊಂಡರು.

ಭುವನ ಸುಂದರಿ ಸ್ಪರ್ಧೆಯು ಅವರೊಳಗಿದ್ದ ಆತ್ಮವಿಶ್ವಾಸ ಹಾಗೂ ಜಾಣ್ಮೆಗೆ ಕನ್ನಡಿ ಹಿಡಿಯಿತು. ತೀರ್ಪುಗಾರರು ಕೇಳಿದ ಪ್ರಶ್ನೆಗಳಿಗೆ ಅವರು ನೀಡಿದ ಉತ್ತರಗಳೇ ಇದಕ್ಕೆ ಸಾಕ್ಷಿ. 'ಹವಾಮಾನ ವೈಪರೀತ್ಯ ಎಂಬುದು ತಮಾಷೆಯಷ್ಟೇ ಎಂದು ಹಲವರು ಭಾವಿಸಿದ್ದಾರೆ. ಅಂತಹ ಜನರಿಗೆ ನೀವು ಹೇಗೆ ಮನವರಿಕೆ ಮಾಡಿಕೊಡುತ್ತೀರಿ' ಎಂಬ ಪ್ರಶ್ನೆ ಎದುರಾಯಿತು. 'ನಮ್ಮ ಬೇಜವಾಬ್ದಾರಿ ವರ್ತನೆಗಳಿಂದ ಪರಿಸರ ಯಾವ ಮಟ್ಟಕ್ಕೆ ಹಾಳಾಗುತ್ತಿದೆ ಎಂಬುದನ್ನು ನೆನಪಿಸಿಕೊಂಡರೆ ಸಾಕು ನನ್ನ ಹೃದಯಕ್ಕೆ ಕಸಿವಿಸಿಯಾಗುತ್ತದೆ. ನಾವೀಗ ಮಾತು ಕಡಿತಗೊಳಿಸಿ, ದಿಟ್ಟ ಕ್ರಮಕ್ಕೆ ಮುಂದಾಗಬೇಕು. ನಮ್ಮ ಪ್ರತಿಯೊಂದು ಹೆಜ್ಜೆಯೂ ಪರಿಸರ ನಾಶ ಮಾಡಲಿದೆ ಅಥವಾ ಉಳಿಸಲಿದೆ. ಹಾಳಾದ ಮೇಲೆ ಸರಿಪಡಿಸುವುದಕ್ಕಿಂತ ಮೊದಲೇ ರಕ್ಷಣೆಗೆ ಮುಂದಾಗುವುದು ಬುದ್ಧಿವಂತಿಕೆ' ಎಂದು ಹರ್ನಾಜ್ ನೀಡಿದ ಉತ್ತರಕ್ಕೆ, ತೀರ್ಪುಗಾರರು ಅವರನ್ನು ಅಂತಿಮ ಸುತ್ತಿಗೆ (ಟಾಪ್ 3) ಆಯ್ಕೆ ಮಾಡಿದರು.

ಹರ್ನಾಜ್ ಪ್ರಶಸ್ತಿ ಮುಡಿಗೇರಿಸಿಕೊಳ್ಳಲು ಬೇಕಿದ್ದುದು ಇಂತಹದ್ದೇ ಮತ್ತೊಂದು ಉತ್ತರ. 'ಯುವತಿಯರು ಇಂದು ಎದುರಿಸುತ್ತಿರುವ ಒತ್ತಡಗಳಿಂದ ಹೊರಬರಲು ಏನು ಸಲಹೆ ನೀಡುತ್ತೀರಿ' ಎಂಬ ಅಂತಿಮ ಪ್ರಶ್ನೆಗೆ, 'ಸ್ವ ಸಾಮರ್ಥ್ಯದಲ್ಲಿ ನಂಬಿಕೆಯಿಲ್ಲದಿರುವುದರಿಂದ ಇಂದಿನ ಯುವಜನರು ಒತ್ತಡದ ಸಮಸ್ಯೆ ಎದುರಿಸುತ್ತಿದ್ದಾರೆ. ಪ್ರತಿಯೊಬ್ಬರಿಗೂ ಅನನ್ಯ ವ್ಯಕ್ತಿತ್ವವಿದೆ ಎಂಬುದು ಅರಿವಿಗೆ ಬಂದರೆ ಎಲ್ಲವೂ ಸುಂದರವಾಗಿ ಕಾಣುತ್ತದೆ. ಇತರರ ಜೊತೆ ಹೋಲಿಸಿಕೊಳ್ಳುವುದನ್ನು ಬಿಟ್ಟು, ಜಗತ್ತಿನಲ್ಲಿ ನಡೆಯುತ್ತಿರುವ ಮಹತ್ವದ ಸಂಗತಿಗಳ ಬಗ್ಗೆ ಹೆಚ್ಚು ಮಾತನಾಡಬೇಕು. ನೀವು ಅರ್ಥಮಾಡಿಕೊಳ್ಳಬೇಕಾದುದು ಇದನ್ನೇ. ನಿಮ್ಮ ಜೀವನಕ್ಕೆ ನೀವೇ ನಾಯಕ, ನೀವೇ ದನಿ. ನನ್ನಲ್ಲಿ ನಾನು ಇರಿಸಿದ್ದ ನಂಬಿಕೆಯಿಂದಲೇ ಇಂದು ಈ ಜಾಗತಿಕ ವೇದಿಕೆಯ ಮೇಲೆ ಇದ್ದೇನೆ' ಎಂದು ಹರ್ನಾಜ್ ಅರಳು ಹುರಿದಂತೆ ಮಾತನಾಡಿದರು.

ತಾಯಿಯ ಪ್ರೇರಣೆ: ಹರ್ನಾಜ್ ಅವರ ತಾಯಿ ವೈದ್ಯೆ. ತಾಯಿ ನಡೆಸುತ್ತಿದ್ದ ಆರೋಗ್ಯ ಶಿಬಿರಗಳಲ್ಲಿ ಅವರು ಭಾಗಿಯಾಗುತ್ತಿದ್ದರು. ಮಹಿಳೆಯರ ಆರೋಗ್ಯ ಸಮಸ್ಯೆಗಳು ಹಾಗೂ ಮುಟ್ಟಿನ ನೈರ್ಮಲ್ಯದ ಬಗ್ಗೆ ಅವರು ಕಾಳಜಿ ವಹಿಸುತ್ತಿದ್ದರು. ತಾಯಿಯ ಸಾಮಾಜಿಕ ಸೇವೆಗಳು ಹರ್ನಾಜ್ ಅವರಲ್ಲಿ ಪ್ರೇರಣೆ ಮೂಡಿಸಿದವು. 'ಮಗಳನ್ನು ಡಾಕ್ಟರ್ ಆಗು, ಎಂಜಿನಿಯರ್ ಆಗು ಎಂದು ಎಂದೂ ಒತ್ತಾಯಿಸಲಿಲ್ಲ. ನಿನ್ನ ಹೃದಯದ ಮಾತು ಕೇಳು ಎಂದು ಹೇಳಿದ್ದೆ. ನಮ್ಮ ಕುಟುಂಬದ ಯಾರಿಗೂ ರೂಪದರ್ಶಿ ವೃತ್ತಿಯ ಬಗ್ಗೆ ಗೊತ್ತಿರಲಿಲ್ಲ. ಯೂಟ್ಯೂಬ್ ನೋಡಿಕೊಂಡು ಆಕೆ ರ‍್ಯಾಂಪ್‌ವಾಕ್ ಕಲಿತಳು' ಎನ್ನುತ್ತಾರೆ ಹರ್ನಾಜ್ ತಾಯಿ ಡಾ. ಬರೀಂದರ್ ಕೌರ್ ಸಂಧು.

ಮಹಿಳಾ ಸಬಲೀಕರಣ, ಶಿಕ್ಷಣ, ಮಹಿಳೆಯರ ಸಾಂವಿಧಾನಿಕ ಹಕ್ಕುಗಳು, ವೃತ್ತಿ, ಆಯ್ಕೆಯ ಸ್ವಾತಂತ್ರ್ಯ ವಿಚಾರಗಳಲ್ಲಿ ಹರ್ನಾಜ್ ಅವರಿಗೆ ಒಲವಿದೆ. ಮಹಿಳೆಯರು ಇಂಥದ್ದಕ್ಕೇ ಅಂಟಿಕೊಂಡು ಬದುಕಬೇಕು ಎಂಬ ಸಿದ್ಧಸೂತ್ರಗಳನ್ನು ಅವರು ಒಪ್ಪುವುದಿಲ್ಲ. ಎರಡು ಪಂಜಾಬಿ ಸಿನಿಮಾಗಳಲ್ಲಿ ಅವರು ನಟಿಸಿದ್ದು, ಒಂದು ಚಿತ್ರವು ಮುಂದಿನ ವರ್ಷ ಬಿಡುಗಡೆಯಾಗಲಿದೆ. ಸರ್ಕಾರಿ ಕಾಲೇಜಿನಲ್ಲಿ ಸಾರ್ವಜನಿಕ ಆಡಳಿತ ವಿಷಯದಲ್ಲಿ ಎಂ.ಎ ಅಂತಿಮ ವರ್ಷದಲ್ಲಿ ಅವರು ಓದುತ್ತಿದ್ದಾರೆ.

ಪ್ರಶಸ್ತಿ ಪಡೆಯುವಾಗ ಹರ್ನಾಜ್ ಧರಿಸಿದ್ದ ದಿರಿಸು ವಿನ್ಯಾಸ ಮಾಡಿದ್ದ ಶಿಶಾ ಶಿಂಧೆ ಅವರು ಲಿಂಗಪರಿವರ್ತಿತೆ. ತಮ್ಮ ಐತಿಹಾಸಿಕ ಕ್ಷಣಕ್ಕೆ ಶಿಶಾ ವಿನ್ಯಾಸ ಮಾಡಿದ್ದ ಉಡುಗೆ ಹಾಗೂ ಆಭರಣಗಳು ಪ್ರಮುಖ ಪಾತ್ರ ವಹಿಸಿದ್ದವು ಎಂದು ಹರ್ನಾಜ್ ಪ್ರಶಂಸಿಸಿದ್ದಾರೆ.

ನಟಿ ಪ್ರಿಯಾಂಕಾ ಚೋಪ್ರಾ ಅವರನ್ನು ತಮ್ಮ ಸ್ಫೂರ್ತಿ ಎಂದು ಹರ್ನಾಜ್ ಹೇಳಿಕೊಳ್ಳುತ್ತಾರೆ. ಯೋಗ, ನೃತ್ಯ, ಅಡುಗೆ, ಕುದುರೆ ಸವಾರಿ, ಸ್ನೇಹಿತರ ಭೇಟಿ, ಚೆಸ್ ಆಡುವುದು ಅವರ ಮೆಚ್ಚಿನ ಹವ್ಯಾಸಗಳು.

ಹೆಚ್ಚು ಬಾರಿ ಕಿರೀಟ ತನ್ನದಾಗಿಸಿಕೊಂಡ ದೇಶಗಳು

8	ಅಮೆರಿಕ
7	ವೆನಿಜುವೆಲಾ
5	ಪೋರ್ಟೊ ರಿಕೊ
4	ಸ್ವೀಡನ್
3	ಭಾರತ
3	ಆಸ್ಟ್ರೇಲಿಯಾ
3	ದಕ್ಷಿಣ ಆಫ್ರಿಕಾ
2	ಕೊಲಂಬಿಯಾ
2	ಫಿನ್‌ಲೆಂಡ್
2	ಮೆಕ್ಸಿಕೊ
2	ಬ್ರೆಜಿಲ್

ಅಮೆರಿಕ, ವೆನಿಜುವೆಲಾ ಪಾರಮ್ಯ

ಮಿಸ್ ಯೂನಿವರ್ಸ್ ಸಂಘಟನೆ ಪ್ರತಿ ವರ್ಷ ನಡೆಸುವ ಭುವನ ಸುಂದರಿ ಸ್ಪರ್ಧೆಯು ಈವರೆಗೆ 70 ಆವೃತ್ತಿಗಳನ್ನು ಪೂರೈಸಿದೆ. ಈವರೆಗೆ ವಿಶ್ವದ ಹಲವು ರಾಷ್ಟ್ರಗಳ ಸಾವಿರಾರು ಪ್ರತಿನಿಧಿಗಳು ಈ ಸ್ಪರ್ಧೆಯಲ್ಲಿ ಭಾಗಿಯಾಗಿದ್ದಾರೆ. ಆದರೆ ಕೆಲವೇ ರಾಷ್ಟ್ರಗಳ ಪ್ರತಿನಿಧಿಗಳು ಭುವನ ಸುಂದರಿ ಕಿರೀಟವನ್ನು ಮುಡಿಗೇರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಹೀಗೆ ಹೆಚ್ಚು ಬಾರಿ ಈ ಕಿರೀಟವನ್ನು ಗೆದ್ದ ಸ್ಪರ್ಧಿಗಳ ದೇಶಗಳ ಪಟ್ಟಿಯಲ್ಲಿ ಅಮೆರಿಕ ಮೊದಲು ನಿಲ್ಲುತ್ತದೆ. ಅಮೆರಿಕದ ಸ್ಪರ್ಧಿಗಳು ಈವರೆಗೆ 8 ಬಾರಿ ಈ ಕಿರೀಟವನ್ನು ಮುಡಿಗೇರಿಸಿಕೊಂಡಿದ್ದಾರೆ. ವೆನಿಜುವೆಲಾ ದೇಶದ ಸ್ಪರ್ಧಿಗಳು ಈವರೆಗೆ 7 ಬಾರಿ ಕಿರೀಟವನ್ನು ಮುಡಿಗೇರಿಸಿಕೊಂಡಿದ್ದಾರೆ.

ಕಿರೀಟ ಗೆದ್ದ ಕಪ್ಪು ವರ್ಣೀಯರು ವಿರಳ

ಈವರೆಗೆ, ಸ್ಪರ್ಧೆಯ 70 ಆವೃತ್ತಿಗಳು ಮುಗಿದಿದ್ದರೂ, ಭುವನ ಸುಂದರಿ ಕಿರೀಟವನ್ನು ಮುಡಿಗೇರಿಸಿಕೊಂಡ ಕಪ್ಪು ವರ್ಣೀಯರ ಸಂಖ್ಯೆ ಎರಡಂಕಿಯನ್ನೂ ಮುಟ್ಟುವುದಿಲ್ಲ. ಆಫ್ರಿಕಾದ ಬೋಟ್ಸ್‌ವಾನಾ (1999) ಮತ್ತು ಅಂಗೋಲಾದ (2011) ಸ್ಪರ್ಧಿಗಳು ಎರಡು ಬಾರಿ ಈ ಕಿರೀಟವನ್ನು ಮುಡಿಗೇರಿಸಿಕೊಂಡಿದ್ದಾರೆ. ಇನ್ನು ಕೆರೆಬಿಯನ್ ರಾಷ್ಟ್ರವಾದ ಟ್ರಿನಿಡಾಡ್ ಅಂಡ್ ಟೊಬ್ಯಾಗೊವಿನ ಸ್ಪರ್ಧಿಗಳು 1977ರಲ್ಲಿ ಮತ್ತು 1998ರಲ್ಲಿ ಎರಡು ಬಾರಿ ಭುವನ ಸುಂದರಿ ಪಟ್ಟ ಗೆದ್ದಿದ್ದಾರೆ. ಅಮೆರಿಕದಿಂದ ಸ್ಪರ್ಧಿಸಿದ್ದ ಕಪ್ಪು ವರ್ಣೀಯ ಸ್ಪರ್ಧಿಯೊಬ್ಬರು 1995ರಲ್ಲಿ ಕಿರೀಟವನ್ನು ಮುಡಿಗೇರಿಸಿಕೊಂಡಿದ್ದರು.

ಉಳಿದಂತೆ ಉತ್ತರ ಅಮೆರಿಕ, ದಕ್ಷಿಣ ಅಮೆರಿಕ, ಆಸ್ಟ್ರೇಲಿಯಾ, ಯೂರೋಪ್ ಮತ್ತು ಆಗ್ನೇಯ ಏಷ್ಯಾದ ಸ್ಪರ್ಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಸ್ಪರ್ಧೆಯನ್ನು ಗೆದ್ದಿದ್ದಾರೆ. ಮಧ್ಯಪ್ರಾಚ್ಯ, ಮಧ್ಯ ಮತ್ತು ಉತ್ತರ ಆಫ್ರಿಕಾ ಹಾಗೂ ಮಧ್ಯ ಏಷ್ಯಾದ ದೇಶಗಳ ಸ್ಪರ್ಧಿಗಳು ಒಮ್ಮೆಯೂ ಈ ಸ್ಪರ್ಧೆಯಲ್ಲಿ ಗೆದ್ದಿಲ್ಲ.

ಸುಷ್ಮಿತಾ ಸೇನ್

ಭಾರತದ ಮೊದಲ 'ಭುವನ ಸುಂದರಿ' ಎಂಬ ಶ್ರೇಯಕ್ಕೆ ಪಾತ್ರರಾದವರು ಸುಷ್ಮಿತಾ ಸೇನ್. ಹೈದರಾಬಾದ್‌ನಲ್ಲಿ ನೆಲೆಸಿದ್ದ ಬಂಗಾಳಿ ಕುಟುಂಬದಲ್ಲಿ ಜನಿಸಿದ ಅವರು, 1994ರಲ್ಲಿ ನಡೆದ ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸಿ, ಜಗತ್ತಿನ ಗಮನ ಸೆಳೆದಿದ್ದರು. ಆಗ ಅವರ ವಯಸ್ಸು 18 ವರ್ಷ.

ದೆಹಲಿಯ ಏರ್‌ಫೋರ್ಸ್ ಗೋಲ್ಡನ್ ಜ್ಯುಬಿಲಿ ಇನ್‌ಸ್ಟಿಟ್ಯೂಟ್ ಹಾಗೂ ಸಿಕಂದರಾಬಾದ್‌ನ ಸೇಂಟ್ ಆ್ಯನ್ ಶಾಲೆಯಲ್ಲಿ ಓದಿದ್ದಾರೆ. ಆದರೆ, ಉನ್ನತ ಶಿಕ್ಷಣ ಪಡೆಯಲು ಅವರಿಗೆ ಸಾಧ್ಯವಾಗಲಿಲ್ಲ.

ಲಾರಾ ದತ್ತಾ

2000ನೇ ಇಸ್ವಿಯಲ್ಲಿ ಲಾರಾ ದತ್ತಾ ಅವರು ಭುವನ ಸುಂದರಿ ಕಿರೀಟ ಧರಿಸಿದ್ದರು. ಗಾಜಿಯಾಬಾದ್‌ನಲ್ಲಿ ಹುಟ್ಟಿದ ಇವರು 1981ರಲ್ಲಿ ಬೆಂಗಳೂರಿಗೆ ಸ್ಥಳಾಂತರವಾದರು. ತಂದೆ ಪಂಬಾಬಿ ಕುಟುಂಬಕ್ಕೆ ಸೇರಿದವರು. ತಾಯಿ ಆಂಗ್ಲೊ–ಇಂಡಿಯನ್.

ಸೇಂಟ್ ಫ್ರಾನ್ಸಿಸ್ ಕ್ಸೇವಿಯರ್ ಬಾಲಕಿಯರ ಪ್ರೌಢಶಾಲೆ ಹಾಗೂ ಫ್ರಾಂಕ್ ಆ್ಯಂಟನಿ ಶಾಲೆಯಲ್ಲಿ ಓದಿದ್ದಾರೆ. ಮುಂಬೈ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದಲ್ಲಿ ಪದವಿ ಪಡೆದರು. ಇಂಗ್ಲಿಷ್, ಹಿಂದಿಯಲ್ಲಿ ನಿರರ್ಗಳವಾಗಿ ಮಾತನಾಡಬಲ್ಲ ಲಾರಾ ದತ್ತ, ಕನ್ನಡ, ಪಂಜಾಬಿಯನ್ನೂ ಬಲ್ಲರು. ಭುವನ ಸುಂದರಿ ಸ್ಪರ್ಧೆಯಲ್ಲಿ ಗೆಲ್ಲುವುದಕ್ಕೂ ಮುನ್ನ, 1997ರಲ್ಲಿ ಮಿಸ್ ಇಂಟರ್ ಕಾಂಟಿನೆಂಟಲ್ ಕಿರೀಟ ಧರಿಸಿದ್ದರು.

ವರದಿ: ಜಯಸಿಂಹ ಆರ್., ಅಮೃತಕಿರಣ್ ಬಿ.ಎಂ. ಆಧಾರ: ಮಿಸ್ ಯೂನಿವರ್ಸ್ ಆರ್ಗನೈಸೇಷನ್

ಬೆಲೆ ಏರಿಕೆ ಮತ್ತು ರಾಜ್ಯಸಭೆಯಿಂದ 12 ಸಂಸದರ ಅಮಾನತನ್ನು ಖಂಡಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಮಂಗಳವಾರ ದೆಹಲಿಯಲ್ಲಿ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಸೋನಿಯಾ ನೇತೃತ್ವದಲ್ಲಿ ವಿರೋಧ ಪಕ್ಷಗಳ ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ವಿರುದ್ಧ ಸಂಸತ್ತಿನ ಒಳಗೆ ಮತ್ತು ಹೊರಗೆ ನಡೆಸಬೇಕಿರುವ ಹೋರಾಟದ ದಿಕ್ಕನ್ನು ಕುರಿತು ಚರ್ಚಿಸುವ ಉದ್ದೇಶದಿಂದ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಮಂಗಳವಾರ ಎಲ್ಲಾ ವಿರೋಧ ಪಕ್ಷಗಳ ನಾಯಕರ ಸಭೆಯನ್ನು ಕರೆದಿದ್ದರು. ಆದರೆ ಈ ಸಭೆಯಲ್ಲಿ ಭಾಗಿಯಾಗಲು ಟಿಎಂಸಿಗೆ ಆಹ್ವಾನ ನೀಡಿರಲಿಲ್ಲ.

ಯುಪಿಎ ಎಂಬುದು ಇಲ್ಲ ಎಂದು ಹೇಳಿದ್ದ ಟಿಎಂಸಿಗೆ ಈ ಮೂಲಕ ಕಾಂಗ್ರೆಸ್ ತಿರುಗೇಟು ನೀಡಿದೆ ಎಂದು ಮೂಲಗಳು ಹೇಳಿವೆ.

ಶಿವಸೇನಾ ರಾಜ್ಯಸಭಾ ಸದಸ್ಯ ಸಂಜಯ್ ರಾವುತ್, ಡಿಎಂಕೆ ಸಂಸದ ಟಿ.ಆರ್.ಬಾಲು, ಸಿಪಿಐ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ, ನ್ಯಾಷನಲ್ ಕಾನ್ಫರೆನ್ಸ್ ಮುಖ್ಯಸ್ಥ ಫಾರೂಕ್ ಅಬ್ದುಲ್ಲಾ ಮತ್ತು ಎನ್‌ಸಿಪಿಯ ಶರದ್ ಪವಾರ್ ಸಭೆಯಲ್ಲಿ ಭಾಗಿಯಾಗಿದ್ದರು.

ಸಂಸತ್ತಿನ ಚಳಿಗಾಲದ ಅಧಿವೇಶನದ ಉಳಿದ ಅವಧಿಗೆ ಅಮಾನತಾಗಿರುವ ರಾಜ್ಯಸಭೆಯ 12 ಸದಸ್ಯರ, ಅಮಾನತು ಆದೇಶದ ವಿರುದ್ಧದ ಪ್ರತಿಭಟನೆ ಮತ್ತು ಆದೇಶವನ್ನು ಹಿಂಪಡೆಯುವ ಆಯ್ಕೆಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ. ಈ ವಿಚಾರವಾಗಿ ರಾಜ್ಯಸಭೆಯಲ್ಲಿ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಸಭಾಪತಿ ಎಂ.ವೆಂಕಯ್ಯ ನಾಯ್ಡು ಅವರನ್ನು ಬುಧವಾರ ಭೇಟಿ ಮಾಡುವಂತೆ ಸಭೆಯಲ್ಲಿ ಸೂಚಿಸಲಾಯಿತು. ಆಗ ಖರ್ಗೆ ಅವರು, 'ಈ ವಿಚಾರವಾಗಿ ಸಭಾಪತಿಯನ್ನು ನಾನು ಹಲವು ಭಾರಿ ಭೇಟಿ ಮಾಡಿದ್ದೇನೆ. ಯಾವುದೇ ಪ್ರಯೋಜನವಾಗಿಲ್ಲ' ಎಂದು ಹೇಳಿದರು. ಆಗ ಬುಧವಾರದ ಭೇಟಿ ವೇಳೆ ಎನ್‌ಸಿಪಿ ಮುಖಂಡ ಶರದ್ ಪವಾರ್ ಸಹ ಇರುವಂತೆ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಯಿತು.

ವಿರೋಧ ಪಕ್ಷಗಳ ಒಕ್ಕೂಟದಲ್ಲಿ ಒಡಕು ಕಾಣಬಾರದು ಎಂಬ ವಿಚಾರವೂ ಸಭೆಯಲ್ಲಿ ಚರ್ಚೆಯಾಯಿತು. 'ಇಂತಹ ಸಭೆಗಳಲ್ಲಿ ಟಿಎಂಸಿ ಇಲ್ಲದೇ ಇರುವುದು, ವಿಪಕ್ಷಗಳ ಒಗ್ಗಟ್ಟಿನಲ್ಲಿ ಒಡಕು ಉಂಟಾಗಿದೆ ಎಂಬುದನ್ನು ತೋರಿಸುತ್ತದೆ. ಹೀಗಾಗಿ ಇಂತಹ ಸಭೆಗಳನ್ನು ಸಣ್ಣ ಪ್ರಮಾಣದಲ್ಲಿ ನಡೆಸಬೇಕು. ಇಲ್ಲದಿದ್ದರೆ, ಒಡಕು ಉಂಟಾಗಿದೆ ಎಂಬುದು ಢಾಳಾಗಿ ಕಾಣುತ್ತದೆ' ಎಂದು ಎಚ್ಚರಿಕೆ ನೀಡಿದರು.

ಸದನದಲ್ಲಿ ನಡೆದದ್ದು

- ಸಂಸದರ ಪ್ರದೇಶಾಭಿವೃದ್ಧಿ ನಿಧಿಯ ಅಡಿ ನೀಡಲಾಗುತ್ತಿರುವ ಅನುದಾನವನ್ನು ಹೆಚ್ಚಿಸಬೇಕು ಎಂದು ವಿರೋಧ ಪಕ್ಷಗಳ ಸಂಸದರು ಲೋಕಸಭೆಯಲ್ಲಿ ಒತ್ತಾಯಿಸಿದರು
- ವಿದೇಶಿ ಬ್ಯಾಂಕ್‌ಗಳಲ್ಲಿನ ಖಾತೆಗಳಲ್ಲಿ ಭಾರತೀಯರು ಠೇವಣಿ ಇಟ್ಟಿರುವ ಕಪ್ಪುಹಣದ ಮೊತ್ತದ ಬಗ್ಗೆ ಮಾಹಿತಿ ಇಲ್ಲ. ಆದರೆ 2015ರಲ್ಲಿ ಮೂರು ತಿಂಗಳ ಅವಧಿಯಲ್ಲಿ ಕಪ್ಪು ಹಣ ಸಕ್ರಮಕ್ಕೆ ಅವಕಾಶ ನೀಡಲಾಗಿತ್ತು. ಆಗ ತೆರಿಗೆ ಮತ್ತು ದಂಡದ ರೂಪದಲ್ಲಿ ₹2,476 ಕೋಟಿ ಸಂಗ್ರಹಿಸಲಾಗಿದೆ ಎಂದು ಸರ್ಕಾರವು ಲೋಕಸಭೆಗೆ ಮಾಹಿತಿ ನೀಡಿದೆ
- ಹಿಂದಿನ ಮೂರು ಆರ್ಥಿಕ ವರ್ಷಗಳಲ್ಲಿ ಇಂಧನದ ಮೇಲಿನ ತೆರಿಗೆಯಿಂದ ಒಟ್ಟು ₹ 8.02 ಲಕ್ಷ ಕೋಟಿ ಸಂಗ್ರಹಿಸಲಾಗಿದೆ ಎಂದು ಹಣಕಾಸು ಸಚಿವಾಲಯವು ಸಂಸತ್ತಿಗೆ ಮಾಹಿತಿ ನೀಡಿದೆ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಾಗಿಲು ಮುಚ್ಚಿರುವ ಅಂಗಡಿಯೊಂದರ ಮುಂದೆ ಕುಳಿತಿರುವ ಯುವತಿಯರು ಮದ್ಯ ಕುಡಿಯುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಇದು ದೆಹಲಿಯ ಬೀದಿಯೊಂದರ ದೃಶ್ಯ ಎಂದು ಹಲವರು ತಮ್ಮ ಪೋಸ್ಟ್‌ಗಳಲ್ಲಿ ಹೇಳಿದ್ದಾರೆ. 'ಅರವಿಂದ ಕೇಜ್ರಿವಾಲ್ ನೇತೃತ್ವದ ದೆಹಲಿ ಸರ್ಕಾರವು ಮದ್ಯಪಾನವನ್ನು ಉತ್ತೇಜಿಸುತ್ತಿದೆ. ತೆರಿಗೆ ಸಂಗ್ರಹ ಉದ್ದೇಶದಿಂದ ಸರ್ಕಾರ ತೆಗೆದುಕೊಂಡ ಕ್ರಮದಿಂದ ಯುವ ಜನರು ಮದ್ಯವ್ಯಸನಿಗಳಾಗಿದ್ದಾರೆ. ಯುವತಿಯರು ಬೀದಿಯಲ್ಲಿ ಕುಳಿತು ಮದ್ಯ ಕುಡಿಯುವ ಸ್ಥಿತಿ ದೆಹಲಿಗೆ ಬಂದೊದಗಿದೆ' ಎಂದು ಹಲವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಈ ವಿಡಿಯೊ ಜತೆ ಸಾಮಾಜಿಕ ಜಾಲತಾಣಗಳಲ್ಲಿ ಹಲವರು ಹಂಚಿಕೊಂಡಿರುವ ಮಾಹಿತಿ ಸತ್ಯಕ್ಕೆ ದೂರವಾದುದು' ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ವಿಡಿಯೊ ಮೇಲೆ 'Mr_thakur1612' ಎಂಬ ವಾಟರ್‌ಮಾರ್ಕ್ ಇದೆ. ಈ ಯೂಸರ್‌ನೇಮ್‌ನಲ್ಲಿ ಇರುವ ಇನ್‌ಸ್ಟಾಗ್ರಾಂ ರೀಲ್ಸ್ ಖಾತೆಯಲ್ಲಿ ಇಂತಹ ಹಲವು ವಿಡಿಯೊಗಳನ್ನು ಹಂಚಿಕೊಳ್ಳಲಾಗಿದೆ. ಯುವತಿಯರು ಮದ್ಯಪಾನ ಮಾಡುತ್ತಿರುವ ವಿಡಿಯೊವನ್ನು ಒಂದು ಕಿರುಚಿತ್ರಕ್ಕಾಗಿ ಚಿತ್ರಿಸಲಾಗಿದೆ ಎಂದು ವಿಡಿಯೊ ವಿವರದಲ್ಲಿ ಮಾಹಿತಿ ನೀಡಲಾಗಿದೆ. ಮೂಲ ವಿಡಿಯೊ 7 ನಿಮಿಷಗಳಷ್ಟು ದೀರ್ಘವಾಗಿದೆ. ಆ ವಿಡಿಯೊವನ್ನು ತುಂಡರಿಸಿ 2 ನಿಮಿಷಗಳ ವಿಡಿಯೊವನ್ನು ಬಳಸಿಕೊಂಡು, ದೆಹಲಿ ಸರ್ಕಾರವನ್ನು ಅವಹೇಳನ ಮಾಡಲಾಗಿದೆ' ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಪುರಾತನ-ಅರ್ವಾಚೀನ ಸಮನ್ವಯ

ಪ್ರಾಲೇಯ ಗಿರಿಗುಹೆಯ ಗಂಗೆ ವೇದ ಪುರಾಣ |
ಕಾಳಿಂದಿ ಶೋಣೆ ಪೌರುಷ ಬುದ್ಧಿಯುಕ್ತಿ ||
ಮೂಲ ಸ್ವತಸಿದ್ಧ ಸಂವಿದಾಪಗೆಗಿಂತು |
ಕಾಲದುಪನದಿ ನೆರವು – ಮಂಕುತಿಮ್ಮ ||519||

ಪದ-ಅರ್ಥ: ಪ್ರಾಲೇಯಗಿರಿಗುಹೆಯ = ಪ್ರಾಲೇಯ(ಹಿಮ) + ಗಿರಿ(ಪರ್ವತ) + ಗುಹೆಯ, ಕಾಳಿಂದಿ = ಯಮುನೆ, ಶೋಣೆ = ಶೋಣಾ ನದಿ, ಸಂವಿದಾಪಗೆಗಿಂತು = ಸಂವಿತ್(ಜ್ಞಾನ) + ಆಪಗೆ (ನದಿ) + ಇಂತು, ಕಾಲದುಪನದಿ = ಕಾಲದ + ಉಪನದಿ, ನೆರವು = ಸಹಾಯ

ವಾಚ್ಯಾರ್ಥ: ವೇದ, ಪುರಾಣಗಳು ಹಿಮಾಲಯದ ಗುಹೆಯಿಂದ ಬರುವ ಜ್ಞಾನ ಗಂಗೆಯಿದ್ದಂತೆ. ಯಮುನೆ, ಶೋಣಾನದಿಗಳು ಪೌರುಷ, ಬುದ್ಧಿ, ಯುಕ್ತಿಗಳು. ಮೂಲದಲ್ಲಿ ಸಿದ್ಧವಾದ ಸಮ್ಯಕ್ ಜ್ಞಾನಗಂಗೆಗೆ ಆಯಾ ಕಾಲದ ಬುದ್ಧಿ, ಯುಕ್ತಿಗಳು ಉಪನದಿಯಂತೆ ಬಂದು ನೆರವಾಗಬೇಕು.

ವಿವರಣೆ: ಹಿಮಾಲಯದ ಉನ್ನತ ಪ್ರದೇಶದ ಗಂಗೋತ್ರಿಯಲ್ಲಿ ಗಂಗೆಯ ಉಗಮ. ವರ್ಷದ ಆರೇಳು ತಿಂಗಳುಗಳ ಕಾಲ ಹಿಮದಿಂದಲೇ ಕೂಡಿದ ಈ ಪ್ರದೇಶದಿಂದಲೇ ನಮಗೆ ಪರಮಪವಿತ್ರವಾದ ಗಂಗಾನದಿ ಹೊರಡುವುದು. ಅದು ಆಗ ಭಾಗೀರಥಿ. ಮುಂದೆ ದೇವಪ್ರಯಾಗದಲ್ಲಿ ಅಲಕನಂದಾ ನದಿಯನ್ನು ಸೇರಿ ಗಂಗೆಯಾಗುತ್ತದೆ. ಮುಂದೆ ಹರಿಯುತ್ತ ಕೆಳಗಿಳಿದು ಬರುತ್ತಿದ್ದಂತೆ ಸರಸ್ವತಿ, ದೌಳಿಗಂಗಾ, ನಂದಾಕಿನಿ, ಪಿಂಡಾರ ನದಿಗಳನ್ನು ಎಡಬದಿಯಲ್ಲಿ ಹಾಗೂ ಮಂದಾಕಿನಿಯನ್ನು ಬಲಬದಿಯಲ್ಲಿ ಸೇರಿಸಿಕೊಂಡು ಸಮೃದ್ಧವಾಗಿ ಹರಿಯುತ್ತದೆ. ಮುಂದೆ ಉತ್ತರ ಪ್ರದೇಶದಲ್ಲಿ ಪ್ರವಹಿಸುವಾಗ ಶೋಣಾ ನದಿ ಮತ್ತು ಪ್ರಯಾಗದಲ್ಲಿ ಯಮುನೆಯನ್ನು ಸೇರಿ ವಿಸ್ತಾರವಾಗುತ್ತದೆ.

ಮೂಲನದಿ ಗಂಗೆಯೇ. ಆದರೆ ಉಪನದಿಗಳು ಸೇರಿ ಅದು ಬಲವತ್ತರವಾಗುತ್ತದೆ. ಈ ವಾಸ್ತವ ಡಿ.ವಿ.ಜಿ.ಯವರ ಚಿಂತನೆಯನ್ನು ಕೆಣಕಿದೆ. ಈ ಕಗ್ಗದ ಮೂಲಕ ನಮಗೆ ಅವರು ತಿಳಿಸುವ ಸಂದೇಶ ತುಂಬ ಆಳದ್ದು. ಹಿಮಾಲಯದ ಉನ್ನತ ಸ್ಥಾನದಿಂದ ಬಂದ ಗಂಗೆಯಂತೆ, ನಮ್ಮ ಋಷಿ-ಮುನಿಗಳು ಕಂಡರಿಸಿದ ವೇದ ಪುರಾಣಗಳು ಜ್ಞಾನಮೂಲಗಳು. ಪ್ರಯಾಣ ಸಾಗಿದಂತೆ ಗಂಗೆ ಅನೇಕ ಉಪನದಿಗಳನ್ನು ಸೇರಿಸಿಕೊಂಡಂತೆ, ಜ್ಞಾನಮೂಲಗಳಿಗೆ ಆಯಾ ಕಾಲದ ಪೌರುಷ, ಬುದ್ಧಿ, ಯುಕ್ತಿಗಳು ಸೇರಿಕೊಳ್ಳುತ್ತವೆ. ಅವು ಜ್ಞಾನವನ್ನು ಬಲಪಡಿಸುತ್ತವೆ. ಇಲ್ಲೊಂದು ಎಚ್ಚರವೂ ಇದೆ. ಸೇರಿಕೊಂಡ ಉಪನದಿಗಳು ತಮ್ಮ ಕಲ್ಮಷವನ್ನು ತಂದು ತುಂಬಿ ನದಿಯನ್ನು ಮಲಿನ ಮಾಡುವಂತೆ, ಸರಿಯಿಲ್ಲದ ಬುದ್ಧಿ, ಯುಕ್ತಿಗಳು ಮೂಲಜ್ಞಾನವನ್ನು ಅಶುದ್ಧಗೊಳಿಸುತ್ತವೆ.

ಗಂಗೋತ್ರಿಯಲ್ಲಿ ನೀರು ಅತ್ಯಂತ ಪರಿಶುದ್ಧವಾಗಿರುವಂತೆ ಜ್ಞಾನವೂ ಮೂಲದಲ್ಲಿ ಶುದ್ಧವಾಗಿಯೇ ಇರುತ್ತದೆ. ಆದರೆ ಹಾಗೆ ಉಳಿಯುವುದು ಸಾಧ್ಯವೂ ಇಲ್ಲ, ಸಾಧುವೂ ಅಲ್ಲ. ಆಯಾ ಕಾಲದ ಅವಶ್ಯಕತೆಗೆ ಅನುಗುಣವಾಗಿ, ಅಂದಂದಿನ ಬುದ್ಧಿ, ಪೌರುಷ, ಶಕ್ತಿಗಳನ್ನು ಬಳಸಿಕೊಂಡು, ನವೀನತೆಯನ್ನು ಪಡೆಯಬೇಕು. ನವ್ಯತೆಯೇ ಜೀವನ, ಹಳಸಿಕೆಯೆ ಸಾವು. ಪುರಾತನವಾದ, ಆರ್ಷೇಯ ಜ್ಞಾನ ಕಾಲಕ್ಕೆ ತಕ್ಕಂತೆ ಹೊಸ ಹೊಸ ಜೀವಕಾಂತಿಗಳನ್ನು ಸೇರಿಸಿಕೊಂಡು, ಪ್ರಕೃತ ಲೋಕದ ಜೀವನವನ್ನು ಸಶಕ್ತಗೊಳಿಸುವುದು ಅವಶ್ಯವಾದ ಕಾರ್ಯ. ❖

ಗುಂಡಣ್ಣ

ದಿನ ಭವಿಷ್ಯ

ಬುಧವಾರ ಡಿಸೆಂಬರ್ 15, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹೇಮಂತ ಋತು ಮೃಗಶಿರ ಮಾಸ ಶುಕ್ಲಪಕ್ಷ ಪಕ್ಷಮಳೆ ನಕ್ಷತ್ರ ಜ್ಯೇಷ್ಠ ದ್ವಾದಶಿ ಗಂ. 49-18 (ರಾ. 2-23) ಬುಧವಾರ ನಿತ್ಯ ನಕ್ಷತ್ರ ಭರಣಿ ಗಂ. 60-00 (ದಿನಪೂರ್ತಿ) ಪರಿಘ ನಾಮ ಯೋಗ ಗಂ. 5-2 ಬವ ಕರಣ ಗಂ. 17-35 ವಿಷ ಗಂ. 25-32 ಅಮೃತ ಗಂ 51-35: ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00: ಸೂರ್ಯೋದಯ: 6-36 ಸೂರ್ಯಾಸ್ತ: 5-51 ಅದೃಷ್ಟ ಸಂಖ್ಯೆ 5, 8

ಮೇಷ: ವ್ಯಾಪಾರ, ವ್ಯವಹಾರಗಳಲ್ಲಿ ವಿಶೇಷ ಪ್ರಗತಿ. ಮಕ್ಕಳ ಕಡೆಯಿಂದ ಉತ್ತಮ ಸಹಾಯ ಸಹಕಾರಗಳು ದೊರೆತು ಕೆಲಸ–ಕಾರ್ಯಗಳು ಸುಗಮಗೊಳ್ಳುವವು. ಕಟ್ಟಡ ನಿರ್ಮಾಣ ಅಥವಾ ಖರೀದಿ ಸಾಧ್ಯತೆ.

ವೃಷಭ: ಹಣಕಾಸಿನ ಅನುಕೂಲತೆ. ಕಾನೂನು ಸಂಬಂಧಿಸಿದ ವ್ಯವಹಾರಗಳಲ್ಲಿ ಜಯದ ಹಾದಿ. ಆಹಾರದ ವ್ಯತ್ಯಯದಿಂದಾಗಿ ಅನಾರೋಗ್ಯದ ಸಮಸ್ಯೆ ತಲೆದೋರಬಹುದು. ಮಾದಕ ಪದಾರ್ಥದಿಂದ ದೂರವಿರಿ.

ಮಿಥುನ: ಮನೆಯವರೊಂದಿಗೆ ಚರ್ಚೆಯ ಮೂಲಕ ಕುಟುಂಬದಲ್ಲಿದ್ದ ಭಿನ್ನಾಭಿಪ್ರಾಯ ನಿವಾರಣೆ ಸಾಧ್ಯ. ನಿರೀಕ್ಷೆಗೆ ತಕ್ಕ ಪ್ರತಿಕ್ರಿಯೆಯಿಂದ ಮಾನಸಿಕ ನೆಮ್ಮದಿ. ದ್ರವ ಪದಾರ್ಥಗಳ ವ್ಯಾಪಾರಿಗಳಿಗೆ ಹೆಚ್ಚಿನ ಲಾಭದ ನಿರೀಕ್ಷೆ.

ಕರ್ಕಾಟಕ: ಹೊಸ ಜನರ ಪರಿಚಯದೊಂದಿಗೆ ಹೊಸ ಉದ್ಯಮಕ್ಕೆ ನಾಂದಿಯಾಗುವ ಸಾಧ್ಯತೆ. ಆರ್ಥಿಕ ಸದೃಢತೆ ಸಾಧಿಸುವಿರಿ. ಹಿರಿಯರೊಂದಿಗಿನ ಸಮಾಲೋಚನೆಯಿಂದ ಕಾರ್ಯಸಿದ್ಧಿ.

ಸಿಂಹ: ಹದಗೆಟ್ಟ ಆರೋಗ್ಯದಲ್ಲಿ ಚೇತರಿಕೆ. ಹೊಸ ಹೊಸ ಯೋಜನೆಗಳಿಗೆ ಚಾಲನೆ ದೊರಕಲಿದೆ. ಆಸ್ತಿ, ಆಭರಣಗಳ ಖರೀದಿ ಸಾಧ್ಯತೆ. ಕ್ರೀಡಾಪಟುಗಳಿಗೆ ಅವಕಾಶ ಪ್ರೋತ್ಸಾಹಗಳು ದೊರೆತು ಗೌರವಾದರಗಳು ಲಭಿಸುವವು.

ಕನ್ಯಾ: ಸಂಗಾತಿಯ ಕಡೆಯಿಂದ ನಿಮ್ಮ ವ್ಯವಹಾರಕ್ಕೆ ಅನುಕೂಲಕರ ಬಂಡವಾಳ ಹರಿದುಬರುವ ನಿರೀಕ್ಷೆ. ಉದ್ಯೋಗದ ಉನ್ನತಿಯ ನಿಮಿತ್ತ ತರಬೇತಿಯಲ್ಲಿ ಭಾಗವಹಿಸಲಿದ್ದೀರಿ. ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ.

ತುಲಾ: ಬರಹಗಾರರು, ಕಲಾವಿದರುಗಳಿಗೆ ಉತ್ತೇಜನ. ಪ್ರಕಾಶಕರಿಂದ ಪ್ರಶಂಸೆ. ಹೊಸ ಕೃತಿಗಳ ಬಗ್ಗೆ ವಿಮರ್ಶೆ ಮಾತುಕತೆ. ಅಲಂಕಾರಿಕ ವಸ್ತುಗಳ ವ್ಯಾಪಾರಿಗಳಿಗೆ ಉತ್ತಮ ಲಾಭ. ದಾಂಪತ್ಯ ಜೀವನದಲ್ಲಿ ಸಂತಸ.

ವೃಶ್ಚಿಕ: ಗೃಹಬಳಕೆ ಸಾಮಗ್ರಿಗಳ ವ್ಯಾಪಾರದಲ್ಲಿ ತೊಡಗಿದವರಿಗೆ ಹೆಚ್ಚಿನ ಲಾಭ. ಧಾನ್ಯಗಳಿಂದ ಹೆಚ್ಚಿನ ಆರ್ಥಿಕ ದೃಢತೆ ಒದಗಿ ಬರಲಿದೆ. ವಾಣಿಜ್ಯ ಬೆಳೆಗಳ ವ್ಯವಹಾರದಿಂದಾಗಿ ಸಂಪನ್ಮೂಲ ವೃದ್ಧಿ.

ಧನು: ಉದ್ಯೋಗದ ನಿಮಿತ್ತ ನೀಡಿರುವ ಆಶ್ವಾಸನೆಗಳು ವಿಫಲಗೊಳ್ಳುವುದರಿಂದ ವೃಥಾ ಖರ್ಚು. ಮಾನಸಿಕ ತುಮುಲ ಉಂಟಾಗುವ ಸಾಧ್ಯತೆ. ಹೊಸ ಯೋಜನೆಗಳಿಗೆ ಸರ್ಕಾರದಿಂದ ಸಹಾಯ ಧನ ಪ್ರಾಪ್ತಿಯಾಗುವುದು.

ಮಕರ: ಅಬಕಾರಿ, ಆರಕ್ಷಕ ಇಲಾಖಾ ನೌಕರರಿಗೆ ಬಿಡುವಿಲ್ಲದ ಕೆಲಸ ಕಾರ್ಯಗಳು. ಸರ್ಕಾರಿ ಕಚೇರಿಗಳಲ್ಲಿ ಕೆಲಸ ಮಾಡುವವರಿಗೆ ಅನುಕೂಲ. ರಾಜಕಾರಣದಲ್ಲಿರುವವರಿಗೆ ಗೊಂದಲಮಯ ಸನ್ನಿವೇಶ ಸೃಷ್ಟಿಯಾಗಲಿದೆ.

ಕುಂಭ: ಅನಿರೀಕ್ಷಿತ ಧನಾಗಮನ. ಕಲಾವಿದರು, ವಿದ್ವಾಂಸರುಗಳಿಗೆ ಉತ್ತಮ ಅವಕಾಶಗಳು ಅರಸಿ ಬರಲಿವೆ. ಮಹಿಳಾ ಉದ್ಯಮಿಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುವ ಸಾಧ್ಯತೆ. ಬಂಧುಗಳ ಆಗಮನ.

ಮೀನ: ಬಹಳ ದಿನಗಳಿಂದ ಬಾಕಿ ಇರುವ ಕೆಲಸಗಳು ತ್ವರಿತಗತಿಯನ್ನು ಪಡೆದುಕೊಳ್ಳುವುದರಿಂದ ಹೆಚ್ಚಿನ ಅನುಕೂಲ. ಉನ್ನತ ವಿದ್ಯಾಭ್ಯಾಸಕ್ಕೆ ಬೇಕಾದ ಎಲ್ಲ ಅನುಕೂಲತೆಗಳು ಕೂಡಿಬರಲಿವೆ. ವಿದೇಶ ಪ್ರಯಾಣ ಯೋಗ.

ನಿಮ್ಮ ಜನ್ಮದಿನ 15-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ವಿದೇಶ ಪ್ರವಾಸದ ಅವಕಾಶಗಳು ಒದಗಿ ಬಂದರೂ ಕೊನೆಯ ಹಂತದಲ್ಲಿ ಕೈ ತಪ್ಪಬಹುದು. ಉತ್ತಮ ಅವಕಾಶಗಳು ಎದುರಾಗುವುದರಿಂದ ಉತ್ಸಾಹದಿಂದ ಮುಂದುವರಿಯಿರಿ. ಶುಭ ಸಮಾರಂಭಗಳಲ್ಲಿ ಭಾಗವಹಿಸುವ ಸಾಧ್ಯತೆ.

ಪದಬಂಧ 4808

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಗಣಪತಿಯ ಇನ್ನೊಂದು ಹೆಸರು (4)
3.ಕಂಬದ ಬೋದಿಗೆಗೆ ಜೋಡಿಸಿರುವ ಅಲಂಕಾರದ ವಿಗ್ರಹ (4)
5.ಮಲಗುವಿಕೆಯನ್ನು ಹೀಗೆನ್ನಿ (3)
6.ಪುಷ್ಪದಲ್ಲಿರುವ ಸಿಹಿ ರಸ (4)
8.ವಿಷದಿಂದ ಕೂಡಿದ ಸಂಗತಿ (3)
10.ಬೆಳಗಿನ ಜಾವವಿದು (3)
12.ಸರಸ ವಿರಸ ಸಮನಾಗಿರುವಿಕೆ (4)
15.ಕೊನೆಗೆ ಸ್ವರವಿದ್ದರೆ ಇದು ಅಸಾಧ್ಯ! (3)
16.ಬೇರೆಯವರಿಗೆ ವಹಿಸಿಕೊಡುವುದು (4)
17.ಕೊಂಕಿನ ಧಾರೆಯುಳ್ಳ ಕೊಯ್ಯುವ ಸಾಧನ (4)

ಮೇಲಿಂದ ಕೆಳಕ್ಕೆ
1.ಬಿಡುವು ಹೀಗೆ ಸಿಕ್ಕಿದೆ (3)
2.ಹತ್ತು ವರ್ಷಗಳ ಅವಧಿಯು ತಿರುವುಮುರುವಾಗಿದೆ (3)
3.ಮನದಿಂದ ಮಾಡಿಕೊಂಡಿರುವ ಅರಿಕೆ (3)
4.ಈತ ಸೆರೆಯಾಳು (2)
7.ಚಪ್ಪಾಳೆಯನ್ನು ಹೀಗೆನ್ನಿ (5)
9.ಈತ ನರಕಾಧಿಪತಿಯ ಸೇವಕ (5)
11.ತುರಗ ಇಲ್ಲಿ ಕಾಣುತ್ತಿದೆ (3)
12.ಸರದೊಡನಿರುವ ಸಾಮಾನು (3)
13.ಸವಾರ ಕೇಳಿದ ಪ್ರಶ್ನೆ! (3)
14.ಮಂತ್ರವನ್ನು ಮತ್ತೆ ಮತ್ತೆ ಉಚ್ಚರಿಸುವುದು (2)



4807ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಭದ್ರ 2.ವಿಷಯ 4.ಮಣಕ 6.ಏಕಾಂತ 7.ನಾಮಕರಣ 10.ಸುಗುಣ 11.ಹೂದಾನಿ 13.ಗುಲಾಮ 14.ಆಶ್ರಮ
ಮೇಲಿಂದ ಕೆಳಕ್ಕೆ: 1.ಅಧಮ 2.ವಿಧಾತ 3.ಯಥಾಸ್ಥಿತಿ 5.ಕಯನಾ 6.ಏಕೀಕರಣ 8.ಣಬಾಹೂ 9.ನಸುನಗು 10.ಸುಗಮ 12.ನಿಯಮ

ಸುಡೊಕು 5194

			5		6			7
	9			4			8	6
7		4	9			5		3
	1				5			
		7		9				5
5	2		6		3			
8		1		5			6	
			1		4	8		9
4		9		6			5	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5193 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಪಾಕ್ ಭಯೋತ್ಪಾದಕನ ಹತ್ಯೆ

ಜಮ್ಮು: ಪೂಂಚ್ ಜಿಲ್ಲೆಯ ಸುರನ್ ಕೋಟೆ ಪ್ರದೇಶದಲ್ಲಿ ಮಂಗಳವಾರ ಭದ್ರತಾ ಪಡೆಗಳು ನಡೆಸಿದ ಗುಂಡಿನ ದಾಳಿಯಲ್ಲಿ ಲಷ್ಕರ್-ಎ-ತೊಯಬಾ-(ಎಲ್‌ಇಟಿ) ಸಂಘಟನೆಗೆ ಸೇರಿದ ಪಾಕಿಸ್ತಾನದ ಭಯೋತ್ಪಾದಕ ಹತ್ಯೆಯಾಗಿದ್ದಾನೆ.

ಹತ್ಯೆಯಾದ ಉಗ್ರನನ್ನು ಅಬು ಜರಾರಾ ಎಂದು ಗುರುತಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

11ನೇ ಪುಣ್ಯಸ್ಮರಣೆ

ಪಿ.ವಿ. ಕೃಷ್ಣಪ್ಪನವರು
ತಾಲ್ಲೂಕು ಬೋರ್ಡ್ ಮಾಜಿ ಅಧ್ಯಕ್ಷರು
(ಪಟೇಲ್ ವೀರಪ್ಪನವರ ಮಗ
ಅಮೃತಹಳ್ಳಿ, ಬೆಂಗಳೂರು–92)
ನೀವು ನಮ್ಮನ್ನಗಲಿ ಇಂದಿಗೆ 11ವರ್ಷಗಳು ಗತಿಸಿದವು. ನಿಮ್ಮ ಸರಳ ಸಜ್ಜನಿಕೆ, ನೇರ ನಡೆನುಡಿ, ನಿಮ್ಮ ಆದರ್ಶ ಜೀವನ ನಮಗೆಲ್ಲ ಮಾರ್ಗದರ್ಶಕವಾಗಿದೆ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ.
ಪಟೇಲ್ ವಂಶಸ್ಥರು ಮತ್ತು ಕುಟುಂಬದವರು

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಎಂ.ಜಯರಾಮೇಗೌಡ
ಸದಸ್ಯರು, ಜನತಾ ಶಿಕ್ಷಣ ಸಂಸ್ಥೆ
1939-2021
ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುವ
ಆಡಳಿತ ಮಂಡಳಿ, ಜನತಾ ಶಿಕ್ಷಣ ಸಂಸ್ಥೆ
ಪ್ರಾಂಶುಪಾಲರು,ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿ ವರ್ಗ
ವಿವೇಕಾನಂದ ಶಾಲಾ ಕಾಲೇಜುಗಳು
ಬೆಂಗಳೂರು–560055

LOOKING FOR JOB OPPORTUNITY
Refer Classifieds on Wednesday

ಪ್ರಯೋಗ ಹಂತದಲ್ಲಿ ಕೊವೊವ್ಯಾಕ್ಸ್ ಲಸಿಕೆ: ಆದಾರ್ ಪೂನಾವಾಲಾ

‘6 ತಿಂಗಳಲ್ಲಿ ಮಕ್ಕಳಿಗೆ ಲಸಿಕೆ ಬಿಡುಗಡೆ’

ನವದೆಹಲಿ (ಪಿಟಿಐ): ‘ಮಕ್ಕಳಿಗೆ ನೀಡಲಾಗುವ ಕೋವಿಡ್ ಲಸಿಕೆಯನ್ನು ಆರು ತಿಂಗಳಲ್ಲಿ ಬಿಡುಗಡೆ ಮಾಡಲಾಗುವುದು’ ಎಂದು ಸೀರಂ ಇನ್‌ಸ್ಟಿಟ್ಯೂಟ್‌ನ ಸಿಇಒ ಆದಾರ್ ಪೂನಾವಾಲಾ ಮಂಗಳವಾರ ತಿಳಿಸಿದರು.

ಆದಾರ್ ಪೂನಾವಾಲಾ

ಉದ್ಯಮ ಸಮಾವೇಶವೊಂದರಲ್ಲಿ ಮಾತನಾಡುತ್ತಿದ್ದ ಅವರು, ‘ಕೊವೊವ್ಯಾಕ್ಸ್’ ಲಸಿಕೆಯು ಸದ್ಯ ಪ್ರಯೋಗ ಹಂತದಲ್ಲಿದೆ. ಇದು, ಮಕ್ಕಳಿಗೆ ಮೂರು ವರ್ಷದವರೆಗೂ ರಕ್ಷಣೆ ಒದಗಿಸಲಿದೆ’ ಎಂದು ತಿಳಿಸಿದರು.

ಸದ್ಯ, ಮಕ್ಕಳ ವಿಷಯದಲ್ಲಿ ಆತಂಕದ ಪರಿಸ್ಥಿತಿ ಇಲ್ಲ. ಆದರೂ, ಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ನೀಡಲಾಗುವ ಲಸಿಕೆಯನ್ನು ನಾವು ಬಿಡುಗಡೆ ಮಾಡಲಿದ್ದೇವೆ ಎಂದು ಹೇಳಿದರು.

ಪ್ರಸ್ತುತ ದೇಶದಲ್ಲಿ 18 ವರ್ಷ ಮೀರಿದವರಿಗೆ ಕೋವಿಶೀಲ್ಡ್, ಕೋವ್ಯಾಕ್ಸಿನ್ ಮತ್ತು ಮಾನ್ಯತೆ ಪಡೆದ ಇತರೆ ಲಸಿಕೆಗಳನ್ನು ನೀಡಲಾಗುತ್ತಿದೆ.

ಮಕ್ಕಳಿಗೆ ನೀಡುವ ಲಸಿಕೆಗೆ ಸಂಬಂಧಿಸಿ ಭಾರತದಲ್ಲಿ ಎರಡು ಕಂಪನಿಗಳು ಲೈಸೆನ್ಸ್ ಪಡೆದಿವೆ. ಈ ಕಂಪನಿಗಳ ಲಸಿಕೆಗಳೂ ಶೀಘ್ರವೇ ಲಭ್ಯವಾಗಬಹುದು ಎಂದೂ ಉಲ್ಲೇಖಿಸಿದರು.

‘ಲಸಿಕೆ ಪರಿಣಾಮಕಾರಿ ಮತ್ತು ಮಕ್ಕಳಿಗೆ ಸೋಂಕು ವಿರುದ್ಧ ರಕ್ಷಣೆ ಒದಗಿಸಲಿದೆ ಎಂಬುದಕ್ಕೆ ಪೂರಕ ಅಂಕಿಅಂಶಗಳಿವೆ. ಮಕ್ಕಳಿಗೆ ಲಸಿಕೆ ಕೊಡಿಸಬೇಕು. ಇವುಗಳಿಂದ ಅಡ್ಡ-ಪರಿಣಾಮವಿಲ್ಲ. ಸರ್ಕಾರ ಈ ಕುರಿತು ಹೊರಡಿಸುವ ಪ್ರಕಟಣೆ ಆಧರಿಸಿ, ಅದರಂತೆಯೇ ಕ್ರಮಕೈಗೊಳ್ಳಿ’ ಎಂದು ಪೋಷಕರಿಗೆ ಸಲಹೆ ಮಾಡಿದರು.

ಕೋವಿಡ್‌ನ ರೂಪಾಂತರ ತಳಿಯಾಗಿರುವ ‘ಓಮೈಕ್ರಾನ್’ ಮಕ್ಕಳ ಮೇಲೆ ಎಷ್ಟು ಪರಿಣಾಮ ಬೀರಲಿದೆ ಎಂದು ಈಗಲೇ ಹೇಳಲಾಗದು. ಆದರೆ, ನನ್ನ ಪ್ರಕಾರ, ಗಂಭೀರ ಪರಿಣಾಮ ಬೀರಬಹುದು ಎಂದೂ ಅಭಿಪ್ರಾಯ-ಪಟ್ಟರು.

ಶೇ 55.52ರಷ್ಟು ಜನರಿಗೆ ಎರಡೂ ಡೋಸ್ ಲಸಿಕೆ

ನವದೆಹಲಿ (ಪಿಟಿಐ): ‘ದೇಶದಲ್ಲಿ ಶೇ 55ರಷ್ಟು ಅರ್ಹ ವಯಸ್ಕರಿಗೆ ಕೋವಿಡ್–19 ವಿರುದ್ಧ ಎರಡೂ ಡೋಸ್ ಲಸಿಕೆ ನೀಡಲಾಗಿದೆ’ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು ತಿಳಿಸಿದ್ದಾರೆ.

‘ಕೋವಿಡ್ ವಿರುದ್ಧದ ಹೋರಾಟದಲ್ಲಿ ಈ ಮೂಲಕ ಭಾರತ ಇನ್ನೊಂದು ಮೈಲುಗಲ್ಲು ಸಾಧಿಸಿದೆ. ‘ಹರ್ ಘರ್ ದಸ್ತಕ್’ ಅಭಿಯಾನವು ಲಸಿಕೆ ಕಾರ್ಯಕ್ರ-ಮವನ್ನು ಇನ್ನಷ್ಟು ಬಲಪಡಿಸಿದೆ’ ಎಂದು ಟ್ವೀಟ್ ಮಾಡಿದ್ದಾರೆ.

ಆರೋಗ್ಯ ಸಚಿವಾಲಯ ಈ ಕುರಿತು ಹೇಳಿಕೆ ನೀಡಿದ್ದು, ಶೇ 55.52ರಷ್ಟು ಅರ್ಹ ಜನರಿಗೆ ಎರಡು ಡೋಸ್, ಶೇ 87ರಷ್ಟು ಮಂದಿಗೆ ಒಂದು ಡೋಸ್ ಲಸಿಕೆ ನೀಡಲಾಗಿದೆ ಎಂದು ತಿಳಿಸಿದೆ. ದೇಶದಲ್ಲಿ ಕಳೆದ 24 ಗಂಟೆಗಳಲ್ಲಿ 66,98,601 ಲಸಿಕೆ ಡೋಸ್ ನೀಡಲಾಗಿದೆ. ತಾತ್ಕಾಲಿಕ ವರದಿ ಅನುಸಾರ 133.88 ಕೋಟಿ ಜನರಿಗೆ ಲಸಿಕೆ ನೀಡಲಾಗಿದೆ ಎಂದು ತಿಳಿಸಿದೆ.

ಓಮೈಕ್ರಾನ್: ದೆಹಲಿ, ಮುಂಬೈನಲ್ಲಿ ಹೊಸ ಪ್ರಕರಣ ಪತ್ತೆ

ಮುಂಬೈ/ನವದೆಹಲಿ: ಕೊರೊನಾ ವೈರಾಣುವಿನ ರೂಪಾಂತರ ತಳಿ ಓಮೈಕ್ರಾನ್ ಸೋಂಕು ನವದೆಹಲಿಯಲ್ಲಿ ಮತ್ತೆ ನಾಲ್ವರಲ್ಲಿ ಪತ್ತೆಯಾಗಿದೆ ಎಂದು ದೆಹಲಿಯ ಆರೋಗ್ಯ ಸಚಿವ ಸತ್ಯೇಂದರ್ ಜೈನ್ ಮಂಗಳವಾರ ತಿಳಿಸಿದ್ದಾರೆ. ‘ಇವರೆಲ್ಲರೂ ವಿದೇಶಗಳಿಗೆ ಪ್ರಯಾಣ ಮಾಡಿ ಬಂದ ಹಿನ್ನಲೆ ಹೊಂದಿದ್ದಾರೆ. ಓಮೈಕ್ರಾನ್ ರೂಪಾಂತರವು ಇಲ್ಲಿಯವರೆಗೆ ಸಮುದಾಯದಲ್ಲಿ ಹರಡಿಲ್ಲ ಮತ್ತು ಪರಿಸ್ಥಿತಿ ನಿಯಂತ್ರಣದಲ್ಲಿದೆ’ ಎಂದು ಅವರು ಹೇಳಿದ್ದಾರೆ.

ಮಹಾರಾಷ್ಟ್ರದಲ್ಲಿ ಮತ್ತೆ 8 ಪ್ರಕರಣಗಳು ಪತ್ತೆಯಾಗಿದ್ದು, ಓಮೈಕ್ರಾನ್ ಪ್ರಕರಣಗಳ ಒಟ್ಟು ಸಂಖ್ಯೆ 28ಕ್ಕೆ ಏರಿದೆ.

‘ಬೂಸ್ಟರ್ ಡೋಸ್‌ಗೆ ಮಾರ್ಗಸೂಚಿ ಇಲ್ಲ’

ನವದೆಹಲಿ: ‘ಕೋವಿಡ್– 19 ಲಸಿಕೆ ಕಾರ್ಯಕ್ರಮದಲ್ಲಿ ಬೂಸ್ಟರ್ ಡೋಸ್‌ಗಳ ಅಗತ್ಯತೆ ಮತ್ತು ಸಮರ್ಥನೆಗಳ ಬಗ್ಗೆ ತಜ್ಞರ ಸಮಿತಿಗಳು ಇನ್ನೂ ಚರ್ಚಿಸುತ್ತಿದ್ದು, ಈ ನಿಟ್ಟಿನಲ್ಲಿ ಇದುವರೆಗೆ ಯಾವುದೇ ಮಾರ್ಗಸೂಚಿಗಳು ಲಭ್ಯವಿಲ್ಲ’ ಎಂದು ಕೇಂದ್ರ ಸರ್ಕಾರವು ಮಂಗಳವಾರ ದೆಹಲಿ ಹೈಕೋರ್ಟ್‌ಗೆ ತಿಳಿಸಿದೆ.

ಬೂಸ್ಟರ್ ಡೋಸ್‌ಗೆ ಸಂಬಂಧಿಸಿದಂತೆ ಅರ್ಜಿದಾರರಾದ ರಾಕೇಶ್ ಮಲ್ಹೋತ್ರಾ ಎಂಬುವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಹೈಕೋರ್ಟ್ ಕೇಳಿದ ಮಾಹಿತಿಗೆ ಕೇಂದ್ರ ಸರ್ಕಾರವು ತನ್ನ ಪ್ರತಿಕ್ರಿಯೆ ನೀಡಿದೆ. ಕೋವಿಡ್ ಲಸಿಕೆಗಳ ಬೂಸ್ಟರ್ ಡೋಸ್ ಅಗತ್ಯತೆ ಮತ್ತು ಅದಕ್ಕಾಗಿ ಸರ್ಕಾರವು ರೂಪಿಸಿರುವ ಕಾಲಾವಧಿಯ ವಿವರ ಸಲ್ಲಿಸುವಂತೆ ಹೈಕೋರ್ಟ್ ನ. 25ರಂದು ಸರ್ಕಾರಕ್ಕೆ ಸೂಚನೆ ನೀಡಿತ್ತು. ‘ಪ್ರಸ್ತುತ ರಾಷ್ಟ್ರೀಯ ಕೋವಿಡ್ –19 ಲಸಿಕಾ ಕಾರ್ಯಕ್ರಮವು ಅರ್ಹ ಜನಸಂಖ್ಯೆಗೆ ಸಂಪೂರ್ಣ ಲಸಿಕೆಯನ್ನು (ಎರಡು ಡೋಸ್) ನೀಡಲು ಆದ್ಯತೆ ನೀಡುತ್ತಿದೆ. ಆದರೆ, ತಜ್ಞರ ಎರಡು ಸಮಿತಿಗಳು ಬೂಸ್ಟರ್ ಡೋಸ್‌ಗಳ ಕುರಿತು ಯಾವುದೇ ಮಾರ್ಗಸೂಚಿಗಳನ್ನು ನೀಡಿಲ್ಲ’ ಎಂದು ಕೇಂದ್ರವು ನ್ಯಾಯಾಲಯಕ್ಕೆ ಮಾಹಿತಿ ನೀಡಿದೆ.

ಲಸಿಕೆ ಪಡೆದ ಮಹಿಳೆಯರ ಪ್ರಮಾಣ ಶೇ 48.7

ಡಿ. 8ರವರೆಗಿನ ಮಾಹಿತಿಯಂತೆ ದೇಶದಲ್ಲಿ ಅರ್ಹ ಮಹಿಳೆಯರಲ್ಲಿ ಶೇ 48.7ರಷ್ಟು ಮಂದಿಗೆ ಕನಿಷ್ಠ ಒಂದು ಡೋಸ್ ಲಸಿಕೆ ಪಡೆದಿದ್ದಾರೆ ಎಂದು ಸರ್ಕಾರ ರಾಜ್ಯಸಭೆಯಲ್ಲಿ ತಿಳಿಸಿದೆ.

ಆರೋಗ್ಯ ಖಾತೆ ರಾಜ್ಯ ಸಚಿವೆ ಭಾರತಿ ಪ್ರವೀಣ್ ಪವಾರ್ ಲಿಖಿತ ಉತ್ತರ ನೀಡಿದ್ದು, ಮಹಿಳೆಯರು ಕಡಿಮೆ ಪ್ರಮಾಣದಲ್ಲಿ ಲಸಿಕೆ ಪಡೆಯಲು ಜಾಗೃತಿ ಕೊರತೆ ಕಾರಣ ಎಂದಿದ್ದಾರೆ.ಪರಿಣಿತರ ಶಿಫಾರಸು ಮತ್ತು ವೈಜ್ಞಾನಿಕ ಸಾಕ್ಷ್ಯ ಆಧರಿಸಿ ಆರೋಗ್ಯ ಸಚಿವಾಲಯವು ಗರ್ಭಿಣಿಯರಿಗೂ ಲಸಿಕೆ ನೀಡಲು ಜುಲೈ 2ರಂದು, ಬಾಣಂತಿಯರಿಗೆ ಲಸಿಕೆ ನೀಡಲು ಮೇ 19ರಂದು ಅನುಮೋದನೆ ನೀಡಿದೆ ಎಂದು ತಿಳಿಸಿದರು.

ಯುಎಪಿಎ: ಬಂಧಿತರಲ್ಲಿ ಯುವಕರೇ ಹೆಚ್ಚು

ನವದೆಹಲಿ: ಕಳೆದ ಮೂರು ವರ್ಷಗಳಲ್ಲಿ ವಿವಾದಾತ್ಮಕ ಕಾನೂನುಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯ್ದೆ ಅಥವಾ ಯುಎಪಿಎ ಅಡಿಯಲ್ಲಿ ಬಂಧಿಸಲಾದ 4,690 ಜನರಲ್ಲಿ ಶೇ 53.32 ರಷ್ಟು ಜನರು 30 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದಾರೆ. ಇದರಲ್ಲಿ ಉತ್ತರ ಪ್ರದೇಶ, ಮಣಿಪುರ ಮತ್ತು ಜಮ್ಮು ಮತ್ತು ಕಾಶ್ಮೀರದ ಯುವಕರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಅವರು ಲೋಕಸಭೆಯಲ್ಲಿ ಲಿಖಿತ ಉತ್ತರದಲ್ಲಿ ಇದನ್ನು ಬಹಿರಂಗಪಡಿಸಿದ್ದಾರೆ.

‘ಲೈಂಗಿಕ ಕಾರ್ಯಕರ್ತೆಯರಿಗೆ ಪಡಿತರ ಚೀಟಿ ಒದಗಿಸಿ’

ನವದೆಹಲಿ: ದೇಶದ ಪ್ರತಿಯೊಬ್ಬ ನಾಗರಿಕ ಮೂಲಭೂತ ಹಕ್ಕುಗಳನ್ನು ಪಡೆಯಲು ಅರ್ಹ ಎಂದು ಹೇಳಿರುವ ಸುಪ್ರೀಂಕೋರ್ಟ್, ಲೈಂಗಿಕ ಕಾರ್ಯ-ಕರ್ತೆರಿಗೆ ಆಧಾರ್ ಕಾರ್ಡ್, ಪಡಿತರ ಮತ್ತು ಮತದಾರರ ಗುರುತಿನ ಚೀಟಿಯನ್ನು ನೀಡುವ ಪ್ರಕ್ರಿಯೆಯನ್ನು ಆದಷ್ಟು ಬೇಗ ನಡೆಸುವಂತೆ ಕೇಂದ್ರ, ರಾಜ್ಯ ಸರ್ಕಾರ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚಿಸಿದೆ.

ಕೋವಿಡ್–19 ಸಂಕಷ್ಟಕ್ಕೆ ಸಿಲುಕಿರುವ ಲೈಂಗಿಕ ಕಾರ್ಯಕರ್ತೆಯರ ಸಮಸ್ಯೆಗಳ ಕುರಿತಾದ ಅರ್ಜಿಯ ಬಗ್ಗೆ ವಿಚಾರಣೆ ನಡೆಸಿದ ಪೀಠವು, ಗುರುತಿನ ಪುರಾವೆ ಇಲ್ಲದಿದ್ದರೂ ಲೈಂಗಿಕ ಕಾರ್ಯಕರ್ತೆಯರಿಗೆ ಪಡಿತರವನ್ನು ನೀಡಬೇಕು ಎಂದು ಕೇಂದ್ರ ಮತ್ತು ಇತರೆ ಸರ್ಕಾರಗಳಿಗೆ ನಿರ್ದೇಶನ ನೀಡಿದೆ. ನ್ಯಾಯಮೂರ್ತಿಗಳಾದ ಎಲ್.ನಾಗೇಶ್ವರ ರಾವ್ , ಬಿ.ಆರ್.ಗವಾಯಿ ಮತ್ತು ಬಿ.ವಿ.ನಾಗರತ್ನ ಅವರನ್ನು ಒಳಗೊಂಡ ಪೀಠವು ಈ ಆದೇಶವನ್ನು ಹೊರಡಿಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

URGENTLY WANTED experienced QA, QC personnel for Electromagnetic products supplied for Defence and Aerospace. Minimum experience of 10 years. Very competitive remuneration. Vita Technology Pvt. Ltd., Contact: 7899752257 / 9686203434 vitatech@vitatechindia.com

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degreeಯವರು ITIನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100- 56,000/- ವಸತಿಯೂಟದೊಂದಿಗೆ. 7899778278, 9611715755

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ನಮ್ಮ ಕಾರುಗಳಲ್ಲಿ ತೆರಳಿ ಪ್ರಮೋಟ್ ಮಾಡಿ ಉಚಿತ ವಸತಿಯೊಂದಿಗೆ ದಿನಕ್ಕೆ 800 -1200 ಸಂಪಾದಿಸಲು ಸಂಪರ್ಕಿಸಿ: 9513670249/ 8904379634

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ sslc puc degree ಸಂಬಳ 15000to28000 ಸಂಪರ್ಕಿಸಿರಿ 9980814578, 9980812378

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ /ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT 17800-68000/- Ph:8884666597, 8884666594.

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600-62000/- (ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

ಕೋಳಿರೊಟ್ಟಿ ಮಾಡುವವರು (ತಿಂಗಳಿಗೆ 27,000-) ಗ್ರೈಂಡರ್ ಗೆ ಹುಡುಗರು (9,000/-) ಪ್ಯಾಕಿಂಗ್ ಗೆ ಹುಡುಗಿಯರು ಬೇಕಾಗಿದ್ದಾರೆ. ಊಟ, ವಸತಿ ಉಚಿತ.9845276452

ಬೇಕಾಗಿದ್ದಾರೆ: ವಿವಿಧ ಕೆಲಸಕ್ಕೆ ಮಹಿಳೆಯರು ಮತ್ತು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ: 8884859668, 8904075423, 6364199728

Marketing & Sales

ಟೆಲಿಕಾಲರ್ಸ್ (ಮಹಿಳೆ) ಇಂಗ್ಲಿಷ್ ಭಾಷೆ, ಕಂಪ್ಯೂಟರ್ ಜ್ಞಾನವಿರುವ ಮತ್ತು ಬಿಸಿನೆಸ್ ಎಕ್ಸಿಕ್ಯೂಟಿವ್ (ಪುರುಷ) ಬೆಂಗಳೂರಿನ ಜಾಹೀರಾತು ಕಂಪನಿಗೆ ಬೇಕಾಗಿದ್ದಾರೆ: 9845411113

Part-Time Jobs

GLOBAL INTERNATIONAL Friendship Club Reqd M&F Daily Earn 10,000 To 15,000 PF& ESI Benefits with Food & Room. Whatsapp 9513045046/ 7022770604

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕುನಲ್ಲಿರುವ ಸ್ಪ್ರಿಂಗ್ ಗ್ರೀನ್, ಪ್ರತಿಷ್ಠಿತ ನರ್ಸರಿಗೇ ಪ್ರಮುಖ ಹುದ್ದೆಗಳಿಗಾಗಿ ಅಭ್ಯರ್ಥಿಗಳು ಬೇಕಾಗಿದ್ದಾರೆ, ಅನುಭವವುಳ್ಳ ಮ್ಯಾನೇಜರ್, ಆರ್ಟಿಕಲ್ಚರ್, ಟಿಶ್ಯೂ ಕಲ್ಚರ್, ಪ್ರೋಪಾಗೇಶನ್, ನರ್ಸರಿಯ 35ಜನ ಕೆಲಸಗಾರರನು ನಿಭಾಯಿಸುವವರು. ಒಳ್ಳೆಯ ಕೆಲಸಗಾರರಿಗೆ ಸಂಬಳ, ವಸತಿಯನ್ನು ನೀಡಲಾಗುವುದು. ಬಯೋಡೇಟಾ ಇಮೇಲ್ rohini@springgreen.in ಸಂಪರ್ಕಿಸಿ. 9901971819.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ
ಸಿಂಗಸಂದ್ರ ವಿದ್ಯಾಸಂಸ್ಥೆ, ಸಿಂಗಸಂದ್ರ (ರಿ)
ಶ್ರೀ ಚನ್ನಕೇಶವ ಪ್ರಾಥಮಿಕ ಮತ್ತು ಪ್ರೌಢಶಾಲೆ
ಚನ್ನಕೇಶವನಗರ, ಬೆಂಗಳೂರು–100
ಫೋನ್: 080–25730922
ಸಂಸ್ಥೆಯ ಚುನಾವಣೆ ಕುರಿತು ಎಲ್ಲಾ ಸದಸ್ಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಜಿಲ್ಲಾ ಉಪನೋಂದಣಾಧಿಕಾರಿ ಕಛೇರಿಯ ಶ್ರೀ ತಿಪ್ಪಯ್ಯರವರು ರಿಟರ್ನಿಂಗ್ ಅಧಿಕಾರಿಯಾಗಿ ನೇಮಕಗೊಂಡಿರುತ್ತಾರೆ.
ಚುನಾವಣಾಧಿಕಾರಿಯವರು ಕಾರ್ಯಕಾರಿ ಸಮಿತಿಯ ಚುನಾವಣೆಯನ್ನು ದಿನಾಂಕ : 26.12.2021 ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಶ್ರೀ ಚನ್ನಕೇಶವ ಶಾಲಾ ಆವರಣದಲ್ಲಿ ನಡೆಸಲು ವೇಳಾಪಟ್ಟಿಯನ್ನು ಪ್ರಕಟಿಸಿರುತ್ತಾರೆ. ಗುರುತಿನ ಚೀಟಿಯೊಂದಿಗೆ ಎಲ್ಲಾ ಸದಸ್ಯರು ಚುನಾವಣೆಯಲ್ಲಿ ಪಾಲ್ಗೊಳ್ಳಲು ತಿಳಿಸಿದೆ.
ವಿ.ಸೂ: ನಿರ್ದೇಶಕರ ಸ್ಥಾನ 3.
– ಕಾರ್ಯದರ್ಶಿಗಳು

ವ್ಯಾಪಾರ

Business to Business

Business

NO DEPOSIT, No target, Work as Freelancer for Insurance & Share Market. 9019043325

ಸಮಾಜಸೇವೆ

Counselling Centre

ಹೆಸರಾಂತ ವಕೀಲರು BCom. LLL.B ಡಿವೋರ್ಸ್ ಹಾಗೂ ಕೌನ್ಸಿಲಿಂಗ್ ಅಗಬೇಕಾದಲ್ಲಿ ಈ ನಂಬರ್ ಗೆ ಕರೆ ಮಾಡಿ ಸಂಪರ್ಕಿಸಿ: 9620192376

ಭವಿಷ್ಯ

Astrology

★॥ಶ್ರೀಅನ್ನಪೂರ್ಣೇಶ್ವರಿದೇವಿ ಆರಾಧನೆಯಿಂದ॥★ ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಸಾಲಬಾದೆ,ಮಾಟಮಂತ್ರ ಯಾವುದೇ ಸಮಸ್ಯೆಗಳಿಗೆ ಕೇವಲ 30.ನಿಮಿಷದಲ್ಲಿ ಪರಿಹಾರ. ಬ್ರಹ್ಮಾನಂದ ಗುರೂಜಿ. 8050061378

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ, ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಕೊಡಲಾಗುತ್ತದೆ Rs. 1999 ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007/ 8892501007

★॥ಕೆಲಸ ಆದ ನಂತರ ಕಾಣಿಕೆ॥* ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ, ತಿನ್ನಿಸುವುದಾಗಲಿ, ಬಟ್ಟೆ,ಫೋಟೋ,ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ,7ಗಂಟೆಗಳಲ್ಲಿ ಪರಿಹಾರ. 9482529984

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್.(ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ. 9886755306

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★ವಶೀಕರಣ ಸ್ಪೆಷಲಿಸ್ಟ್★ ಗಂಡ ಹೆಂಡತಿ ಕಲಹ, ಪ್ರೇಮವಿಚಾರ, ಸಂತಾನ, ಸ್ತ್ರೀಪುರುಷಅನ್ಯೆತಿಕ ಸಂಬಂಧ ಇನ್ನಿತರ ಸಮಸ್ಯೆಗಳಿಗೆ ಫೋನಿನ ಮುಖಾಂತರ ಪರಿಹಾರ. 9538276534

ವೈಯಕ್ತಿಕ

Change of Name

I, VIVEK Paramesswar Nayak residing at No.5, Ganesh Colony, Near Kalyan Nagar, Vidya Nagar, Hubballi, Karnataka-580031, have changed my minor Daughter's names from SALONY VIVEK NAYAK alias SALONI VIVEK NAYAK to SALONI NAYAK vide affidavit dated 06/12/2021 before notary Shri S.R. Desai, Hubballi

ಪ್ರವಾಸ

Travel

ವಿಜಯವಾಡ, ಭದ್ರಾಚಲಂ, ವಾಸವಿಪೆನುಗೊಂಡ, ಪಂಚರಾಮ ಮಂದಿರಗಳು 24.12.2021 ರಿಂದ 10 ದಿನಗಳು. ಸೋಮನಾಥ್, ದ್ವಾರಕಾ,ಮಾತೃಗಯಾ, ಅಷ್ಟಜ್ಯೋತಿರ್ಲಿಂಗಗಳು 20.01.2022, 03.02.2022 ರಿಂದ 15/18 ದಿನಗಳು. ದೆಹಲಿ,ಅಮೃತ್‌ಸರ್, ವೈಷ್ಣೊದೇವಿ, ಕುಲು,ಮನಾಲಿ, ಶಕ್ತಿಪೀಠಗಳು 11.02.2022, 07.03.2022 ರಿಂದ 12 ದಿನಗಳು. ಸಂಪರ್ಕಿಸಿ: 26508925, 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ, ಬೆಂಗಳೂರು-18

'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' ವತಿಯಿಂದ ರಿಯಾಯಿತಿ ದರದಲ್ಲಿ ಸುಲಭ ಕಂತಿನಲ್ಲಿ 15 ದಿನಗಳು. ರೈಲು/ ಬಸ್ಸಿನಲ್ಲಿ ಫೆಬ್ರವರಿ, ಮಾರ್ಚನಲ್ಲಿ ಕಾಶಿಯತ್ರ, ದೆಹಲಿ, ಆಗ್ರ, ಅಲಹಾಬದ್, ಗಯಾ, ಅಯೋದ್ಯ, ಹರಿದ್ವರ, ಇತ್ಯಾದಿ (ಕೆಲವೇ ಸೀಟುಗಳಿವೆ), ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ Royal Package 9845560219/ 9739847429.

ಶಿವರಾತ್ರಿ ಪ್ರಯುಕ್ತ 21.02.2022, 11 ದಿನಗಳು ನೈಮೀಶಾರಣ್ಯ, ಕಾಶಿ,ಗಯಾ, ಅಯೋಧ್ಯ. 21.02.2022, 11 ದಿನಗಳು. ಉಜ್ಜಯಿನಿ ಪಟೇಲ್ ಪ್ರತಿಮೆ, ದ್ವಾರಕಾ, ಸೋಮನಾಥ್, ನಿಷ್ಕಳಂಕಮಾಹದೇವ. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್. 9342287551, 8050629305

ಶ್ರೀ ರಾಜರಾಜೇಶ್ವರಿ ಟೂರ್. 9739618243, 9743895346, 17.01.2022, 10ದಿನ, ರನ್‌ಆಫ್ ಕಚ್, ಬುಜ್, ಡಿಯು, ಸಾಸನ್ ಗೀರ್, ಪಲಿಟಾನ, ನಿಷ್ಕಳಂಕಮಹಾದೇವ, ಸರ್ದಾರ್ ಪ್ರತಿಮೆ

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH MATRI AUTO ASTRO NOTICE TRAVEL
condition apply*
WWW.DHCLASSIFIEDS.COM
For more information Contact:
9880856233 9731810277 9901641752 9845114560 9886213331
Email: dhclassifieds@deccanherald.co.in

ಸಂಕ್ಷಿಪ್ತ ಸುದ್ದಿ

ಇ.ಡಿ, ಸಿಬಿಐ ನಿರ್ದೇಶಕರ ಅವಧಿ ವಿಸ್ತರಣೆಗೆ ಒಪ್ಪಿಗೆ

ನವದೆಹಲಿ: ಕೇಂದ್ರ ತನಿಖಾ ದಳದ (ಸಿಬಿಐ) ಮತ್ತು ಜಾರಿ ನಿರ್ದೇಶನಾಲಯದ ನಿರ್ದೇಶಕರ ಅವಧಿಯನ್ನು ಎರಡು ವರ್ಷಗಳಿಂದ ಗರಿಷ್ಠ ಐದು ವರ್ಷಗಳವರೆಗೆ ವಿಸ್ತರಿಸುವ ಮಸೂದೆಯನ್ನು ಸಂಸತ್ತು ಮಂಗಳವಾರ ಅಂಗೀಕರಿಸಿದೆ.

12 ಸದಸ್ಯರ ಅಮಾನತು ಖಂಡಿಸಿ ಪ್ರತಿಪಕ್ಷಗಳು ನಡೆಸಿದ ಪ್ರತಿಭಟನೆಯ ನಡುವೆಯೇ ಸಿಬ್ಬಂದಿ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಅವರು ರಾಜ್ಯ-ಸಭೆಯಲ್ಲಿ ‘ದೆಹಲಿ ವಿಶೇಷ ಪೊಲೀಸ್ ಸ್ಥಾಪನೆ (ತಿದ್ದುಪಡಿ) ಮಸೂದೆ 2021’ ಅನ್ನು ಮಂಡಿಸಿದರು.

ನಂತರ ಮಸೂದೆಯನ್ನು ಮೇಲ್ಮನೆಯಲ್ಲಿ (ರಾಜ್ಯಸಭೆ) ಧ್ವನಿಮತದ ಮೂಲಕ ಅಂಗೀಕರಿಸಲಾಯಿತು. ಡಿ.3ರಂದು ಈ ಮಸೂದೆಯು ಲೋಕಸಭೆಯಲ್ಲಿ ಅಂಗೀಕಾರವಾಗಿತ್ತು.

ಚಾರ್‌ಧಾಮ್: ದ್ವಿಪಥ ರಸ್ತೆ ವಿಸ್ತರಣೆಗೆ ‘ಸುಪ್ರೀಂ’ ಅನುಮತಿ

ನವದೆಹಲಿ: ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ಉತ್ತರಾಖಂಡದ ಚಾರ್‌ಧಾಮ್ ಹೆದ್ದಾರಿ ಯೋಜನೆಯ ದ್ವಿಪಥ ರಸ್ತೆ ವಿಸ್ತರಣೆಗೆ ಸುಪ್ರೀಂಕೋರ್ಟ್ ಮಂಗಳವಾರ ಅನುಮತಿ ನೀಡಿದೆ. ನ್ಯಾಯಮೂ-ರ್ತಿಗಳಾದ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠವು, ಮಾಜಿ ನ್ಯಾಯಮೂರ್ತಿ ಎ.ಕೆ. ಸಿಕ್ರಿ ನೇತೃತ್ವದ ಮೇಲುಸ್ತುವಾರಿ ಸಮಿತಿಯನ್ನು ಸ್ಥಾಪಿಸಿ ಯೋಜನೆಯ ಬಗ್ಗೆ ನೇರವಾಗಿ ವರದಿ ನೀಡಲು ಸೂಚನೆ ನೀಡಿದೆ.

‘ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಭದ್ರತೆಗೆ ಗಂಭೀರ ಸವಾಲುಗಳು ಎದುರಾಗುತ್ತಿದ್ದು, ಗಡಿಭದ್ರತಾ ಪಡೆಗಳ ಕಾಳಜಿಗಾಗಿ ಮೂಲಸೌಕರ್ಯವನ್ನು ಪೂರೈಸುವ ಅಗತ್ಯವಿದೆ’ ಎಂದು ನ್ಯಾಯಾಲಯವು ಪ್ರತಿಪಾದಿಸಿದೆ.

2020ರ ಸೆ.8ರ ಆದೇಶ ಮಾರ್ಪಡಿಸುವಂತೆ ಕೋರಿ ಕೇಂದ್ರ ಸರ್ಕಾರವು ಸಲ್ಲಿಸಿದ್ದ ಮನವಿಯ ವಿಚಾರಣೆಯನ್ನು ನಡೆಸಿದ ನ್ಯಾಯಾಲಯವು, ಗಡಿಯವರೆಗೆ ಹಾದುಹೋಗುವ ಹೆದ್ದಾರಿ ಯೋಜನೆಯ ರಸ್ತೆ ವಿಸ್ತರಣೆಗೆ ಸಂಬಂಧಿಸಿದಂತೆ 2018ರ ಸುತ್ತೋಲೆಯನ್ನು ಅನುಸರಿಸುವಂತೆ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯಕ್ಕೆ ಸೂಚಿಸಿದೆ.

ಮಹಾರಾಷ್ಟ್ರ: ಪರಿಷತ್ ಚುನಾವಣೆ ಬಿಜೆಪಿಗೆ ನಾಲ್ಕು ಸ್ಥಾನ

ಪ್ರಜಾವಾಣಿ ವಾರ್ತೆ

ಮುಂಬೈ: ವಿಧಾನ ಪರಿಷತ್ ಚುನಾವಣೆಯಲ್ಲಿ ಮಹಾರಾಷ್ಟ್ರದ ಆಡಳಿತಾರೂಢ ಮಹಾ ವಿಕಾಸ್ ಅಘಾಡಿ (ಎಂವಿಎ) ಮೈತ್ರಿಕೂಟಕ್ಕೆ ಹಿನ್ನಡೆಯಾಗಿದೆ.

ನಾಗಪುರದಲ್ಲಿ ಬಿಜೆಪಿ ಭಾರಿ ಗೆಲುವು ಸಾಧಿಸಿದೆ. ಶಿವಸೇನೆಯಿಂದ ಅಕೋಲಾ–ಬುಲ್ಢಾನ–ವಾಶಿಮ್ ಕ್ಷೇತ್ರವನ್ನು ಬಿಜೆಪಿ ಕಸಿದುಕೊಂಡಿದೆ.

ಬೃಹತ್‌ಮುಂಬೈಮಹಾನಗರಪಾಲಿಕೆಯ ಎರಡು ಸ್ಥಾನಗಳು ಮತ್ತು ಕೊಲ್ಲಾಪುರ, ಧುಲೆ-ನಂದೂರ್ ಬಾರ್, ಅಕೋಲಾ-ಬುಲ್ಢಾನ--ವಾಶಿಮ್, ನಾಗ್ಪುರ ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ತಲಾ 1 ಸ್ಥಾನಗಳಿಗೆ ಮಹಾರಾಷ್ಟ್ರ ವಿಧಾನ ಪರಿಷತ್ತಿನ ದ್ವೈವಾರ್ಷಿಕ ಚುನಾವಣೆ ಘೋಷಣೆಯಾಗಿತ್ತು. ಆದರೆ, ನಾಗ್ಪುರ ಮತ್ತು ಅಕೋಲಾ-ಬುಲ್ಢಾನ-ವಾಶಿಮ್ ಕ್ಷೇತ್ರದಲ್ಲಿ ಮತದಾನ ನಡೆದಿದ್ದು, ಉಳಿದ ನಾಲ್ಕು ಕ್ಷೇತ್ರಗಳಲ್ಲಿ ಅವಿರೋಧ ಆಯ್ಕೆ ನಡೆದಿದೆ. ನಾಗ್ಪುರ್ ಕ್ಷೇತ್ರದಿಂದ ಬಿಜೆಪಿಯ ಚಂದ್ರಶೇಖರ ಬಾವನಕುಳೆ, ಅಕೋಲಾ-ಬುಲ್ಢಾನ-ವಾಶಿಮ್ ಕ್ಷೇತ್ರದಿಂದ ವಸಂತ ಖಂಡೇಲ್‌ವಾಲ್ ಚುನಾಯಿತರಾಗಿದ್ದಾರೆ.

ಬೃಹತ್‌ಮುಂಬೈಮಹಾನಗರಪಾಲಿಕೆಯ ದ್ವಿಸದಸ್ಯ ಕ್ಷೇತ್ರದಿಂದ ಶಿವಸೇನೆಯ ಸುನೀಲ್ ಶಿಂಧೆ ಮತ್ತು ಬಿಜೆಪಿಯ ರಾಜಹಂಸ್ ಸಿಂಗ್, ಕೊಲ್ಲಾಪುರದಿಂದ ಗೃಹ ಖಾತೆ ರಾಜ್ಯ ಸಚಿವ ಸತೇಜ್ ಪಾಟೀಲ್, ಧುಲೆ-ನಂದೂರ್‌ಬಾರ್ ಕ್ಷೇತ್ರದಿಂದ ಬಿಜೆಪಿಯ ಅಮರೀಶ್ ಪಟೇಲ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE
ಪ್ರಜಾವಾಣಿ ಕನ್ನಡ ಧ್ವನಿ
Prajavani.net/podcast
ದಿನದ ವಿಶೇಷ: ಸಂಜೆ 4 : ಝಣ ಝಣ ಕಾಂಚಾಣ
ಬೆಳಿಗ್ಗೆ 7 : ವಚನವಾಣಿ,
ಬೆಳಿಗ್ಗೆ 7.30: ದಿನದ ಸೂಕ್ತಿ,
ಬೆಳಿಗ್ಗೆ 8: ಮಧ್ಯಾಹ್ನ 2: ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್,
ಬೆಳಿಗ್ಗೆ 9: ಪ್ರಚಲಿತ,
ಬೆಳಿಗ್ಗೆ 9.30: ಸಂಪಾದಕೀಯ
Prajavani.net
Prajavani Prajavani

ಭಾರತಕ್ಕೆ ಎಲ್ಲರನ್ನೂ ಒಳಗೊಳ್ಳುವ ದಿಟ್ಟ ಪ್ರಧಾನಿ ಬೇಕು: ಫಾರೂಕ್ ಅಬ್ದುಲ್ಲಾ

ನವದೆಹಲಿ: ‘ಹಿಂದೂ, ಮುಸ್ಲಿಂ, ಸಿಖ್ ಅಥವಾ ಯಾರೇ ಆಗಿರಲಿ ಕೇವಲ ರಾಜಕೀಯಕ್ಕಾಗಿ ಜನರನ್ನು ವಿಭಜಿಸುವವರ ಬದಲು ಎಲ್ಲರನ್ನೂ ಒಳಗೊಳ್ಳುವ ದಿಟ್ಟ ಪ್ರಧಾನ ಮಂತ್ರಿ ಭಾರತಕ್ಕೆ ಅಗತ್ಯವಿದೆ’ ಎಂದು ನ್ಯಾಷನಲ್ ಕಾನ್ಫರೆನ್ಸ್ ಅಧ್ಯಕ್ಷ, ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ ಅವರು ಪರೋಕ್ಷವಾಗಿ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರ ಜೀವನ ಚರಿತ್ರೆ ‘ಫರೋಸ್ ಇನ್ ಎ ಫೀಲ್ಡ್: ದ ಅನ್‌ಎಕ್ಸ್‌ಪ್ಲೋರ್ಡ್ ಲೈಫ್ ಆಫ್’ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ‘ದೇಶದ ಜನರು ಬಲಿಷ್ಠರಾದಾಗ ಮಾತ್ರ ದೇಶವು ಬಲಿಷ್ಠವಾಗುತ್ತದೆ. ಭಾರತಕ್ಕೆ ಒಬ್ಬ ದಿಟ್ಟ ಪ್ರಧಾನ ಮಂತ್ರಿ ಬೇಕು. ಎಲ್ಲರನ್ನೂ ಒಟ್ಟಿಗೆ ಹಿಡಿದಿಟ್ಟುಕೊ-ಳ್ಳುವ ಪ್ರಧಾನಿಯು ರಾಜಕೀಯಕ್ಕಾಗಿ ಭಾರತ, ಹಿಂದೂ, ಮುಸ್ಲಿಂ, ಸಿಖ್ ಹೀಗೆ ಯಾರನ್ನೂ ವಿಭಜಿಸುವುದಿಲ್ಲ. ಭಾರತಕ್ಕೆ ವಿಭಜನೆಯ ಅಗತ್ಯವಿಲ್ಲ’ ಎಂದರು.

‘ದುರಂತವೆಂದರೆ ಪ್ರತೀ ಚುನಾವಣೆಯು ಭಾರತ ಮತ್ತು ಭಾರತದ ಜನರನ್ನು ವಿಭಜಿಸಿದೆ. ನಾವು ಧರ್ಮದ ಆಧಾರದಿಂದ ವಿಭಜನೆಯಾಗದ ದಿನ ಯಾವಾಗ ಬರುತ್ತದೆ’ ಎಂದು ಆಶ್ಚರ್ಯ ವ್ಯಕ್ತ-ಪಡಿಸಿದ ಅವರು, ‘ನಾನು ಮುಸ್ಲಿಂ, ನನ್ನ ಧರ್ಮದಂತೆಯೇ ಇತರ ಎಲ್ಲ ಧರ್ಮಗಳ ಬಗ್ಗೆಯೂ ಗೌರವವನ್ನು ಹೊಂದಿದ್ದೇನೆ’ ಎಂದರು.

ನವದೆಹಲಿಯಲ್ಲಿ ಸೋಮವಾರ ನಡೆದ ‘ಫರೋಸ್ ಇನ್ ಎ ಫೀಲ್ಡ್: ದ ಅನ್‌ಎಕ್ಸ್‌ಪ್ಲೋರ್ಡ್ ಲೈಫ್ ಆಫ್ ಎಚ್.ಡಿ. ದೇವೇಗೌಡ’ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಅವರು ಪಾಲ್ಗೊಂಡಿದ್ದರು —ಚಿತ್ರಕೃಪೆ: ಟ್ವಿಟರ್

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಿಪಿಎಂ ನಾಯಕ ಸೀತಾರಾಂ ಯೆಚೂರಿ ಅವರು, 1996ರಲ್ಲಿ ಪ್ರಧಾನಿಯಾಗಿ-ದ್ದಾಗ ದೇವೇಗೌಡ ಅವರ ನೇತೃತ್ವದಲ್ಲಿ ಸರ್ಕಾರ ಹೇಗೆ ರಚನೆಯಾಯಿತು ಎಂಬುದನ್ನು ನೆನಪಿಸಿಕೊಂಡು, ಗೌಡರ ಕೊಡುಗೆಗಳನ್ನು ಶ್ಲಾಘಿಸಿದರು.

ಪತ್ರಕರ್ತ ಸುಗತ ಶ್ರೀನಿವಾಸರಾಜು ರಚಿಸಿರುವ ಈ ಪುಸ್ತಕವನ್ನು ಖ್ಯಾತ ವಕೀಲ ಫಾಲಿ ಎಸ್. ನರೀಮನ್ ಅವರು ವರ್ಚುವಲ್ ಕಾರ್ಯಕ್ರಮದ ಮೂಲಕ ಬಿಡುಗಡೆ ಮಾಡಿದರು.

ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ, ಕಾಂಗ್ರೆಸ್ ಮುಖಂಡರಾದ ಜೈರಾಮ್ ರಮೇಶ್, ಪಿ.ಚಿದಂಬರಂ ಮತ್ತು ಅವರ ಪುತ್ರ ಕಾರ್ತಿ ಚಿದಂಬರಂ, ಬಿಎಸ್‌ಪಿಯ ಡ್ಯಾನಿಶ್ ಅಲಿ ಮತ್ತು ಇತರ ಗಣ್ಯರು ಉಪಸ್ಥಿತರಿದ್ದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಕೃಪಾಂಕ ಇಲ್ಲ: ಸಿಬಿಎಸ್‌ಇ

ನವದೆಹಲಿ: 12ನೇ ತರಗತಿಯ ಅಕೌಂಟೆನ್ಸಿ ಪ್ರಶ್ನೆಪತ್ರಿಕೆಯಲ್ಲಿ ದೋಷವಿದ್ದು, ವಿದ್ಯಾರ್ಥಿಗಳಿಗೆ ಆರು ಕೃಪಾಂಕಗಳನ್ನು ನೀಡಲಾಗುತ್ತದೆ ಎಂಬ ವರದಿಯನ್ನು ಕೇಂದ್ರೀಯ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ (ಸಿಬಿಎಸ್‌ಇ) ಮಂಗಳವಾರ ತಳ್ಳಿಹಾಕಿದೆ.

ಈ ಕುರಿತಂತೆ ಸಾಮಾಜಿಕ ಜಾಲ-ತಾಣಗಳಲ್ಲಿ ಮಂಡಳಿಯ ಪರೀಕ್ಷಾ ನಿಯಂತ್ರಕರ ಹೆಸರಿನಲ್ಲಿ ಹರಿದಾ-ಡುತ್ತಿರುವ ವಿಡಿಯೊ ನಕಲಿ, ಆಧಾರ ರಹಿತವಾದುದು ಎಂದು ಸಿಬಿಎಸ್‌ಇ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ. ಡಿಸೆಂಬರ್ 13 ರಂದು ನಡೆದ 12ನೇ ತರಗತಿಯ ಅಕೌಂಟೆನ್ಸಿ ಟರ್ಮ್-1 ಪ್ರಶ್ನೆಪತ್ರಿಕೆಯಲ್ಲಿನ ದೋಷದಿಂದಾಗಿ ಕೃಪಾಂಕಗಳನ್ನು ನೀಡಲಾಗುತ್ತದೆ ಎಂದು ನಕಲಿ ವರದಿಗಳನ್ನು ಪ್ರಸಾರ ಮಾಡಲಾಗುತ್ತಿದೆ. ಈ ಬಗ್ಗೆ ವಿದ್ಯಾರ್ಥಿಗಳು ಎಚ್ಚರಿಕೆ ವಹಿಸಬೇಕು ಎಂದು ತಿಳಿಸಿದೆ.

ಷೇರುಪೇಟೆ ವಹಿವಾಟು 166



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,368
ಇಂದಿನ ಅಂತ್ಯ	17,324
▼	44
ದಿನದ ಕನಿಷ್ಠ	17,255

ವಿನಿಮಯ ದರ

$ ಡಾಲರ್	75.88
£ ಪೌಂಡ್	100.23
€ ಯುರೊ	85.63
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹505
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹505

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1310 (1310)
ಸೋಯಾ (ರಿಫೈನ್ಡ್)	₹1195 (1210)
ಸೂರ್ಯಕಾಂತಿ (ರಿಫೈನ್ಡ್)	₹1260 (1270)
ಪಾಮೋಲಿನ್	₹1165 (1175)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದೊಡ್ಡ	₹1500-3600
ಮಧ್ಯಮ	₹1800-2000
ಸಣ್ಣ	₹400-1000

ಕೊಬ್ಬರಿ ಧಾರಣೆ

ಕೆ.ಆರ್. ಪೇಟೆ	₹10180-10200
ಪುತ್ತೂರು	₹4500-11500
ತುರುವೇಕೆರೆ	--

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹20000-27000
2ನೇ ದರ್ಜೆ ₹10000-18000

ನೆಟ್‌ಫ್ಲಿಕ್ಸ್ ಶುಲ್ಕ ಇಳಿಕೆ

ನವದೆಹಲಿ (ಪಿಟಿಐ): ಭಾರತದಲ್ಲಿ ನೆಟ್‌ಫ್ಲಿಕ್ಸ್ ಚಂದಾ ಶುಲ್ಕದಲ್ಲಿ ಗರಿಷ್ಠ ಶೇಕಡ 60ರವರೆಗೆ ಕಡಿತ ಆಗಿದೆ. ಮಂಗಳವಾರದಿಂದ ಜಾರಿಗೆ ಬಂದಿರುವ ಹೊಸ ದರಗಳ ಅನ್ವಯ, ಮೊಬೈಲ್ ಮೂಲಕ ಮಾತ್ರ ನೆಟ್‌ಫ್ಲಿಕ್ಸ್ ವೀಕ್ಷಿಸುವ ಪ್ಲಾನ್ ಶುಲ್ಕವು ತಿಂಗಳಿಗೆ ₹ 149 ಆಗಿದೆ. ಈ ಮೊದಲು ಇದು ₹ 199 ಆಗಿತ್ತು.

ಬೇಸಿಕ್ ಪ್ಲಾನ್‌ಗೆ ತಿಂಗಳಿಗೆ ₹ 199 (ಮೊದಲು ₹ 499 ಇತ್ತು), ಸ್ಟ್ಯಾಂಡರ್ಡ್ ಪ್ಲಾನ್‌ಗೆ ₹ 499 (ಮೊದಲು ₹ 649) ಹಾಗೂ ಪ್ರೀಮಿಯಂ ಪ್ಲಾನ್‌ಗೆ ₹ 649 (ಮೊದಲು ₹ 799) ನಿಗದಿ ಮಾಡಲಾಗಿದೆ.

'ಬೇಸಿಕ್ ಪ್ಲಾನ್‌ನಲ್ಲಿ ಅತಿಹೆಚ್ಚಿನ ಪ್ರಮಾಣದ ಕಡಿತ ಆಗಿದೆ' ಎಂದು ನೆಟ್‌ಫ್ಲಿಕ್ಸ್‌ನ ಭಾರತದ ಉಪಾಧ್ಯಕ್ಷೆ ಮೋನಿಕಾ ಶೆರ್ಗಿಲ್ ತಿಳಿಸಿದ್ದಾರೆ.

ಜಿಡಿಪಿ ಅಂದಾಜು ತಗ್ಗಿಸಿದ ಎಡಿಬಿ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತದ ಜಿಡಿಪಿ (ಒಟ್ಟು ಆಂತರಿಕ ಉತ್ಪಾದನೆ) ಕಾಣಲಿರುವ ಬೆಳವಣಿಗೆ ಕುರಿತು ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಈ ಹಿಂದೆ ಮಾಡಿದ್ದ ಅಂದಾಜನ್ನು ತಗ್ಗಿಸಿದೆ. ಉದ್ಯಮ ವಲಯದಲ್ಲಿ ಪೂರೈಕೆ ವ್ಯವಸ್ಥೆಯಲ್ಲಿ ಇರುವ ಸಮಸ್ಯೆಗಳನ್ನು ಗಮನದಲ್ಲಿ ಇಟ್ಟುಕೊಂಡು ಈ ನಿರ್ಧಾರ ತೆಗೆದುಕೊಂಡಿರುವುದಾಗಿ ಅದು ಹೇಳಿದೆ.

ಭಾರತದ ಆರ್ಥಿಕತೆಯು ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇಕಡ 10ರಷ್ಟು ಬೆಳವಣಿಗೆ ಕಾಣಲಿದೆ ಎಂದು ಸೆಪ್ಟೆಂಬರ್‌ನಲ್ಲಿ ಅದು ಹೇಳಿತ್ತು. ಅದನ್ನು ಈಗ ಶೇ 9.7ಕ್ಕೆ ತಗ್ಗಿಸಿದೆ. ದಕ್ಷಿಣ ಏಷ್ಯಾದ ಆರ್ಥಿಕ ಬೆಳವಣಿಗೆಯ ಕುರಿತು ಮಾಡಿದ್ದ ಅಂದಾಜನ್ನು ಸಹ ಶೇ 8.8ರಿಂದ ಶೇ 8.6ಕ್ಕೆ ಪರಿಷ್ಕರಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	510
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	38000-45000
ಹಳತು	46000-53000
ಪುತ್ತೂರು	
ಕೋಕ	25000-33600
ಹೊಸತು	27500-43500
ಸಿದ್ದಾಪುರ	
ಬಿಳಿಗೋಟು	30699-40808
ಚಾಲಿ	46239-50509
ಕೋಕ	29099-39809
ಹೊಸಚಾಲಿ	33699-40699
ಕೆಂಪುಗೋಟು	23699-34099
ರಾಶಿ	44809-49777
ತಟ್ಟಿಬೆಟ್ಟೆ	34099-47899
ಶಿರಸಿ	
ಬೆಟ್ಟೆ	29899-45899
ಬಿಳಿಗೋಟು	14899-45899
ಚಾಲಿ	41599-51208
ರಾಶಿ	42610-49899
ಯಲ್ಲಾಪುರ	
ಬಿಳಿಗೋಟು	30899-40810
ಚಾಲಿ	41169-50896
ಕೋಕ	22099-32899
ಕೆಂಪುಗೋಟು	30179-35799
ರಾಶಿ	46599-52691
ತಟ್ಟಿಬೆಟ್ಟೆ	37790-45349
ಶಿವಮೊಗ್ಗ	
ಬೆಟ್ಟೆ	46799-54140
ಗೊರಬಲು	16994-38700
ರಾಶಿ	44009-47599
ಸರಕು	55000-73899
ಸಾಗರ	
ಚಾಲಿ	47869-47869
ರಾಶಿ	44899-47219
ಸಿಪ್ಪೆಗೋಟು	10109-27160
ರಾಮನಗರ ರೇಷ್ಮೆ	
ಮಿಶ್ರತಳಿ	350-588
ದ್ವಿತಳಿ	520-814

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15300	15250	236.70ಸೆಂಟ್ಸ್
ಎಸಿ	---	6500	6450	
ಆರ್‌ಪಿ	---	---	---	ಲಂಡನ್
ಆರ್‌ಸಿ	---	3650	---	2375 ಡಾಲರ್ಸ್

ಸತತ ಮೂರನೇ ದಿನವೂ ನಕಾರಾತ್ಮಕ ವಹಿವಾಟು

ಹಣದುಬ್ಬರ, ಓಮೈಕ್ರಾನ್ ಆತಂಕ: ಸೂಚ್ಯಂಕ ಇಳಿಕೆ

ಮುಂಬೈ (ಪಿಟಿಐ): ಹಣದುಬ್ಬರ ಏರಿಕೆ ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ಕೊರೊನಾ ರೂಪಾಂತರಿ ತಳಿ ಓಮೈಕ್ರಾನ್ ಸೃಷ್ಟಿಸಿರುವ ಆತಂಕದ ಕಾರಣಗಳಿಂದಾಗಿ ದೇಶದ ಷೇರುಪೇಟೆಗಳಲ್ಲಿ ಮಂಗಳವಾರ ಸೂಚ್ಯಂಕಗಳು ಇಳಿಕೆ ಕಾಣುವಂತಾಯಿತು.

ರೂಪಾಯಿ ಮೌಲ್ಯ ಇಳಿಕೆ ಮತ್ತು ವಿದೇಶಿ ಬಂಡವಾಳದ ಹೊರಹರಿವು ಸಹ ನಕಾರಾತ್ಮಕ ವಹಿವಾಟಿಗೆ ಕಾರಣವಾದವು ಎಂದು ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 166 ಅಂಶ ಇಳಿಕೆ ಕಂಡು 58,117 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 44 ಅಂಶ ಇಳಿಕೆಯಾಗಿ 17,324 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು. ಸೆನ್ಸೆಕ್ಸ್‌ನಲ್ಲಿ ಐಟಿಸಿ ಷೇರು ಮೌಲ್ಯವು ಶೇ 2.73ರಷ್ಟು ಗರಿಷ್ಠ ಇಳಿಕೆ ಕಂಡಿತು.

ಹಣದುಬ್ಬರ ಏರಿಕೆ ಮತ್ತು ಏಷ್ಯಾದ ಮಾರುಕಟ್ಟೆಯಲ್ಲಿ ನಡೆದ ಇಳಿಮುಖ ವಹಿವಾಟಿನ ಕಾರಣಗಳಿಂದಾಗಿ ದೇಶಿ ಷೇರುಪೇಟೆಗಳಲ್ಲಿ ಇಳಿಮುಖ ವಹಿವಾಟು ಮುಂದುವರಿಯಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಹಣಕಾಸು ನೀತಿ ವಿಚಾರವಾಗಿ ಅಮೆರಿಕದ ಕೇಂದ್ರೀಯ ಬ್ಯಾಂಕ್‌ನ ನಿರ್ಧಾರವು ಬುಧವಾರ ಹೊರ ಬೀಳಲಿದೆ. ಹೀಗಾಗಿ ಹೂಡಿಕೆದಾರರು ಬಹಳ ಎಚ್ಚರಿಕೆಯಿಂದ ವಹಿವಾಟು ನಡೆಸಿದರು ಎಂದು ರೆಲಿಗೇರ್ ಬ್ರೋಕಿಂಗ್‌ನ ಸಂಶೋಧನಾ ವಿಭಾಗದ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ರೂಪಾಯಿ ಮೌಲ್ಯ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 10 ಪೈಸೆ ಇಳಿಕೆ ಆಗಿದ್ದು ಒಂದು ಡಾಲರ್‌ಗೆ ₹ 75.88ರಂತೆ ವಿನಿಮಯಗೊಂಡಿತು. ಇದು 18 ತಿಂಗಳ ಕನಿಷ್ಠ ಮಟ್ಟ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.26ರಷ್ಟು ಇಳಿಕೆ ಆಗಿದ್ದು, ಒಂದು ಬ್ಯಾರಲ್‌ಗೆ 74.20 ಡಾಲರ್‌ಗಳಂತೆ ಮಾರಾಟವಾಗಿದೆ.

ಎಲ್‌ಐಸಿಯಿಂದ 'ಧನ್ ರೇಖಾ' ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮವು 'ಧನ್ ರೇಖಾ' ಎನ್ನುವ ಹೊಸ ವೈಯಕ್ತಿಕ ಉಳಿತಾಯದ ಜೀವ ವಿಮಾ ಯೋಜನೆಯನ್ನು ಆರಂಭಿಸಿದೆ.

ಮಹಿಳೆಯರಿಗೆ ವಿಶೇಷ ಪ್ರೀಮಿಯಂ ದರಗಳು ಇವೆ. ತೃತೀಯ ಲಿಂಗಿಗಳೂ ಈ ಯೋಜನೆಯ ಪ್ರಯೋಜನ ಪಡೆಯಬಹುದು ಎಂದು ಕಂಪನಿ ಹೇಳಿದೆ. ಈ ಯೋಜನೆಯ ಅಡಿಯಲ್ಲಿ ಕನಿಷ್ಠ ವಿಮಾ ಮೊತ್ತವು ₹ 2 ಲಕ್ಷ ಇದ್ದು, ಗರಿಷ್ಠ ಮಿತಿ ಇಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

14-12-2021

ಜಾವಾ 70/80(ಹೊಸ)	10700-10750
ಜಾವಾ 80/90(ಹೊಸ)	10300-10350
ದಪ್ಪ ಮಧ್ಯಪ್ರದೇಶ(ಹೊಸ)	10000-10050
ದಪ್ಪ ಗುಜರಾತ್(ಹೊಸ)	8600-8700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1320 (1320)
ಒಂದು ವಾರದ ಡೆಲಿವರಿ	1315 (1315)
ಸೋಯಾ ಕಚ್ಚಾ	1152 (1157)
ಪಾಮ್ ವಾರದ ಡೆಲಿವರಿ	1163 (1173)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1190)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	47,900 (47,900)
ಬೆಳ್ಳಿ ಕೆ.ಜಿ	60,850 (61,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಬಿಎಂಡಬ್ಲ್ಯು ಐಎಕ್ಸ್: ಮೊದಲ ದಿನವೇ ಎಲ್ಲವೂ ಬುಕ್!

ನವದೆಹಲಿ (ಪಿಟಿಐ): ಸಂಪೂರ್ಣ ವಿದ್ಯುತ್ ಚಾಲಿತ ಸ್ಪೋರ್ಟ್ಸ್ ಆ್ಯಕ್ಟಿವಿಟಿ ವೆಹಿಕಲ್ (ಎಸ್‌ಎವಿ) 'ಐಎಕ್ಸ್' ಬಿಡುಗಡೆ ಮಾಡಿದ ಮೊದಲ ದಿನವೇ, ಮೊದಲ ಹಂತದಲ್ಲಿ ಲಭ್ಯವಿದ್ದ ಎಲ್ಲ ಕಾರುಗಳ ಬುಕಿಂಗ್ ಆಗಿದೆ ಎಂದು ಬಿಎಂಡಬ್ಲ್ಯು ಕಂಪನಿ ಮಂಗಳವಾರ ತಿಳಿಸಿದೆ.

ಕಂಪನಿಯು ಸೋಮವಾರವಷ್ಟೇ 'ಐಎಕ್ಸ್' ಬಿಡುಗಡೆ ಮಾಡಿತ್ತು. ಬುಕಿಂಗ್‌ಗೆ ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ಕಂಪನಿ ಹೇಳಿದೆ.

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಶಂಕರಾನಂದ ಸ್ವಾಮಿ, ಮೈಸೂರು

● **ಪ್ರಶ್ನೆ:** ನಾನು ಹಿರಿಯ ನಾಗರಿಕ. ನನ್ನ ಎಲ್‌ಐಸಿ ಎಂಡೋಮೆಂಟ್ 20 ವರ್ಷ ಮುಗಿದು ಹಣ ಬರುತ್ತಿದೆ. ಇದು ₹ 5 ಲಕ್ಷದ ಪಾಲಿಸಿ. ನನಗೆ ಎಷ್ಟು ಹಣ ಬರಬಹುದು ಹಾಗೂ ಭದ್ರವಾದ ಹೆಚ್ಚಿನ ವರಮಾನ ತರುವ ಯೋಜನೆ ಬಗ್ಗೆ ತಿಳಿಸಿ.

ಉತ್ತರ: ಪಾಲಿಸಿ ಅವಧಿ 20 ವರ್ಷ ಆಗಿರುವುದರಿಂದ ಬೋನಸ್ ಸೇರಿಸಿ ₹ 10 ಲಕ್ಷ ಬರಬಹುದು. ಭದ್ರವಾದ, ಹೆಚ್ಚಿನ ವರಮಾನ ತರುವ ಎರಡು ಠೇವಣಿಗಳೆಂದರೆ ಅಂಚೆ ಕಚೇರಿಯ ಹಿರಿಯ ನಾಗರಿಕರ ಠೇವಣಿ ಮತ್ತು ಎಲ್‌ಐಸಿಯವರ ವಯೋವಂದನಾ ಯೋಜನೆ. ಎರಡರಲ್ಲಿಯೂ ಬಡ್ಡಿದರ ಶೇಕಡ 7.4ರಷ್ಟು ಇದೆ. ಅಂಚೆ ಕಚೇರಿಯಲ್ಲಿ ಮೂರು ತಿಂಗಳಿಗೊಮ್ಮೆ ಬಡ್ಡಿ ಬರುತ್ತದೆ. ಎಲ್‌ಐಸಿಯಲ್ಲಿ ಪ್ರತೀ ತಿಂಗಳು ಬಡ್ಡಿ ಕೊಡುತ್ತಾರೆ. ನೀವು 10 ವರ್ಷ ಕಾಯುವಂತಿದ್ದರೆ ಎಲ್‌ಐಸಿ ವಯೋವಂದನಾ ಯೋಜನೆಯಲ್ಲಿ ₹ 10 ಲಕ್ಷ ತೊಡಗಿಸಿ. ಮುಂದೆ ಈ ಯೋಜನೆಯ ಬಡ್ಡಿದರ ಕಡಿಮೆ ಆದರೂ ಈಗಿನ ಬಡ್ಡಿದರ ಶೇ 7.4ರಷ್ಟನ್ನು 10 ವರ್ಷಗಳ ಅವಧಿ ತನಕ ಯಾವ ಕಡಿತವಿಲ್ಲದೇ ಪಡೆಯಬಹುದು. ಭದ್ರತೆ ವಿಚಾರದಲ್ಲಿ ಧೈರ್ಯವಾಗಿ ಇಲ್ಲಿ ಹಣ ಹೂಡಬಹುದು.

ಸೋಮಣ್ಣ, ಊರುಬೇಡ

● **ಪ್ರಶ್ನೆ:** ನಾನು ಹಳ್ಳಿಯಲ್ಲಿ ಬೆಳೆದವನು. ನನಗೆ ಬ್ಯಾಂಕ್ ವ್ಯವಹಾರ ಅಥವಾ ಇನ್ನಿತರ ಹಣದ ವ್ಯವಹಾರಗಳಲ್ಲಿ ಅನುಭವ ಇಲ್ಲ. ನಾನು ಕೃಷಿಕ. ನನಗೆ ಪ್ಯಾನ್ ಕಾರ್ಡ್ ಅವಶ್ಯಕತೆ ಇದೆಯೇ? ಇದರಿಂದ ಏನು ಉಪಯೋಗ? ಪ್ಯಾನ್ ಕಾರ್ಡ್ ಪಡೆದರೆ ತೆರಿಗೆ ಕೊಡಬೇಕಾಗುತ್ತದೆ ಎಂದು ಹಳ್ಳಿಯಲ್ಲಿ ಮಾತಾಡಿಕೊಳ್ಳುತ್ತಾರೆ.

ಉತ್ತರ: ಪ್ರತಿಯೊಬ್ಬರಿಗೂ ಒಂದಲ್ಲ ಒಂದು ಕೆಲಸ ಅಥವಾ ವ್ಯವಹಾರ ಇರುವುದು ಸಹಜ. ನೀವು ಹಳ್ಳಿಯವರೆಂದ ತಕ್ಷಣ ಹಣದ ವ್ಯವಹಾರ ಇಲ್ಲದಿರಲು ಸಾಧ್ಯವಿಲ್ಲ. ನಿಮ್ಮ ಕೃಷಿ ಉತ್ಪನ್ನ ಮಾರಾಟ ಮಾಡಿ ಬರುವ ಹಣವನ್ನು ಮನೆಯಲ್ಲಿ ಇಡುವುದು ಸರಿಯಲ್ಲ. ಹೀಗೆ ಬಂದ ಹಣವನ್ನು ಬ್ಯಾಂಕ್‌ನ ಉಳಿತಾಯ ಖಾತೆ ಅಥವಾ ಅವಧಿ ಠೇವಣಿಯಲ್ಲಿ ಇಡಿ. ಹಣ ಬಂದಾಗ ಬ್ಯಾಂಕ್‌ಗೆ ಜಮಾ ಮಾಡಬೇಕು ಹಾಗೂ ಖರ್ಚಿಗೆ ಬೇಕಾದಾಗ ಖಾತೆಯಿಂದ ಹಣ ತೆಗೆಯಬೇಕು. ಇದು ಆರ್ಥಿಕ ಶಿಸ್ತು. ಆರ್ಥಿಕ ಶಿಸ್ತು ಪಾಲಿಸಿದರೆ ನಿಮ್ಮ ಜೀವನ ಸುಖಮಯವಾಗಿರುತ್ತದೆ. ಒಟ್ಟಿನಲ್ಲಿ ನೀವು ಬ್ಯಾಂಕ್ ಖಾತೆ ತೆರೆಯಲೇಬೇಕು. ಬ್ಯಾಂಕ್ ಖಾತೆ ತೆರೆಯಲು ಪ್ಯಾನ್ ಕಾರ್ಡ್ ನಕಲು ಪ್ರತಿ ಸಲ್ಲಿಸಬೇಕು. ಓರ್ವ ವ್ಯಕ್ತಿ ₹ 50 ಸಾವಿರಕ್ಕಿಂತ ಹೆಚ್ಚಿನ ಮೊತ್ತದ ಯಾವುದೇ ವ್ಯವಹಾರ ಮಾಡುವಾಗ ಪ್ಯಾನ್ ಕಾರ್ಡ್ ಸಂಖ್ಯೆ ನಮೂದಿಸಲೇಬೇಕು. ಹಳ್ಳಿಯಲ್ಲಿ ಮಾತ್ರವಲ್ಲ ಪಟ್ಟಣ ವಾಸಿಗಳಲ್ಲಿಯೂ ಪ್ಯಾನ್ ಕಾರ್ಡ್ ಬಗ್ಗೆ ಭಯಪಡುವವರು ಇದ್ದಾರೆ. ಪ್ಯಾನ್ ಕಾರ್ಡ್ ಹೊಂದಿದ ಮಾತ್ರಕ್ಕೆ ತೆರಿಗೆ ಪಾವತಿ ಮಾಡಬೇಕಾಗುತ್ತದೆ ಎನ್ನುವುದು ತಪ್ಪು. ಪ್ಯಾನ್ ಕಾರ್ಡ್ ಮಾಡಿಸಿ, ಬ್ಯಾಂಕ್ ಖಾತೆ ತೆರೆದು ಹಣ ಠೇವಣಿ ಮಾಡಿ. ಕೃಷಿ ಆದಾಯ ಎಷ್ಟು ಇದ್ದರೂ ತೆರಿಗೆ ಇಲ್ಲ.

ಶಿವಪ್ಪ ಶೆಟ್ಟಿ, ಉಡುಪಿ

● **ಪ್ರಶ್ನೆ:** ನನ್ನ ಮಗ ಕಂಪ್ಯೂಟರ್ ಡಿಪ್ಲೊಮಾ ಮಾಡಲು ಬ್ಯಾಂಕ್‌ನಲ್ಲಿ ಸಾಲ ಪಡೆಯಲು ನಿಮ್ಮ ಸಲಹೆ ಬೇಕಾಗಿದೆ. ನಾನು ಕೃಷಿಕ. ಭತ್ತ ಮತ್ತು ತರಕಾರಿ ಬೆಳೆಯುತ್ತೇನೆ. ವಾರ್ಷಿಕ ಒಟ್ಟು ಆದಾಯ ₹ 3 ಲಕ್ಷದಿಂದ ₹ 4 ಲಕ್ಷ. ಶಿಕ್ಷಣ ಸಾಲದ ಬಡ್ಡಿ ದರ, ಸಾಲ ತೀರಿಸುವ ಅವಧಿ, ಜಾಮೀನು, ಸಾಲಕ್ಕೆ ಕೊಡಬೇಕಾದ ಆಧಾರ ಎಲ್ಲವನ್ನೂ ವಿವರವಾಗಿ ತಿಳಿಸಿ.

ಉತ್ತರ: ನಿಮ್ಮ ವಾರ್ಷಿಕ ಆದಾಯ ಪರಿಗಣಿಸಿದಾಗ ನಿಮ್ಮ ಮಗ ಕಂಪ್ಯೂಟರ್ ಡಿಪ್ಲೊಮಾ ಓದಲು ₹ 4.50 ಲಕ್ಷದ ತನಕ ಯಾವುದೇ ಆಧಾರ, ಜಾಮೀನು ಇಲ್ಲದೇ ಬಡ್ಡಿ ಅನುದಾನಿತ ಸಾಲ (ಅಂದರೆ ಬಡ್ಡಿ ರಹಿತ ಶಿಕ್ಷಣ ಸಾಲ) ಪಡೆಯಬಹುದು. ಕೋರ್ಸ್‌ನ ಅವಧಿ ಮುಗಿದು ಕೆಲಸ ಸಿಕ್ಕಿದ ಕೂಡಲೇ ಸಾಲಕ್ಕೆ ಬಡ್ಡಿ ಕೊಡಬೇಕಾಗುತ್ತದೆ. ಬಡ್ಡಿ ಅನುದಾನಿತ ಶಿಕ್ಷಣ ಸಾಲ ಯೋಜನೆಯನ್ನು ಕೇಂದ್ರ ಸರ್ಕಾರ 2009ರ ಏಪ್ರಿಲ್ 1ರಿಂದ ಜಾರಿಗೆ ತಂದಿದೆ. ಈ ಸಾಲವು ಹೆತ್ತವರ ವಾರ್ಷಿಕ ಆದಾಯ ₹ 4.5 ಲಕ್ಷದೊಳಗೆ ಇರುವ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತ. ತಹಶೀಲ್ದಾರರಿಂದ ಈ ವಿಚಾರದಲ್ಲಿ ಪ್ರಮಾಣಪತ್ರ ಪಡೆಯಬೇಕು. ವಿದ್ಯಾಭ್ಯಾಸವು ತಾಂತ್ರಿಕ ಅಥವಾ ವೃತ್ತಿಪರ ಕೋರ್ಸ್ ಆಗಿರಬೇಕು. ಕಾಲೇಜು ಶುಲ್ಕ, ಪುಸ್ತಕ, ವಿದ್ಯಾರ್ಥಿ ನಿಲಯದ ಶುಲ್ಕ ಹಾಗೂ ಸಂಬಂಧಿತ ಉಪಕರಣ ಕೊಳ್ಳಲು ಬ್ಯಾಂಕ್‌ಗಳು ನೇರವಾಗಿ ಹಣ ನೀಡುತ್ತವೆ. ಶಿಕ್ಷಣದ ಅವಧಿ ಮುಗಿದು ಒಂದು ವರ್ಷ ಅಥವಾ ಕೆಲಸಕ್ಕೆ ಸೇರಿದ ಆರು ತಿಂಗಳ ಒಳಗಾಗಿ ಮರುಪಾವತಿಯನ್ನು ಬಡ್ಡಿಯೊಂದಿಗೆ ಪ್ರಾರಂಭಿಸಬೇಕು. ❖

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಕಾಶಿ ವಿಶ್ವನಾಥ ಧಾಮ, ರೈಲ್ವೆ ನಿಲ್ದಾಣಕ್ಕೆ ಭೇಟಿ; ಕಾಮಗಾರಿ ಪರಿಶೀಲನೆ

ಪ್ರಧಾನಿಯಿಂದ ಮಧ್ಯರಾತ್ರಿ ನಗರ ಪ್ರದಕ್ಷಿಣೆ

ವಾರಾಣಸಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಮಧ್ಯರಾತ್ರಿ 1 ಗಂಟೆಯ ಹೊತ್ತಿನಲ್ಲಿ ಕಾಶಿ ವಿಶ್ವನಾಥ ಧಾಮ ಮತ್ತು ಬನಾರಸ್ ರೈಲ್ವೆ ನಿಲ್ದಾಣಗಳಿಗೆ ಭೇಟಿ ನೀಡಿದರು. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಜೊತೆಗಿದ್ದರು.

ರಾತ್ರಿ ಮಾಡಲಾದ ಟ್ವೀಟ್‌ನಲ್ಲಿ, 'ದೇಗುಲ ನಗರಿಯಲ್ಲಿ ನಡೆಯುತ್ತಿರುವ ಪ್ರಮುಖ ಅಭಿವೃದ್ಧಿ ಕಾಮಗಾರಿಗಳನ್ನು ಪ್ರಧಾನಿ ಪರಿಶೀಲನೆ ನಡೆಸಿದರು. ಈ ಪವಿತ್ರ ಜಾಗದಲ್ಲಿ ಅತ್ಯುತ್ತಮ ಮೂಲಸೌಕರ್ಯಗಳನ್ನು ಒದಗಿಸುವುದು ಸರ್ಕಾರದ ಆದ್ಯತೆ' ಎಂದು ಹೇಳಲಾಗಿದೆ.

ಸೋಮವಾರ ಬೆಳಿಗ್ಗೆ ಕಾಲಭೈರವ ದೇವಸ್ಥಾನಕ್ಕೆ ಭೇಟಿ ನೀಡಿದ್ದ ಅವರು, ಕಾಶಿ ವಿಶ್ವನಾಥ ಕಾರಿಡಾರ್ ಯೋಜನೆಯನ್ನು ಮಧ್ಯಾಹ್ನ ಉದ್ಘಾಟಿಸಿದರು. ಸಂಜೆ ಗಂಗಾ ಆರತಿಯಲ್ಲಿ ಪಾಲ್ಗೊಂಡ ಅವರು, ತಡರಾತ್ರಿ ವೇಳೆ ನಗರದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ವೀಕ್ಷಿಸಿದರು.

ಬೂದು ಬಣ್ಣದ ಕುರ್ತಾ, ಪೈಜಾಮ, ಕಪ್ಪು ಕೋಟು ಹಾಗೂ ಮಫ್ಲರ್ ಧರಿಸಿದ್ದ ಅವರು ರಸ್ತೆಗಿಳಿದರು. ಕಾರಿಡಾರ್ ಪ್ರದೇಶದಲ್ಲಿ ಓಡಾಡಿದರು. ಮೋದಿ ಅವರು ಬನಾರಸ್ ರೈಲು ನಿಲ್ದಾಣಕ್ಕೆ ಭೇಟಿ ನೀಡಲಿದ್ದಾರೆ ಎಂದು ಮತ್ತೊಂದು ಟ್ವೀಟ್‌ನಲ್ಲಿ ತಿಳಿಸಲಾಯಿತು. 'ರೈಲ್ವೆ ಸಂಪರ್ಕ ಹೆಚ್ಚಿಸುವುದು ಹಾಗೂ ಸ್ವಚ್ಛ, ಸುಧಾರಿತ, ಪ್ರಯಾಣಿಕ ಸ್ನೇಹಿ ರೈಲು ನಿಲ್ದಾಣ ರೂಪಿಸುವ ಯತ್ನ ನಡೆಯುತ್ತಿದೆ' ಎಂದು ಟ್ವೀಟ್‌ನಲ್ಲಿ ಉಲ್ಲೇಖಿಸಲಾಗಿತ್ತು. ನವೀಕೃತ ನಿಲ್ದಾಣಕ್ಕೆ ಭೇಟಿ ನೀಡಿದ ಚಿತ್ರವನ್ನು ರಾತ್ರಿ 1 ಗಂಟೆಗೆ ಟ್ವೀಟ್ ಮಾಡಲಾಯಿತು.

> **ಚುನಾವಣಾ ದೃಷ್ಟಿಯಿಂದ ಅರ್ಧಂಬರ್ಧ ಆಗಿರುವ ಕಾಮಗಾರಿಗಳನ್ನು ಉದ್ಘಾಟಿಸುವುದರಿಂದ ಬಿಜೆಪಿ ನೆಲೆಯೇನೂ ಗಟ್ಟಿಗೊಳ್ಳುವುದಿಲ್ಲ**
> **ಮಾಯಾವತಿ,** ಬಿಎಸ್‌ಪಿ ಮುಖ್ಯಸ್ಥೆ

> **ಪ್ರಧಾನಿ ನರೇಂದ್ರ ಮೋದಿ ಅವರ ರೀತಿ, ನಾವು ಚುನಾವಣೆ ಸಮಯದಲ್ಲಿ ಮಾತ್ರ ಗಂಗಾ ನದಿಯಲ್ಲಿ ಮುಳುಗು ಹಾಕುವುದಿಲ್ಲ**
> **ಮಮತಾ ಬ್ಯಾನರ್ಜಿ,** ಟಿಎಂಸಿ ಮುಖ್ಯಸ್ಥೆ

ಒಂದು ಜಿಲ್ಲೆ, ಒಂದು ಉತ್ಪನ್ನ: ವಾರಾಣಸಿಯಲ್ಲಿ ಮಂಗಳವಾರ ಸಂಜೆ ಬಿಜೆಪಿ ಮುಖ್ಯಮಂತ್ರಿಗಳ ಸಭೆ ನಡೆಸಿದ ಪ್ರಧಾನಿ ಮೋದಿ, ಜನರ ಜೀವನವನ್ನು ಸುಗಮಗೊಳಿಸುವುದಕ್ಕೆ ಆದ್ಯತೆ ನೀಡಬೇಕು, 'ಒಂದು ಜಿಲ್ಲೆ, ಒಂದು ಉತ್ಪನ್ನ' ಹೊರತರುವ ನಿಟ್ಟಿನಲ್ಲಿ ಸ್ವಾವಲಂಬನೆಯ ದೇಶ ನಿರ್ಮಿಸಲು ಕೆಲಸ ಮಾಡಬೇಕು ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ಬನಾರಸ್ ರೈಲು ನಿಲ್ದಾಣಕ್ಕೆ ಸೋಮವಾರ ಮಧ್ಯರಾತ್ರಿ ಭೇಟಿ ನೀಡಿದ್ದರು. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಜೊತೆಗಿದ್ದರು —ಪಿಟಿಐ ಚಿತ್ರ

ಅಯೋಧ್ಯೆ: ಮುಖ್ಯಮಂತ್ರಿಗಳ ಭೇಟಿ ಇಂದು

ಅಯೋಧ್ಯೆ: ಬಿಜೆಪಿ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಇಲ್ಲಿನ ರಾಮಜನ್ಮಭೂಮಿ ತಾತ್ಕಾಲಿಕ ಮಂದಿರಕ್ಕೆ ಬುಧವಾರ ಭೇಟಿ ನೀಡಲಿದ್ದಾರೆ. ಮಂಗಳವಾರ ಲಖನೌ ತಲಿಪಿದ್ದು, ಬುಧವಾರ 11 ಗಂಟೆಗೆ ಅಯೋಧ್ಯೆಗೆ ಬರಲಿದ್ದಾರೆ. ಮಧ್ಯಾಹ್ನ 2 ಗಂಟೆ ವೇಳೆಗೆ ಹನುಮಾನ್‌ಗಡಿ ದೇವಸ್ಥಾನ ಹಾಗೂ ರಾಮಜನ್ಮಭೂಮಿಯಲ್ಲಿ ಪೂಜೆ ಸಲ್ಲಿಸಲಿದ್ದಾರೆ.

ಹಿಮಾಚಲ ಪ್ರದೇಶ ಉತ್ತಾರಾಖಂಡ, ಅರುಣಾಚಲ ಪ್ರದೇಶ, ಮಧ್ಯಪ್ರದೇಶ, ಅಸ್ಸಾಂ, ನಾಗಾಲ್ಯಾಂಡ್, ಮಣಿಪುರ, ತ್ರಿಪುರಾ, ಗುಜರಾತ್, ಮತ್ತು ಗೋವಾ ರಾಜ್ಯಗಳ ಮುಖ್ಯಮಂತ್ರಿಗಳು, ಬಿಹಾರ ಹಾಗೂ ಅರುಣಾಚಲ ಪ್ರದೇಶದ ಉಪಮುಖ್ಯಮಂತ್ರಿಗಳೂ ಭೇಟಿ ನೀಡಲಿದ್ದಾರೆ. ಕರ್ನಾಟಕ, ಸಿಕ್ಕಿಂ, ಮೇಘಾಲಯ, ಮಿಜೋರಾಂ, ಪುದುಚೇರಿ ಮುಖ್ಯಮಂತ್ರಿಗಳೂ ಭೇಟಿ ನೀಡುವ ಸಾಧ್ಯತೆಯಿದೆ.

ಅವಿಭಕ್ತ ಕುಟುಂಬ ನಿರ್ವಾಹಕನಿಗೆ ಆಸ್ತಿ ಮಾರಾಟದ ಹಕ್ಕಿದೆ: ಸುಪ್ರೀಂ

ನವದೆಹಲಿ (ಪಿಟಿಐ): ಹಿಂದೂ ಅವಿಭಕ್ತ ಕುಟುಂಬದ ನಿರ್ವಹಣೆಯ ಹೊಣೆ ಹೊತ್ತಿರುವ ವ್ಯಕ್ತಿಯು ಕುಟುಂಬದ ಆಸ್ತಿಯನ್ನು ಮಾರಾಟ ಮಾಡಲು ಕರಾರು ಮಾಡಿಕೊಳ್ಳುವುದಕ್ಕೆ ಕುಟುಂಬದ ಇತರರು (ಕುಟುಂಬದ ಆಸ್ತಿಯಲ್ಲಿ ಸಮಪಾಲು ಹೊಂದಿರುವ ಇತರರು) ತಡೆ ಒಡ್ಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಹಿಂದೂ ಅವಿಭಕ್ತ ಕುಟುಂಬದ ನಿರ್ವಹಣೆ ಮಾಡುವ ವಯಸ್ಕ ವ್ಯಕ್ತಿಯು ಕುಟುಂಬದ ಆಸ್ತಿಯ ನಿರ್ವಹಣೆಯ ಹಕ್ಕು ಹೊಂದಿದ್ದಾರೆ ಎಂಬುದನ್ನು ಈ ಹಿಂದೆಯೂ ಹಲವು ಬಾರಿ ಹೇಳಲಾಗಿದೆ ಎಂದು ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಸಂಜೀವ್ ಕುಮಾರ್ ಅವರ ಪೀಠವು ಹೇಳಿದೆ.

ಕುಟುಂಬದ ಆಸ್ತಿಯನ್ನು ಮಾರಾಟ ಮಾಡುವ ಕರಾರು ಮಾಡಿಕೊಳ್ಳಲು ಕುಟುಂಬದ ನಿರ್ವಾಹಕರಿಗೆ ಹಕ್ಕು ಇದೆ ಎಂಬುದು ಹಿಂದೆಯೇ ಸಾಬೀತಾಗಿದೆ. ಈ ವಿಚಾರದಲ್ಲಿ ಮತ್ತೆ ತಕರಾರಿಗೆ ಅವಕಾಶ ಇಲ್ಲ. ಆದರೆ, ಮಾರಾಟದ ನಂತರ, ಮಾರಾಟವು ಕಾನೂನುಬದ್ಧ ಅಗತ್ಯಕ್ಕಾಗಿ ನಡೆದಿಲ್ಲ ಅಥವಾ ಕುಟುಂಬದ ಹಿತಕ್ಕಾಗಿ ನಡೆದಿಲ್ಲದಿದ್ದರೆ ಅದನ್ನು ಪ್ರಶ್ನಿಸುವುದಕ್ಕೆ ಅವಕಾಶ ಇದೆ ಎಂದು ಪೀಠವು ಹೇಳಿದೆ.

ಕಾನೂನುಬದ್ಧ ಕಾರಣಕ್ಕೆ ಅಥವಾ ಇಡೀ ಕುಟುಂಬದ ಹಿತದ ಕಾರಣಕ್ಕೆ ಕೈಗೊಳ್ಳುವ ನಿರ್ಧಾರವು ಕುಟುಂಬದಲ್ಲಿ ಇರುವ ಅಪ್ರಾಪ್ತ ವಯಸ್ಸಿನವರು ಮತ್ತು ವಿಧವೆಯವರು ಸೇರಿದಂತೆ ಅವಿಭಜಿತ ಕುಟುಂಬದ ಎಲ್ಲರ ಹಿತಾಸಕ್ತಿಯನ್ನೂ ಒಳಗೊಂಡಿರುತ್ತದೆ ಎಂದು ಪೀಠ ಹೇಳಿದೆ.

'ಕಾನೂನುಬದ್ಧ ಅಗತ್ಯ ಎಂಬುದನ್ನು ಸ್ಥಾಪಿಸಲು ನಿರ್ದಿಷ್ಟ ನೆಲೆಗಳೇನೂ ಇಲ್ಲ. ಕಾನೂನುಬದ್ಧ ಅಗತ್ಯ ಎಂಬುದು ಆಯಾ ಪ್ರಕರಣದ ಸತ್ಯಾಂಶಗಳ ಮೇಲೆ ಅವಲಂಬಿಸಿರುತ್ತದೆ. ಕಾನೂನುಬದ್ಧ ಅಗತ್ಯವೇ ಎಂಬುದನ್ನು ನಿರ್ಧರಿಸುವಲ್ಲಿ ಮತ್ತು ಅದನ್ನು ಹೇಗೆ ಈಡೇರಿಸಬೇಕು ಎಂಬುದರಲ್ಲಿ ಕುಟುಂಬದ ನಿರ್ವಾಹಕನಿಗೆ ವ್ಯಾಪಕವಾದ ವಿವೇಚನಾಧಿಕಾರ ಇರುತ್ತದೆ. ಕಾನೂನುಬದ್ಧ ಅಗತ್ಯ ಅಥವಾ ಇಡೀ ಪರಿವಾರದ ಹಿತಕ್ಕಾಗಿ ನಿರ್ಧಾರ ಕೈಗೊಳ್ಳುವ ನಿರ್ವಾಹಕರ ಅಧಿಕಾರವು ಸಿಂಧುವಾದುದು ಮತ್ತು ಇತರ ಪಾಲುದಾರರು ಈ ಅಧಿಕಾರಕ್ಕೆ ಬದ್ಧರಾಗಿರಬೇಕು' ಎಂದು ಪೀಠವು ವಿವರಿಸಿದೆ.

ಮಗನಿಗೆ ಪ್ರಶ್ನಿಸುವ ಹಕ್ಕಿಲ್ಲ

ಹಿರಿಯೂರು ತಾಲ್ಲೂಕಿನ ಬಗ್ಗನಾಡು ಕಾವಲ್ ಗ್ರಾಮದಲ್ಲಿದ್ದ ಕೃಷಿ ಜಮೀನನ್ನು ಮಾರಾಟ ಮಾಡಲು ಅವಿಭಕ್ತ ಕುಟುಂಬದ ನಿರ್ವಾಹಕ ಕೆ. ವೇಲುಸ್ವಾಮಿ ಅವರು ಬೀರೆಡ್ಡಿ ದಶರಥರಾಮಿ ರೆಡ್ಡಿ ಅವರ ಜತೆ 2006ರ ಡಿಸೆಂಬರ್ 8ರಂದು ಕರಾರು ಮಾಡಿಕೊಂಡಿದ್ದರು. ₹29 ಲಕ್ಷಕ್ಕೆ ಜಮೀನು ಮಾರಲು ಒಪ್ಪಂದ ಆಗಿತ್ತು. ₹4 ಲಕ್ಷ ಮುಂಗಡವನ್ನೂ ವೇಲುಸ್ವಾಮಿ ಪಡೆದು ಕೊಂಡಿದ್ದರು.

ವೇಲುಸ್ವಾಮಿ ಅವರ ಮಗ ಮಂಜುನಾಥ್ ಅವರು ಮಾರಾಟ ಕರಾರಿನ ವಿರುದ್ಧ ನ್ಯಾಯಾಲಯಕ್ಕೆ ಹೋಗಿದ್ದರು. ಮಾರಾಟಕ್ಕೆ ತಮ್ಮ ಒಪ್ಪಿಗೆ ಅಗತ್ಯ ಎಂದು ಅವರು ವಾದಿಸಿದ್ದರು. ಅವಿಭಕ್ತ ಕುಟುಂಬದ ನಿರ್ವಾಹಕರಾಗಿರುವ ವೇಲುಸ್ವಾಮಿಗೆ ಮಾರಾಟದ ಹಕ್ಕು ಇದೆ ಎಂದು ಸ್ಥಳೀಯ ನ್ಯಾಯಾಲಯ ಹೇಳಿತ್ತು. ಅದರ ವಿರುದ್ಧ ಮಂಜುನಾಥ್ ಅವರು ಕರ್ನಾಟಕ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ವೇಲುಸ್ವಾಮಿ ಮಾಡಿಕೊಂಡಿರುವ ಕರಾರು ಜಾರಿ ಸಾಧ್ಯವಿಲ್ಲ ಎಂದು ಹೈಕೋರ್ಟ್ ಹೇಳಿತ್ತು. ಆದರೆ, ಕುಟುಂಬದ ನಿರ್ವಾಹಕರಾಗಿರುವ ವೇಲುಸ್ವಾಮಿಗೆ ಜಮೀನು ಮಾರಲು ಹಕ್ಕು ಇದೆ ಎಂದು ಸುಪ್ರೀಂ ಕೋರ್ಟ್ ಈಗ ಹೇಳಿದೆ.

ಸಿಂಧು ಶುಭಾರಂಭ: ಪ್ರೀಕ್ವಾರ್ಟರ್‌ಗೆ ಶ್ರೀಕಾಂತ್

ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್: ಲಕ್ಷ್ಯ, ಸಾತ್ವಿಕ್– ಚಿರಾಗ್ ಮುನ್ನಡೆ

ಪಿ.ವಿ.ಸಿಂಧು– ಎಪಿ ಚಿತ್ರ

ಹುವೆಲ್ವಾ, ಸ್ಪೇನ್ (ಪಿಟಿಐ): ಹಾಲಿ ಚಾಂಪಿಯನ್, ಭಾರತದ ಪಿ.ವಿ. ಸಿಂಧು ಅವರು ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದ್ದಾರೆ. ಉದಯೋನ್ಮುಖ ಆಟಗಾರ ಲಕ್ಷ್ಯ ಸೇನ್ ಮತ್ತು ಕಿದಂಬಿ ಶ್ರೀಕಾಂತ್ ಪ್ರೀಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಮಹಿಳಾ ಸಿಂಗಲ್ಸ್ ಮೊದಲ ಸುತ್ತಿನ ಪಂದ್ಯದಲ್ಲಿ ಸಿಂಧು ಮಂಗಳವಾರ 21-7, 21-9ರಿಂದ ಸ್ಲೊವಾಕಿಯಾದ ಮಾರ್ಟಿನಾ ರೆಪಿಸ್ಕಾ ಅವರ ಸವಾಲು ಮೀರಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಏಳನೇ ಸ್ಥಾನದಲ್ಲಿರುವ ಸಿಂಧು, ಶ್ರೇಯಾಂಕರಹಿತ ಆಟಗಾರ್ತಿಯನ್ನು ಮಣಿಸಲು ಕೇವಲ 24 ನಿಮಿಷಗಳನ್ನು ತೆಗೆದುಕೊಂಡರು. 2019ರಲ್ಲಿ ಪ್ರಶಸ್ತಿ ಜಯಿಸಿರುವ ಸಿಂಧು, ಮೊದಲ ಗೇಮ್‌ನ ಆರಂಭದಲ್ಲಿ 4-1ರ ಮುನ್ನಡೆ ಗಳಿಸಿದರು. ರೆಪಿಸ್ಕಾ ತಿರುಗೇಟು ನೀಡಲು ಪ್ರಯತ್ನಿಸಿದರೂ ಯಶಸ್ವಿಯಾಗಲಿಲ್ಲ. ಕೇವಲ 10 ನಿಮಿಷಗಳಲ್ಲಿ ಈ ಗೇಮ್ ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಸಿಂಧು ಕೈವಶವಾಯಿತು.

ಎರಡನೇ ಗೇಮ್‌ನಲ್ಲೂ ಹೆಚ್ಚೇನೂ ವ್ಯತ್ಯಾಸವಾಗಲಿಲ್ಲ. ಆರಂಭದಲ್ಲಿ 6–0ಯಿಂದ ಮುನ್ನಡೆದ ಸಿಂಧು, ವಿರಾಮದ ವೇಳೆಗೆ ಅದನ್ನು 11–1ಕ್ಕೆ ಕೊಂಡೊಯ್ದರು. ನಂತರದ ಆಟದಲ್ಲೂ ಪಾರಮ್ಯ ಮೆರೆದರು.

ಪುರುಷರ ಸಿಂಗಲ್ಸ್ ಎರಡನೇ ಸುತ್ತಿನ ಜಿದ್ದಾಜಿದ್ದಿ ಹಣಾಹಣಿಯಲ್ಲಿ ಲಕ್ಷ್ಯ 22-20, 15-21, 21-18ರಿಂದ ಜಪಾನ್‌ನ ಕೆಂಟಾ ನಿಶಿಮೊಟೊ ಅವರನ್ನು ಮಣಿಸಿದರು. ಕಿದಂಬಿ ಶ್ರೀಕಾಂತ್ 15-21, 21-18, 21-17ರಿಂದ ಚೀನಾದ ಲೀ ಶಿ ಫೆಂಗ್ ಎದುರು ಗೆದ್ದರು.

ಲಕ್ಷ್ಯ ಅವರು ಮೊದಲ ಸುತ್ತಿನಲ್ಲಿ ಬೈ ಪಡೆದಿದ್ದರು.

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಕೂಡ ಮೊದಲ ಸುತ್ತಿನ ತಡೆ ದಾಟಿದರು. 43 ನಿಮಿಷಗಳ ಪಂದ್ಯದಲ್ಲಿ ಭಾರತದ ಜೋಡಿಯು 27-25, 21-17ರಿಂದ ಚೀನಾ ತೈಪೆಯ ಲೀ ಜೆ ಹುಯಿ ಮತ್ತು ಯಾಂಗ್ ಪೊ ಸುವಾನ್ ಅವರನ್ನು ಮಣಿಸಿದರು.

ಮಿಶ್ರ ಡಬಲ್ಸ್‌ನಲ್ಲಿ ಸೌರಭ್ ಶರ್ಮಾ– ಅನುಷ್ಕಾ ಪಾರೀಖ್ 8-21, 18-21ರಿಂದ ಮಲೇಷ್ಯಾದ ತಾನ್ ಕಿಯನ್ ಮೆಂಗ್– ಲಾಯಿ ಪೆ ಜಿಂಗ್ ಎದುರು ನಿರಾಸೆ ಅನುಭವಿಸಿದರು.

ಸಿಮೊನ್ ಬೈಲ್ಸ್

ಸಿಮೊನ್ ಬೈಲ್ಸ್ 'ವರ್ಷದ ಅಥ್ಲೀಟ್'

ನ್ಯೂಯಾರ್ಕ್ (ಎಪಿ): ಅಮೆರಿಕದ ಜಿಮ್ನಾಸ್ಟಿಕ್ ತಾರೆ ಸಿಮೊನ್ ಬೈಲ್ಸ್ ಅವರು ಟೈಮ್ ನಿಯತಕಾಲಿಕೆ ನೀಡುವ 2021ರ 'ವರ್ಷದ ಅಥ್ಲೀಟ್' ಗೌರವಕ್ಕೆ ಭಾಜನರಾಗಿದ್ದಾರೆ.

ಮಾನಸಿಕ ಆರೋಗ್ಯಕ್ಕೆ ಆದ್ಯತೆ ನೀಡಿದ್ದ ಸಿಮೊನ್ ಅವರು ಟೋಕಿಯೊ ಒಲಿಂಪಿಕ್ಸ್‌ನ ನಾಲ್ಕು ವಿಭಾಗಗಳಿಂದ ಹಿಂದೆ ಸರಿದಿದ್ದರು. ಅವರ ದಿಟ್ಟ ನಿಲುವಿಗೆ ವಿಶ್ವದಾದ್ಯಂತ ಮೆಚ್ಚುಗೆ ವ್ಯಕ್ತವಾಗಿತ್ತು. ಒತ್ತಡದ ನಡುವೆಯೂ 24 ವರ್ಷದ ಜಿಮ್ನಾಸ್ಟ್, ಕ್ರೀಡಾಕೂಟದ ಬ್ಯಾಲನ್ಸ್ ಬೀಮ್ ವಿಭಾಗದಲ್ಲಿ ತಮ್ಮ ತಂಡಕ್ಕೆ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಡುವಲ್ಲಿ ನೆರವಾಗಿದ್ದರು.

ತಮ್ಮ ತಂಡದ ವೈದ್ಯ ಲ್ಯಾರಿ ನಾಸರ್ ಮಾಡಿದ ದೌರ್ಜನ್ಯಗಳ ಕುರಿತು, ಟೋಕಿಯೊ ಒಲಿಂಪಿಕ್ಸ್ ಮುಗಿದ ಒಂದು ತಿಂಗಳ ಬಳಿಕ, ಸೆನೆಟ್ ನ್ಯಾಯಾಂಗ ಸಮಿತಿಯ ಮುಂದೆ ಸಿಮೊನ್ ಹೇಳಿಕೊಂಡಿದ್ದರು.

ತಾವು ದೂರು ಕೊಟ್ಟಾಗ ಎಫ್‌ಬಿಐ ಅಧಿಕಾರಿಗಳು ಮತ್ತು ಅಮೆರಿಕ ಜಿಮ್ನಾಸ್ಟಿಕ್ಸ್ ಫೆಡರೇಷನ್, ಒಲಿಂಪಿಕ್ ಮತ್ತು ಪ್ಯಾರಾಲಿಂಪಿಕ್ಸ್ ಸಮಿತಿಗಳು ತೋರಿದ ನಿರ್ಲಕ್ಷ್ಯ ಧೋರಣೆಯ ಬಗ್ಗೆಯೂ ಆಕ್ರೋಶ ವ್ಯಕ್ತಪಡಿಸಿದ್ದರು. ಇದೇ ಸಂದರ್ಭದಲ್ಲಿ ಹಲವು ಅಥ್ಲೀಟ್‌ಗಳೂ ತಮ್ಮ ಮೇಲಿನ ದೌರ್ಜನ್ಯದ ಘಟನೆಗಳನ್ನು ಬಹಿರಂಗಪಡಿಸಿದರು.

ಐಎಸ್‌ಎಲ್: ಜೆಎಫ್‌ಸಿಗೆ ಗೆಲುವು

ಗ್ರೆಗ್ ಹ್ಯಾಟ್ರಿಕ್ ಗೋಲು

ವಾಸ್ಕೊ (ಪಿಟಿಐ): ಸ್ಕಾಟ್ಲೆಂಡ್‌ನ ಗ್ರೆಗ್ ಸ್ಟಿವರ್ಟ್ ಅವರು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಎಂಟನೇ ಆವೃತ್ತಿಯಲ್ಲಿ ಮೊದಲ ಹ್ಯಾಟ್ರಿಕ್ ಗಳಿಸಿದ ಆಟಗಾರ ಎನಿಸಿಕೊಂಡರು.

ತಿಲಕ್ ಮೈದಾನದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಸ್ಟಿವರ್ಟ್ ಅವರ ಅಮೋಘ ಆಟದ ಬಲದಿಂದ ಜೆಮ್ಷೆಡ್‌ಪುರ್ ಎಫ್‌ಸಿ ತಂಡ ಒಡಿಶಾ ಎಫ್‌ಸಿಯನ್ನು 4-0ಯಿಂದ ಮಣಿಸಿತು.

4ನೇ ನಿಮಿಷದಲ್ಲಿ ಪೀಟರ್ ಹಾರ್ಟ್ಲೆ ಗಳಿಸಿದ ಗೋಲಿನ ಮೂಲಕ ಜೆಮ್ಷೆಡ್‌ಪುರ ಮುನ್ನಡೆ ಸಾಧಿಸಿತು. ಒಂದು ನಿಮಿಷದ ನಂತರ ಸ್ಟಿವರ್ಟ್ ಗೋಲು ಗಳಿಸಿ ಮುನ್ನಡೆ ಹೆಚ್ಚಿಸಿದರು. 21 ಮತ್ತು 35ನೇ ನಿಮಿಷಗಳಲ್ಲಿ ಮತ್ತೆರಡು ಬಾರಿ ಚೆಂಡನ್ನು ಗುರಿ ಮುಟ್ಟಿಸಿದರು.

ಚೆನ್ನೈಯಿನ್ ಅಜೇಯ ಓಟದ ನಿರೀಕ್ಷೆ: ಫತೋರ್ಡದಲ್ಲಿ ಬುಧವಾರ ನಡೆಯಲಿರುವ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಮುಂಬೈ ಸಿಟಿ ಎಫ್‌ಸಿ ತಂಡ ಚೆನ್ನೈಯಿನ್ ಎಫ್‌ಸಿ ವಿರುದ್ಧ ಸೆಣಸಲಿದೆ. ಈ ಆವೃತ್ತಿಯಲ್ಲಿ ಇದುವರೆಗೆ ಅಜೇಯವಾಗಿರುವ ಚೆನ್ನೈಯಿನ್ ಮತ್ತೊಮ್ಮೆ ಪಾರಮ್ಯ ಮೆರೆಯಲು ಪ್ರಯತ್ನಿಸಲಿದ್ದು ಮುಂಬೈ ಸಿಟಿ ಗೆಲುವಿನ ಓಟ ಮುಂದುವರಿಸಲು ಪ್ರಯತ್ನಿಸಲಿದೆ.

ಮುಂಬೈ ಸಿಟಿ ಎಫ್‌ಸಿ ಆಡಿರುವ ಐದು ಪಂದ್ಯಗಳ ಪೈಕಿ ನಾಲ್ಕರಲ್ಲಿ ಜಯ ಸಾಧಿಸಿದ್ದು 12 ಪಾಯಿಂಟ್‌ಗಳನ್ನು ಕಲೆ ಹಾಕಿದೆ. ನಾಲ್ಕು ಪಂದ್ಯಗಳ ಪೈಕಿ ತಲಾ ಎರಡು ಜಯ ಮತ್ತು ಎರಡು ಡ್ರಾ ಸಾಧಿಸಿರುವ ಚೆನ್ನೈಯಿನ್ ಬಳಿ ಎಂಟು ಪಾಯಿಂಟ್‌ಗಳಿವೆ.

ಸಂಕ್ಷಿಪ್ತ ಸುದ್ದಿ

ಅಶ್ವಲ್‌ಗೆ ಗರಿಷ್ಠ ಮೊತ್ತ

ಕೊಚ್ಚಿ (ಪಿಟಿಐ): ಅಶ್ವಲ್ ರೈ, ಕಾರ್ತಿಕ್ ಎ ಮತ್ತು ಜೆರೋಮ್ ವಿನೀತ್ ಅವರು ಪ್ರೈಮ್ ವಾಲಿಬಾಲ್‌ಗೆ ಸಂಬಂಧಿಸಿದ ಆಟಗಾರರ ಹರಾಜಿನಲ್ಲಿ ಅತ್ಯಧಿಕ, ತಲಾ ₹ 15 ಲಕ್ಷ ಗಳಿಸಿದರು. ಮಂಗಳವಾರ ನಡೆದ ಹರಾಜಿನಲ್ಲಿ ಈ ಮೂವರು ಕ್ರಮವಾಗಿ ಕೋಲ್ಕತ್ತ ಥಂಡರ್‌ಬೋಲ್ಟ್ಸ್, ಕೊಚ್ಚಿ ಬ್ಲೂ ಸ್ಪೈಕರ್ಸ್ ಮತ್ತು ಕ್ಯಾಲಿಕಟ್ ಹೀರೋಸ್ ಫ್ರಾಂಚೈಸ್ ಪಾಲಾದರು.

ಬೆಂಗಳೂರು ಟಾರ್ಪೆಡೋಸ್ ಫ್ರಾಂಚೈಸ್ ₹ 7.5 ಲಕ್ಷಕ್ಕೆ ರೋಹಿತ್ ಪಿ ಮತ್ತು ಪಂಕಜ್ ಶರ್ಮಾ ಅವರನ್ನು ಖರೀದಿಸಿತು. ₹ 4.4 ಲಕ್ಷ ವ್ಯಯಿಸಿ ನೊಹ್ ಟೈಟಾನೊ, ಕೈಲ್ ಫ್ರೆಂಡ್ (ಅಮೆರಿಕ) ಮತ್ತು ರಂಜಿತ್ ಸಿಂಗ್ ಅವರನ್ನು ಖರೀದಿಸಿತು. ₹ 5.6 ಲಕ್ಷಕ್ಕೆ ಬಿ.ಮಿಥುನ್ ಕುಮಾರ್, ₹ 4.6 ಲಕ್ಷಕ್ಕೆ ಲವಮೀತ್ ಕಟಾರಿಯಾ ಅವರನ್ನು ಖರೀದಿಸಿತು.

ಮೈಸೂರು ರೇಸ್

ಹಿಸ್ ಎಮಿನೆನ್ಸ್ ಗೆಲ್ಲುವ ನಿರೀಕ್ಷೆ

ಡಿ.ದಶರಥರಾಮ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಹಿಸ್ ಎಮಿನೆನ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಕಂಟ್ರೇಸ್ ಸಾಂಗ್ 9, ಬ್ಲೂ ರಾಯ್ 1, ಸ್ವಿಸ್ ಬೇ 10
2ನೇ ರೇಸ್: ವಾಲ್‌ಕೈರಿ 2, ಡೀಮಸ್ 1, ಪಿಲ್‌ಗ್ರಿಮ್ 9
3ನೇ ರೇಸ್: ಹೀಈಸ್ ಡನ್ ಇಟ್ 8, ರಾಯಲ್ ಡಿಸೈನ್ 1, ಶೀ ಈಸ್ ಎ ಟೈಗರ್ 4
4ನೇ ರೇಸ್: ಹಿಸ್ ಎಮಿನೆನ್ಸ್ 6, ಕಾಂಟ್ರಿಬ್ಯೂಟರ್ 4, ಟ್ರೆಮಂಡಸ್ 5
5ನೇ ರೇಸ್: ವಾಟ್ ಈಸ್ ದಿಸ್ 1, ಅರಕ್ 2, ಏರ್‌ವೆಲಾಸಿಟಿ 10
6ನೇ ರೇಸ್: ಬೀಟ್ ದಿ ಆಡ್ಸ್ 4, ವಿನ್ ಆಲ್ 2, ಮಾರಿಗೋಲ್ಡ್ 8

ಉತ್ತಮ ಬೆಟ್: ವಾಟ್ ಇಸ್ ದಿಸ್

ಜಾಕ್‌ಪಾಟ್	ಟ್ರಿಬಲ್	ಎಕ್ಸಾಕ್ಟ ಪೂಲ್ಸ್
2,3,4,5,6	4,5,6	5 & 6

ಜೂನ್‌ನಲ್ಲಿ ಚೆಸ್ ಲೀಗ್

ನವದೆಹಲಿ (ಪಿಟಿಐ): ಅಖಿಲ ಭಾರತ ಚೆಸ್ ಫೆಡರೇಷನ್ ಮುಂದಿನ ವರ್ಷ ಜೂನ್‌ನಿಂದ ಫ್ರಾಂಚೈಸ್ ಆಧಾರಿತ ಲೀಗ್ ಆಯೋಜಿಸಲಿದೆ. ಆರು ತಂಡಗಳ ನಡುವಿನ ಸ್ಪರ್ಧೆಯ ಪ್ರತಿ ತಂಡದಲ್ಲಿ ಇಬ್ಬರು ಸೂಪರ್ ಗ್ರ್ಯಾಂಡ್‌ಮಾಸ್ಟರ್‌ಗಳು, ಇಬ್ಬರು ಭಾರತೀಯ ಗ್ರ್ಯಾಂಡ್‌ಮಾಸ್ಟರ್‌ಗಳು, ಇಬ್ಬರು ಮಹಿಳಾ ಗ್ರ್ಯಾಂಡ್‌ಮಾಸ್ಟರ್‌ಗಳು, ಭಾರತದ ಜೂನಿಯರ್ ಬಾಲಕ ಮತ್ತು ಬಾಲಕಿ ಇರುವರು ಎಂದು ಫೆಡರೇಷನ್ ಮಂಗಳವಾರ ತಿಳಿಸಿದೆ.

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿ: ಮನೀಷ್ ಪಾಂಡೆ ಅಮೋಘ ಅರ್ಧಶತಕ ವ್ಯರ್ಥ

ಬಂಗಾಳಕ್ಕೆ ಮಣಿದ ಕರ್ನಾಟಕ

ಪ್ರಜಾವಾಣಿ ವಾರ್ತೆ

ಮನೀಷ್ ಪಾಂಡೆ

ಬೆಂಗಳೂರು: ಸವಾಲಿನ ಮೊತ್ತ ಕಲೆ ಹಾಕಿದರೂ ಎದುರಾಳಿ ತಂಡದ ಬ್ಯಾಟರ್‌ಗಳನ್ನು ನಿಯಂತ್ರಿಸುವಲ್ಲಿ ಬೌಲರ್‌ಗಳು ವಿಫಲರಾದರು. ಹೀಗಾಗಿ ಕರ್ನಾಟಕ ತಂಡ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಸೋಲನುಭವಿಸಿತು.

ತಿರುವನಂತಪುರದ ಮಂಗಳಾಪುರಂ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ ಬಂಗಾಳ ನಾಲ್ಕು ವಿಕೆಟ್‌ಗಳಿಂದ ಜಯ ಗಳಿಸಿತು. ಸೋಲಿನೊಂದಿಗೆ ಕರ್ನಾಟಕ ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲೇ ಉಳಿಯಿತು. ಹೀಗಾಗಿ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಆಡಬೇಕಾದ ಸ್ಥಿತಿ ಒದಗಿದೆ.

ತಲಾ ನಾಲ್ಕು ಸಿಕ್ಸರ್ ಮತ್ತು ನಾಲ್ಕು ಬೌಂಡರಿ ಜೊತೆ ಮೋಹಕ ಅರ್ಧಶತಕ ಸಿಡಿಸಿದ ನಾಯಕ ಮನೀಷ್ ಪಾಂಡೆ ಅವರ ಬ್ಯಾಟಿಂಗ್ ಬಲದಿಂದ ಕರ್ನಾಟಕ 8 ವಿಕೆಟ್‌ಗಳಿಗೆ 252 ರನ್ ಗಳಿಸಿತ್ತು. ಬಂಗಾಳ 48.3 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 253 ರನ್ ಗಳಿಸಿತು. ಆದರೆ ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲೇ ಉಳಿಯಿತು.

ಎರಡು ಮತ್ತು ಮೂರನೇ ಕ್ರಮಾಂಕದ ಬ್ಯಾಟರ್‌ಗಳು ಎರಡಂಕಿ ಮೊತ್ತ ದಾಟಲಾಗದೆ ಮರಳಿದರೂ ಆರಂಭಿಕ ಬ್ಯಾಟರ್ ಅಭಿಷೇಕ್ ದಾಸ್, ನಾಯಕ ಮತ್ತು ನಾಲ್ಕನೇ ಕ್ರಮಾಂಕದ ಸುದೀಪ್ ಚಟರ್ಜಿ ಹಾಗೂ ಐದನೇ ಕ್ರಮಾಂಕದ ಋತಿಕ್ ಚೌಧರಿ ಛಲದಿಂದ ಆಡಿ ತಂಡಕ್ಕೆ ಜಯ ತಂದುಕೊಟ್ಟರು.

ಟಾಸ್ ಗೆದ್ದ ಕರ್ನಾಟಕ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. 35 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡಿದ್ದಾಗ ಜೊತೆಗೂಡಿದ ರೋಹನ್ ಕದಂ ಮತ್ತು ಮನೀಷ್ ಪಾಂಡೆ ಇನಿಂಗ್ಸ್‌ಗೆ ಚೇತರಿಕೆ ತುಂಬಿದರು. ಕದಂ ಔಟಾದ ನಂತರ ಮನೀಷ್-ಕರುಣ್ ನಾಯರ್ ಜೋಡಿ 69 ರನ್ ಸೇರಿಸಿದರು. ಕೊನೆಯಲ್ಲಿ ಪ್ರವೀಣ್ ದುಬೆ ಮಿಂಚಿನ ಬ್ಯಾಟಿಂಗ್ ಮಾಡಿ ಅಜೇಯರಾಗಿ ಉಳಿದರು.

ಕರುಣ್ ನಾಯರ್

ಮನೀಷ್ ಬಳಗಕ್ಕೆ ರಾಜಸ್ಥಾನ ಎದುರಾಳಿ

ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಕರ್ನಾಟಕ ತಂಡ ರಾಜಸ್ಥಾನವನ್ನು ಎದುರಿಸಲಿದೆ. ವಿದರ್ಭ ತಂಡ ತ್ರಿಪುರವನ್ನು, ಉತ್ತರ ಪ್ರದೇಶ ತಂಡ ಮಧ್ಯಪ್ರದೇಶವನ್ನು ಎದುರಿಸಲಿದೆ. 'ಬಿ' ಗುಂಪಿನಿಂದ ತಮಿಳುನಾಡು ನೇರ ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದೆ. ಇತರ ಗುಂಪುಗಳಿಂದ ಹಿಮಾಚಲ ಪ್ರದೇಶ, ಸೌರಾಷ್ಟ್ರ, ಕೇರಳ ಮತ್ತು ಸರ್ವಿಸಸ್ ಕೂಡ ಕ್ವಾರ್ಟರ್ ಫೈನಲ್ ಪ್ರವೇಶಿಸಿವೆ. ಪುದುಚೇರಿಗೆ 18 ರನ್‌ಗಳಿಂದ ಮಣಿದ ಮುಂಬೈ ಟೂರ್ನಿಯಿಂದ ಹೊರಬಿದ್ದಿತು.

ಸ್ಕೋರ್ ಕಾರ್ಡ್

ಕರ್ನಾಟಕ 8ಕ್ಕೆ 252 (50 ಓವರ್)
ಸಮರ್ಥ್ ಬಿ ಆಕಾಶ್ ದೀಪ್ 17 (30 ಎ, 4x3), ರೋಹನ್ ಸಿ ಮತ್ತು ಬಿ ಚಟರ್ಜಿ 37 (55 ಎ, 4x3), ಸಿದ್ಧಾರ್ಥ್ ಸಿ ಮತ್ತು ಬಿ ಚಟರ್ಜಿ 1 (5 ಎ), ಮನೀಷ್ ಸಿ ಮಜುಂದಾರ್ ಬಿ ಪ್ರಮಾಣಿಕ್ 90 (85 ಎ, 4x4, 6x4), ಕರುಣ್ ಸಿ ಮುಕೇಶ್ ಬಿ ಪ್ರಮಾಣಿಕ್ 25 (40 ಎ, 4x2), ಶರತ್ ಸಿ ಬಾಲ್ ಬಿ ಪ್ರಮಾಣಿಕ್ 17 (24 ಎ), ದುಬೆ ಔಟಾಗದೆ 37 (29 ಎ, 4x2, 6x1), ಸುಚಿತ್ ಎಲ್‌ಬಿಡಬ್ಲ್ಯು ಬಿ ಪ್ರಮಾಣಿಕ್ 1 (6 ಎ), ಕಾರ್ಯಪ್ಪ ಸಿ ಪ್ರಮಾಣಿಕ್ ಬಿ ಶಹಬಾಜ್ 11 (16 ಎ, 4x1), ಕೌಶಿಕ್ ಔಟಾಗದೆ 9 (11 ಎ, 4x1)
ಇತರೆ (ಲೆಗ್‌ಬೈ 3, ನೋಬಾಲ್ 1, ವೈಡ್ 3) 7
ವಿಕೆಟ್ ಪತನ: 1-34 (ರವಿಕುಮಾರ್ ಸಮರ್ಥ್, 9.2), 2-35 (ಕೃಷ್ಣಮೂರ್ತಿ ಸಿದ್ಧಾರ್ಥ್, 10.1), 3-92 (ರೋಹನ್ ಕದಂ, 20.1), 4-161 (ಕರುಣ್ ನಾಯರ್, 33.3), 5-191 (ಶ್ರೀನಿವಾಸ್ ಶರತ್, 39.4), 6-192 (ಮನೀಷ್ ಪಾಂಡೆ, 39.5), 7-196 (ಜೆ.ಸುಚಿತ್, 41.4), 8-212 (ಕೆ.ಸಿ.ಕಾರ್ಯಪ್ಪ, 45.3)
ಬೌಲಿಂಗ್: ಮುಕೇಶ್ ಕುಮಾರ್ 8-0-54-0, ಆಕಾಶ್ ದೀಪ್ 9-2-29-1, ವೃತಿಕ್ ಚಟರ್ಜಿ 9-0-51-2, ಶಹಬಾಜ್ ಅಹಮ್ಮದ್ 10-0-40-1, ಪ್ರದೀಪ್ತ ಪ್ರಮಾಣಿಕ್ 10-0-48-4, ರಣ್‌ಜೋತ್ ಖೈರ 4-0-27-0

ಬಂಗಾಳ 6ಕ್ಕೆ 253 (48.3 ಓವರ್)
ಅಭಿಷೇಕ್ ಸಿ ಶರತ್ ಬಿ ಜೈನ್ 58 (48 ಎ, 4x7, 6x2), ರಣ್‌ಜೋತ್ ಬಿ ಸುಚಿತ್ 7 (15 ಎ), ಅನುಷ್ಟುಪ್ ಸಿ ಶರತ್ ಬಿ ಜೈನ್ 8 (14 ಎ, 4x1), ಸುದೀಪ್ ಸಿ ಕದಂ ಬಿ ಕಾರ್ಯಪ್ಪ 63 (56 ಎ, 4x6, 6x1), ಋತ್ವಿಕ್ ರನೌಟ್ (ಸಮರ್ಥ್) 49 (62 ಎ, 4x4), ಶಹಬಾಜ್ ಔಟಾಗದೆ 26 (53 ಎ), ಸುವಂಕರ್ ಸಿ ಶರತ್ ಬಿ ಜೈನ್ 22 (26 ಎ, 4x2), ವೃತ್ತಿಕ್ ಔಟಾಗದೆ 10 (18 ಎ, 4x1)
ಇತರೆ (ಬೈ 4, ಲೆಗ್‌ಬೈ 3, ವೈಡ್ 3) 10
ವಿಕೆಟ್ ಪತನ: 1-51 (ರಣ್‌ಜೋತ್, 7.3), 2-74 (ಅನುಷ್ಟುಪ್ ಮಜುಂದಾರ್, 12.4), 3-75 (ಅಭಿಷೇಕ್ ದಾಸ್, 12.6), 4-188 (ಋತಿಕ್ ರಾಯ್ ಚೌಧರಿ, 31.3), 5-199 (ಸುದೀಪ್ ಚಟರ್ಜಿ, 35.5), 6-235 (ಸುವಂಕರ್ ಬಾಲ್, 42.2)
ಬೌಲಿಂಗ್: ವಿ.ಕೌಶಿಕ್ 5-1-42-0, ಪ್ರತೀಕ್ ಜೈನ್ 9.3-0-56-3, ಜೆ.ಸುಚಿತ್ 10-1-43-1, ಕೆ.ಸಿ. ಕಾರ್ಯಪ್ಪ 10-0-42-1, ಪ್ರವೀಣ್ ದುಬೆ 10-1-45-0, ಆರ್. ಸಮರ್ಥ್ 4-0-18-0

ಫಲಿತಾಂಶ: ಬಂಗಾಳ ತಂಡಕ್ಕೆ 4 ವಿಕೆಟ್‌ಗಳ ಜಯ

ಡ್ರಾ ಪಂದ್ಯದಲ್ಲಿ ಭಾರತ–ಕೊರಿಯಾ

ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿ

ಢಾಕಾ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದ ಭಾರತ ತಂಡ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ನೀರಸ ಆರಂಭ ಕಂಡಿದೆ. ಕೊರಿಯಾ ವಿರುದ್ಧ ಮಂಗಳವಾರ ನಡೆದ ಪಂದ್ಯ 2–2ರಲ್ಲಿ ಡ್ರಾ ಆಯಿತು.

ಹಾಲಿ ಚಾಂಪಿಯನ್ ಭಾರತ 0–2ರ ಹಿನ್ನಡೆಯಲ್ಲಿದ್ದಾಗ ಕೆಚ್ಚೆದೆಯ ಆಟ ಪ್ರದರ್ಶಿಸಿದ ಕೊರಿಯಾ ತಿರುಗೇಟು ನೀಡಿತು. ಅಂತಿಮ ನಿಮಿಷಗಳಲ್ಲಿ ಲಭಿಸಿದ ಪೆನಾಲ್ಟಿ ಕಾರ್ನರ್ ಅವಕಾಶಗಳಲ್ಲಿ ಗೋಲು ಗಳಿಸಿ ಮುನ್ನಡೆ ಸಾಧಿಸಲು ಭಾರತ ನಡೆಸಿದ ಪ್ರಯತ್ನಗಳು ವಿಫಲವಾದವು.

ಚೆಂಡಿನ ಮೇಲೆ ಹಿಡಿತ ಸಾಧಿಸಲು ಭಾರತ ಮತ್ತು ಕೊರಿಯಾ ಆಟಗಾರರು ಪ್ರಯತ್ನಿಸಿದರು –ಟ್ವಿಟರ್ ಚಿತ್ರ

ಟೋಕಿಯೊ ಒಲಿಂಪಿಕ್ಸ್ ನಂತರ ಭಾರತಕ್ಕೆ ಇದು ಮೊದಲ ಟೂರ್ನಿ. ಯುವ ಆಟಗಾರರಿಗೆ ಹೆಚ್ಚು ಅವಕಾಶ ನೀಡಿ ಕಣಕ್ಕೆ ಇಳಿದ ಮನ್‌ಪ್ರೀತ್ ಸಿಂಗ್ ಬಳಗ ನಾಲ್ಕನೇ ನಿಮಿಷದಲ್ಲೇ ಗೋಲು ಗಳಿಸಿ ಮುನ್ನಡೆಯನ್ನೂ ಸಾಧಿಸಿತು. ಲಲಿತ್ ಉಪಾಧ್ಯಾಯ ಈ ಗೋಲು ತಂದುಕೊಟ್ಟರು.

18ನೇ ನಿಮಿಷದಲ್ಲಿ ತಂಡ ಮತ್ತೊಂದು ಗೋಲು ಗಳಿಸಿತು. ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಉಪನಾಯಕ ಹರ್ಮನ್‌ಪ್ರೀತ್ ಸಿಂಗ್ ಮೋಹಕವಾಗಿ ಚೆಂಡನ್ನು ಗುರಿ ಮುಟ್ಟಿಸಿದರು. ಮೊದಲ ಎರಡು ಕ್ವಾರ್ಟರ್‌ಗಳಲ್ಲಿ ತಲಾ ಒಂದೊಂದು ಗೋಲು ಬಿಟ್ಟುಕೊಟ್ಟ ಕೊರಿಯಾ ದ್ವಿತೀಯಾರ್ಧದ ಎರಡು ಕ್ವಾರ್ಟರ್‌ಗಳಲ್ಲಿ ಒಂದೊಂದು ಗೋಲು ಗಳಿಸಿ ಭಾರತ ತಂಡಕ್ಕೆ ಆಘಾತ ನೀಡಿತು.

41ನೇ ನಿಮಿಷದಲ್ಲಿ ಜೊಂಘ್ಯುನ್ ಜಾಂಗ್ ಮತ್ತು 46ನೇ ನಿಮಿಷದಲ್ಲಿ ಸಂಘ್ಯುನ್ ಕಿಮ್ ಚೆಂಡನ್ನು ಗುರಿಸೇರಿಸಿ ಸಂಭ್ರಮಿಸಿದರು. ಆರಂಭದಲ್ಲಿ ಲಯ ಕಂಡುಕೊಳ್ಳಲು ವಿಫಲವಾದ ಕೊರಿಯಾ ಪಂದ್ಯ ಮುಂದುವರಿದಂತೆ ಭಾರತದ ರಕ್ಷಣಾ ವಿಭಾಗದಲ್ಲಿ ಆತಂಕ ಉಂಟುಮಾಡಿದರು.

ಕೆಲವು ಉತ್ತಮ ಅವಕಾಶಗಳು ಭಾರತಕ್ಕೆ ಲಭಿಸಿದ್ದವು. ಆದರೆ ತಂಡದ ಆಸೆಗೆ ಕೊರಿಯಾ ಗೋಲ್‌ಕೀಪರ್ ಜಾಯೆನ್ ಕಿಮ್ ಅಡ್ಡಿಯಾದರು. ಕಳೆದ ಆವೃತ್ತಿಯಲ್ಲೂ ಭಾರತ ಮತ್ತು ಕೊರಿಯಾ ನಡುವಿನ ಪಂದ್ಯ ಡ್ರಾದಲ್ಲಿ (1–1) ಕೊನೆಗೊಂಡಿತ್ತು.

ಮೋಟರ್‌ಸ್ಪೋರ್ಟ್ಸ್: ರಾಷ್ಟ್ರೀಯ ರ‍್ಯಾಲಿ ಚಾಂಪಿಯನ್‌ಷಿಪ್

ಸತತ ಐದು ಪ್ರಶಸ್ತಿಗಳ 'ಐಶ್ವರ್ಯ'

ಕೊಯಮತ್ತೂರು (ಪಿಟಿಐ): ಕರ್ನಾಟಕದ ಮೋಟರ್‌ಸ್ಪೋರ್ಟ್ ಪಟು ಐಶ್ವರ್ಯ ಪಿಸ್ಸೆ ಅವರು ರಾಷ್ಟ್ರೀಯ ರ‍್ಯಾಲಿ ಚಾಂಪಿಯನ್‌ಷಿಪ್‌ನಲ್ಲಿ ಸತತ ಐದನೇ ಪ್ರಶಸ್ತಿಗೆ ಮುತ್ತಿಟ್ಟಿದ್ದಾರೆ.

ಐಶ್ವರ್ಯ ಪಿಸ್ಸೆ

ತಮಿಳುನಾಡಿನ ಕೇತನೂರಿನಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಟಿವಿಎಸ್ ತಂಡದ ಚಾಲಕಿ, ಬೆಂಗಳೂರಿನ ಐಶ್ವರ್ಯ ಅವರಿಗೆ ಒಟ್ಟಾರೆ ಎಂಟನೇ ಪ್ರಶಸ್ತಿ ಒಲಿಯಿತು. ಕೊಯಮತ್ತೂರು ಆಟೊ ಸ್ಪೋರ್ಟ್ಸ್ ಕ್ಲಬ್ ಮತ್ತು ಗಾಡ್ ಸ್ಪೀಡ್ ರೇಸಿಂಗ್, ದ್ವಿಚಕ್ರ ವಾಹನ ಚಾಲಕರಿಗಾಗಿ ಈ ಸ್ಪರ್ಧೆಯನ್ನು ಆಯೋಜಿಸಿತ್ತು.

2019ರ ವಿಶ್ವಕಪ್ ವಿಜೇತ ಐಶ್ವರ್ಯ, ಇಲ್ಲಿ ನಡೆದ ರ‍್ಯಾಲಿಯ ಎಲ್ಲ ನಾಲ್ಕು ಹಂತಗಳಲ್ಲಿ ಭರ್ಜರಿ ಜಯ ಸಾಧಿಸಿದರು. ಈ ವರ್ಷದ ಆರಂಭದಲ್ಲಿ ಜೋರ್ಡಾನ್‌ನಲ್ಲಿ ನಡೆದ ವಿಶ್ವಕಪ್ ಟೂರ್ನಿಯ ಎರಡನೇ ಸುತ್ತಿನ ವೇಳೆ ಐಶ್ವರ್ಯ ಚಾಲನೆ ಮಾಡುತ್ತಿದ್ದ ಬೈಕ್ ಅಪಘಾತಕ್ಕೀಡಾಗಿತ್ತು.

ಮಹಿಳಾ ಫುಟ್‌ಬಾಲ್: ಕಿಕ್‌ಸ್ಟಾರ್ಟ್ ಶುಭಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲಿ ಚಾಂಪಿಯನ್ ಕಿಕ್ ಸ್ಟಾರ್ಟ್ ಎಫ್‌ಸಿ ತಂಡ ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ ಆಶ್ರಯದ ಮಹಿಳಾ ಫುಟ್‌ಬಾಲ್ ಲೀಗ್‌ನಲ್ಲಿ ಶುಭಾರಂಭ ಮಾಡಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ 5–0ಯಿಂದ ಬೆಂಗಳೂರು ಸಾಕರ್ ಗ್ಯಾಲಕ್ಸಿಯನ್ನು ಮಣಿಸಿತು. ಸಿಬಾನಿ ಶರ್ಮಾ (12ನೇ ನಿಮಿಷ), ಆರುಷಿ ಸಂತೋಷ್ (29ನೇ ನಿ), ನಿರ್ಮಲಾ ದೇವಿ (41ನೇ ನಿ), ಮಾರ್ಗರೆಟ್ ದೇವಿ (45ನೇ ನಿ) ಮತ್ತು ಸುಶ್ಮಿತಾ ಲೇಪ್ಚ (89ನೇ ನಿ) ಗೋಲು ಗಳಿಸಿದರು.

ಮಿಸಾಕ ಎಫ್‌ಸಿ ಹಾಗೂ ಬೆಂಗಳೂರು ಯುನೈಟೆಡ್ ಎಫ್‌ಸಿ ಕೂಡ ಗೆಲುವು ಸಾಧಿಸಿದವು. ಮಿಸಾಕ 4–0ಯಿಂದ ಸ್ಲಾಮ್ಸರ್ಸ್ ಬೆಳಗಾಂ ತಂಡವನ್ನು ಮಣಿಸಿತು. ಲಾಲ್‌ಬಿಯಕ್ ಡಿಕಿ (27ನೇ ನಿ), ಲಾಲ್‌ರಿಮ್ಹಾನಿ (50ನೇ ನಿ), ಲಾಲ್‌ತಂಗ್‌ಸಾಂಗಿ (83, 87ನೇ ನಿ) ಗೋಲು ಗಳಿಸಿದರು.

ಬೆಂಗಳೂರು ಯುನೈಟೆಡ್ ಎಫ್‌ಸಿ 3–1ರಲ್ಲಿ ರೆಬಲ್ಸ್ ವಿಮೆನ್ ಎಫ್‌ಸಿ ವಿರುದ್ಧ ಗೆಲುವು ಸಾಧಿಸಿತು. ಬೆಂಗಳೂರು ಯುನೈಟೆಡ್ ಪರ ಹುಸ್ನೈನಾ ಲೋಧ್ಗರ್ (22, 68ನೇ ನಿ), ಸನ್‌ಫಿಡ ನೊಂಗ್ರುಮ್ (84ನೇ ನಿ) ಹಾಗೂ ರೆಬೆಲ್ಸ್‌ಗಾಗಿ ಅದಿಕಾ ತತೋಬ ಭೋಸಲೆ (45 + 2ನೇ ನಿ) ಚೆಂಡನ್ನು ಗುರಿ ಮುಟ್ಟಿಸಿದರು.

ಮಾತೃ ಪ್ರತಿಷ್ಠಾನ ಎಫ್‌ಸಿ ಮತ್ತು ಬೆಂಗಳೂರು ಬ್ರೇವ್ಸ್ ಎಫ್‌ಸಿ ಪಂದ್ಯ ಗೋಲುರಹಿತ ಸಮಬಲದಲ್ಲಿ ಮುಕ್ತಾಯಗೊಂಡಿತು.

ಜಿ.ಮನೋಹರನ್ ನಿಧನ

ಬೆಂಗಳೂರು: ಕರ್ನಾಟಕ ರಾಜ್ಯ ಟೇಬಲ್ ಟೆನಿಸ್ ಸಂಸ್ಥೆಯ (ಕೆಟಿಟಿಎ) ಜಂಟಿ ಕಾರ್ಯದರ್ಶಿಯಾಗಿದ್ದ ಜಿ.ಮನೋಹರನ್ (68) ಭಾನುವಾರ ನಿಧನರಾದರು. ಅವರಿಗೆ ಪತ್ನಿ ಮತ್ತು ಮೂವರು ಪುತ್ರರು ಇದ್ದಾರೆ.

ಜಿ.ಮನೋಹರನ್

25 ವರ್ಷಗಳಿಗೂ ಹೆಚ್ಚು ಕಾಲ ಸಂಸ್ಥೆಯ ಜೊತೆ ಇದ್ದ ಅವರು ಬೆಂಗಳೂರು ನಗರ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆಯ ಗೌರವ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ತಾಂತ್ರಿಕ ಅಧಿಕಾರಿಯೂ ಆಗಿದ್ದರು ಎಂದು ಕೆಟಿಟಿಎ ಗೌರವ ಕಾರ್ಯದರ್ಶಿ ಟಿ.ಜಿ.ಉಪಾಧ್ಯ ತಿಳಿಸಿದ್ದಾರೆ.

ಟ್ರಾಫಿಕ್ ವಾರ್ಡನ್ ಸಂಸ್ಥೆಯಲ್ಲಿ ಸಕ್ರಿಯರಾಗಿದ್ದ ಅವರು ಪೂರ್ವ ವಿಭಾಗದ ಪ್ರಭಾರ ಅಧಿಕಾರಿಯಾಗಿ ನಿವೃತ್ತರಾಗಿದ್ದರು. ಸಿವಿಲ್ ಡಿಫೆನ್ಸ್ ಸಂಸ್ಥೆಯಲ್ಲಿ ಮೂರು ವರ್ಷ ಕಾರ್ಯನಿರ್ವಹಿಸಿದ್ದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರೊ ಕಬಡ್ಡಿ: ಬೆಂಗಳೂರು ಬುಲ್ಸ್ ಅಭಿಮಾನಿಗಳಿಗಾಗಿ 'ಕೊಂಬು ಎತ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೊ ಕಬಡ್ಡಿ ಲೀಗ್‌ನಲ್ಲಿ ಪಾಲ್ಗೊಳ್ಳುವ ಬೆಂಗಳೂರು ಬುಲ್ಸ್ ತಂಡದ ಅಭಿಮಾನಿಗಳಿಗಾಗಿ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ 'ಕೊಂಬು ಎತ್ತು' ಎಂಬ ಕಾರ್ಯಕ್ರಮ ಆಯೋಜಿಸಿದ್ದು ಚಿತ್ರನಟ ಸುದೀಪ್ ಇದರ ಪ್ರೊಮೊದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಕೋವಿಡ್‌ನಿಂದಾಗಿ ಎರಡು ವರ್ಷ ನಡೆಯದೇ ಇದ್ದ ಲೀಗ್‌ನ ಎಂಟನೇ ಆವೃತ್ತಿ ಇದೇ 22ರಂದು ಆರಂಭವಾಗಲಿದೆ. ಸುರಕ್ಷತೆಗೆ ಒತ್ತು ನೀಡಿ ಒಂದೇ ಸ್ಥಳದಲ್ಲಿ ಎಲ್ಲ ಪಂದ್ಯಗಳನ್ನು ಆಯೋಜಿಸಲು ನಿರ್ಧರಿಸಲಾಗಿದೆ.

ನಗರದ ವೈಟ್‌ಫೀಲ್ಡ್‌ನ ಹೋಟೆಲ್ ಶೆರಟಾನ್‌ನ ಸಭಾಂಗಣದಲ್ಲಿ 'ಮ್ಯಾಟ್' ಸಿದ್ಧಪಡಿಸಲಾಗಿದೆ. ತಂಡಗಳು ಈಗಾಗಲೇ ಇಲ್ಲಿಗೆ ಬಂದಿದ್ದು ಆಟಗಾರರು ಬಯೊಬಬಲ್‌ನಲ್ಲಿದ್ದಾರೆ.

ಬೆಂಗಳೂರು ಬುಲ್ಸ್ ಮೊದಲ ಪಂದ್ಯದಲ್ಲಿ ಯು ಮುಂಬಾ ವಿರುದ್ಧ ಸೆಣಸಲಿದ್ದು 22ರಂದು ರಾತ್ರಿ 7.30ಕ್ಕೆ ಈ ಪಂದ್ಯ ನಡೆಯಲಿದೆ. ಕಳೆದ ಬಾರಿ ನಾಕೌಟ್ ಹಂತಕ್ಕೇರಿದ್ದರೂ ಫೈನಲ್ ಪ್ರವೇಶಿಸಲು ವಿಫಲವಾಗಿದ್ದ ಬೆಂಗಳೂರು ಬುಲ್ಸ್‌ಗೆ ಪ್ರಶಸ್ತಿ ಉಳಿಸಿಕೊಳ್ಳಲು ಆಗಲಿಲ್ಲ. ಈ ಬಾರಿ ಮತ್ತೆ ಚಾಂಪಿಯನ್ ಪಟ್ಟದ ಮೇಲೆ ಕಣ್ಣಿಟ್ಟು ತಂಡ ಕಣಕ್ಕೆ ಇಳಿಯಲಿದೆ.

ಪ್ರೊಮೊದಲ್ಲಿ ಸುದೀಪ್

ಸ್ಟಾರ್ ರೈಡರ್ ಪವನ್ ಕುಮಾರ್ ಶೆರಾವತ್ ಈಗಲೂ ತಂಡದ ಭರವಸೆಯಾಗಿದ್ದು ಚಂದ್ರನ್ ರಂಜಿತ್, ಜಿ.ಬಿ ಮೋರೆ, ದೀಪಕ್ ನರ್ವಾಲ್, ಡಾಂಗ್ ಜಿಯಾನ್ ಲೀ, ಅಬುಲ್ ಫಜಲ್ ಮುಂತಾದವರು ತಂಡದ ಶಕ್ತಿಯಾಗಿ ಉಳಿದಿದ್ದಾರೆ.

'ಆನ್‌ಲೈನ್ ಆಟ ನಿಷೇಧ: ಚೆಸ್‌ಗೆ ಆತಂಕ'

ಬೆಂಗಳೂರು: ನಿಷೇಧಿಸಲಾಗಿರುವ ಆನ್‌ಲೈನ್ ಆಟಗಳ ಪಟ್ಟಿಯಲ್ಲಿ ಕೌಶಲದ ಆಟಗಳನ್ನೂ ಸೇರಿಸಿರುವುದರಿಂದ ರಾಜ್ಯದಲ್ಲಿ ಚೆಸ್ ಕ್ರೀಡೆ ಆತಂಕದಲ್ಲಿದೆ ಎಂದು ಕರ್ನಾಟಕ ರಾಜ್ಯ ಚೆಸ್ ಸಂಸ್ಥೆ (ಕೆಎಸ್‌ಸಿಎ) ಹೇಳಿದೆ.

ಕರ್ನಾಟಕದಲ್ಲಿ ಚೆಸ್ ಜನಪ್ರಿಯವಾಗಿದೆ. ರಾಜ್ಯದ ಎಲ್ಲ ಭಾಗಗಳಲ್ಲೂ ಆಟಗಾರರಿದ್ದಾರೆ. ಸಂಸ್ಥೆಯಲ್ಲಿ ಹೆಸರು ನೊಂದಾಯಿಸಿಕೊಂಡವರ ಸಂಖ್ಯೆ 6000ಕ್ಕೂ ಹೆಚ್ಚು. ಕೌಶಲದ ಆಟಗಳನ್ನೂ ಆನ್‌ಲೈನ್ ಗೇಮ್‌ಗಳ ಪಟ್ಟಿಯಲ್ಲಿ ಸೇರಿಸಿದ್ದರಿಂದ ಟೂರ್ನಿಗಳಿಗೆ ಪ್ರಾಯೋಜಕತ್ವ ಸಿಗುತ್ತಿಲ್ಲ ಎಂದು ಸಂಸ್ಥೆಯ ಅಧ್ಯಕ್ಷ ಡಿ.ಪಿ.ಅನಂತ ತಿಳಿಸಿದ್ದಾರೆ. ಸರ್ಕಾರ ತನ್ನ ತೀರ್ಮಾನದಲ್ಲಿ ಬದಲಾವಣೆ ಮಾಡಿ ಚೆಸ್ ಕ್ರೀಡೆಯನ್ನು ಉಳಿಸಲು ನೆರವಾಗಬೇಕು ಎಂದು ಅವರು ಕೋರಿದ್ದಾರೆ.